ಕ್ರ ಸಂ.	ಯೋಜನಾ ಉಪ–ಘಟಕ	ಯೋಜನಾ ಉಪ–ಘಟಕದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳು
6	ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ	ಯಲ್ಲಾಪುರ, ಮುಂಡಗೋಡ ಮತ್ತು ಹಳಿಯಾಳ ತಾಲ್ಲೂಕುಗಳು
7	ಸಿಂಧಗಿ, ಬಿಜಾಪುರ ಜಿಲ್ಲೆ	ಸಿಂಧಗಿ ಮತ್ತು ಮುದ್ದೇಬಿಹಾಳ ತಾಲ್ಲೂಕುಗಳು
8	ಹಗರಿಬೊಮ್ಮನಹಳ್ಳಿ ಬಳ್ಳಾರಿ ಜಿಲ್ಲೆ	ಹಗರಿಬೊಮ್ಮನಹಳ್ಳಿ, ಹಡಗಲಿ ಮತ್ತು ಕೂಡ್ಲಿಗಿ ತಾಲ್ಲೂಕುಗಳು
9	ಸೌಂದತ್ತಿ, ಬೆಳಗಾವಿ ಜಿಲ್ಲೆ	ಗೋಕಾಕ್, ಸೌಂದತ್ತಿ, ರಾಮದುರ್ಗ, ಅಥಣಿ ಮತ್ತು ರಾಯಭಾಗ ತಾಲ್ಲೂಕುಗಳು
10	ಮಡಿಕೇರಿ, ಕೊಡಗು ಜಿಲ್ಲೆ	ಮಡಿಕೇರಿ, ಸೋಮವಾರಪೇಟೆ, ಮತ್ತು ವಿರಾಜಪೇಟೆ ತಾಲ್ಲೂಕುಗಳು
11	ಕೊಪ್ಪ, ಚಿಕ್ಕಮಗಳೂರು ಜಿಲ್ಲೆ	ಕೊಪ್ಪ, ಶೃಂಗೇರಿ, ಮೂಡಿಗೆರೆ ಮತ್ತು ಎನ್.ಆರ್. ಪುರ ತಾಲ್ಲೂಕುಗಳು
12	ತಿಪಟೂರು, ತುಮಕೂರು ಜಿಲ್ಲೆ	ತಿಪಟೂರು, ತುರುವೇಕೆರೆ, ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು
13	ಬಸವಕಲ್ಯಾಣ, ಬೀದರ್ ಜಿಲ್ಲೆ	ಬಸವಕಲ್ಯಾಣ, ಮತ್ತು ಭಾಲ್ಕಿ ತಾಲ್ಲೂಕುಗಳು
14	ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ	ಪುತ್ತೂರು, ಸುಳ್ಯ, ಮತ್ತು ಬಂಟ್ವಾಳ ತಾಲ್ಲೂಕುಗಳು
15	ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ	ಕೆ.ಆರ್. ಪೇಟೆ, ನಾಗಮಂಗಲ ಮತ್ತು ಪಾಂಡವಪುರ ತಾಲ್ಲೂಕುಗಳು
16	ಹರಪನಹಳ್ಳಿ, ದಾವಣಗೆರೆ ಜಿಲ್ಲೆ	ಹರಪನಹಳ್ಳಿ, ಜಗಳೂರು, ಮತ್ತು ಹರಿಹರ ತಾಲ್ಲೂಕುಗಳು
17	ಜಮಖಂಡಿ, ಬಾಗಲಕೋಟೆ ಜಿಲ್ಲೆ	ಜಮಖಂಡಿ, ಮುಧೋಳ ಮತ್ತು ಬೀಳಗಿ ತಾಲ್ಲೂಕುಗಳು
18	ರಾಮನಗರ, ರಾಮನಗರ ಜಿಲ್ಲೆ	ರಾಮನಗರ, ಮಾಗಡಿ, ಕನಕಪುರ, ಮತ್ತು ಚನ್ನಪಟ್ಟಣ ತಾಲ್ಲೂಕುಗಳು

ಈ ನೂತನ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ಉಪ ವಿಭಾಗಗಳಿಗೆ ಅಧಿಕಾರಿ/ನೌಕರರ ಹುದ್ದೆಗಳು ಈ ಕೆಳಕಂಡಂತೆ ಇರತಕ್ಕದ್ದು.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ	ವೇತನ ಶ್ರೇಣಿ
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್	1	ಲೋಕೋಪಯೋಗಿ ಇಲಾಖೆ/ಪಂರಾ.ಇಂ. ಇಲಾಖೆಗಳಿಂದ ನಿಯೋಜನೆ ಮೇರೆಗೆ (11)	14050–25050
2	ಸಹಾಯಕ ಇಂಜಿನಿಯರ್	6		11400 –21600
3	ಕಿರಿಯ ಇಂಜಿನಿಯರ್	3		8825–16000
4	ಪ್ರಥಮ ದರ್ಜೆ ಸಹಾಯಕ	1		7275–13350
5	ಪ್ರಥಮ ದರ್ಜೆ ಲೆಕ್ಕ ಸಹಾಯಕ	1	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ (1)	7275–13350
6	ಡಾಟಾ ಎಂಟ್ರಿ ಆಪರೇಟರ್‌ಗಳು/ಸಹಾಯಕರು	2	ಹೊರಗುತ್ತಿಗೆ ಅಥವಾ ಹಾಲಿ ಇರುವ ಎಂ.ಆರ್.ಇ/ಹೆಚ್ಚುವರಿ ಹುದ್ದೆಗಳ ಸ್ಥಳಾಂತರದಿಂದ ತುಂಬತಕ್ಕದ್ದು (5)	5800–10500
7	ಗ್ರೂಪ್ –ಡಿ / ಕಾವಲುಗಾರ	2		4800–7275
8	ಚಾಲಕ	1		5800–10500
	ಒಟ್ಟು		11+1+5=17	

ಈ ಪ್ರಕಾರವಾಗಿ ಯೋಜನಾ ಉಪ ವಿಭಾಗಗಳಲ್ಲಿ ಸೃಜನೆಗೊಳ್ಳುವ ಅಧಿಕಾರಿ ಹಾಗೂ ನೌಕರರ ಹುದ್ದೆಗಳ ಪೈಕಿ ಎರಡನೇ ದರ್ಜೆ ಸಹಾಯಕ ವೃಂದದ ಡಾಟಾ ಎಂಟ್ರಿ ಆಪರೇಟರ್/ಸಹಾಯಕ ಹುದ್ದೆಗಳು, ಗ್ರೂಪ್–ಡಿ/ಕಾವಲುಗಾರ ಹಾಗೂ ಚಾಲಕರ ಹುದ್ದೆಗಳನ್ನು ಹೊರ ಗುತ್ತಿಗೆ ಮೂಲಕ ತುಂಬತಕ್ಕದ್ದು. ಹಾಗೂ ಇತರ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬತಕ್ಕದ್ದು. ಈ ಪ್ರಕಾರವಾಗಿ 19 ಯೋಜನಾ ಉಪ ವಿಭಾಗಗಳಿಗೆ ನಿಯೋಜನೆ ಮೂಲಕ ಒಟ್ಟಾರೆ 228 ಹುದ್ದೆಗಳನ್ನು ಹಾಗೂ ಹೊರ ಗುತ್ತಿಗೆ ಮೂಲಕ ಒಟ್ಟಾರೆ 95 ಹುದ್ದೆಗಳನ್ನು ತುಂಬತಕ್ಕದ್ದು.

ಮುಂದುವರೆಸಿ, ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇಲ್ಲಿನ ಕೇಂದ್ರ ಕಛೇರಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ಕೆಲಸಗಳ ಹೆಚ್ಚುವರಿ ಕಾರ್ಯ ಒತ್ತಡಕ್ಕೆ ಅನುರೂಪವಾಗಿ ಈ ಕೆಳಕಂಡಂತೆ ಅಧಿಕಾರಿ/ಸಿಬ್ಬಂದಿ ವರ್ಗದ ಹೆಚ್ಚುವರಿ ಹುದ್ದೆಗಳ ಸೃಜನೆಗೂ ಕೂಡ ಸರ್ಕಾರವು ಮಂಜೂರಾತಿ ನೀಡಿದೆ.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ	ವೇತನ ಶ್ರೇಣಿ
1	ತಾಂತ್ರಿಕ ಸಹಾಯಕರು	2	ಲೋಕೋಪಯೋಗಿ ಇಲಾಖೆ/ಪಂರಾ.ಇಂ. ಇಲಾಖೆಗಳಿಂದ ನಿಯೋಜನೆ ಮೇರೆಗೆ ತುಂಬತಕ್ಕದ್ದು	14050–25050
2	ಸಹಾಯಕ ಇಂಜಿನಿಯರ್	4	ಲೋಕೋಪಯೋಗಿ ಇಲಾಖೆ/ಪಂರಾ,ಇಂ. ಇಲಾಖೆಗಳಿಂದ ನಿಯೋಜನೆ ಮೇರೆಗೆ ಅಥವಾ ಹೊರಗುತ್ತಿಗೆ ಮೂಲಕ	11400–21600
3	ಪ್ರಥಮ ದರ್ಜೆ ಲೆಕ್ಕ ಸಹಾಯಕ	2	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ.	7275–13350

ಈ ರೀತಿ ಸೃಜನೆಗೊಂಡ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗಗಳು ಹಾಗೂ ಉಪ ವಿಭಾಗಗಳಲ್ಲಿ ಅಧಿಕಾರಿ/ಸಿಬ್ಬಂದಿ ಹುದ್ದೆಗಳ ಸೃಜನೆಯು ಸದ್ಯಕ್ಕೆ ಒಂದು ವರ್ಷದ ಅವಧಿಗೆ ಮಾತ್ರ ಅಸ್ಥಿತ್ವದಲ್ಲಿರುತ್ತವೆ. ಈ ವಿಭಾಗ/ಉಪ ವಿಭಾಗಗಳ ಕೇಂದ್ರ ಸ್ಥಾನಗಳನ್ನು ಕಾರ್ಯಭಾರದ ಮೇಲೆ ನಿಗದಿಪಡಿಸಿದ್ದು, ಬದಲಾಗುವ ಪರಿಸ್ಥಿತಿಗೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಸದರಿ ಕೇಂದ್ರ ಸ್ಥಾನಗಳನ್ನು ಹಾಗೂ ವ್ಯಾಪ್ತಿಯನ್ನು ಸರ್ಕಾರದ ಪೂರ್ವಾನುಮತಿಯೊಂದಿಗೆ ಬದಲಾಯಿಸುವ ಅಧಿಕಾರವನ್ನು ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಪ್ರದತ್ತ ಮಾಡಲಾಗಿದೆ.

ಈ ಸಂಬಂಧ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 3054–ರಸ್ತೆ ಮತ್ತು ಸೇತುವೆಗಳು–80–ಸಾಮಾನ್ಯ–800 ಇತರೆ ವೆಚ್ಚಗಳು–0–08–ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ–101– ಸಹಾಯಾನುದಾನ (ಯೋಜನೇತರ), ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಕ್ರಮವಾಗಿ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 69 ವೆಚ್ಚ–6/09 ದಿನಾಂಕ:19.05.09 ಹಾಗೂ ಆಇ/69/ವೆಚ್ಚ–6/09, ದಿನಾಂಕ 30–5–2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ವೈ. ಸಾಗರ

ಪಿ.ಆರ್. 1588

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಗೆ ಮೇಲು ಸಹಿಯ ಪ್ರತ್ಯಾಯವನ್ನು ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ : ಮಮಇ 215 ಮಬಾಬ 2008 ದಿ: 30–10–2008.

2. ಯೋಜನಾಧಿಕಾರಿಗಳು, ಕರ್ನಾಟಕ ರಾಜ್ಯ ಬಾಲಭವನ ಅಕಾಡೆಮಿ, ಧಾರವಾಡರವರ ಕಛೇರಿಯ ಪತ್ರ ಸಂಖ್ಯೆ : ಕ.ರಾ.ಬಾ.ವಿ.ಅ/ಆ.ವೇ/;08–09/12 ದಿ: 25–02–2009.

3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 273 ವೆಚ್ಚ–3/09 ದಿ: 5–6–2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ: 30–10–2008 ರ ಆದೇಶದಲ್ಲಿ ಕರ್ನಾಟಕ ಬಾಲವಿಕಾಸ ಅಕಾಡೆಮಿಯನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಸದರಿ ಆದೇಶದ ಅನುಬಂಧ–1ರಲ್ಲಿ ಅಕಾಡೆಮಿಯ ರೂಪು

ರೇಷೆಗಳಿಗೆ ಹಾಗೂ ಅನುಬಂಧ–2 ರಲ್ಲಿ ಅಕಾಡೆಮಿ ಸ್ಥಾಪಿಸಲು ಅವಶ್ಯವಿರುವ ಯೋಜನಾಧಿಕಾರಿ ಒಳಗೊಂಡಂತೆ ಒಟ್ಟು 11 ಹುದ್ದೆಗಳಿಗೆ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಕೇಂದ್ರ ಕಛೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಲು ಹಾಗೂ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿಯಲ್ಲಿ ನೋಂದಾಯಿಸಲು ಮಂಜೂರಾತಿಯನ್ನು ನೀಡಿ ಇದಕ್ಕೆ ತಗಲುವ ವೆಚ್ಚ ರೂ. 10.00 ಲಕ್ಷ ಮೊತ್ತವನ್ನು ಸಾದಿಲ್ವಾರು ನಿಧಿ ಲೆಕ್ಕ ಶೀರ್ಷಿಕೆ 8000–00–242–0–00 ರಡಿಯಲ್ಲಿ ಮೊದಲಿಗೆ ಪ್ರಾರಂಭಿಸಿ ನಂತರ ಪೂರಕ ಅಂದಾಜು–II ರಡಿಯಲ್ಲಿ ಲೆಕ್ಕ ಶೀರ್ಷಿಕೆ 2235–02–102–31–015 (ಯೋಜನೆ) ರಡಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಸದರಿ ರೂ. 10.00 ಲಕ್ಷ ಮೊತ್ತವನ್ನು ಆರ್ಥಿಕ ಇಲಾಖೆ ಪ್ರತ್ಯೇಕವಾಗಿ ಹೊರಡಿಸುವ ಆದೇಶದ ನಂತರ ಪಡೆಯಲು ಮಂಜೂರಾತಿಯನ್ನು ನೀಡಿದೆ. ಇದಲ್ಲದೆ ರೂ. 20.00 ಲಕ್ಷ ಮೊತ್ತವನ್ನು ಪೂರಕ ಅಂದಾಜು–II ರಡಿಯಲ್ಲಿ ಒದಗಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿ: 25–02–2009ರ ಯೋಜನಾಧಿಕಾರಿಗಳು, ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ, ಧಾರವಾಡ ರವರ ಕಛೇರಿಯ ಪತ್ರದಲ್ಲಿ ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ ಧಾರವಾಡದಲ್ಲಿ ಪ್ರಾರಂಭಗೊಂಡಿದ್ದು, ಸದರಿ ಅಕಾಡೆಮಿಯ ಚಟುವಟಿಕೆಗಳನ್ನು ಅಂದರೆ ಅಧಿಕಾರಿ/ಸಿಬ್ಬಂದಿಯವರ ವೇತನ ಭತ್ಯೆ ಹಾಗೂ ಆರ್ಥಿಕ ವೆಚ್ಚ ಭರಿಸಲು ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗೆ ಅಧಿಕಾರ, ಎ.ಜಿ. ಆಥರೈಸೇಷನ್ ಹಾಗೂ ಖಜಾನೆಯಿಂದ ಆರ್ಥಿಕ ವ್ಯವಹಾರವನ್ನು ನಿರ್ವಹಿಸಲು ಸಂಬಂಧಪಟ್ಟ ಅಕಾಡೆಮಿಯ ಯೋಜನಾಧಿಕಾರಿಗಳಿಗೆ ಆರ್ಥಿಕ ಪ್ರಾಧಿಕಾರವನ್ನು ನೀಡಲು ಆರ್ಥಿಕ ಇಲಾಖೆಯ ಆದೇಶ ಪಡೆಯುವಂತೆ ಕೋರಿರುತ್ತಾರೆ. ಅದರಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿ ಆರ್ಥಿಕ ಇಲಾಖೆಯು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿ: 05–06–2009ರ ಟಿಪ್ಪಣಿಯಲ್ಲಿ ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ, ಧಾರವಾಡ ಇದು ಸರ್ಕಾರಿ ಇಲಾಖೆಯಾಗಿರದೆ ಒಂದು ನೋಂದಾಯಿತ ಸಂಸ್ಥೆಯಾಗಿರುವುದರಿಂದ ಸರ್ಕಾರದಿಂದ ಸಹಾಯಾನುದಾನವನ್ನು ಗ್ರ್ಯಾಂಟ್–ಇನ್–ಏಡ್ ಬಿಲ್ಲಿನ ಮುಖಾಂತರ ಪಡೆಯಬಹುದಾದ್ದರಿಂದ ಯೋಜನಾಧಿಕಾರಿಗೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರ ನೀಡುವ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದೆ.

ಸರ್ಕಾರವು ಯೋಜನಾಧಿಕಾರಿಗಳ ಪ್ರಸ್ತಾವನೆಯನ್ನು ಹಾಗೂ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಯ ಕಾರ್ಯನಿರ್ವಹಣೆಯ ದೃಷ್ಟಿಯಿಂದ ತಾತ್ಕಾಲಿಕವಾಗಿ ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಗೆ ಮೇಲು ಸಹಿ ಅಧಿಕಾರವನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರಿಗೆ ವಹಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 153 ಎಸ್‌ಜೆಡಿ 2009, ಬೆಂಗಳೂರು, ದಿನಾಂಕ: 12ನೇ ಜೂನ್ 2009

ಮೇಲೆ ವಿವರಿಸಿರುವ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿಯ ಕಾರ್ಯ ನಿರ್ವಹಣೆಯ ದೃಷ್ಟಿಯಿಂದ ಬಾಲವಿಕಾಸ ಅಕಾಡೆಮಿಯ ಯೋಜನಾಧಿಕಾರಿಗಳು ಸರ್ಕಾರದಿಂದ ಅಕಾಡೆಮಿಗೆ ಬಿಡುಗಡೆ ಆದ ಹಣದ ಬಗ್ಗೆ ಗ್ರ್ಯಾಂಟ್–ಇನ್–ಏಡ್ ಬಿಲ್ಲನ್ನು ತಯಾರಿಸಿ ಅದನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಂದ ಮೇಲು ಸಹಿ ಹಾಕಿಸಲು ಅನುವಾಗುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮೇಲು ಸಹಿ ಅಧಿಕಾರವನ್ನು ವಹಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ ಆಇ 273 ವೆಚ್ಚ–3/09 ದಿ: 5–6–2009ರಲ್ಲಿ ನೀಡಿರುವ ಅಭಿಪ್ರಾಯದಂತೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 96 ದಿ: 10–7–1996ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 1589

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರಭಾರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಆರ್ಥಿಕ ಸಚಿವಾಲಯ

ವಿಷಯ: ಹಣ ಬಿಡುಗಡೆಯ ಬಗ್ಗೆ ಆರ್ಥಿಕ ಅಧಿಕಾರಿಗಳ ಪ್ರತ್ಯಾಯೋಜನೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ : ಆಇ 1 ಟಿಎಫ್‌ಪಿ 2008 ದಿನಾಂಕ 16–5–2008.
2) ಸರ್ಕಾರದ ಆದೇಶ ಸಂಖ್ಯೆ : ಆಇ 2 ಟಿಎಫ್‌ಪಿ 2008 ದಿನಾಂಕ 17–9–2008.
3) ಸರ್ಕಾರದ ಆದೇಶ ಸಂಖ್ಯೆ : ಆಇ 9 ಟಿಎಫ್‌ಪಿ 2008 ದಿನಾಂಕ 17–8–2004.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1), (2) ಮತ್ತು (3)ರ ಆದೇಶಗಳಲ್ಲಿ ಆಡಳಿತ ಇಲಾಖೆಗಳಿಗೆ ಹಣ ಬಿಡುಗಡೆಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ ಬಗ್ಗೆ ವಿವರಿಸಲಾಗಿದೆ. ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸೂಕ್ತ ಸಮಯದಲ್ಲಿ ಹಣವನ್ನು ಒದಗಿಸಲು ಅಧಿಕಾರಗಳ ಪ್ರತ್ಯಾಯೋಜನೆಗಳನ್ನು ಇನ್ನೂ ಸರಳೀಕರಣಗೊಳಿಸಲು ನಿರ್ಧರಿಸಲಾಗಿದೆ. ಆದ್ದರಿಂದ ಮೇಲಿನ ಕ್ರಮ ಸಂಖ್ಯೆ (1), (2) ಮತ್ತು (3) ರ ಆದೇಶಗಳನ್ನು ಮುಂದುವರೆಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ ಆಇ 2 ಟಿಎಫ್‌ಪಿ 2009, ಬೆಂಗಳೂರು, ದಿನಾಂಕ: 6ನೇ ಜೂನ್ 2009

ಆಯವ್ಯಯದಲ್ಲಿ ಹಣದ ಲಭ್ಯತೆಗೆ ಒಳಪಟ್ಟು ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಸಾಲ ಪಾವತಿಗಾಗಿ ಹಣವನ್ನು ಬಾಕಿ ಇರುವ ಕಂತಿನ ದಿನಾಂಕದ ಸಮೀಪದಲ್ಲಿ ಒಂದು ಆರ್ಥಿಕ ವರ್ಷದ 3ನೇ ತ್ರೈಮಾಸಿಕದವರೆಗೂ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ. 4ನೇ ತ್ರೈಮಾಸಿಕಕ್ಕೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ.

2. ಕೇಂದ್ರ ಮತ್ತು ರಾಜ್ಯದ ಪಾಲುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆಯ ಬಗ್ಗೆ ಭಾರತ ಸರ್ಕಾರವು ಕೇಂದ್ರದ ಪಾಲನ್ನು ಬಿಡುಗಡೆ ಮಾಡಿದ ನಂತರ ಮತ್ತು ಅದು ರಾಜ್ಯ ಸರ್ಕಾರಕ್ಕೆ ಇನ್ನೂ ಜಮೆ ಆಗುವ ಮುಂಚೆ ಅಂತಹ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ಅಧೀನ ಕಾರ್ಯದರ್ಶಿ (ಎಫ್.ಆರ್.ಸಿ.) ಇವರಿಗೆ ಕಳುಹಿಸಬೇಕು. ಇಂತಹ ಪ್ರಸ್ತಾವನೆಗಳ ಜೊತೆಗೆ ಭಾರತ ಸರ್ಕಾರದಿಂದ ಬಂದಿರುವ ಬಿಡುಗಡೆ ಆದೇಶ ಮತ್ತು ಆಯವ್ಯಯದಲ್ಲಿ ಒದಗಿಸಿರುವ ಹಣದಲ್ಲಿ ಉಳಿದಿರುವ ಮೊತ್ತ ಈ ವಿವರಗಳನ್ನು ನೀಡಬೇಕು. ಕೇಂದ್ರ ಮತ್ತು ರಾಜ್ಯದ ಪಾಲುಗಳನ್ನು ಬಿಡುಗಡೆ ಮಾಡಲು ಆಯವ್ಯಯದಲ್ಲಿ ಒದಗಿಸಿದ ಹಣದಲ್ಲಿ ಉಳಿದ ಮೊತ್ತವು ಸಾಕಾಗದಿದ್ದಲ್ಲಿ ಇಂತಹ ಪ್ರಸ್ತಾವನೆಗಳಿಗೆ ಮರು ಹೊಂದಾಣಿಕೆ ಮೂಲಕ ಅಥವಾ ಪೂರಕ ಅಂದಾಜುಗಳ ಮೂಲಕ ಹಣವನ್ನು ಒದಗಿಸಲು ನಿರ್ದಿಷ್ಟವಾಗಿ ಕೋರಿಕೆಯನ್ನು ಸಲ್ಲಿಸಬೇಕು.

3. ದಿನಾಂಕ 16–5–2008ರ ಆದೇಶದ ಅನುಬಂಧ–1 ರಲ್ಲಿ ಕಾಣಿಸಿರುವ ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಬೇಕಾದ ವೆಚ್ಚ/ಯೋಜನೆಗಳ ಪಟ್ಟಿಗೆ ಈ ಕೆಳಗಿನ ಯೋಜನೆಗಳನ್ನು ಸೇರಿಸಲಾಗಿದೆ.

ಕ್ರ. ಸಂ.	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ
1	ಪೊಲೀಸ್ ಪಡೆಯ ಆಧುನೀಕರಣ Modernisation of Police Forces	2055-00-115-0-00(NP)
2	ಸಾಲ ಮನ್ನಾ Loan Waiver	2425-00-107-2-46 (NP)
3	ಪಿಂಚಣಿ ಪಾವತಿಗಾಗಿ ಅಂಶದಾನ Contribution to Pension Payment	2801-80-101-1-13 (NP)
4	ಬೆಳೆ ಸಾಲಕ್ಕೆ ಸಹಾಯ ಧನ Subsidy for Crop Loan	2401-00-110-0-09 (P)
5	ಸಾವಯುವ ಕೃಷಿ Organic Farming	2401-00-800-1-43 (P)
6	ಯಶಸ್ವಿನಿ Yashaswini	2425-00-108-0-57 (P)
7	ಸಿದ್ಧ ಉಡುಪು ವಲಯದಲ್ಲಿ ಉದ್ಯೋಗ Employment in Garment Sector	2505-60-101-0-03 (P)
8	ಕಬ್ಬು ಬೆಳೆದ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ವಿಶೇಷ ನೆರವು Special Package to Sugarcane Growers & Sugar Industries	2852-08-201-0-07 (P)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1590

ಎಂ.ಆರ್. ಶ್ರೀನಿವಾಸಮೂರ್ತಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ.

ವಿಷಯ: ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ (ಜಿ)/ಎಲ್–74/ಸಿಆರ್–8/2008/ಹಾವೇರಿ, ದಿನಾಂಕ1–1–2009

2) ಸರ್ಕಾರಿ ಆದೇಶ ಸಂಖ್ಯೆ : ಆಇ 3 ವಾತೆತ 2009 ದಿನಾಂಕ : 13–2–2009
3) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ (ಜಿ)/ಎಲ್–74/ಸಿಆರ್–8/2008/ಹಾವೇರಿ ದಿನಾಂಕ 4–5–2009
4) ತನಿಖಾಧಿಕಾರಿಯವರ ವರದಿ ಸಂಖ್ಯೆ: ಪಿಐ/ಕ.ಲೋ/ಹಾವೇರಿ/ಸಿಆರ್ ನಂ.8/08/ಅಂತಿಮ ವರದಿ/1272/2009 ದಿನಾಂಕ: 28–2–2009
5) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ:

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1) ರಲ್ಲಿನ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರ ಶಿಫಾರಸ್ಸಿನ ಮೇರೆಗೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(2)ರ ಆದೇಶದನ್ವಯ ಶ್ರೀ ಎಸ್.ಎಫ್.ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ವಿರುದ್ಧ ಗುನ್ನೆ ಸಂಖ್ಯೆ:8/2008 ರಲ್ಲಿ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾವೇರಿ, ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಉಲ್ಲೇಖ (3)ರ ಪತ್ರ ದಿನಾಂಕ: 4–5–2009 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19ನೇ ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಉಲ್ಲೇಖ (3)ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1) ಶ್ರೀ ಶ್ರೀನಿವಾಸ ಹನುಮಂತರೆಡ್ಡಿ, ಉಮಾಶಂಕರ ನಗರ, ರಾಣೆಬೆನ್ನೂರುರವರು ನೀಡಿದ ದೂರು
2) ಪ್ರಥಮ ವರ್ತಮಾನ ವರದಿ : ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:8/2008 ದಿನಾಂಕ: 11–12–2008
3) ಪ್ರಾಯೋಗಿಕ ಪಂಚನಾಮೆ ದಿನಾಂಕ: 12–12–2008 ರಂದು ಠಾಣೆಯಲ್ಲಿ ಜರುಗಿಸಿದ ವಹಿಸುವಿಕೆ ಪಂಚನಾಮೆ
4) ಅಮಾನತ್ತು ಪಂಚನಾಮೆ ದಿನಾಂಕ: 12–12–2008 ರಂದು ಆಪಾದಿತರ ಕಛೇರಿಯಲ್ಲಿ ಜರುಗಿಸಿದ ಪಂಚನಾಮೆ
5) ಪ್ರಾದೇಶಿಕ ಸಹಾಯಕ ರಾಸಾಯನಿಕ ತಜ್ಞರು, ಧಾರವಾಡರವರ ವರದಿ ಪತ್ರ ಸಂಖ್ಯೆ:ಎಲ್‌ಪೈಕೆ/ಎಸಿಇ/ಡಬ್ಲ್ಯುಡಿ/22/2008, ದಿನಾಂಕ: 9–1–2009
6) ಕೃತ್ಯ ನಡೆದ ಸ್ಥಳದ ನಕಾಶೆ: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಒಳನಾಡು, ಜಲಸಾರಿಗೆ ಉಪ ವಿಭಾಗ, ರಾಣೆಬೆನ್ನೂರುರವರ ಪತ್ರ ಸಂಖ್ಯೆ:ಸ.ಕಾ.ನಿ.ಇಂ./ಉ.ವಿ/ಗುನ/2008–09/602 ದಿನಾಂಕ: 24–12–2008
7) **ಸಾಕ್ಷಿದಾರರ ಹೇಳಿಕೆಗಳು:**
   1. ಶ್ರೀ ಶ್ರೀನಿವಾಸ ತಂದೆ ಹನುಮರೆಡ್ಡಿ, ಉಮಾಶಂಕರ ನಗರ, ರಾಣೆಬೆನ್ನೂರು (ಫಿರ್ಯಾದಿ)
   2. ಶ್ರೀ ಬಿ. ಗೋವರ್ಧನ ತಂದೆ ಬಸಪ್ಪ, ದ್ವಿತೀಯ ದರ್ಜೆ ಸಹಾಯಕ, ಹಾವೇರಿ ಜಿಲ್ಲಾ ಖಜಾನೆ ಕಛೇರಿ (ಪಂಚ–1)
   3. ಶ್ರೀ ಮಹದೇವಪ್ಪ ವೀರಪ್ಪ ಕೊಳ್ಳಿ, ಕಛೇರಿ ಅಧೀಕ್ಷಕರು, ಹಾವೇರಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ (ಪಂಚ–2)
   4. ಶ್ರೀ ಚೆನ್ನಬಸಪ್ಪ ಶಿವಪ್ಪ ಪಾಣಿಗಟ್ಟಿ, ಕಛೇರಿ ವ್ಯವಸ್ಥಾಪಕರು, ಸ್ಥ.ಮೌ.ತೆ. ಕಛೇರಿ, ರಾಣೆಬೆನ್ನೂರು
   5. ಶ್ರೀಮತಿ ವಾಣಿ, ತಂದೆ ದತ್ತಾತ್ರೇಯ ನಾಡಿಗೇರ, ಶೀಘ್ರಲಿಪಿಗಾರರು, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ, ರಾಣೆಬೆನ್ನೂರು
   6. ಶ್ರೀ ಪ್ರಕಾಶ ತಂದೆ ನಿಂಗಪ್ಪ, ಗಾಂಡಗೋಳಕರ, ಸಿಪಾಯಿ, ಸ್ಥ.ಮೌ.ತೆ. ಕಛೇರಿ, ರಾಣೆಬೆನ್ನೂರು

7. ಶ್ರೀ ಚಂದ್ರಶೇಖರಯ್ಯ ಮಹಾಲಿಂಗಯ್ಯ ಚಿಕ್ಕಮಠ, ಜ್ಯೂನಿಯರ್ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಉಪ ವಿಭಾಗ, ರಾಣೆಬೆನ್ನೂರು.
8. ಶ್ರೀ ಸಿದ್ಧಪ್ಪ ಬಸಪ್ಪ ಬಸವನಾಯ್ಕರ, ಮುಖ್ಯಪೇದೆ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)
9. ಶ್ರೀ ನಿಂಗಪ್ಪ ಗುಡ್ಡಪ್ಪ ಕನವಳ್ಳಿ, ಮುಖ್ಯಪೇದೆ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)
10. ಶ್ರೀ ಬಸವರಾಜ ಬಸಪ್ಪ ಹರವಿ, ಮುಖ್ಯಪೇದೆ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)
11. ಶ್ರೀ ಸುರೇಶ ತಂದೆ ಶಿವಪ್ಪ ಲಮಾಣಿ, ಎ.ಪಿ.ಸಿ. ಛೇಂಬರ್, ಆರ್ಡರ್ಲಿ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)
12. ಶ್ರೀ ಸೋಮಶೇಖರ ಶಾಂತಪ್ಪ ಕುಬ್ಯಾಳ, ಮುಖ್ಯಪೇದೆ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)
13. ಶ್ರೀ ಉದಯ ತಂದೆ ಕೃಷ್ಣರಾವ್ ಕುಲಕರ್ಣಿ, ಮುಖ್ಯಪೇದೆ, ಹಾವೇರಿ ಲೋಕಾಯುಕ್ತ ಪೊಲೀಸ್ ಠಾಣೆ, (ಸಿಬ್ಬಂದಿ)

7) ಲಂಚ ಕೇಳಲು ಆಧಾರವಾದ ದಾಖಲೆಗಳು:

(ಅ) ಅಂತಿಮ ವರದಿ ಪುಟ ಸಂಖ್ಯೆ 69 ರಿಂದ 96 ರವರೆಗೆ ದಿ: 12-12-2008 ರಂದು ಆಪಾದಿತರ ಕಛೇರಿಯಲ್ಲಿ ಅಮಾನತ್ತು ಪಂಚನಾಮೆ ಕಾಲಕ್ಕೆ ಈ ಕೆಳಕಂಡ ದಾಖಲೆಗಳನ್ನು ಜಪ್ತು ಮಾಡಲಾಗಿದೆ.

(1) ಟಿನ್ ನಂ. 29910823769 ರಲ್ಲಿ ಇದ್ದ ಕಡತವನ್ನು ಹಾಜರುಪಡಿಸಿರುತ್ತಾರೆ. ಸದರಿ ಕಡತ ಒಟ್ಟು 27 ಹಾಳೆಗಳನ್ನು ಹೊಂದಿದ್ದು, ಅದರಲ್ಲಿ ರೂ.500/- ಮುಖ ಬೆಲೆಯ 6 ಎನ್.ಎಸ್.ಸಿ. ಸರ್ಟಿಫಿಕೇಟ್‌ಗಳು ಸಹ ಒಳಗೊಂಡಿರುತ್ತದೆ.

(2) ಫಾರಂ ನಂ.1, ವಾಚ್ ರಿಜಿಸ್ಟರ್ ದಿನಾಂಕ 1-11-2008 ರಿಂದ ಪ್ರಾರಂಭಗೊಂಡ ವಹಿಯಾಗಿದ್ದು, ಸದರಿ ವಹಿಯನ್ನು ಶ್ರೀ ಹೆಚ್.ಆರ್.ಲೋಕೇಶ, ವಾ.ತೆ.ಪ., ಇವರು ನಿರ್ವಹಣೆ ಮಾಡಿದ್ದು, ಸದರಿ ವಹಿಗೆ ಪುಟ ಸಂಖ್ಯೆ 50 ರವರೆಗೆ ಸಂಖ್ಯೆಯನ್ನು ನೀಡಿದ್ದು ಇರುತ್ತದೆ. ಪುಟ ಸಂಖ್ಯೆ 2 ಕ್ರಮ ಸಂಖ್ಯೆ 11 ರಲ್ಲಿ ಶ್ರೀ ಶ್ರೀನಿವಾಸ ಹೆಚ್. ಮೈದೂರ, ಇವರಿಗೆ ನೀಡಿರುವ 82163 ಸ್ವೀಕೃತಿ ಸಂಖ್ಯೆಯಾಗಿದ್ದು, ಅವರ ಹೆಸರಿನ ಮುಂದೆ ಟಿನ್ ಸಂಖ್ಯೆ 29910823769 ಎಂದು ನೀಡಲಾಗಿರುತ್ತದೆ. ಪುಟ ಸಂಖ್ಯೆ 4 ರಲ್ಲಿ ನವೆಂಬರ್ 2008ರ ಘೋಷ್ವಾರೆ ಹಾಕಿದ್ದು ಇರುತ್ತದೆ.

(3) 2008ನೇ ಇಸ್ವಿ ಡಿಸೆಂಬರ್ ಮಾಹೆಯ ಹಾಜರಾತಿ ವಹಿಯನ್ನು ಪರಿಶೀಲಿಸಲಾಗಿ, ಇಬ್ಬರು ಆಪಾದಿತರು ದಿನಾಂಕ 12-12-2008 ರಂದು ಕಿರು ಸಹಿ ಮಾಡಿರುತ್ತಾರೆ.

8) ಆಪಾದಿತರ ಸಮಜಾಯಿಷಿ/ಹೇಳಿಕೆಗಳು :

(1) ಶ್ರೀ ಎಸ್. ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಸ್ಥಳೀಯ ಮೌಲ್ಯವರ್ಧಿತ ಕಛೇರಿ, ರಾಣೆಬೆನ್ನೂರು ರವರ ಸಮಜಾಯಿಷಿ ಹೇಳಿಕೆ ದಿನಾಂಕ : 12-12-2008

(2) ಶ್ರೀ ಹೆಚ್.ಆರ್. ಲೋಕೇಶ, ವಾಣಿಜ್ಯ ತೆರಿಗೆ ಪರಿಪೀಕ್ಷಕರು, ಸ್ಥಳೀಯ ಮೌಲ್ಯವರ್ಧಿತ ಕಛೇರಿ, ರಾಣೆಬೆನ್ನೂರ ರವರ ಸಮಜಾಯಿಷಿ ಹೇಳಿಕೆ ದಿನಾಂಕ: 12-12-2008

ತನಿಖಾಧಿಕಾರಿಯಾದ ಶ್ರೀ ಗುರುದತ್, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಪೊಲೀಸ್ ವಿಭಾಗ, ಹಾವೇರಿ ಇವರು ಆಪಾದಿತರಾದ ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಸ್ಥಳೀಯ ಮೌಲ್ಯವರ್ಧಿತ ಕಛೇರಿ, ರಾಣೆಬೆನ್ನೂರು, ಇವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗ, ಹಾವೇರಿ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 8/2008 ರಲ್ಲಿ ಲಂಚ ನಿರೋಧಕ ಕಾಯ್ದೆ 1988ರ ಕಲಂ7, 13 (1)(ಡಿ) ಜೊತೆಯಲ್ಲಿ 13 (2) ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ದಿನಾಂಕ: 11-12-2008 ರಂದು ಈ ಪ್ರಕರಣದ ಫಿರ್ಯಾದಿ ಶ್ರೀ ಶ್ರೀನಿವಾಸ ಹೆಚ್ ಮೈದೂರ, ರಾಣೆಬೆನ್ನೂರುರವರು ದಿನಾಂಕ: 18-11-2008 ರಂದು ರಾಣೆಬೆನ್ನೂರಿನ ಸ್ಥಳೀಯ ವ್ಯಾಟ್ ಕಛೇರಿಯಲ್ಲಿ ಗುತ್ತಿಗೆದಾರರ ಲೈಸೆನ್ಸ್‌ಗಾಗಿ ತಮ್ಮ ಹೆಸರಿಗೆ ನೋಂದಣಿಯಾದ ವ್ಯಾಟ್ ನಂಬರ್ ಸರ್ಟಿಫಿಕೇಟ್ ನೀಡುವಂತೆ ಕೋರಿ, ಅಗತ್ಯವಾದ ದಾಖಲೆಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರು, ಈ ಸಂಬಂಧ ಆರೋಪಿತರಾದ ಶ್ರೀ ಎಸ್. ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ನಿರೀಕ್ಷಕರು, ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿ, ರಾಣೆಬೆನ್ನೂರುರವರು ಲಂಚದ ಮಾತುಗಳನ್ನಾಡುತ್ತಿದ್ದರೆಂದು ದೂರವಾಣಿ ಮುಖಾಂತರ ಹಾವೇರಿ ಲೋಕಾಯುಕ್ತ ಪೊಲೀಸ್ ನಿರೀಕ್ಷಕರಿಗೆ ತಿಳಿಸಿದ್ದು,

ಪೊಲೀಸ್ ನಿರೀಕ್ಷಕರು ತಮ್ಮ ಸಿಬ್ಬಂದಿಯಿಂದ ಟೇಪ್‌ರೆಕಾರ್ಡರ್‌ನ್ನು ಫಿರ್ಯಾದುದಾರರ ಬಳಿ ಕಳುಹಿಸಿರುತ್ತಾರೆ. ಫಿರ್ಯಾದುದಾರರು ಆರೋಪಿತರಾದ ಶ್ರೀ ಎಸ್.ಎಫ್. ಬೆನಕವಾರಿರವರ ಬಳಿಗೆ ಹೋಗಿ ವ್ಯಾಟ್ ರಿಜಿಸ್ಟರ್ ಮಾಡಿಕೊಡುವಂತೆ ಕೇಳಿದಾಗ ಸದರಿಯವರು ರೂ. 2500/– ಗಳ ಲಂಚದ ಹಣಕ್ಕೆ ಒತ್ತಾಯಿಸಿದ್ದು, ಫಿರ್ಯಾದುದಾರರು ರೂ. 2,000/– ನೀಡುವುದಾಗಿ ತಿಳಿಸಿದ್ದು, ಆರೋಪಿತರು ರೂ. 2,500/– ಗಳ ಲಂಚದ ಹಣವನ್ನು ನೀಡುವಂತೆ ಒತ್ತಾಯಿಸಿದ್ದು, ಫಿರ್ಯಾದುದಾರರು ಸದರಿ ಹಣವನ್ನು ನೀಡುವುದಾಗಿ ಒಪ್ಪಿಕೊಂಡು ಬಂದಿರುತ್ತಾರೆ. ಈ ಸಂಭಾಷಣೆಯನ್ನು ಆಡಿಯೋ ಕ್ಯಾಸೆಟ್‌ನಲ್ಲಿ ದಾಖಲು ಮಾಡಿರುತ್ತಾರೆ. ಫಿರ್ಯಾದಿರವರಿಗೆ ಲಂಚ ಕೊಡಲು ಇಷ್ಟವಿಲ್ಲದ್ದರಿಂದ ಸದರಿ ಆರೋಪಿತರ ಮೇಲೆ ಸೂಕ್ತ ಕಾನೂನು ಕ್ರಮ ಕೋರಿರುತ್ತಾರೆ.

ಮೇಲ್ಕಂಡ ಲಿಖಿತ ದೂರನ್ನು ಆಧರಿಸಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಹಾವೇರಿರವರು ಸದರಿ ಆರೋಪಿತ ಅಧಿಕಾರಿಯವರ ಮೇಲೆ ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ 7, 13(1) (ಡಿ) ಜೊತೆಯಲ್ಲಿ 13(2) ರಡಿಯಲ್ಲಿ ಮೊಕದ್ದಮೆ ಸಂಖ್ಯೆ 8/2008 ಪ್ರಕಾರ ಪ್ರಕರಣವನ್ನು ದಿನಾಂಕ: 11–12–2008 ರಂದು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ಪಂಚ ಸಾಕ್ಷಿಗಳೊಡನೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ವರ್ಗದವರು ದಿನಾಂಕ: 12–12–2008 ರಂದು ಆರೋಪಿತರ ಕಛೇರಿಯಲ್ಲಿ ಬೀಸಿದ ಬಲೆಯಲ್ಲಿ 2ನೇ ಆರೋಪಿತರಾದ ಶ್ರೀ ಹೆಚ್.ಆರ್. ಲೋಕೇಶ್, ವಾಣಿಜ್ಯ ತೆರಿಗೆ ನಿರೀಕ್ಷಕರು, ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿ, ರಾಣೆಬೆನ್ನೂರುರವರು 1ನೇ ಆರೋಪಿತರಾದ ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ನಿರ್ದೇಶನದ ಮೇರೆಗೆ ಫಿರ್ಯಾದುದಾರರಿಂದ ರೂ.2,500/– ಗಳ ಲಂಚದ ಹಣವನ್ನು ಪಡೆಯುತ್ತಿರುವಾಗ ಲಂಚದ ಹಣದೊಡನೆ ಸಿಕ್ಕಿಹಾಕಿಕೊಂಡಿರುತ್ತಾರೆ. 2ನೇ ಆರೋಪಿತರ ಎರಡೂ ಕೈಗಳನ್ನು ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಲು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ದ್ರಾವಣವು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುತ್ತದೆ. ಈ ಅಂಶವು 2ನೇ ಆರೋಪಿತರ ಬೆರಳುಗಳಲ್ಲಿ ಫಿನಾಪ್ತಲೀನ್ ಪುಡಿಯ ಅಸ್ತಿತ್ವವನ್ನು ಪ್ರಮಾಣೀಕರಿಸಿರುತ್ತದೆ. 2ನೇ ಆರೋಪಿತರಿಂದ ಲಂಚದ ಹಣವನ್ನು ಯಥಾವತ್ತಾಗಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ. ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1) (ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(ಸಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1) (ಡಿ) ಜೊತೆಗೆ 13 (2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರ ಆದೇಶ ಸಂಖ್ಯೆ: ಆಇ 3 ವಾತೆತ 2009, ಬೆಂಗಳೂರು, ದಿನಾಂಕ: 8ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಎಸ್.ಎಫ್. ಬೆನಕವಾರಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ: 8–6–2009 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1591

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಎಸ್.ಆರ್. ಜಮಖಂಡಿ, ಎಎಓ, 4ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ಬಗ್ಗೆ.

ಓದಲಾಗಿದೆ: 1) ದೋಷಾರೋಪಣಾ ಪಟ್ಟಿ ದಿನಾಂಕ 24–10–2007.

2) ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರುರವರ ಕಛೇರಿ ಪತ್ರ ಸಂಖ್ಯೆ ಸಿಬಿ(5)107/1983–84 ದಿನಾಂಕ 9–9–2008.

3) ದೋಷಾರೋಪಣೆಗೆ ಸಮಜಾಯಿಷಿ ದಿನಾಂಕ 12–11–2007.

4) ಅಂತಿಮ ಆದೇಶ ಸಂಖ್ಯೆ : ಸಿಬಿ (5) 107/1983–84 ದಿನಾಂಕ 26–02–2008.

5) ಮೇಲ್ಮನವಿ ದಿನಾಂಕ 2–5–2008.

ಪ್ರಸ್ತಾವನೆ:

ಶ್ರೀ ಎಸ್.ಆರ್. ಜಮಖಂಡಿ, ಎಎಓ, ಹಿಂದೆ ರಾಜ್ಯ ಗುಪ್ತವಾರ್ತೆ ಕಛೇರಿ, ಬೆಂಗಳೂರು ಇಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ / ಶಾಖಾಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಈ ಕೆಳಕಂಡ ಆರೋಪವನ್ನು ಎಸಗಿದ್ದು, ಮೇಲ್ಮನವಿದಾರರಿಗೆ ಕೆ.ಸಿ.ಎಸ್ (ಸಿಸಿಎ) ನಿಯಮಗಳು 1957ರ ನಿಯಮ 12 ರನ್ವಯ ದೋಷಾರೋಪಣೆ ಪತ್ರವನ್ನು ಮೇಲೆ (1) ರಲ್ಲಿ ಓದಲಾದ ಪತ್ರವನ್ನು ಹೊರಡಿಸಲಾಗಿತ್ತು.

ಆಪಾದನೆ:

ಶ್ರೀ ಎಸ್.ಆರ್. ಜಮಖಂಡಿ, ಹಾಲಿ ಎಎಓ, 4ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಆದ ನೀವು 1977 ರಿಂದ 2000 ಸಾಲಿನವರೆಗೆ ರಾಜ್ಯ ಗುಪ್ತವಾರ್ತೆ ಬೆಂಗಳೂರು ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ / ಶಾಖಾಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀ ಕೆ.ಸಿ., ಈಶ್ವರ್, ಡಿವೈಎಸ್‌ಪಿ ರವರು ದಿನಾಂಕ 31–8–1996 ರಂದು ವಯೋ ನಿವೃತ್ತಿ ಹೊಂದಿದ್ದರು. ಶ್ರೀಯುತರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿದ್ದರೂ ಸಹ ಅದನ್ನು ಸದರಿಯವರ ಎಲ್‌ಪಿಸಿ ಮತ್ತು ಎನ್‌ಓಸಿ ನೀಡುವಾಗ ಈ ಬಗ್ಗೆ ನಮೂದಿಸದೆ/ಸತ್ಯವನ್ನು ಮುಚ್ಚಿಡುವ ಮೂಲಕ ನಿಮ್ಮ ಕರ್ತವ್ಯದಲ್ಲಿ ಕರ್ತವ್ಯಲೋಪ ಬೇಜವಾಬ್ದಾರಿತನವೆಸಗಿರುತ್ತೀರಿ.

ಶ್ರೀ ಎಸ್.ಆರ್. ಜಮಖಂಡಿ, ಎ.ಎ.ಓ. ಇವರು ದೋಷಾರೋಪಣಾ ಪತ್ರವನ್ನು ದಿನಾಂಕ: 30–10–2007 ರಂದು ಸ್ವೀಕರಿಸಿ ಮೇಲೆ ಓದಲಾದ (2)ರ ಪತ್ರದಲ್ಲಿ ದಿನಾಂಕ: 12.11.2007ರಲ್ಲಿ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿದಾರರ ಸಮಾಜಾಯಿಷಿಯಲ್ಲಿ ಪರಿಗಣಿಸುವಂತಹ ಅಂಶಗಳು ಕಂಡು ಬಂದಿಲ್ಲವಾದಾಗ್ಯೂ, ಅವರ ಸೇವಾ ಹಿರಿಮೆಯನ್ನು ಪರಿಗಣಿಸಿ, ಕರ್ತವ್ಯದಲ್ಲಿ ಸುಧಾರಿಸಿಕೊಳ್ಳಲು ಅವಕಾಶ ನೀಡಿ, ದಿನಾಂಕ:26–2–2008ರ ಮೇಲೆ (3) ರಲ್ಲಿ ಓದಲಾದ ಆದೇಶದನ್ವಯ ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡಲಾಗಿರುತ್ತದೆ. ಮೇಲ್ಮನವಿದಾರರು ಸದರಿ ಆದೇಶವನ್ನು ದಿನಾಂಕ: 1–3–2008 ರಂದು ಸ್ವೀಕರಿಸಿ, ಸದರಿ ಆದೇಶದ ವಿರುದ್ಧ ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ದಿನಾಂಕ: 2–5–2008 ರಂದು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 104 ಪೊಸಿಲಿ 2008, ಬೆಂಗಳೂರು, ದಿನಾಂಕ: 2ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎಸ್.ಆರ್. ಜಮಖಂಡಿ, ಹಾಲಿ ಎಎಓ, 4ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 25(2)(ಸಿ)(i) ಪ್ರಕಾರ ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1592

ಟಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು) (ಪ್ರ)

ಕಂದಾಯ ಸಚಿವಾಲಯ

ವಿಷಯ: ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರ್ವಹಣೆಗೆ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ : ಕಂಇ 115 ಆರ್‌ಇಹೆಚ್ 07, ದಿನಾಂಕ 13/01/2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಕಿತ್ತೂರು ಪರಂಪರೆಯ ತಾಣಗಳು ಮತ್ತು ಸ್ಮಾರಕಗಳ ಅಭಿವೃದ್ಧಿಗಾಗಿ, ಅದರ ಉದ್ದೇಶ, ಯೋಜನೆ, ಆಡಳಿತ ವ್ಯವಸ್ಥೆ ಹಾಗೂ ಶಾಸನಬದ್ಧ ಚೌಕಟ್ಟುಗಳನ್ನು ಒಳಗೊಂಡಂತೆ ಒಂದು ಅಧಿನಿಯಮವನ್ನು ಜಾರಿಗೆ ತರುವುದನ್ನು ಬಾಕಿ ಇಟ್ಟು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ತೀರ್ಮಾನಗಳನ್ನು ಜಾರಿಗೊಳಿಸಲು ಮತ್ತು ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ಮತ್ತು ಅನುಷ್ಠಾನಕ್ಕಾಗಿ ಆಯುಕ್ತರು ಮತ್ತು ಸಹಾಯಕ ಸಿಬ್ಬಂದಿಗಳೊಂದಿಗೆ ಒಂದು ಪ್ರತ್ಯೇಕ ಕಛೇರಿ ತೆರೆಯುವುದು ಅವಶ್ಯಕವೆಂದು ಕಂಡುಬಂದಿರುತ್ತದೆ. ಈ ವಿಷಯವನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 44 ಆರ್‌ಇಹೆಚ್ 2009, ಬೆಂಗಳೂರು, ದಿನಾಂಕ: 30ನೇ ಜೂನ್ 2009

ಕಿತ್ತೂರು ಪರಂಪರೆಯ ತಾಣಗಳು ಮತ್ತು ಸ್ಮಾರಕಗಳ ಅಭಿವೃದ್ಧಿಗಾಗಿ, ಅದರ ಉದ್ದೇಶ, ಯೋಜನೆ, ಆಡಳಿತ ವ್ಯವಸ್ಥೆ ಹಾಗೂ ಶಾಸನಬದ್ಧ ಚೌಕಟ್ಟುಗಳನ್ನು ಒಳಗೊಂಡಂತೆ ಒಂದು ಅಧಿನಿಯಮವನ್ನು ಜಾರಿಗೆ ತರುವುದನ್ನು ಬಾಕಿ ಇಟ್ಟು ಸರ್ಕಾರವು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ನಿರ್ವಹಣೆಗಾಗಿ ಈ ಕೆಳಕಂಡ 07 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಲು ಮಂಜೂರಾತಿ ನೀಡಿದೆ.

ಹುದ್ದೆಗಳ ವಿವರ		ವೇತನ ಶ್ರೇಣಿ	ಸಂಖ್ಯೆ
1.	ಆಯುಕ್ತರು (ವಿಶೇಷ ಜಿಲ್ಲಾಧಿಕಾರಿಗಳ ದರ್ಜೆಯ ಕೆ.ಎ.ಎಸ್, ಹಿರಿಯ ಶ್ರೇಣಿ ಅಧಿಕಾರಿ)	20025–28275	1
2.	ಅಕೌಂಟ್ಸ್ ಸೂಪರಿಂಟೆಂಡೆಂಟ್	10800–20025	1
3.	ಪ್ರಥಮ ದರ್ಜೆ ಸಹಾಯಕ	7275–13350	1
4.	ಶೀಘ್ರಲಿಪಿಗಾರರು	7275–13350	1
5.	ಬೆರಳಚ್ಚುಗಾರರು	5800–10500	1
6.	ಗ್ರೂಪ್ ಡಿ	4800–7275	1
7.	ವಾಹನ ಚಾಲಕರು	5800– 10500	1
ಒಟ್ಟು			07

2) ಮೇಲಿನ ಹುದ್ದೆಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತವೆ :

(i) ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಲಾಗಿದೆ.

(ii) ಕ್ರ. ಸಂ. (1) ರಿಂದ (3) ರಲ್ಲಿನ ಹುದ್ದೆಗಳನ್ನು ನಿಯೋಜನೆ ಮೂಲಕ ಹಾಗೂ ಕ್ರ. ಸಂ. (4) ರಿಂದ (7) ರಲ್ಲಿನ ಹುದ್ದೆಗಳನ್ನು ಹೊರ ಗುತ್ತಿಗೆ ಮೂಲಕ ತುಂಬತಕ್ಕದ್ದು.

(iii) ಈ ಹುದ್ದೆಗಳ ವೆಚ್ಚವನ್ನು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಲಾದ ಅನುದಾನದಿಂದ ಭರಿಸತಕ್ಕದ್ದು.

3) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/230/ವೆಚ್ಚ–7/2009, ದಿನಾಂಕ:2/6/2009ರಲ್ಲಿನ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟೇಶಮೂರ್ತಿ

ಪಿ.ಆರ್. 1594

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಪುನರ್ವಸತಿ & ಭೂ ಸ್ವಾಧೀನ–2)

ಸಹಕಾರ ಸಚಿವಾಲಯ

ವಿಷಯ: ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಕೋಲಾರ ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರು, ಇವರ ಪತ್ರ ಸಂಖ್ಯೆ: ಸಿಆರ್‌ಡಿ/81/ಸಿಎಬಿ–1/2003–04 ದಿನಾಂಕ:23.03.2009

ಪ್ರಸ್ತಾವನೆ:

ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:5.3.2009ರ ಪತ್ರದಲ್ಲಿ ಚುನಾವಣಾ ಆಯೋಗವು ಲೋಕಸಭಾ ಚುನಾವಣಾ ದಿನಾಂಕವನ್ನು ಪ್ರಕಟಿಸಿರುವುದರಿಂದ ಹಾಗೂ ಮಾದರಿ ನೀತಿ ಸಂಹಿತೆ ದಿನಾಂಕ:2.3.2009 ರಿಂದ ಜಾರಿಯಲ್ಲಿರುವುದರಿಂದ ಸದರಿ ಬ್ಯಾಂಕಿನ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು

ದಿನಾಂಕ:30.09.2009ರ ವರೆಗೆ ಮುಂದೂಡಲು ಅನುಮತಿ ನೀಡುವಂತೆ ಕೋರಿರುವುದಾಗಿ ವರದಿ ಮಾಡುತ್ತಾ ಸದರಿ ಬ್ಯಾಂಕಿನ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:30.09.2009ರ ವರೆಗೆ ಮುಂದೂಡಲು ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 97 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 4ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ: 30–09–2009 ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27 ಸದರಿ ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ :

27ರ ಪ್ರಕರಣದಲ್ಲಿ :

27ನೇ ಪ್ರಕರಣ ಉಪಪ್ರಕರಣ (1)ರ ಪರಂತುಕದಲ್ಲಿನ "ಆರು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಹನ್ನೆರಡು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: ಪ್ರಕರಣ 27(1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30–09–2009ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 1596

ವಿಷಯ: ಸಮಾಪನೆಗೊಂಡಿರುವ ಹಾಸನ ತಾಲ್ಲೂಕು ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ ಇದರ ಸರ್ಕಾರಿ ಷೇರು ಸಾಲ, ಬಡ್ಡಿಗಳನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ಅಪರ ನಿಬಂಧಕರು, ಇವರ ಪತ್ರ ಸಂಖ್ಯೆ:ಆರ್‌ಸಿಎಸ್/ಎಲ್‌ಕ್ಯೂಡಿ/6/2008–09 ದಿನಾಂಕ: 16–5–2008 ಮತ್ತು 4.3.2009

ಪ್ರಸ್ತಾವನೆ:

ಹಾಸನ ತಾಲ್ಲೂಕು ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ ಇದನ್ನು ಮೈಸೂರು ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕರು, ದಿನಾಂಕ: 23.04.1999 ರಂದು ಸಮಾಪನೆಗೊಳಿಸಿದ್ದು, ಸದರಿ ಸಂಘವು ಸರ್ಕಾರದ ಷೇರು ಬಂಡವಾಳ ರೂ. 8000.00, ಸರ್ಕಾರದ ಸಾಲ ರೂ. 25,000.00 ಮತ್ತು ಸಾಲದ ಮೇಲಿನ ಬಡ್ಡಿ ರೂ. 13,120.00 ಒಟ್ಟು ರೂ. 46,120.00 ಗಳನ್ನು ಸರ್ಕಾರಕ್ಕೆ ಪಾವತಿಸಬೇಕಾಗಿದ್ದು, ಸದರಿ ಮೊತ್ತವನ್ನು ಪಾವತಿಸಲು ಸಂಘದಲ್ಲಿ ಯಾವುದೇ ರಹ ಇಲ್ಲದಿರುವುದರಿಂದ ಅದನ್ನು ಮನ್ನಾ ಮಾಡಬೇಕೆಂದು ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 31 ಸಿಹೆಚ್ಎಸ್ 2008, ಬೆಂಗಳೂರು, ದಿನಾಂಕ: 4ನೇ ಜುಲೈ 2009

ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ ಸಮಾಪನೆಗೊಂಡಿರುವ ಹಾಸನ ತಾಲ್ಲೂಕು ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ ಇದು ಸರ್ಕಾರಕ್ಕೆ ಪಾವತಿಸಬೇಕಾದ ಷೇರು ಬಂಡವಾಳ ರೂ. 8.000.00, ಸರ್ಕಾರದ ಸಾಲ ರೂ. 25,000.00 ಮತ್ತು ಸಾಲದ ಮೇಲಿನ ಬಡ್ಡಿ ರೂ. 13.120.00 ಒಟ್ಟು ರೂ. 46.120.00 (ನಲವತ್ತಾರು ಸಾವಿರದ ಒಂದು ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಮನ್ನಾ ಮಾಡಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/1/ಟಿಎಫ್‌ಪಿ/2002, ದಿನಾಂಕ: 20–01–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.
ಆರ್.ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 1597

ವಿಷಯ: ಕೋಲಾರ ಜಿಲ್ಲಾ ಸಹಕಾರ ಒಕ್ಕೂಟ, ಕೋಲಾರ ಇದರ ಆಡಳಿತ ಮಂಡಳಿ ಚುನಾವಣೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ:ಅನಿ/ಕೈಸಸಂ/ಚು/60/2009–10 ದಿನಾಂಕ:25.06.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 25/06/2009ರ ಪತ್ರದಲ್ಲಿ ಕೋಲಾರ ಜಿಲ್ಲಾ ಸಹಕಾರ ಒಕ್ಕೂಟ, ಕೋಲಾರ ಇದರ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯನ್ನು ಪ್ರತ್ಯೇಕಗೊಳಿಸಿ ಆಡಳಿತ ಮಂಡಳಿಯನ್ನು ರಚಿಸುವ ಬಗ್ಗೆ ವಿಶೇಷ ಮಹಾ ಸಭೆ ನಿರ್ಣಯ ಅಸಮಂಜಸವೆಂದು ಕಂಡು ಬಂದ ಕಾರಣ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ್ಯ ಇವರು ತಿದ್ದುಪಡಿಯನ್ನು ತಿರಸ್ಕರಿಸಿರುತ್ತಾರೆ. ಈ ಲೋಪದೋಷಗಳನ್ನು ಸರಿಪಡಿಸಿಕೊಂಡು ಆಡಳಿತ ಮಂಡಳಿಯ ರಚನೆ ಕುರಿತು ಸಹಕಾರ ಸಂಘಗಳ ಕಾಯ್ದೆ ಕಲಂ 12 (5) ರನ್ವಯ 12.06.2009ರಂದು ಕೋಲಾರ ಜಿಲ್ಲಾ ಸಹಕಾರ ಒಕ್ಕೂಟಕ್ಕೆ ನೋಟೀಸು ಜಾರಿಮಾಡಲಾಗಿದೆ. ಈ ಹೊಸ ಆಡಳಿತ ಮಂಡಳಿಯ ರಚನೆಗೆ ಒಪ್ಪಿಗೆ ನೀಡಲು ಕನಿಷ್ಟ 45 ದಿನಗಳ ಕಾಲಾವಕಾಶ ಇರುತ್ತದೆಯೆಂದು ತಿಳಿಸಿರುತ್ತಾರೆ.

ಆದರೆ ಹೊಸ ಆಡಳಿತ ಮಂಡಳಿಯ ಚುನಾವಣೆಯನ್ನು 03.07.2009ರ ಒಳಗೆ ಜರುಗಿಸಬೇಕಾಗಿರುತ್ತದೆ. ಈ ಕಾನೂನಿನ ತಾಂತ್ರಿಕ ತೊಂದರೆಯಿಂದ ಆಡಳಿತ ಮಂಡಳಿಯನ್ನು ಉಪ ನಿಯಮ ತಿದ್ದುಪಡಿಯಾಗುವವರೆಗೆ ಮುಂದುವರೆಸುವುದು ಅವಶ್ಯವಿರುತ್ತದೆ. ಈ ವಿಷಯವನ್ನು 15.06.2009 ರ ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 121 ರಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆಡಳಿತ ಮಂಡಳಿಯ ಸದಸ್ಯರ ಪುನರ್ ರಚನೆ ಆಗುವವರೆಗೆ ಚುನಾವಣಾ ಕಾಲವನ್ನು ವಿಸ್ತರಿಸಲು ವಿನಂತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಈ ಸನ್ನಿವೇಶದಲ್ಲಿ 03.07.2009ರಂದು ಜರುಗಬೇಕಾದ ಚುನಾವಣೆಯನ್ನು ಆ ದಿನದಿಂದ 45 ದಿನಗಳವರೆಗೆ ಅಥವಾ ಈ ಒಕ್ಕೂಟ ಆಡಳಿತ ಮಂಡಳಿಯ ಸದಸ್ಯರ ಪುನರ್‌ರಚನೆ ಬೈಲಾ ತಿದ್ದುಪಡಿಯಾಗಿ ಚುನಾವಣೆ ಜರುಗಿಸಲು ಬೇಕಾದ ಕನಿಷ್ಟ ಸಮಯಕ್ಕೆ ಹೊಂದುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959., ಕಲಂ 121 ರಡಿ ಚುನಾವಣಾ ಕಾಲಾವಧಿಯನ್ನು ವಿಸ್ತರಿಸಲು ಸೂಕ್ತ ಆದೇಶವನ್ನು ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 89 ಸಸಂನೋ 2009, ಬೆಂಗಳೂರು, ದಿನಾಂಕ: 6ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39–ಎ (4) ಮತ್ತು ಪ್ರಕರಣ 121ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕೋಲಾರ ಜಿಲ್ಲಾ ಸಹಕಾರ ಒಕ್ಕೂಟ (ನಿ) ಕೋಲಾರ ಇದರ 2009–10 ರಿಂದ 2013–14ನೇ ಸಾಲುಗಳ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸಲು ದಿನಾಂಕ:30.09.2009ರ ವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಅನುಮತಿಯನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1598

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ವಿಷಯ: ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ (ಲಿ), ಬೆಂಗಳೂರು ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ಅಪರ ನಿಬಂಧಕರು, ಇವರ ಪತ್ರ ಸಂಖ್ಯೆ:ಒಟಿಎಸ್/169/ಹೆಚ್‌ಒಟಿ/2008–09, ದಿನಾಂಕ: 21.04.2009

ಪ್ರಸ್ತಾವನೆ:

ದಿ ನರ್ಸರಿಮೆನ್ ಕೋ–ಆಪರೇಟಿವ್ ಸೊಸೈಟಿ (ಲಿ.) ಬೆಂಗಳೂರು ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 25.03.2009ರಂದು ನಡೆಸಲು ನಿಗದಿಪಡಿಸಿದ್ದು, ಲೋಕಸಭಾ ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವುದರಿಂದ ದಿನಾಂಕ: 25.03.2009 ರಂದು ನಡೆಯಲಿರುವ ವಾರ್ಷಿಕ ಮಹಾಸಭೆಯನ್ನು ಮುಂದೂಡುವಂತೆ ನೀಡಲಾದ ನಿರ್ದೇಶನದನ್ವಯ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಸಾಧ್ಯವಾಗದ ಪ್ರಯುಕ್ತ 2008–09ನೇ ಸಾಲಿನ ವಾರ್ಷಿಕ ಮಹಾಸಭೆಯೊಂದಿಗೆ ನಡೆಸಲು ಅನುಮತಿ ನೀಡಬೇಕಾಗಿ ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 113 ಸಿಎಲ್‌ಎಂ 2009, ಬೆಂಗಳೂರು, ದಿನಾಂಕ: 3ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ದಿ ನರ್ಸರಿಮೆನ್ ಕೋ_ಆಪರೇಟಿವ್ ಸೊಸೈಟಿ (ಲಿ.) ಬೆಂಗಳೂರು ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 30–09–2009ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27 ಸದರಿ ಸಂಸ್ಥೆಗೆ ಈ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ :

27ರ ಪ್ರಕರಣದಲ್ಲಿ:

27ನೇ ಪ್ರಕರಣದ ಉಪಪ್ರಕರಣ (1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: ಪ್ರಕರಣ 27(1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30–09–2009 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 1599

ವಿಷಯ: ಕರ್ನಾಟಕ ಆರ್ಯ ವೈಶ್ಯ ಮಹಾಸಭೆ (ರಿ) ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂ:ಡಿಆರ್/ಎಸ್‌ಓಆರ್/ಪಿಟಿಷನ್–124/09–10, ದಿನಾಂಕ:11.06.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:11/06/2009 ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಇವರು ಕರ್ನಾಟಕ ಆರ್ಯ ವೈಶ್ಯ ಮಹಾಸಭೆ (ರಿ) ಬೆಂಗಳೂರು ಇದರ ಕಾರ್ಯಕಾರಿ ಸಮಿತಿಯ ಅವಧಿ ಮುಗಿದಿದ್ದರೂ ಚುನಾವಣೆ ನಡೆಸಿಲ್ಲವೆಂದು ಹಾಗೂ ಅನಧಿಕೃತವಾಗಿ ಮುಂದುವರೆದಿರುವುದಾಗಿ ಪಿ. ಶ್ರೀನಿವಾಸ ಮತ್ತಿತರರು 11.05.2009 ರಂದು ದೂರು ಅರ್ಜಿ ಸಲ್ಲಿಸಿದ್ದು, ದೂರಿನ ಬಗೆ ಲಿಖಿತ ವಿವರಣೆ ಸಲ್ಲಿಸುವಂತೆ ಸಂಘಕ್ಕೆ ಸೂಚಿಸಲಾಗಿತ್ತು. ಸಂಘದವರಿಂದ ಯಾವುದೇ ವಿವರಣೆ ಸ್ವೀಕೃತಿಯಾಗದಿದ್ದುದರಿಂದ ಅರ್ಜಿ ಬಗ್ಗೆ ಗಮನಿಸಿ ಸಂಘಕೆ ಖುದ್ದು ಭೇಟಿ ನೀಡಿ ವರದಿಯನ್ನು ಸಲ್ಲಿಸಲು ಶ್ರೀ ಎಸ್. ಮೆಹಬೂಬ, ಸಹಕಾರ ಸಂಘಗಳ ಸಹಾಯಕ ನಿಬಂಧಕರು 2ನೇ ವಲಯ ಬೆಂಗಳೂರು ಇವರಿಗೆ ತಿಳಿಸಲಾಗಿದ್ದು ಅದರಂತೆ ವರದಿಯನ್ನು ಸಲ್ಲಿಸಿರುವುದಾಗಿ ವರದಿ ಮಾಡಿರುತ್ತಾರೆ.

ದೂರು ಅರ್ಜಿ ಹಾಗೂ ವರದಿಯನ್ನು ಮತ್ತು ಸಂಘದ ಕಾರ್ಯದರ್ಶಿಯವರ ವಿವರಣೆಯನ್ನು ಗಮನಿಸಿದಾಗ ಕರ್ನಾಟಕ ಆರ್ಯ ವೈಶ್ಯ ಮಹಾಸಭೆ (ರಿ) ಇದು ನಿಯಮಾನುಸಾರ ಚುನಾವಣೆ ನಡೆಸದೆ ಇರುವುದು ಮತ್ತು ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಸದಿರುವುದು ಕಂಡು ಬಂದಿದೆ ಈ ಹಿನ್ನೆಲೆಯಲ್ಲಿ ಸದರಿ ಸಂಘಕ್ಕೆ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 27(ಎ) ರೀತ್ಯಾ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 83 ಸಸಂನೋ 2009, ಬೆಂಗಳೂರು, ದಿನಾಂಕ: 4ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರ್ಯ ವೈಶ್ಯ ಮಹಾಸಭೆ (ರಿ) ಬೆಂಗಳೂರು ಇದರ ಅವಧಿ ಮುಗಿದಿದ್ದರೂ ನಿಯಮಾನುಸಾರ ಚುನಾವಣೆ ನಡೆಸದೆ ವಾರ್ಷಿಕ ಸದಸ್ಯರ ಸಭೆಯನ್ನು ನಡೆಸದಿರುವುದು ಕಂಡು ಬಂದಿರುವುದರಿಂದ ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 27 (ಎ) ರೀತ್ಯಾ ಸಹಕಾರ ಸಂಘಗಳ ಉಪ ನಿಬಂಧಕರು–1 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರನ್ನು ಮೂರು ತಿಂಗಳ ಅವಧಿಗೆ ಹಾಲಿ ಇರುವ ಸದಸ್ಯರಿಂದ ಕೂಡಲೇ ಸಂಘಕ್ಕೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾಗವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಆಡಳಿತ ಮಂಡಳಿಯ ಅವ್ಯವಹಾರಗಳನ್ನು ಸರಿಪಡಿಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಸೂಚಿಸಿದೆ. ಆಡಳಿತಾಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಸಹ ಒದಗಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ನಂಜುಂಡಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 1600

ಸಮಾಜ ಕಲ್ಯಾಣ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಸಕಇ 123 ಬಿಸಿಎ 2009, ಬೆಂಗಳೂರು, ದಿನಾಂಕ: 1ನೇ ಜುಲೈ 2009

ವಿಷಯ: ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಕೆನೆಪದರದಡಿ ವಾರ್ಷಿಕ ಆದಾಯ ಮಿತಿಯನ್ನು ರೂ. 4.50 ಲಕ್ಷಗಳಿಗೆ ಭಾರತ ಸರ್ಕಾರವು ಪರಿಷ್ಕರಿಸುವ ರೀತ್ಯಾ ಓ.ಬಿ.ಸಿ. ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ: ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:36033/3/2004 Estt.(Res) ದಿನಾಂಕ 14-10-2008

ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ದಿನಾಂಕ 14.10.2008ರ ಅಧಿಕೃತ ಜ್ಞಾಪನದನ್ವಯ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕೇಂದ್ರ ಸರ್ಕಾರದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಅಥವಾ ಕೇಂದ್ರ ಸರ್ಕಾರದ ಹುದ್ದೆಗಳು, ಯೋಜನೆಗಳು ಹಾಗೂ ಸವಲತ್ತುಗಳನ್ನು ಪಡೆಯುವ ಉದ್ದೇಶಕ್ಕಾಗಿ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದ ಸಂದರ್ಭಗಳಲ್ಲಿ ಹಿಂದುಳಿದ ವರ್ಗಗಳ ಪ್ರಮಾಣ ಪತ್ರಗಳನ್ನು ನೀಡುವ ಸಕ್ಷಮ ಪ್ರಾಧಿಕಾರಗಳು ರೂ. 4.50 ಲಕ್ಷಗಳ ಪರಿಷ್ಕೃತ ವಾರ್ಷಿಕ ಆದಾಯ ಮಿತಿಯೊಳಗೆ ಬರುವ ಅಭ್ಯರ್ಥಿಗಳಿಗೆ, ನಿಗದಿಪಡಿಸಿರುವ ಕೆನೆಪದರ ನೀತಿಯ ಇನ್ನಿತರ ನಿರ್ಣಾಯಕ ಅಂಶಗಳೊಂದಿಗೆ ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಪರಿಶೀಲಿಸಿ ಹಿಂದುಳಿದ ವರ್ಗಗಳ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

"Son(s) and Daughter(s) of :

a) Persons having cross annual income Rs. 4.5 lakh or above or possessing wealth above the exemption limit as prescribed in the Wealth Tax Act for a period of three consecutive years.

b) Persons in categories I, II, III and V-A who are not disentitled to the benefit of reservation but have income from other sources of wealth which will bring them within the income/wealth criteria mentioned in (a) above.

Explanation:

Income from salaries or Agricultural land shall not be clubbed.

ಬಿ. ರಾಮಸ್ವಾಮಿ

ಪಿ.ಆರ್. 1608 ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ), ಸಮಾಜ ಕಲ್ಯಾಣ ಇಲಾಖೆ

ಕಂದಾಯ ಸಚಿವಾಲಯ

ವಿಷಯ: ಕಂದಾಯ ಇಲಾಖೆಯ ಗ್ರೂಪ್ -ಸಿ ವೃಂದದ ವರ್ಗಾವಣೆ ಮಾಡುವ ಬಗ್ಗೆ ವೃಂದ ನಿರ್ವಹಣಾ ಪ್ರಾಧಿಕಾರ ರಚಿಸುವ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 4 ಎಸ್‌ಪಿಆರ್ 2001 ದಿನಾಂಕ: 22/11/2001

ಪ್ರಸ್ತಾವನೆ:

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 4 ಎಸ್‌ಪಿಆರ್ 2001 ದಿನಾಂಕ: 22/11/2001 ರಲ್ಲಿ ಸರ್ಕಾರಿ ಅಧಿಕಾರಿ/ನೌಕರರ ವರ್ಗಾವಣೆಗಳನ್ನು ಸದರಿ ಆದೇಶದಲ್ಲಿ ಸೂಚಿಸಿರುವ ವೃಂದ ನಿರ್ವಹಣಾ ಪ್ರಾಧಿಕಾರದ ಮೂಲಕ ವರ್ಗಾವಣೆಗಳನ್ನು ಮಾಡಬೇಕಾಗಿರುತ್ತದೆ. ಗ್ರೂಪ್-ಸಿ ವೃಂದದ ನೌಕರರ ವರ್ಗಾವಣೆಗಳನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಮಾಡುವ ವೃಂದ ಪ್ರಾಧಿಕಾರದಲ್ಲಿ ಸರ್ಕಾರದಿಂದ ನಾಮ ನಿರ್ದೇಶಿತವಾದ ಇಲಾಖಾ ಮುಖ್ಯಸ್ಥರು ಇರಬೇಕಾಗುತ್ತದೆ. ರಾಜ್ಯದಲ್ಲಿ 2005ನೇ ಸಾಲಿನಲ್ಲಿ ಪ್ರಾದೇಶಿಕ ಆಯುಕ್ತರ ಹುದ್ದೆಯು ರಚನೆಯಾದ ನಂತರ ಶಿರಸ್ತೇದಾರರ ವೃಂದಕ್ಕೆ ವೃಂದ ನಿರ್ವಹಣಾ ಪ್ರಾಧಿಕಾರವನ್ನು ರಚನೆ ಮಾಡಿರುವುದಿಲ್ಲ. ಶಿರಸ್ತೇದಾರರ ವೃಂದಕ್ಕೆ ಪ್ರಾದೇಶಿಕ ಆಯುಕ್ತರು ಇಲಾಖಾ ಮುಖ್ಯಸ್ಥರಾಗಿರುವುದರಿಂದ ಆಯಾ ವಿಭಾಗದ ಹಿರಿಯ ಜಿಲ್ಲಾಧಿಕಾರಿಗಳನ್ನು ಸದಸ್ಯರನ್ನಾಗಿ ಹಾಗೂ ಹೆಚ್ಚುವರಿ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಇವರನ್ನು ಸಂಚಾಲಕರನ್ನಾಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಶಿರಸ್ತೇದಾರರ ವೃಂದಕ್ಕೆ ವೃಂದ ನಿರ್ವಹಣಾ ಪ್ರಾಧಿಕಾರ ರಚಿಸಲು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ : ಕಂಇ 191 ಬಿಎಂಎಂ 2009, ಬೆಂಗಳೂರು, ದಿನಾಂಕ: 24ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಬೆಂಗಳೂರು, ಮೈಸೂರು, ಬೆಳಗಾಂ, ಹಾಗೂ ಗುಲ್ಬರ್ಗಾ ವಿಭಾಗದ ಶಿರಸ್ತೇದಾರರ ವೃಂದಕ್ಕೆ ಈ ಕೆಳಕಂಡ ವೃಂದ ನಿರ್ವಹಣಾ ಪ್ರಾಧಿಕಾರವನ್ನು ಈ ಕೂಡಲೇ ಜಾರಿಗೆ ಬರುವಂತೆ ರಚಿಸಲಾಗಿದೆ.

ಪ್ರಾದೇಶಿಕ ಆಯುಕ್ತರು	:	ಅಧ್ಯಕ್ಷರು
ವಿಭಾಗದ ಹಿರಿಯ ಜಿಲ್ಲಾಧಿಕಾರಿಗಳು	;	ಸದಸ್ಯರು
ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಪ್ರಾದೇಶಿಕ ಆಯುಕ್ತರ ಕಛೇರಿ.	:	ಸಂಚಾಲಕರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1610 ಎಂ.ಎಸ್. ದೇಸಾಯಿ

ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು & ವಿ.ನಿ.)

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಧಾರವಾಡ ತಾಲ್ಲೂಕು, ಅತ್ತಿಕೊಳ್ಳ ಗ್ರಾಮದ ರೈಲ್ವೆ ಇಲಾಖೆಯ ಜಾಗದಲ್ಲಿ ವಾಸಿಸುತ್ತಿರುವ ಗ್ರಾಮಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. LAQ/CR-134+149/2008-09, ದಿನಾಂಕ: 3.1.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ರವರು ಧಾರವಾಡ ಕಂಬಾರ–ಗಣವಿ ವರೆಗೆ ರೈಲ್ವೆ ಹಳಿ ನಿರ್ಮಾಣಕ್ಕಾಗಿ ರೈಲ್ವೆ ಸಚಿವಾಲಯವು ಕಾಮಗಾರಿಯನ್ನು ಪ್ರಾರಂಭಿಸಿದ್ದು, ಧಾರವಾಡದ ಅತ್ತಿಕೊಳ್ಳ ಗ್ರಾಮದಲ್ಲಿ ಒಟ್ಟು 7 ಎಕರೆ 7 ಗುಂಟೆ ಜಮೀನಿನಲ್ಲಿ 262 ಕುಟುಬಗಳು ವಾಸವಾಗಿದ್ದು, ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲಾಗಿದೆ. ಸದರೀ ಕೊಳಚೆ ಪ್ರದೇಶದಲ್ಲಿನ ಕುಟುಂಬಗಳನ್ನು ಬೇರೆಡೆಗೆ ಸ್ಥಳಾಂತರಿಸಿ, ಈ ಪ್ರದೇಶವನ್ನು ರೈಲ್ವೆ ಯೋಜನೆಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಕೊಳಚೆ ಪ್ರದೇಶದಲ್ಲಿನ 262 ಕುಟುಂಬಗಳಿಗೆ ಪುನರ್ ವಸತಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 29.12.2008 ರಂದು ನಡೆದ ಸಭೆಯ ವಿಷಯ ಸಂಖ್ಯೆ. 7 ರಲ್ಲಿ ಧಾರವಾಡ ಕಂಬಾರ–ಗಣವಿ ವರೆಗೆ ಜೋಡಿ ರೈಲ್ವೆ ಮಾರ್ಗದ ಅಭಿವೃದ್ಧಿ ಭೂ ಸ್ವಾಧೀನ ಪ್ರಕ್ರಿಯೆಯಡಿಯಲ್ಲಿನ ಬರುವ 262 ಕೊಳಚೆ ನಿವಾಸಿಗಳಿಗೆ ಪ್ರಾಧಿಕಾರವು ನಿರ್ಮಿಸಿರುವ ಲಕಮನಹಳ್ಳಿ ವಸತಿ ಬಡಾವಣೆಯಲ್ಲಿ 20x30 ಅಳತೆಯ ನಿವೇಶಗಳನ್ನು ಸರ್ಕಾರವು ನಿಗದಿಪಡಿಸಿರುವ ರೂ.20,800.00 ಮೊತ್ತಕ್ಕಿಂತ ಶೇ.10 ರಷ್ಟು ಹೆಚ್ಚಿನ ಮೊತ್ತವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಹಂಚಿಕೆ ಮಾಡಲು ನಿರ್ಣಯಿಸಿರುತ್ತದೆ.

ಅದರಂತೆ, ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆನಅಇ 51 ಬೆಮಪ್ರಾ 2009, ಬೆಂಗಳೂರು, ದಿನಾಂಕ: 17ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಲಕ್ಕಮನಹಳ್ಳಿ ಗ್ರಾಮದ ರಿ.ಸರ್ವೆ ನಂ. 165/ಅ/166 ರಲ್ಲಿ ಅಭಿವೃದ್ಧಿ ಪಡಿಸಿರುವ ವಸತಿ ಬಡಾವಣೆಯಲ್ಲಿ 20x30 ಅಳತೆಯ 364 ಖಾಲಿ ನಿವೇಶನಗಳನ್ನು ಪ್ರತಿ ನಿವೇಶನಕ್ಕೆ ಸರ್ಕಾರವು ನಿಗದಿಪಡಿಸಿರುವ ದರ ರೂ.20,800/– ಮೊತ್ತಕ್ಕಿಂತ ಶೇ.10 ರಷ್ಟು ಹೆಚ್ಚಿನ ದರ ವಿಧಿಸಿ ಅತ್ತಿಕೊಳ್ಳ ಗ್ರಾಮದಲ್ಲಿ ರೈಲ್ವೆ ಹಳಿ ವಿಸ್ತರಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗಾಗಿ ನಿವೇಶನ ಕಳೆದುಕೊಳ್ಳುವ 262 ಕೊಳಚೆ ನಿವಾಸಿಗಳಿಗೆ ಪುನರ್ ವಸತಿ ಕಲ್ಪಿಸುವ ಉದ್ದೇಶಕ್ಕಾಗಿ ಹಂಚಿಕೆ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1611 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ಚಿತ್ರದುರ್ಗ ಜಿಲ್ಲೆ, ಹಿರಿಯೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I) ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂ:ನಅಇ 01 ಬೆಂರೂಪ್ರಾ 2008 ದಿ:13.02.2008.
2) ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ ಚಿತ್ರದುರ್ಗ ಇವರ ಪತ್ರ ಸಂ:ನಯೋಚಿ/ಸನಿ/ಹಿರಿಯೂರು/ಮಯೋ.ಪ/08–09/637 ದಿನಾಂಕ:12.02.2009.
3) ನಿರ್ದೇಶಕರು, ನಗರ ಯೋಜನಾ ಇಲಾಖೆ ಇವರ ಏಕ ಕಡತ ಸಂ.ನಯೋ (13)/ಜಂನಿ(ಬೆಂ.ವಿ) ಮಯೋ(ಪರಿಷ್ಕೃತ–I) ಅಂತಿಮ/555/2008–09 ದಿನಾಂಕ:1.04.2009.

ಪ್ರಸ್ತಾವನೆ:

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹಿರಿಯೂರು ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I)ಕ್ಕೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ನಗರ ಯೋಜನಾ ಸಹಾಯಕ ನಿರ್ದೇಶಕರು, ಚಿತ್ರದುರ್ಗ ಇವರು ಹಿರಿಯೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I)ರ ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ನಗರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಹಿರಿಯೂರು ಪಟ್ಟಣದ ಜನಸಂಖ್ಯೆಯು 2021 ರಲ್ಲಿ 1,00,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ

(ಪರಿಷ್ಕೃತ–I) ಯನ್ನು ತಯಾರಿಸಲಾಗಿದೆ ಹಿರಿಯೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ 2734.74 ಹೆಕ್ಟೇರ್ ಪ್ರದೇಶದಲ್ಲಿ 1520.92 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆ (ಪರಿಷ್ಕೃತ–I) ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12ರಲ್ಲಿನ ಅಂಶಗಳನ್ನು ಪರಿಗಣಿಸಿ, ಹಿರಿಯೂರು ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 1520.92 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 649.51 ಹೆಕ್ಟೇರ್ (ಶೇ.44.97), ವಾಣಿಜ್ಯಕ್ಕಾಗಿ 40.59 ಹೆಕ್ಟೇರ್ (ಶೇ 2.81),, ಕೈಗಾರಿಕೆಗಾಗಿ 122.62 ಹೆಕ್ಟೇರ್ (ಶೇ.8.49) ಸಾರ್ವಜನಿಕ /ಅರೆ ಸಾರ್ವಜನಿಕ ಉಪಯೋಗಕ್ಕಾಗಿ 127.05 ಹೆಕ್ಟೇರ್ (ಶೇ.8.80), ಉದ್ಯಾನವನ/ ಬಯಲು ಜಾಗಗಳಿಗೆ 133.27 ಹೆಕ್ಟೇರ್ (ಶೇ.9.23) ನಾಗರೀಕ ಸೌಲಭ್ಯಕ್ಕಾಗಿ 57.51 ಹೆಕ್ಟೇರ್ (ಶೇ.3.98) ಹಾಗೂ ಸಾರಿಗೆ ಸಂಪರ್ಕ ವಲಯಕ್ಕಾಗಿ 313.68 ಹೆಕ್ಟೇರ್ (ಶೇ.21.72) ಮತ್ತು ಜಲಾವೃತ ಪ್ರದೇಶಕ್ಕಾಗಿ 76.59 ಹೆಕ್ಟೇರ್ ಪ್ರದೇಶ ಒಳಗೊಂಡಿರುತ್ತದ. ಮಹಾ ಯೋಜನೆ (ಪರಿಷ್ಕೃತ–I) ಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಕಲಂ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ನಅಇ 106 ಬೆಂರೂಪ್ರಾ 09, ಬೆಂಗಳೂರು, ದಿನಾಂಕ: 16ನೇ ಜೂನ್ 2009

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ–ಹಿರಿಯೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1612 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ಕೋಲಾರ ಜಿಲ್ಲೆ, ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಅಧಿಸೂಚನೆ ಸಂ:ನಅಇ 355 ಟಿಟಿಪಿ 96 ದಿನಾಂಕ:02.09.1996.
2) ಮುಖ್ಯಾಧಿಕಾರಿ, ಪುರಸಭಾ ಸ್ಥಳೀಯ ಯೋಜನಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಪು.ಸ.ಮು. ಮಹಾಯೋಜನೆ:01:07–08 ದಿನಾಂಕ:11.01.2008.
3) ನಗರ ಯೋಜನಾ ನಿರ್ದೇಶಕರ ಏಕ ಕಡತ ಸಂಖ್ಯೆ:ನಯೋ(22):ಉನಿ:(ಕೇಕಾ)ಮುಳಬಾಗಿಲು: ಮ.ಯೋ:445:2007–08 ದಿನಾಂಕ:16.02.2009 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೋಲಾರ ಜಿಲ್ಲೆ ಮುಳಬಾಗಿಲು ಪಟ್ಟಣದ ಪುರಸಭೆ ವ್ಯಾಪ್ತಿಯನ್ನೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 4(ಎ) ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಳಬಾಗಿಲು ಪುರಸಭೆಯ ಯೋಜನಾ ಪ್ರಾಧಿಕಾರವು ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ (5) ಮತ್ತು (10) ರನ್ವಯ ಕ್ರಮ ಜರುಗಿಸಿ ಮಹಾಯೋಜನೆಯನ್ನು ರೂಪಿಸಿ ನಕ್ಷೆ ಹಾಗೂ ವರದಿಗಳೊಂದಿಗೆ, ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಿರುತ್ತದೆ.

ಮೇಲೆ ಓದಲಾದ (3)ರ ಏಕ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು, ಬೆಂಗಳೂರು ರವರು ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಜನಸಂಖ್ಯೆಯು 2021ರಲ್ಲಿ 1,75,000 ರಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ, ಮುಳಬಾಗಿಲು ಸ್ಥಳೀಯ ಯೋಜನಾ ಪ್ರದೇಶದ 850.0 ಹೆಕ್ಟೇರ್ ಪ್ರದೇಶದಲ್ಲಿ 750.0 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾಯೋಜನೆಯನ್ನು ರೂಪಿಸಲಾಗಿದೆ. ಮುಳಬಾಗಿಲು ಪಟ್ಟಣ ಜನಸಂಖ್ಯೆಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಹಾಲಿ ಬೆಳವಣಿಗೆಯ ಗತಿ, ಹವಾಗುಣ, ರಸ್ತೆಗಳ ಹಾಲಿ ಪರಿಚಲನೆಯ ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವಗಳಿಗೆ ಅನುಗುಣವಾಗಿ ಹಾಗೂ ಮಹಾ ಯೋಜನೆಯ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ (12) ರನ್ವಯ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ

ನಗರದ ಮುಂದಿನ ಬೆಳವಣಿಗೆಗೆ ವಿವಿಧ ಉಪಯೋಗಗಳಿಗೆ ಬೇಕಾಗಬಹುದಾದ ಭೂಮಿಯನ್ನು ಕಾಯ್ದಿರಿಸಿ ನಗರೀಕರಣದ ಎಲ್ಲೆಯ 750.0 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 418.52 ಹೆಕ್ಟೇರ್ (ಶೇಕಡ 55.80), ವಾಣಿಜ್ಯಕ್ಕಾಗಿ 36.17 ಹೆಕ್ಟೇರ್ (ಶೇಕಡ 4.80), ಕೈಗಾರಿಕೆಗಾಗಿ 36.68 ಹೆಕ್ಟೇರ್ (ಶೇಕಡ 4.,35), ಸಾರ್ವಜನಿಕ:ಅರೆ ಸಾರ್ವಜನಿಕ ವಲಯಕ್ಕೆ 45.34 ಹೆಕ್ಟೇರ್ (ಶೇಕಡ 6.05), ಉದ್ಯಾನವನ:ಬಯಲು ಜಾಗಗಳಿಗೆ 80.80 ಹೆಕ್ಟೇರ್ (ಶೇಕಡ 10.78), ನಾಗರೀಕ ಸೌಲಭ್ಯಕ್ಕಾಗಿ 0.66 ಹೆಕ್ಟೇರ್ (ಶೇ.0.08) ಹಾಗೂ ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ 135.83 ಹೆಕ್ಟೇರ್ (ಶೇಕಡ 18.14) ಜಾಗೆಯನ್ನು ನಿಗದಿಪಡಿಸಲಾಗಿದೆ. ಹಾಗೂ ಮಹಾಯೋಜನೆ ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಿ ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 78 ಬೆಂರೂಪ್ರಾ 2009, ಬೆಂಗಳೂರು, ದಿನಾಂಕ: 16ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ, ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1613 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ರಾಜ್ಯ ಮಹಾನಗರ ಪಾಲಿಕೆಗಳ ಮೇಲುಸ್ತುವಾರಿಗೆ ಪೌರಾಡಳಿತ ಆಯುಕ್ತರನ್ನು ಇಲಾಖಾ ಮುಖ್ಯಸ್ಥರನ್ನಾಗಿ ಅಧಿಕಾರಗಳನ್ನು ಪ್ರತ್ಯಾಯೋಜಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 132 ಎಂಎಲ್ಆರ್ 2008, ದಿನಾಂಕ: 23.08.2008.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 01 ಟಿಸಿಟಿ 2009, ದಿನಾಂಕ: 30.05.2009.

ಪ್ರಸ್ತಾವನೆ:

ರಾಜ್ಯದ ಮಹಾನಗರ ಪಾಲಿಕೆಗಳ ಕಾರ್ಯಗಳ ಪರಿಶೀಲನೆಗೆ ದಿನಾಂಕ:20.05.2009 ರಂದು ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕಾರ್ಯ ಬಾಹುಳ್ಯಗಳು ಹೆಚ್ಚಾಗಿದ್ದು ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಪಾಲಿಕೆಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಸಚಿವಾಲಯದ ಮಟ್ಟದಲ್ಲಿ ವಿಶ್ಲೇಷಿಸಿ ನಿರ್ಧರಿಸುವುದಕ್ಕೆ ಅಗತ್ಯವಾದ ತಾಂತ್ರಿಕ ಪರಿಣಿತಿ ಇತ್ಯಾದಿ ಸೌಲಭ್ಯಗಳು ಇಲ್ಲದೆ ಇರುವುದರಿಂದ ಪೌರಾಡಳಿತ ನಿರ್ದೇಶನಾಲಯದಲ್ಲಿ ಅವಶ್ಯಕ ತಾಂತ್ರಿಕ ಮತ್ತು ಆಡಳಿತಾತ್ಮಕವಾಗಿ ಪ್ರಸ್ತಾವನೆಗಳನ್ನು ಪರಿಶೀಲಿಸಲು ಅವಶ್ಯಕ ಸಿಬ್ಬಂದಿ ಮತ್ತಿತರೆ ಸೌಲಭ್ಯಗಳು ಲಭ್ಯವಿರುವುದರಿಂದ ಮಹಾನಗರಪಾಲಿಕೆಗಳಿಗೆ ಪೌರಾಡಳಿತ ನಿರ್ದೇಶನಾಲಯವನ್ನು ಇಲಾಖಾ ಮುಖ್ಯಸ್ಥರನ್ನಾಗಿ ಮಾಡಿ ಅವರ ಮೂಲಕ ಪ್ರಸ್ತಾವನೆಗಳು ಪರಿಶೀಲಿಸಲ್ಪಟ್ಟು ತದನಂತರ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದಾಗ ತ್ವರಿತವಾಗಿ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬ ಒಮ್ಮತದ ಅಭಿಪ್ರಾಯ ಮೂಡಿ ಬಂದಿರುತ್ತದೆ., ಮುಂದುವರೆದು, ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಎಲ್ಲಾ ಮಹಾನಗರ ಪಾಲಿಕೆಗಳಿಗೂ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಈ ಪಾಲಿಕೆಗಳು ಈ ಕಾಮಗಾರಿಗಳನ್ನು ಗುಣಾತ್ಮಕ ಹಾಗೂ ಕಾಲಮಿತಿಯೊಳಗೆ ಜಾರಿಗೊಳಿಸಬೇಕಾಗಿರುವುದರಿಂದ ನಗರಪಾಲಿಕೆಗಳ ಮೇಲೆ ಪೌರಾಡಳಿತ ನಿರ್ದೇಶನಾಲಯದ ಉಸ್ತುವಾರಿಯು ಅವಶ್ಯಕವಾಗಿರುತ್ತದೆ.

ಇದಕ್ಕೂ ಮಿಗಿಲಾಗಿ ಈ ಹಿಂದೆಯೇ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಉಳಿದ ಮಹಾನಗರ ಪಾಲಿಕೆಗಳಿಗೆ ಅನ್ವಯಿಸುವಂತೆ ಕೆಲವೊಂದು ಆಡಳಿತಾತ್ಮಕ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದೆ. ಪೌರಾಡಳಿತ ನಿರ್ದೇಶನಾಲಯವು ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 1964ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಹಾನಗರಪಾಲಿಕೆಗಳನ್ನು ಹೊರತುಪಡಿಸಿ ಇನ್ನುಳಿದ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸುವ ಸಕ್ಷಮ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ಪೌರಾಡಳಿತ ನಿರ್ದೇಶನಾಲಯವನ್ನು ಉಲ್ಲೇಖ (2) ರಲ್ಲಿನ ದಿನಾಂಕ: 30.05.2009 ರ ತಿದ್ದುಪಡಿಯಂತೆ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ನಿಯಮ 1977ರಲ್ಲಿ ಮಹಾನಗರಪಾಲಿಕೆಗಳ ಮೇಲುಸ್ತುವಾರಿಯ ಉದ್ದೇಶಕ್ಕಾಗಿ ಸದರಿ ನಿಯಮದ ವ್ಯಾಪ್ತಿಯೊಳಗೆ ತರಲಾಗಿದೆ. ಇದರಿಂದಾಗಿ ಪೌರಾಡಳಿತ ನಿರ್ದೇಶಕರು ಶಾಸನಬದ್ದವಾಗಿ ನಗರ ಪಾಲಿಕೆಗಳ ಕಾರ್ಯ ಕಲಾಪಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿದಂತಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರಪಾಲಿಕೆಗಳು ಒಂದೇ ಪ್ರಾಧಿಕಾರದ ನಿಯಂತ್ರಣಕ್ಕೆ ಒಳಪಡುವುದರಿಂದ ಏಕರೂಪದ ನಗರಾಡಳಿತ ನೀತಿಯನ್ನು (Uniform Urban Governance Policy) ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗುತ್ತದೆ. ಅಂತೆಯೇ ಇನ್ನು ಮುಂದೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಹೊರತುಪಡಿಸಿ ರಾಜ್ಯದ ಇನ್ನುಳಿದ ಎಲ್ಲಾ ಮಹಾನಗರಪಾಲಿಕೆಗಳು ಅವರ ಆರ್ಥಿಕ ಪ್ರತ್ಯಾಯೋಜನೆಯನ್ನು ಮೀರಿದಂತಹ ಎಲ್ಲಾ ಪ್ರಸ್ತಾವನೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಮೂಲಕವೇ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 30 ಎಬಿಸಿ 2009, ಬೆಂಗಳೂರು, ದಿನಾಂಕ: 22ನೇ ಜೂನ್ 2009

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:23.08.2008ರ ಅಧಿಕಾರ ಪ್ರತ್ಯಾಯೋಜನೆಯ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಮಹಾನಗರ ಪಾಲಿಕೆಗಳನ್ನು ಪೌರಾಡಳಿತ ನಿರ್ದೇಶಕರ ಆಡಳಿತಾತ್ಮಕ ನಿಯಂತ್ರಣಕ್ಕೆ ಒಳಪಡಿಸಿ, ಇಲಾಖಾ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಲು ಆದೇಶಿಸಲಾಗಿದೆ. ಅದರಂತೆ ಇನ್ನು ಮುಂದೆ ಎಲ್ಲಾ ಮಹಾನಗರ ಪಾಲಿಕೆಗಳು ಸಕ್ಷಮ ಪ್ರಾಧಿಕಾರವಾಗಿ ಸರ್ಕಾರದ ಹಂತದಲ್ಲಿ ಅನುಮೋದನೆಯಾಗಬೇಕಾದಂತಹ ಈ ಕೆಳಕಂಡ ವಿಷಯಗಳನ್ನು ಒಳಗೊಂಡಂತೆ ಎಲ್ಲಾ ಪ್ರಸ್ತಾವನೆಗಳನ್ನು ಪೌರಾಡಳಿತ ನಿರ್ದೇಶಕರ ಮೂಲಕವೇ ಸರ್ಕಾರಕ್ಕೆ ಸಲ್ಲಿಸುವುದು.

1. ರಾಜ್ಯದ ಮಹಾನಗರ ಪಾಲಿಕೆಗಳ ಆಡಳಿತ ವಿಷಯಗಳಿಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶಕರು, ಬೆಂಗಳೂರು, ಇವರು ಇಲಾಖಾ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವುದು.
2. ಪಾಲಿಕೆಗಳ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲಾಗುವ ಕಾಮಗಾರಿಗಳ ಅಂದಾಜು ಪಟ್ಟಿಗಳ ತಾಂತ್ರಿಕ ಅನುಮೋದನೆಯನ್ನು ಪೌರಾಡಳಿತ ನಿರ್ದೇಶಕರ ಕಛೇರಿಯ ಅಧೀಕ್ಷಕ ಅಭಿಯಂತರರ ಮೂಲಕ ತಾಂತ್ರಿಕ ಅನುಮೋದನೆಯನ್ನು ಪಡೆಯುವುದು.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 01 ಟಿಸಿಟಿ 2009. 30.05.2009ರಲ್ಲಿನ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆಯನ್ವಯ ಅಂದಾಜು ಪಟ್ಟಿಗಳು ಮತ್ತು ಟೆಂಡರ್‌ಗಳಿಗೆ ಪೌರಾಡಳಿತ ನಿರ್ದೇಶಕರ ಅನುಮೋದನೆಯನ್ನು ಪಡೆಯುವುದು.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 132 ಎಂಎಲ್‌ಆರ್ 2008, ದಿನಾಂಕ:23.08.2008ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರಗಳನ್ವಯ ಪಾಲಿಕೆಗಳ ಆಡಳಿತಾತ್ಮಕ ವಿಷಯಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು.
5. ಪಾಲಿಕೆಗಳ ಏಕರೂಪ ವೃಂದ ಮತ್ತು ನೇಮಕಾತಿ ನಿಯಮಗಳ ಅನುಷ್ಠಾನದ ನಂತರ ಪೌರಾಡಳಿತ ಸೇವೆಯ ಮಾದರಿಯಲ್ಲಿ ಪಾಲಿಕೆಗಳ ನೌಕರರ ಸೇವಾ ವಿಷಯಗಳನ್ನು ಏಕರೂಪದಲ್ಲಿ ನಿರ್ವಹಿಸುವುದು.
6. ಪಾಲಿಕೆಗಳ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ವಿಶೇಷ ಅನುದಾನದ ಎಸ್‌ಎಫ್‌ಸಿ ಅನುದಾನದ ಇನ್ನಿತರೆ ಯೋಜನೆಗಳ ಕಾರ್ಯಪ್ರಗತಿಯ ವರದಿಗಳನ್ನು ನಿಯಮಿತವಾಗಿ ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸುವುದು.
7. ಎಲ್ಲಾ ಪಾಲಿಕೆಗಳಲ್ಲಿ ಓರ್ವ ನೋಡಲ್ ಅಧಿಕಾರಿಯನ್ನು ಗುರುತಿಸಿ ಅವರ ಮೂಲಕ ಆಯುಕ್ತರುಗಳ ಅನುಮೋದನೆಯೊಂದಿಗೆ ಕಾಮಗಾರಿಗಳ ಪ್ರಗತಿ ವರದಿಗಳನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಅನುಷ್ಠಾನಗೊಳಿಸಿರುವ ವೆಬ್ ಸೈಟ್‌ಗೆ ಮಾಹಿತಿಗಳನ್ನು ಒದಗಿಸುವುದು ಮತ್ತು ಅವುಗಳನ್ನು ಕಾಲಕಾಲಕ್ಕೆ ಉನ್ನತೀಕರಿಸುವುದು.
8. ಕಾಲಕಾಲಕ್ಕೆ ಸರ್ಕಾರವು ನಿರ್ದೇಶಿಸುವ ಇನ್ನಿತರೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪಾಲಿಕೆಗಳು ಪೌರಾಡಳಿತ ನಿರ್ದೇಶಕರ ಮೂಲಕ ಮತ್ತು ಅವರ ನಿರ್ದೇಶನದಲ್ಲಿ ಕಾರ್ಯನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

ಪಿ.ಆರ್. 1615

ಎಂ.ಆರ್. ಮಹೇಶ್‌ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿತ ಕಾಮಗಾರಿಗಳನ್ನು ಕರ್ನಾಟಕ ಭೂಸೇನಾ ನಿಗಮದ ವತಿಯಿಂದ ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 37 ಎಸ್.ಎಫ್.ಸಿ 2008, ದಿನಾಂಕ: 21.08.2008.

2) ಸರ್ಕಾರಿ ಆದೇಶ ಸಂ. ನಅಇ 42 ಎಫ್.ಎಫ್.ಸಿ 2008, ದಿನಾಂಕ: 25.09.2008.

3) ಸರ್ಕಾರಿ ಆದೇಶ ಸಂ. ನಅಇ 61 ಜಿಇಎಲ್ 2009, ದಿನಾಂಕ: 21.02.2009.

4) ಸರ್ಕಾರಿ ಅಧಿಸೂಚನೆ ಸಂಖ್ಯೆ:ಪಿಡಬ್ಲ್ಯೂಡಿ 567 ಎಫ್‌ಸಿ–3/07 ದಿನಾಂಕ: 07.01.2008.

ಪ್ರಸ್ತಾವನೆ:

ಮೇಲೆ ಓದಲಾದ(1) ಮತ್ತು (2)ರ ಆದೇಶದಲ್ಲಿ 2008–09ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಎಸ್.ಎಫ್.ಸಿ ಮುಕ್ತನಿಧಿ ಅನುದಾನವನ್ನು ತುರ್ತಾಗಿ ಹಾಗೂ ಕಾಲಮಿತಿಯೊಳಗಾಗಿ ಪರಿಣಾಮಕಾರಿ ಹಾಗೂ ಗುಣಾತ್ಮಕವಾಗಿ ಅನುಷ್ಠಾನ ಮಾಡಲು ಅನುಕೂಲವಾಗುವಂತೆ ನಗರ ಸ್ಥಳೀಯ ಸಂಸ್ಥೆಗಳ ನಿರ್ಣಯದ ಆಧಾರದ ಮೇಲೆ ಸದರಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಲೋಕೋಪಯೋಗಿ ಇಲಾಖೆ ಹಾಗೂ ನಿರ್ಮಿತಿ ಕೇಂದ್ರಗಳ ಮುಖಾಂತರ ನಿರ್ವಹಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ 2008–09ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಎಸ್.ಎಫ್.ಸಿ.ಮುಕ್ತನಿಧಿ ಅನುದಾನದಲ್ಲಿ ಕಾಮಗಾರಿಗಳ ಅನುಷ್ಠಾನವನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳ ನಿರ್ಣಯದ ಆಧಾರದ ಮೇಲೆ ಸದರಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಲೋಕೋಪಯೋಗಿ ಇಲಾಖೆ, ನಿರ್ಮಿತಿ ಕೇಂದ್ರ ಹಾಗೂ ಕರ್ನಾಟಕ ಭೂ ಸೇನಾ ನಿಗಮದ ಮುಖಾಂತರ ನಿರ್ವಹಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ಭೂಸೇನಾ ನಿಗಮವು ಸಹಾ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪರಿಣಿತಿ ಹೊಂದಿರುವ ನಿಟ್ಟಿನಲ್ಲಿ ಈಗಾಗಲೇ ನಿಗದಿಮಾಡಿರುವ ಇಲಾಖೆಗಳ/ಸಂಸ್ಥೆಗಳ ಜೊತೆಗೆ ಕರ್ನಾಟಕ ಭೂಸೇನಾ ನಿಗಮವನ್ನು ಸಹಾ ಸೇರಿಸಿ 2008–09ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದ ಕಾಮಗಾರಿಗಳನ್ನು ಒಳಪಡಿಸಿ, ಮಾರ್ಪಾಡು ಆದೇಶ ಹೊರಡಿಸಲು ಕೋರಿ ಪೌರಾಡಳಿತ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 61 ಜಿಇಎಲ್ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಇದೇ ಸಮ ಸಂಖ್ಯೆಯ ಆದೇಶ ದಿನಾಂಕ: 18.6.2009ರನ್ನು ಕೂಡಲೆ ಹಿಂದಕ್ಕೆ ಪಡೆಯಲಾಗಿದೆ ಹಾಗೂ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನದ ಕಾಮಗಾರಿಗಳನ್ನು ಶೀಘ್ರ ಅನುಷ್ಠಾನಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕ ಇಲಾಖೆಯ ಪಾರದರ್ಶಕತೆ ನಿಯಮದಡಿಯಲ್ಲಿಯ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ 567 ಎಫ್‌ಸಿ–3/07, ಬೆಂಗಳೂರು, ದಿನಾಂಕ: 07.01.2008ಗೆ ಒಳಪಟ್ಟಿರುವ ಕಾಮಗಾರಿಗಳನ್ನು, ಕರ್ನಾಟಕ ಭೂಸೇನಾ ನಿಗಮದ ವತಿಯಿಂದ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಜಿಲ್ಲಾಧಿಕಾರಿಗಳ ಸಹಮತಿಯ ಮೇರೆಗೆ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಅನುಮತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1616 **ಸಿ.ಆರ್. ರವೀಂದ್ರ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I) ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂ:ನಅಇ 78 ಬೆಂರೂಪ್ರಾ 2006 ದಿ:12.07.2006.
2) ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿತ್ರದುರ್ಗ ಇವರ ಪತ್ರ ಸಂ:ಚಿನಪ್ರಾ/ನಯೋ/718/ಮಯೋ.ಪ–1:2008–09 ದಿ:25.02.2009.
3) ನಿರ್ದೇಶಕರು, ನಗರ ಯೋಜನಾ ಇಲಾಖೆ ಇವರ ಏಕ ಕಡತ ಸಂ.ನಯೋ (13)/ಜಂನಿ(ಬೆಂ.ವಿ) ಮಯೋ(ಪರಿಷ್ಕೃತ–I) ಅಂತಿಮ/563/2008–09 ದಿನಾಂಕ:1.04.2009.

ಪ್ರಸ್ತಾವನೆ:

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಚಿತ್ರದುರ್ಗ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I)ಕ್ಕೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿತ್ರದುರ್ಗ ಇವರು ಚಿತ್ರದುರ್ಗ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I)ರ ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ನಗರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಚಿತ್ರದುರ್ಗ ನಗರದ ಜನಸಂಖ್ಯೆಯು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ (ಪರಿಷ್ಕೃತ–I) ಯನ್ನು ತಯಾರಿಸಲಾಗಿದೆ ಚಿತ್ರದುರ್ಗ ನಗರದ ಸ್ಥಳೀಯ ಯೋಜನಾ ಪ್ರದೇಶದ 13123.40 ಹೆಕ್ಟೇರ್ ವಿಸ್ತೀರ್ಣದಲ್ಲಿ 2964.268 ಹೆಕ್ಟೇರ್ ಪ್ರದೇಶವನ್ನು

ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆ (ಪರಿಷ್ಕೃತ–I) ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12ರಲ್ಲಿನ ಅಂಶಗಳನ್ನು ಪರಿಗಣಿಸಿ, ಚಿತ್ರದುರ್ಗ ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 1163.037 ಹೆಕ್ಟೇರ್ (ಶೇ.43.35), ವಾಣಿಜ್ಯಕ್ಕಾಗಿ 119.719 ಹೆಕ್ಟೇರ್ (ಶೇ.4.46), ಕೈಗಾರಿಕೆಗಾಗಿ 318.907 ಹೆಕ್ಟೇರ್ (ಶೇ.11.89) ಸಾರ್ವಜನಿಕ /ಅರೆ ಸಾರ್ವಜನಿಕ ಉಪಯೋಗಕ್ಕಾಗಿ 226.311 ಹೆಕ್ಟೇರ್ (ಶೇ.8.43), ಉದ್ಯಾನವನ/ ಬಯಲು ಜಾಗಗಳಿಗೆ 101312 ಹೆಕ್ಟೇರ್ (ಶೇ.11.63) ಹಾಗೂ ಸಾರಿಗೆ ಸಂಪರ್ಕ ವಲಯಕ್ಕಾಗಿ 437.799 ಹೆಕ್ಟೇರ್ (ಶೇ.17.66) ನಾಗರೀಕ ಸೌಲಭ್ಯಕ್ಕಾಗಿ 37.034 ಹೆಕ್ಟೇರ್ (ಶೇ.1.38) ಮತ್ತು ಜಲಾವೃತ್ತ ಪ್ರದೇಶವಾಗಿ 32.260 ಹೆಕ್ಟೇರ್ (ಶೇ 1.20) 213.00 ಹೆಕ್ಟೇರ್ ಸಂರಕ್ಷಿತ ಪ್ರದೇಶವೆಂದು, ಹಾಗೂ 68.10 ಹೆಕ್ಟೇರ್ ವಿಸ್ತೀರ್ಣದ ಹಾಲಿ ಚೋಳಗುಡ್ಡದ ಪ್ರದೇಶ ಒಳಗೊಂಡಂತೆ ನಿಗದಿಪಡಿಸಲಾಗಿದೆ. ಮಹಾ ಯೋಜನೆ (ಪರಿಷ್ಕೃತ–I) ಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡುವಂತೆಯನ್ನು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ನಅಇ 105 ಬೆಂರೂಪ್ರಾ 09, ಬೆಂಗಳೂರು, ದಿನಾಂಕ: 19ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ–ಚಿತ್ರದುರ್ಗ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–I) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1617 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ಶಿಹಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಶ್ರೀ ಶಿವಣ್ಣ, ವಾಹನ ಚಾಲಕ ಮತ್ತು ಶ್ರೀ ಕೆ.ಎನ್. ಲಿಂಗಣ್ಣಗೌಡ, ದ್ವಿ.ದ.ಸ., ಇವರುಗಳ ಸೇವೆಯನ್ನು ದಿನಾಂಕ:30.07.88 ರಿಂದ ಸಕ್ರಮಗೊಳಿಸುವ ಬಗ್ಗೆ.

ಓದಲಾಗಿದೆ:
1) ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಶಿನಪ್ರಾ/ಸಿಬ್ಬಂದಿ/ವ್ಯಿವ/57/ 2007–08/878 ದಿನಾಂಕ:22.8.2007.
2) ಕರ್ನಾಟಕ ಉಚ್ಚ ನ್ಯಾಯಾಲಯದ (ರಿಟ್ ಅರ್ಜಿ ಸಂಖ್ಯೆ:17862/2005 ಎಸ್.ಆರ್.ಇ.ಜಿ) ರ ಆದೇಶ ದಿನಾಂಕ:14.6.2007.
3) ಶ್ರೀ ಶಿವಣ್ಣ ಮತ್ತು ಶ್ರೀ ಲಿಂಗಣ್ಣಗೌಡ ರವರುಗಳು ದಿನಾಂಕ:11.12.2008 ಪತ್ರ ದಿನಾಂಕ:12.12.2007 ರಂದು ಸಲ್ಲಿಸಿದ ಲಿಖಿತ ಮನವಿ ಅರ್ಜಿಗಳು.

ಪ್ರಸ್ತಾವನೆ:

ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಶ್ರೀ ಶಿವಣ್ಣ, ವಾಹನ ಚಾಲಕರು ಹಾಗೂ ಶ್ರೀ ಕೆ.ಎನ್. ಲಿಂಗಣ್ಣಗೌಡ, ದ್ವಿ.ದ.ಸ., ರವರುಗಳು ಮೂಲತಃ ಕ್ರಮವಾಗಿ ದಿನಾಂಕ:20.04.1987 ರಂದು ಹಾಗೂ 7.1.1986 ರಿಂದ ದಿನಗೂಲಿ ನೌಕರರಾಗಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕ್ರಮವಾಗಿ ವಾಹನ ಚಾಲಕ ಹಾಗೂ ಅಕ್ಷರಸ್ಥ ಸಹಾಯಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದು, ಸದರಿ ನೌಕರರುಗಳ ಸೇವೆಯನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:20.2.1992ರಲ್ಲಿ ಜರುಗಿದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸದರಿ ನೌಕರರುಗಳನ್ನು ದಿನಾಂಕ:30.07.1988 ರಿಂದ ಪ್ರಾಧಿಕಾರದಲ್ಲಿ ಖಾಲಿ ಇದ್ದ ವಾಹನ ಚಾಲಕ ಮತ್ತು ದ್ವಿ.ದ.ಸ., ಹುದ್ದೆಗಳಿಗೆ ಎದುರಾಗಿ ಸಕ್ರಮಗೊಳಿಸಲಾಗಿರುತ್ತದೆ. ಆದರೆ, ಸದರೀ ಸಕ್ರಮಾತಿಯ ಆದೇಶವನ್ನು ಅನುಮೋದಿಸಲು ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ಶ್ರೀ ಶಿವಣ್ಣ ರವರಿಗೆ ಸಂಬಂಧಿಸಿದಂತೆ, ಪತ್ರದ ಸಂಖ್ಯೆ:ನಅಇ 134 ಅಪ್ರಾಸೇ 98 ದಿನಾಂಕ:25.3.1999ರಲ್ಲಿ ಈ ನೌಕರರ ಸೇವೆಯನ್ನು ದಿನಾಂಕ:1.4.1995 ರಿಂದ ಸಕ್ರಮಗೊಳಿಸಿ, ಆರ್ಥಿಕ ಸೌಲಭ್ಯಗಳನ್ನು ನೀಡುವಂತೆ ಮತ್ತು ಶ್ರೀ ಕೆ.ಎನ್. ಲಿಂಗಣ್ಣಗೌಡ, ದ್ವಿ.ದ.ಸ., ಅವರಿಗೆ ಸಂಬಂಧಿಸಿದಂತೆ, ಪತ್ರದ ಸಂಖ್ಯೆ:ನಅಇ 162 ಅಪ್ರಾಸೇ 1999

ದಿನಾಂಕ:8.11.1999 ರಲ್ಲಿ ಈ ನೌಕರರ ಸೇವೆಯನ್ನು ದಿನಾಂಕ:7.1.1996 ರಿಂದ ಸಕ್ರಮಗೊಳಿಸಲು ಕ್ರಮವಹಿಸುವಂತೆ ಆದೇಶಿಸಿರುತ್ತದೆ.

ಆದುದರಿಂದ, ಈ ಬಗ್ಗೆ ಪ್ರಸ್ತಾವನೆಯಲ್ಲಿನ ನೌಕರರುಗಳು ಮೇಲ್ಕಂಡ ಆದೇಶಗಳ ವಿರುದ್ಧ ಮೇಲೆ ಓದಲಾದ ಕ್ರಮ ಸಂಖ್ಯೆ (2)ರನ್ವಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು (ರಿಟ್ ಅರ್ಜಿ ಸಂಖ್ಯೆ:17862/2005 ಎಸ್.ಆರ್.ಇ.ಜಿ) ದಿನಾಂಕ: 14.6.2007 ರಂದು ನೀಡಿದ ತೀರ್ಪಿನಲ್ಲಿ ಬಹು ಮುಖ್ಯವಾಗಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

" (i) Petitioners herein are permitted to submit their additional detailed representations with all necessary authenticated documents along with copy of notification/order/circular that is applicable to their case for regularization from 1st April 1985 and 6th July 1985 respectively. Within four weeks from the date of receipt of a copy of this order;

(ii) if such representations are filed by petitioners herein, Respondents herein are directed to receive the same and pass appropriate order in accordance with law and in the light of the case made out by these petitioners and dispose of the same, as expeditiously as possible, within four months from the date of receipt of representation from petitioners."

ಮೇಲ್ಕಂಡಂತೆ ಮಾನ್ಯ ಉಚ್ಚ ನಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಅರ್ಜಿದಾರ ನೌಕರರುಗಳಾದ ಶ್ರೀ ಶಿವಣ್ಣ ರವರು ದಿನಾಂಕ:11.12.2007 ರಂದು ಮತ್ತು ಶ್ರೀ ಕೆ.ಎನ್.ಲಿಂಗಣ್ಣಗೌಡ ರವರು ದಿನಾಕ:12.12.2008ರಂದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರನ್ವಯ ಸಲ್ಲಿಸಿದ ಮನವಿ ಅರ್ಜಿಗಳಲ್ಲಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ:30.07.1988 ರಿಂದ ಖಾಲಿ ಇದ್ದ ವಾಹನ ಚಾಲಕ ಹಾಗೂ ದ್ವಿ.ದ.ಸ., ಹುದ್ದೆಗಳಲ್ಲಿ ಅರ್ಜಿದಾರರುಗಳಾದ ತಮ್ಮ ದಿನಗೂಲಿ ಸೇವೆಯನ್ನು ಪ್ರಾಧಿಕಾರವು ದಿನಾಂಕ:20.02.1992ರಲ್ಲಿ ಜರುಗಿದ ಸಭೆಯಲ್ಲಿ ಸಕ್ರಮಗೊಳಿಸಲು ತೀರ್ಮಾನ ಕೈಗೊಂಡಿರುವುದನ್ನು ಸ್ಥಿರೀಕರಿಸಲು ಸರ್ಕಾರದ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಅರ್ಜಿದಾರರುಗಳಾದ ಶ್ರೀ ಶಿವಣ್ಣ ಹಾಗೂ ಕೆ.ಎನ್. ಲಿಂಗಣ್ಣಗೌಡ ರವರುಗಳ ಕೋರಿಕೆ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:14.06.2007 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ದಿನಾಂಕ:12.12.2008 ರಂದು ವೈಯಕ್ತಿಕ ವಿಚಾರಣಾ ಅವಕಾಶವನ್ನು ನೀಡಿದ್ದು, ಸದರಿ ನೌಕರರುಗಳು ಸಲ್ಲಿಸಿದ ದಾಖಲೆಗಳು ಹಾಗೂ ನೀಡಿರುವ ಲಿಖಿತ ಮನವಿ ಅರ್ಜಿಗಳಲ್ಲಿ ಸರ್ಕಾರವು ಶ್ರೀ ನಿತ್ಯಾನಂದರಾವ್ ಜಾದವ್ 'ಡಿ' ಗ್ರೂಪ್ ನೌಕರರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರನ್ನು ಪ್ರಾಧಿಕಾರದಲ್ಲಿ ಸದರಿ ಹುದೆ ಖಾಲಿ ಇದ್ದ ದಿನಾಂಕದಿಂದಲೇ ಜಾರಿಗೆ ಬರುವಂತೆ ಪತ್ರದ ಸಂಖ್ಯೆ:ನಅಇ 91 ಬೆಂರೂಪ್ರಾ 2008 ದಿನಾಂಕ:19.2.2008ರಲ್ಲಿ ಆದೇಶ ನೀಡಿರುತ್ತದೆ. ಅದೇ ರೀತಿ ನಮ್ಮಗಳ ಸೇವೆಯನ್ನು ಸಹ ಪ್ರಾಧಿಕಾರದಲ್ಲಿ ಸದರಿ ವಾಹನ ಚಾಲಕ ಮತ್ತು ದ್ವಿ.ದ.ಸ., ಹುದ್ದೆಗಳು ಖಾಲಿ ಇದ್ದ ದಿನಾಂಕದಿಂದ ಅಂದರೆ 30.7.1988 ರಿಂದ ಜಾರಿಗೆ ಬರುವಂತೆ ಪ್ರಾಧಿಕಾರವು ಸಕ್ರಮಗೊಳಿಸಿ ವೇತನ ಇನ್ನಿತರೇ ಆರ್ಥಿಕ ಸೌಲಭ್ಯಗಳನ್ನು ನಮಗೂ ನೀಡಲು ಸರ್ಕಾರದ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ. ಈ ಪ್ರಕರಣವನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 260 ಅಪ್ರಾ 2005, ಬೆಂಗಳೂರು, ದಿನಾಂಕ: 1ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಗೂಲಿ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಶಿವಣ್ಣ, ವಾಹನ ಚಾಲಕರು ಹಾಗೂ ಶ್ರೀ ಕೆ.ಎನ್.ಲಿಂಗಣ್ಣಗೌಡ, ದ್ವಿ.ದ.ಸ., ರವರುಗಳ ಸೇವೆಯನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸದರಿ ವಾಹನ ಚಾಲಕ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು ಖಾಲಿ ಇದ್ದ ದಿನಾಂಕ:30.07.1988 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿರುವ ಪ್ರಾಧಿಕಾರದ ಕ್ರಮಕ್ಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 51ರನ್ವಯ ಸರ್ಕಾರದ ಪೂರ್ವಾನುಮತಿಯನ್ನು ನೀಡಲಾಗಿದೆ.

ಜಾವೀದ್ ಅಖ್ತರ್

ಪಿ.ಆರ್. 1618 ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ವಿಷಯ: ಶ್ರೀ ಎನ್. ರವಿಶಂಕರ್, ಅಕ್ಷರಸ್ಥ ಸಹಾಯಕ, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ಇವರು ಸೇವೆಯನ್ನು ದಿನಾಂಕ:30.07.88 ರಿಂದ ಸಕ್ರಮಗೊಳಿಸುವ ಬಗ್ಗೆ.

ಓದಲಾಗಿದೆ: 1) ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಶಿನಪ್ರಾ/ಸಿಬ್ಬಂದಿ/ವಿವ/43/2007–08/ದಿನಾಂಕ:27.08.2007.

2) ಸರ್ಕಾರಿ ಆದೇಶ ಸಂಖ್ಯೆ: ನಅಇ 7 ಬೆಂರೂಪ್ರಾ/2001, ದಿನಾಂಕ:13.08.2002.

3) ಕರ್ನಾಟಕ ಉಚ್ಚ ನ್ಯಾಯಾಲಯದ (ರಿಟ್ ಅರ್ಜಿ ಸಂಖ್ಯೆ:17863/2005 (ಎಸ್) ರ ಆದೇಶ ದಿನಾಂಕ: 14.6.2007.

ಪ್ರಸ್ತಾವನೆ:

ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ತಮ್ಮ ಪತ್ರದಲ್ಲಿ ಶ್ರೀ ಎನ್. ರವಿಶಂಕರ್‌ರವರು ಈ ಹಿಂದಿನ ನಗರ ಯೋಜನಾ ಪ್ರಾಧಿಕಾರದಲ್ಲಿ ಅಕ್ಷರಸ್ಥ ಸಹಾಯಕರಾಗಿ ದಿನಾಂಕ: 1.1.1985 ರಿದ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಪ್ರಾಧಿಕಾರವು ದಿನಾಂಕ: 20.02.1992 ರಲ್ಲಿ ಜರುಗಿದ ಸಭೆಯಲ್ಲಿ ಸದರಿ ನೌಕರರ ಸೇವೆಯನ್ನು ಅಕ್ಷರಸ್ಥ ಸಹಾಯಕ ಹುದ್ದೆ ಪ್ರಾಧಿಕಾರದಲ್ಲಿ ಖಾಲಿ ಇದ್ದ ದಿನಾಂಕದಿಂದ ಅಂದರೆ 30.7.1988 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿದೆ. ಆದರೆ, ಸದರಿ ಸಕ್ರಮಾತಿ ಆದೇಶಕ್ಕೆ ಸರ್ಕಾರದ ಅನುಮೋದನೆ ಪಡೆಯಲು ಆಯುಕ್ತರು, ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಉಲ್ಲೇಖ (2)ರ ಆದೇಶದಲ್ಲಿ ಸದರಿ ನೌಕರರಿಗೆ ದಿನಾಂಕ: 1.1.1986 ಕ್ಕಿಂತ ಮೊದಲು ದಿನಗೂಲಿ ಆಧಾರದ ಮೇರೆಗೆ ನೇಮಕಗೊಂಡವರಾಗಿದ್ದು, ಇವರನ್ನು 10 ವರ್ಷಗಳನ್ನು ಪೂರೈಸುವ ಮುನ್ನವೆ ಸಕ್ರಮಗೊಳಿಸಿರುವುದು ನಿಯಮ ಬಾಹಿರವೆಂದು ತಿಳಿಸಿ, ನೌಕರರಿಗೆ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ಹಿಂದಕ್ಕೆ ಪಡೆಯುವಂತೆ ಮತ್ತು 10 ವರ್ಷಗಳ ದಿನಗೂಲಿ ಸೇವೆಯನ್ನು ಪೂರೈಸಿದ ದಿನಾಂಕದಿಂದ ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ. ಅದರಂತೆ ಪ್ರಾಧಿಕಾರವು ಅಧಿಕೃತ ಜ್ಞಾಪನಾ ದಿನಾಂಕ: 07.09.2002 ರಲ್ಲಿ ದಿನಗೂಲಿ ನೌಕರರಿಗೆ ನೀಡಿರುವ ಆರ್ಥಿಕ ಹೆಚ್ಚುವರಿ ಸೌಲಭ್ಯಗಳನ್ನು ಹಿಂಪಡೆದು ವೇತನವನ್ನು ನಿಗದಿಗೊಳಿಸಿರುತ್ತದೆ.

ಈ ಆದೇಶಗಳ ವಿರುದ್ಧ ನೌಕರರಾದ ಶ್ರೀ ಎನ್. ರವಿಶಂಕರ್‌ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 17863/2005 (ಎಸ್) ಸಲ್ಲಿಸಲಾಗಿ, ಮಾನ್ಯ ನ್ಯಾಯಾಲಯವು ದಿನಾಂಕ:14.6.2007ರಂದು ನೀಡಿದ ತೀರ್ಪಿನಲ್ಲಿ ಬಹುಮುಖ್ಯವಾಗಿ ಈ ಕೆಳಕಂಡಂತೆ ಆದೇಶಿಸಿದೆ.

i) The writ petition filed by petitioner is allowed in part;
ii) The order passed by second respondent dated 7th September 2002 bearing No.Shi Na.Pra/ Sibbandi/VVA/72/2002-03 vide annexure G.order dated 1st July 2003 passed by first respondent bearing No.NA.A.E.7/ Bem. Rupra. 2001 vide Annexure H and the order dated 5th September 2003 bearing No.Shi.Na.Pra/Sibbandi/VVA/75/2003-04 passed by second respondent vide Annexure J are hereby set aside and the matter stands remitted back to respondents to reconsider the matter in accordance with law, only in so far as petitioner herein is concerned;
iii) Petitioner herein is directed to submit an additional detailed representation with all necessary authenticated documents for consideration of the request of petitioner for regularization of the services on par with others as directed by this Court in respect of the Co-employees of petitioner herein, as referred above, within four weeks from the date of receipt of a copy of this order;
iv) In case such representation is submitted by petitioner herein, Respondents 1 and 2 are herein are directed to receive the same and pass appropriate order in accordance with law and in the light of the Notification/order/circular issued by Government from time to time that is applicable to petitioner and also in the light of the direction issued by this Court dated 17th January 2003 passed in W.P.No.37662-37664/2002 and dispose of the same, as expeditiously as possible, within an outer limit of four months from the date of receipt of representation from petitioner.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಅರ್ಜಿದಾರರ ಕೋರಿಕೆ ಮೇರೆಗೆ ಈ ಪ್ರಕರಣದಲ್ಲಿ ದಿನಾಂಕ:12.12.2008ರಂದು ಅರ್ಜಿದಾರರಿಗೆ ವೈಯಕ್ತಿಕ ವಿಚಾರಣಾ ಅವಕಾಶ ನೀಡಲಾಗಿ, ಸದರಿ ವಿಚಾರಣಾ ಸಮಯದಲ್ಲಿ ಅರ್ಜಿದಾರರು ಸಲ್ಲಿಸಿದ ಲಿಖಿತ ಮನವಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ (37662 ರಿಂದ 37664/2002) ದಿನಾಂಕ:17.1.2003ರ ಆದೇಶದಲ್ಲಿ ಶ್ರೀ ಡಿ.ಎಂ.ಅಬ್ದುಲ್ ಮುನಾಫ್ ಹಾಗೂ ಇತರರ ಪ್ರಕರಣದಲ್ಲಿ ನ್ಯಾಯಾಲಯವು ನೀಡಿದ ಆದೇಶದ ಹಿನ್ನೆಲೆಯಲ್ಲಿ ತಮ್ಮ ಸೇವೆಯನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:20.2.1992ರ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಅವರುಗಳ ಸೇವೆಯನ್ನು ದಿನಾಂಕ:20.2.1992ರ ಸಭೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಕೈಗೊಂಡ ನಿರ್ಣಯದ ಮೇರೆಗೆ ಹಾಗೂ ಸರ್ಕಾರವು ದಿನಾಂಕ:24.5.2003 ರ ಪತ್ರದಲ್ಲಿ ತಿಳಿಸಿದಂತೆ ಸದರೀ ನೌಕರರುಗಳಿಗೆ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನೀಡಿರುವ ಹಿನ್ನೆಲೆಯಲ್ಲಿ ನನ್ನ ಸೇವೆಯನ್ನು ದಿನಾಂಕ:30.7.1988 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿರುವ ಪ್ರಾಧಿಕಾರದ ಕ್ರಮಕ್ಕೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಈ ಪ್ರಕರಣವನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 259 ಅಪ್ರಾ 2005, ಬೆಂಗಳೂರು, ದಿನಾಂಕ: 1ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎನ್. ರವಿಶಂಕರ್, ಅಕ್ಷರಸ್ಥ ಸಹಾಯಕ ಇವರ ದಿನಗೂಲಿ ಸೇವೆಯನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಕ್ಷರಸ್ಥ ಸಹಾಯಕ ಹುದ್ದೆ ಖಾಲಿ ಇದ್ದು, ದಿನಾಂಕ: 30.7.1988 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿ ಆದೇಶಿಸಿರುವ ಪ್ರಾಧಿಕಾರದ ಕ್ರಮಕ್ಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1988ರ ಕಲಂ 51ರನ್ವಯ ಸರ್ಕಾರದ ಪೂರ್ವಾನುಮತಿಯನ್ನು ನೀಡಲಾಗಿದೆ.

ಜಾವೀದ್ ಅಖ್ತರ್

ಪಿ.ಆರ್. 1619 ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

INFRASTRUCTURE DEVELOPMENT SECRETARIAT

Sub: Natural Gas demand Assessment Studies for Karnataka–Compliation of data by TECSOK.

Read:
1. Proceedings of the meeting held on 6.11.2008 under the Chaimanship of Chief Secretary to Govt. of Karnataka
2. Proceedings of the meeting held on 9.4.2009 under the Chairmanship of Principal Secretary to Govt. of Karnataka, IDD
3. MoU for Natural Gas Infrastructure and City Gas Distribution entered in to between GAIL India Ltd., and Infrastructure Development Department on 29.4.2009
4. Letter No.GAIL/BBO/NG/TECSOK/2009/221 dated 16.5.2009 from DGM (Mktg) GAIL India Ltd., addressed to CEO and Chief Adviser, TECSOK
5. Proceedins of the meeting held on 27.5.2009 under the Chairmanship of Princiapal Secretary to Govt. of Karnataka, IDD.
6. Letter No.TECSOK/IDD-NG/2009/270 dated 30.5.2009 from CEO, and Chief Adviser, TECSOK.
7. Letter No. GAIL/BBO/NG/TECSOK/2009/221 dated 30.5.2009 from DGM (Mktg) GAIL India Ltd.,

Preamble:

In the proceedings read at (1) above, the following decisions were taken for implementation of projects for transmission and distribution of Natural Gas :-

(i) Infrastructure Development Department (IDD) will be the nodal agency to interact with PNGRB;

(ii) IDD to convene a meeting with M/s. GAIL, Reliance, Adani, GSPC to examine whether the Gujarat model could be adopted;

(iii) IDD to respond PNGRB queries before end of November 2008;

(iv) Right of Way for laying gas pipelines to be given by PWD and local bodies on priority as per the Master Plan approved by PNGR.

2. In the proceedings read at (2) above, a meeting was held with all the concerned departments and GAIL regarding laying Gas Pipeline from Maharashtra Border to Bidadi near Bangalore by GAIL and a decision was taken to request Tecsok to update the market survey report (prepared for GAIL in 2005) and to provide the latest data on future projects. Karnataka Udyoga Mitra (KUM) was advised to identify the location of the proposed industries. GAIL to prepare an MoU to be signed between GAIL and GoK (KSIIDC).

3. Accordingly, an MoU was entered into between GAIL India Ltd., and IDD on 29.4.2009 to undertake jointly for promotion of CNG and PNG in transport and domestic sector and IDD will act as a nodal agency for coordinating all necessary permissions and clearances from various departments/authorities. The role of IDD is limited to facilitate the GAIL to lay the pipeline by providing the land for RoW on payment basis and no additional financial is expected to exchequer of the State

Government. The MoU will be in effect for a period of 3 years, which may be extended with mutual consent.

4. In the letter read at (4) above, GAIL India Ltd., has requested to update the report on market potential for Natural Gas in Karnataka conducted by M/s. Tecsok in 2005 for GAIL India Ltd.,

5. In proceedings read at (5) above, decision was taken to request the Tecsok to update the available information and to furnish a ToR to IDD and the expenditure towards this will be met by IDD.

6. In the letter read at (6) above, Tecsok has sent the proposal for taking up the assignment and also said that it has started the collection of information from Karnataka Udyoga Mitra and Road Transport Corporation. It is said that the professional fee for the assignment is Rs.4.00 lakhs and has requested to release Rs.2.00 lakhs on confirmation of the assignment and the balance on submission of the report.

7. In the letter read at (7) above, GAIL requested to include the information relating to availability of Natural Gas and willingness of existing industries to convert the Natural Gas and also whether the industry is Natural Gas based or needs to be converted to Natural Gas in future.

8. The proposal has been examined in detail and the following orders are issued.

Government Order No. IDD 14 UIP 2008, Bangalore, Dated: 22nd June 2009

Approval is hereby given for Tecsok to take up the assignment of compilation of data required to be provided as an input to GAIL and to update the available information and to furnish a Terms of Reference (ToR) to Infrastructure Development Department. ToR should also include the following points:-

(i) To provide the available Natural Gas information for requirement of gas in two categories namely existing and expansion/upcoming/future consumers

(ii) Willingness of existing industries to convert to natural gas, if, willing by which year?

(iii) In respect to expansion/upcoming/future consumers, whether the industry is natural gas based or need based and to be converted to natural gas in future and the likely year of gas consumption.

2. Sanction of the Government is hereby accorded for release of Rs. 2.00 lakhs (Rupees Two lakhs) only to Tecsok towards the assignment. Final cost would be decided based on man-days/hrs to be furnished by Tecsok.

3. This expenditure shall be met from the Head of Account **"3451-00-090-1-06-059-Infrastructure Preliminary Studies Other Expenditure"** out of the budget provision of Rs. 881.00 lakhs in 2009-10.

4. The CEO and Chief Adviser TECSOK is authorized to draw the amount on a Payees Receipt duly countersigned by the Under Secretary to Government, Infrastructure Development Department.

5. This order is issued in accordance with the delegation of powers to the Principal Secretaries/ Secretaries to Govt. vide G.O. No. FD 1 TFP 2008 dated 16.5.2008.

By Order and in the name of the Governor of Karnataka,

N. MANJULA GEETHA

Under Secretary to Government,

Infrastructure Development Department.

P.R. 1620

ಇಂಧನ ಸಚಿವಾಲಯ

ವಿಷಯ: ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 11.2 ಮಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 1999 ದಿನಾಂಕ: 13.5.1999.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 27.12.2008.

4) ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರ ಪತ್ರ ಸಂಖ್ಯೆ : ಎಎಂಟಿಎಲ್/ಸಿಟಿಎ/2008–2009 ದಿನಾಂಕ: 6.1.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು 5 ವರ್ಷಕ್ಕೆ ಮೇಲ್ಪಟ್ಟ ಯಾವುದೇ ಪ್ರಗತಿ ಸಾಧಿಸದ ಕಂಪನಿಗಳ ಪಟ್ಟಿಯನ್ನು ಕಳುಹಿಸುತ್ತಾ, ಸದರಿ ಕಂಪನಿಗಳ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪಟ್ಟಿಯಲ್ಲಿ ಮೆ :: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿ ಒಂದಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಕಾರಣ ಕೇಳುವ ನೋಟಿಸನ್ನು ಅಭಿವೃದ್ಧಿದಾರರಿಗೆ ಯೋಜನೆಯ ಅನುಷ್ಠಾನನಿಟ್ಟಿನಲ್ಲಿ ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಯೋಜನೆಯ ಹಂಚಿಕೆಯನ್ನು ಏಕೆ ರದ್ದುಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ನೀಡಲಾಗಿತ್ತು.

ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯು ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಸದರಿ ನೋಟೀಸಿಗೆ ಉತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಉತ್ತರವನ್ನು ಅಭಿವೃದ್ಧಿದಾರರು ಪರಿಶೀಲಿಸಲಾಯಿತು, ಉತ್ತರಗಳು ಸಮರ್ಥನೀಯವಾಗಿರುವುದಿಲ್ಲ. ನಿಗಧಿತ ಅವಧಿಯಲ್ಲಿ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ತೆಗೆದುಕೊಳ್ಳದಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008, ಬೆಂಗಳೂರು, ದಿನಾಂಕ: 20ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 1999 ದಿನಾಂಕ: 13.5.1999 ರಲ್ಲಿ ಮೆ:: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1633

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಶ್ರೀಮತಿ ಯು. ವಿನಯರಾಣಿ, ಸಹಾಯಕ ಸರ್ಕಾರಿ ಅಭಿಯೋಜಕರು, ಅಧಿಕ ಸಿ.ಜೆ. (ಕಿವಿ) ಮತ್ತು ಜೆ.ಎಂಎಫ್.ಸಿ. ನ್ಯಾಯಾಲಯ, ಚಾಮರಾಜನಗರ ಇವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿ, ತೃಪ್ತಿಕರವೆಂದು ಘೋಷಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ನಂ. ಒಇ 845 ಪಿಪಿಇ 2005, ದಿನಾಂಕ 3.5.2006

2) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ. ಡಿಪಿಎನ್/ಸಿಶಾ.1/37 (4)/2008–09 ದಿನಾಂಕ 5.3.2009.

ಪ್ರಸ್ತಾವನೆ:

ಶ್ರೀಮತಿ ಯು. ವಿನಯರಾಣಿ, ಸಹಾಯಕ ಸರ್ಕಾರಿ ಅಭಿಯೋಜಕರು, ಅಧಿಕ ಸಿ.ಜೆ. (ಕಿವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಾಮರಾಜನಗರ, ಇವರು ಮೇಲೆ (1) ರಲ್ಲಿ ಓದಲಾದ ದಿನಾಂಕ: 3.5.2006 (ಕ್ರ.ಸಂ.40) ಅಧಿಸೂಚನೆಯಲ್ಲಿ

ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇಮಕಗೊಂಡು, ದಿನಾಂಕ: 12.5.2006ರ ಪೂರ್ವಾಹ್ನದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಅಧಿಕಾರಿಯ ಎರಡು ವರ್ಷಗಳ ಪರಿವೀಕ್ಷಣಾ ಅವಧಿಯು ದಿನಾಂಕ: 2.5.2008ಕ್ಕೆ ಪೂರ್ಣಗೊಂಡಿರುತ್ತದೆ. ಹುದ್ದೆಗೆ ನಿಗಧಿಪಡಿಸಿದ್ದ ಇಲಾಖಾ ಪರೀಕ್ಷೆಗಳಲ್ಲಿ ಒಂದಾದ ಅಕೌಂಟ್ಸ್ ಹೈಯರ್ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣತೆ ಹೊಂದದೆ, ದಿನಾಂಕ: 11.6.2008 ರಂದು ನಡೆದ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಿರುತ್ತಾರೆ. ಸದರಿ ಪರೀಕ್ಷಾ ಫಲಿತಾಂಶವು ದಿನಾಂಕ: 6.11.2008 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ. ಅಧಿಕಾರಿಯವರು ಸದರಿ ಅವಧಿಯಲ್ಲಿ ಇಲಾಖೆಯ ಅವಕೃಪೆಗೆ ಒಳಗಾಗಿರುವುದಿಲ್ಲ. ಅಧಿಕಾರಿಯವರ ಮೇಲೆ ಯಾವುದೇ ಇಲಾಖಾ ವಿಚಾರಣೆಯನ್ನು ಹೂಡಿರುವುದಿಲ್ಲ ಹಾಗೂ ಸದ್ಯದ ಪರಿಸ್ಥಿತಿಯಲ್ಲಿ ಹೂಡುವ ಅವಶ್ಯಕತೆಯೂ ಇರುವುದಿಲ್ಲ. ಆದುದರಿಂದ ಸದರಿ ಅಧಿಕಾರಿಯವರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 4ರ ಅನ್ವಯ ದಿನಾಂಕ: 12.5.2008 ರಿಂದ 6.11.2008ರವರೆಗೆ ವಿಸ್ತರಿಸುವಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂ. ಒಇ 191 ಪಿಪಿಇ 2009, ಬೆಂಗಳೂರು, ದಿನಾಂಕ: 1ನೇ ಜುಲೈ 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವೆಗಳು (ಪರಿವೀಕ್ಷಣಾ) ನಿಯಮಗಳು 1977ರ 4ನೇ ನಿಯಮದ ಉಪ ನಿಯಮ (1) ರನ್ವಯ ಶ್ರೀಮತಿ ಯು. ವಿನಯರಾಣಿ, ಸಹಾಯಕ ಸರ್ಕಾರಿ ಅಭಿಯೋಜಕರು, ಅಧಿಕ ಸಿ.ಜೆ. (ಕಿವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಾಮರಾಜನಗರ ಅವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ: 12.5.2008 ರಿಂದ 6.11.2008ರವರೆಗೆ ವಿಸ್ತರಿಸಿ, 1977ರ ಕರ್ನಾಟಕ ನಾಗರೀಕ ಸೇವೆಗಳ (ಪರಿವೀಕ್ಷಣಾ) ನಿಯಮಗಳ ನಿಯಮ 5(1) (ಎ)ರ ಅನ್ವಯ ದಿನಾಂಕ: 7.11.2008 ರಂದು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಸರ್ಕಾರವು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 1635 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಸಿ. ಕೃಷ್ಣಪ್ಪ, ಡಿವೈ.ಎಸ್.ಪಿ ಧಾರವಾಡ ಉಪ ವಿಭಾಗ, ಹುಬ್ಬಳ್ಳಿ–ಧಾರವಾಡರವರು ಅಕ್ರಮ ಆಸ್ತಿ ಹೊಂದಿರುವವರೆಂಬ ಆರೋಪದ ಮೇಲೆ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ್ದು ಲೀನ್‌ನ್ನು ಬದಲಾಯಿಸುವ ಬಗ್ಗೆ

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ಒಇ 299 ಪೊಸಿಪ 2008 ದಿನಾಂಕ: 18–11–2008.

2) ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಪತ್ರ ಸಂಖ್ಯೆ : ಸಿಬಿ (5):31:2008–09 ದಿನಾಂಕ: 7.1.2009, ಮತ್ತು 26–03–2009 & 13–5–2009

ಪ್ರಸ್ತಾವನೆ:

ಶ್ರೀ ಸಿ. ಕೃಷ್ಣಪ್ಪ, ಡಿವೈ.ಎಸ್.ಪಿ, ಧಾರವಾಡ ಉಪ ವಿಭಾಗ, ಹುಬ್ಬಳ್ಳಿ–ಧಾರವಾಡ ರವರು ನಿಗಧಿತ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವುದರ ಬಗ್ಗೆ ಖಚಿತ ಮಾಹಿತಿಯ ಹಿನ್ನೆಲೆಯಲ್ಲಿ ಅವರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊ.ಸಂ. 10/2008ರ ಕಲಂ 13(1) (ಇ)) r/w 13(2) ರ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದ್ದು, ಈ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ದಾಖಲೆ/ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆಯನ್ನು ಮನಗಂಡು ಮೇಲೆ (1) ರಲ್ಲಿ ಓದಲಾದ ಸರ್ಕಾರದ ದಿನಾಂಕ 18–11–2008ರ ಆದೇಶದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 5(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಸಿ. ಕೃಷ್ಣಪ್ಪ, (ಹಿಂದೆ ಡಿವೈ.ಎಸ್.ಪಿ, ಧಾರವಾಡ ಉಪ ವಿಭಾಗ, ಹುಬ್ಬಳ್ಳಿ–ಧಾರವಾಡ) ಪ್ರಸ್ತುತ ಸಹಾಯಕ ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ರವರ ವಿರುದ್ಧ ಶಿಸ್ತು ಕ್ರಮ ಕಾಯ್ದಿಟ್ಟು, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿತ್ತು. ಸದರಿ ಆದೇಶದಲ್ಲಿ ಇವರ ಲೀನ್ ಅನ್ನು ಡಿ.ಸಿ.ಆರ್.ಬಿ. ಚಿತ್ರದುರ್ಗ ಇಲ್ಲಿನ ಡಿವೈ. ಎಸ್.ಪಿ. ಹುದ್ದೆಗೆ ಸ್ಥಳಾಂತರಿಸಿ ಆದೇಶ ಹೊರಡಿಸಲಾಗಿತ್ತು. ಮೇಲೆ (2) ರಲ್ಲಿ ಓದಲಾದ ಪತ್ರಗಳಲ್ಲಿ ಶ್ರೀ ಎನ್ ರುದ್ರಮುನಿ, ಡಿವೈ. ಎಸ್.ಪಿ. ರವರನ್ನು ಡಿಸಿಆರ್‌ಬಿ, ಚಿತ್ರದುರ್ಗ ಇಲ್ಲಿಗೆ ವರ್ಗಾಯಿಸಿದ್ದು, ಶ್ರೀಯುತರು ಡಿಸಿಆರ್‌ಬಿ, ಚಿತ್ರದುರ್ಗ ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರಿಂದ, ಪ್ರಸ್ತುತ, ಡಿಸಿಆರ್‌ಬಿ, ಚಿತ್ರದುರ್ಗ ಇಲ್ಲಿ ಡಿವೈ.ಎಸ್.ಪಿ ಹುದ್ದೆ ಖಾಲಿ ಇರುವುದಿಲ್ಲವೆಂದೂ ಶ್ರೀ ಸಿ. ಕೃಷ್ಣಪ್ಪ, ಡಿವೈ. ಎಸ್.ಪಿ. ಅಮಾನತ್ತು ಇವರ ಲೀನನ್ನು ಡಿ.ಸಿ.ಆರ್.ಬಿ. ಬಿಜಾಪುರ ಇಲ್ಲಿಗೆ

ಸ್ಥಳಾಂತರಿಸುವಂತೆ ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 299 ಪೊಸಿಪ 2008, ಬೆಂಗಳೂರು, ದಿನಾಂಕ: 22ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಸಿ. ಕೃಷ್ಣಪ್ಪ, ಡಿವೈ. ಎಸ್.ಪಿ (ಸಿವಿಲ್) (ಹಾಲಿ ಸೇವೆಯಿಂದ ಅಮಾನತ್ತಿನಲ್ಲಿರುವವರು) ಇವರ ಲೀನ್ ಅನ್ನು ಡಿ.ಸಿ.ಆರ್.ಬಿ. ಚಿತ್ರದುರ್ಗದಲ್ಲಿ ರದ್ದುಪಡಿಸಿ ಖಾಲಿಯಿರುವ ಡಿ.ಸಿ.ಆರ್.ಬಿ. ಬಿಜಾಪುರದಲ್ಲಿನ ಡಿವೈ. ಎಸ್.ಪಿ. ಹುದ್ದೆಗೆ ಸ್ಥಳಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1636

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ/ಗಾಯಗೊಂಡ ಯೋಧರ ಅವಲಂಬಿತರಿಗೆ ಉಚಿತವಾಗಿ ಮನೆ ನಿರ್ಮಿಸಿ ಕೊಡಲು ನೀಡುತ್ತಿರುವ ಅನುದಾನವನ್ನು ಹೆಚ್ಚಿಗೆ ಮಾಡುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ರವರ ಪತ್ರ ಸಂಖ್ಯೆ ಸೈಕಪುಇ/14/ಬಿಸಿ/ಪಾಲಿಸಿ/2009 ದಿನಾಂಕ: 19-8-2008.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ದಿನಾಂಕ: 10-7-2008 ರಂದು ಘನತೆವೆತ್ತ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಪಾಲರ ರಕ್ಷಣಾ ನಿಧಿಯ ಮ್ಯಾನೇಜಿಂಗ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಪ್ರಸ್ತುತ ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ/ಗಾಯಗೊಂಡ ಯೋಧರ ಅವಲಂಬಿತರಿಗೆ ಉಚಿತವಾಗಿ ಮನೆ ನಿರ್ಮಿಸಿ ಕೊಡಲು ರಾಜ್ಯಪಾಲರ ರಕ್ಷಣಾ ನಿಧಿಯಿಂದ ಪ್ರಸಕ್ತ ನೀಡುತ್ತಿರುವ ಅನುದಾನವನ್ನು ಅಧಿಕಾರಿ/ಜೆ.ಸಿ.ಓ ಸ್ ರವರಿಗೆ ರೂ. 4.5 ಲಕ್ಷದಿಂದ ರೂ. 6.0 ಲಕ್ಷ ಗಳಿಗೆ ಹಾಗೂ ಇತರರಿಗೆ ರೂ. 3.0 ಲಕ್ಷದಿಂದ ರೂ. 4.5 ಲಕ್ಷಗಳಿಗೆ ಹೆಚ್ಚಿಸಿ ದಿನಾಂಕ: 1-4-2008 ರಿಂದ ಅನ್ವಯವಾಗುವಂತೆ ಜಾರಿಗೊಳಿಸಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು ಪ್ರಸ್ತಾವನೆಯನ್ನು ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 101 ಕಸೈಸೇ 2008, ಬೆಂಗ್ಳಳೂರು, ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ/ಗಾಯಗೊಂಡ ಯೋಧರ ಅವಲಂಬಿತರಿಗೆ ಉಚಿತವಾಗಿ ಮನೆ ನಿರ್ಮಿಸಿ ಕೊಡಲು ರಾಜ್ಯಪಾಲರ ರಕ್ಷಣಾ ನಿಧಿಯಿಂದ ಪ್ರಸಕ್ತ ನೀಡುತ್ತಿರುವ ಅನುದಾನವನ್ನು ಅಧಿಕಾರಿ/ಜೆ.ಸಿ.ಓಸ್ ಗಳಿಗೆ ರೂ. 4.5 (ನಾಲ್ಕು ಲಕ್ಷ ಐವತ್ತು ಸಾವಿರ) ಲಕ್ಷಗಳಿಂದ ರೂ. 6.0 (ಆರು) ಲಕ್ಷಗಳಿಗೆ ಹಾಗೂ ಇತರರಿಗೆ ಪ್ರಸಕ್ತ ನೀಡುತ್ತಿರುವ ಅನುದಾನವನ್ನು ರೂ. 3.00 (ಮೂರು) ಲಕ್ಷಗಳಿಂದ ರೂ. 4.5 (ನಾಲ್ಕು ಲಕ್ಷ ಐವತ್ತು ಸಾವಿರ) ಲಕ್ಷಗಳಿಗೆ ಹೆಚ್ಚಿಸಲು ಹಾಗೂ ಸದರಿ ವೆಚ್ಚವನ್ನು ಪ್ರಸಕ್ತ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2235-60-200-1-99 (104) ಅಂಶದಾನಗಳು (ಯೋಜನೇತರ) ಇದರ ಅಡಿಯಲ್ಲಿ ಒದಗಿಸಲಾದ ಅನುದಾನದ ಮಿತಿಯೊಳಗೆ ಭರಿಸಬೇಕೆಂಬ ಷರತ್ತಿನೊಂದಿಗೆ ಸರ್ಕಾರದ ಮುಂಜೂರಾತಿಯನ್ನು ನೀಡಿದೆ.

ಮೇಲ್ಕಂಡ ಸೌಲಭ್ಯವು ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 574 ವೆಚ್ಚ-11/2009 ದಿನಾಂಕ: 18-06-2009ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಂ. ಲಕ್ಷ್ಮೀನಾರಾಯಣ

ಪಿ.ಆರ್. 1637

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಪೊಲೀಸ್ ಸಹಾಯಕ ಸೇವೆಗಳು)

HOME SECRETARIAT

Sub: Strengthening of Bangalore City Police Traffic Warden Organization.

Read: Letter No.CTRS/98/2007-08 , Dated 04/01/2008 from the DG & IGP, Bangalore.

Premable:

The DG & IGP, Bangalore in his letter read above has stated that in Government Order No.HD 14 SHG 84 dated 30/08/1985 sanction was accorded for formation of Bangalore City Traffic Warden

Organization and to incur an expenditure of Rs.30,000/- per annum towards providing complaint cards to the traffic warden for reporting traffic violations to Traffic Police. However with the unprecedented increase in vehicle population and tremendous pressure on the traffic police, he has suggested for strengthening the Bangalore City Traffic Warden Organization so as to make it more effective in supplementing the duties and responsibilities of traffic police particularly with regard to Enforcement, Education, Planning and Traffic Engineering and to increase the lump sum provision of Rs.30,000/- p.a. to Rs. 27.25 lakhs to provide Uniform, TA and DA, Office expenditure etc.,

Primarily the Traffic Warden Organization is a Government sponsored voluntary organization. The annual grant of Rs.30,000/- was initially sanctioned way back when the organization was constituted during 1985. Considering the role of the Bangalore City Police Traffic Warden Organization in assisting Traffic Police, it was felt that there is an urgent need to strengthen the organizational set up and provide additional funds for effective implementation.

Hence this order.

Government Order No. HD 5 EFS 2008, Bangalore, Dated: 16th June 2009

In the circumstances explained in the preamble, sanction is accorded to increase the lump-sum provision of Rs.30,000/- p.a. to Rs.3.00 lakhs (Rupees Three lakhs only) per annum, without agreeing to the individual proposals and components with effect from 01/04/2009 during the Financial Year 2009-10.

Above enhanced expenditure shall be met under Budget Head 2055-00-108-0-01-051 General Expenditure.

This order issues with the concurrence of Finance Department vide their U.O. Note No.FD 193 Exp.6/2008 dated 15/04/2008.

By Order and in the name of President of India,

B.M. LAKSHMINARAYANA

P.R. 1638

Under Secretary to Government,

Home Department (Police Expenditure)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಶ್ರೀ ಸಿ.ಪಿ. ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಂಗಳೂರು, ಗ್ರಾಮಾಂತರ (ಅಮಾನತ್ತಿನಲ್ಲಿರುವವರು) ಇವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸುವ ಕುರಿತು – ಆದೇಶ.

ಓದಲಾಗಿದೆ: 1) ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು, ಮಂಗಳೂರು ರವರ ಕಛೇರಿಯು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರಿಗೆ ಹೆಸರಿಸಿರುವ ಪತ್ರ ಸಂಖ್ಯೆ ಎ.ಎಲ್.ಎನ್/ಸಿಆರ್(3) 2009–2010 ದಿ: 24–4–2009.

2) ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ರವರ ಕಛೇರಿಯ ಪತ್ರ ಸಂಖ್ಯೆ ಎ.ಎಲ್.ಎನ್.(1) ಸಿಆರ್/15/2008–09 ದಿ: 24–4–2009ರ ಫ್ಯಾಕ್ಸ್ ಸಂದೇಶ.

3) ಸರ್ಕಾರದ ಆದೇಶ ಸಂಖ್ಯೆ ಮಮಇ 214 ಎಸ್‌ಜೆಡಿ 2009 ದಿ: 28–4–2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ: 24–4–2009ರ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು ಮಂಗಳೂರು ರವರ ಪತ್ರದಲ್ಲಿ 204 ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಟ್ರೋಲ್ ರೂಂನಿಂದ ಮತಗಟ್ಟೆ ಸಂಖ್ಯೆ 41 ರ ವಿ.ಎಲ್.ಓ ಆದ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಶಶಿಕಲಾರವರಿಂದ ಮಾಹಿತಿ ಸಂಗ್ರಹಿಸುತ್ತಿರುವ ಸಂದರ್ಭದಲ್ಲಿ ಶ್ರೀಮತಿ ಶಶಿಕಲಾ, ಅಂಗನವಾಡಿ ಕಾರ್ಯಕರ್ತೆರವರ ಮೇಲಾಧಿಕಾರಿಯಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರು ಅಂಗನವಾಡಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮೊದಲು ನಿರ್ವಹಿಸಿ ಚುನಾವಣಾ ಕೆಲಸ ಕಾರ್ಯಗಳನ್ನು ನಂತರ ನಿರ್ವಹಿಸಲು ಮತ್ತು ಚುನಾವಣಾ ಕೆಲಸ ನಿರ್ವಹಿಸಲು ನೀಡಿದ ಆದೇಶ ಒದಗಿಸಲು ತಿಳಿಸಿರುವುದಾಗಿ ಮಾಹಿತಿ ಸಂಗ್ರಹಿಸುತ್ತಿರುವ ಶ್ರೀಮತಿ ಚಂದ್ರಕಲಾ ರವರಲ್ಲಿ ಹೇಳಿಕೊಂಡಿರುತ್ತಾರೆಂದು, ಅಂಗನವಾಡಿ ಕಾರ್ಯಕರ್ತೆಯವರಿಗೆ ಸಿ.ಡಿ.ಪಿ.ಓ. ರವರಲ್ಲಿ ಈ ರೀತಿ ಒತ್ತಡ ಹೇರುತ್ತಿರುವುದರಿಂದ

ಚುನಾವಣಾ ಕೆಲಸ ಕಾರ್ಯಗಳಿಗೆ ತೊಂದರೆಯಾಗುವ ಸಂದರ್ಭವಿರುವುದರಿಂದ, ಸಂಬಂಧಪಟ್ಟ ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರನ್ನು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿ: 24–4–2009ರ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ರವರ ಫ್ಯಾಕ್ಸ್ ಸಂದೇಶದಲ್ಲಿ ಸಹಾಯಕ ಚುನಾವಣಾಧಿಕಾರಿಗಳು, ಹಾಗೂ ಸಹಾಯಕ ಆಯುಕ್ತರು, ಮಂಗಳೂರು ರವರ ಪ್ರಸ್ತಾವನೆಯಂತೆ, ಶ್ರೀ ಸಿ.ಪಿ.ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇವರು ಚುನಾವಣೆ ಕೆಲಸಕ್ಕೆ ಆದ್ಯತೆ ನೀಡದೆ ಕರ್ತವ್ಯ ದುರ್ನಡತೆ ಎಸಗಿರುವುದರಿಂದ ಸದರಿಯವರನ್ನು ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಅವರನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರ ಪ್ರಸ್ತಾವನೆ/ಶಿಫಾರಸ್ಸನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿ:28.04.2009ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎ) ರನ್ವಯ ಅಮಾನತ್ತಿನಲ್ಲಿಡಲಾಗಿದೆ.

ಸರ್ಕಾರವು ಶ್ರೀ ಸಿ.ಪಿ. ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಂಗಳೂರು ಗ್ರಾಮಾಂತರ (ಅಮಾನತ್ತಿನಲ್ಲಿರುವವರು) ಇವರ ಅಮಾನತ್ತಿನ ಪ್ರಕರಣವನ್ನು ಮರುಪರಿಶೀಲಿಸಿ ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಸದರಿಯವರನ್ನು ಅಮಾನತ್ತಿನಿಂದ ತೆರವುಗೊಳಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 24 ಎಸ್‌ಜಿಡಿ 2009, ಬೆಂಗಳೂರು, ದಿನಾಂಕ: 20ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಶ್ರೀ ಸಿ.ಪಿ. ರವೀಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಂಗಳೂರು ಗ್ರಾಮಾಂತರ (ಅಮಾನತ್ತಿನಲ್ಲಿರುವವರು) ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬೆಳ್ತಂಗಡಿ ಇಲ್ಲಿನ ಖಾಲಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 1650

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಆರ್ಥಿಕ ಸಚಿವಾಲಯ

ವಿಷಯ: ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫೀ/ಅಲ್ಪೋಪಹಾರದ ಸಲುವಾಗಿ ಮಾಡುವ ವೆಚ್ಚದ ಪರಿಷ್ಕೃತ ಆರ್ಥಿಕ ಮಿತಿ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 1 ಟಿಸಿಇ2000 ದಿ: 3–1–2001.

2) ಸರ್ಕಾರಿ ಆದೇಶ ಸಂಖ್ಯೆ : ಆಇ:6:ಟಿ.ಸಿ.ಇ. 2005 ದಿ: 3.11.2005.

ಪ್ರಸ್ತಾವನೆ:

ಸಾದಿಲ್ವಾರು ವೆಚ್ಚ ಕೈಪಿಡಿ 1958 ರ ನಿಯಮ 55 (51) ರ ಪ್ರಕಾರ ಮುಖ್ಯ ಮಂತ್ರಿಗಳು, ಸಚಿವರು, ರಾಜ್ಯ ಸಚಿವರು, ಉಪ ಸಚಿವರು, ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫಿ/ಅಲ್ಪೋಪಹಾರದ ಸಲುವಾಗಿ ಮಾಡುವ ವೆಚ್ಚದ ಆರ್ಥಿಕ ಮಿತಿಯನ್ನು ಮೇಲೆ (1) ರಲ್ಲಿ ಓದಲಾದ ದಿನಾಂಕ:3.1.2001ರ ಆದೇಶದಲ್ಲಿ ಪರಿಷ್ಕರಿಸಿ ನಿಗದಿಗೊಳಿಸಲಾಗಿತ್ತು. ಹಾಗೆಯೇ ಸದರಿ ಆದೇಶದ ಕ್ರಮ ಸಂಖ್ಯೆ (5) ರಲ್ಲಿ ನಿಗದಿಗೊಳಿಸಲಾಗಿದ್ದ ಮಿತಿಯನ್ನು ವಾರ್ಷಿಕ 4000/– ರೂ. ಗಳಿಂದ 5000/– ರೂ. ಗಳಿಗೆ ಏರಿಸಿ ಮೇಲೆ (2) ರಲ್ಲಿ ಓದಲಾದ ದಿನಾಂಕ 3.11.2005ರ ಆದೇಶವನ್ನು ಹೊರಡಿಸಲಾಗಿತ್ತು. ದಿನೇ ದಿನೇ ಹೆಚ್ಚುತ್ತಿರುವ ಬೆಲೆ ಏರಿಕೆಯ ಕಾರಣದಿಂದ ಹಾಗೂ ಹೆಚ್ಚು ಹೆಚ್ಚು ಸಭೆಗಳನ್ನು ನಡೆಸಬೇಕಾಗಿರುವುದರಿಂದ ಮತ್ತು ಈ ಮಿತಿಗಳನ್ನು 2001ರಲ್ಲಿ ನಿಗಡಿಪಡಿಸಿರುವುದನ್ನು ಗಮನದಲ್ಲಿರಿಸಿಕೊಂಡು ಮಿತಿಯನ್ನು ಹೆಚ್ಚಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸಿ ಪರಿಷ್ಕರಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ01 (ಬಾ) ಟಿಸಿಇ 2009, ಬೆಂಗಳೂರು, ದಿನಾಂಕ: 2ನೇ ಜುಲೈ 2009

ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫಿ/ಅಲ್ಪೋಪಹಾರದ ಸಲುವಾಗಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಹಾಗೂ ಇತರೆ ಅಧಿಕಾರಿಗಳು ಮಾಡಬಹುದಾದ ವೆಚ್ಚದ ಮಿತಿಯನ್ನು ಪರಿಷ್ಕರಿಸಿ ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

1.	ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಸಮಾನಾಂತರ ಅಧಿಕಾರಿಗಳು, ಮಹಾ ನಿರ್ದೇಶಕರು, ಹಾಗೂ ಆರಕ್ಷಕ ಮಹಾ ನಿರೀಕ್ಷಕರು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 20,000.00
2.	ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಿಶೇಷ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ವಾಣಿಜ್ಯ ತೆರಿಗೆ ಆಯುಕ್ತರು, ಅಬಕಾರಿ ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಆಯುಕ್ತರು, ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರು, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು, ಮತ್ತು ನಿರ್ದೇಶಕರು, ಅಪರ ಆರಕ್ಷಕ ಮಹಾ ನಿರೀಕ್ಷಕರು, ಆರಕ್ಷಕ ಆಯುಕ್ತರು, ಪ್ರಧಾನ ಮುಖ್ಯ ಅರಣ್ಯಪಾಲಕರು, ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ.15,000.00
3.	ಅಪರ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಯವರ ಪತ್ರಿಕಾ ಕಾರ್ಯದರ್ಶಿ, ಇಲಾಖಾ ಮುಖ್ಯಸ್ಥರು (ಮೇಲೆ (2) ರಲ್ಲಿ ತಿಳಿಸಿರುವವರನ್ನು ಹೊರತುಪಡಿಸಿ)	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 10,000.00
4.	ಜಿಲ್ಲಾಧಿಕಾರಿಗಳು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 15,000.00
5.	ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು	ಪ್ರತಿಯೊಂದಕ್ಕೆ ಒಂದು ವರ್ಷಕ್ಕೆ	ರೂ. 5,000.00

ನಿಗದಿಪಡಿಸಿರುವ ಪರಿಷ್ಕೃತ ದರಗಳು ಕೂಡಲೇ ಜಾರಿಗೆ ಬರುತ್ತದೆ. ಈ ಬಗ್ಗೆ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಶಾಮರಾವ್

ಪಿ.ಆರ್. 1652 ಸರ್ಕಾರದ ಅಧೀನ ಕಾರ್ಯದರ್ಶಿ,

(ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆ) ಆರ್ಥಿಕ ಇಲಾಖೆ.

ವಿಷಯ: ಹೊಸದಾಗಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅಬಕಾರಿ ಚೆಕ್‌ಪೋಸ್ಟ್‌ಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1) ಅಬಕಾರಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ : ಇಸಿಇ/28/ಟಿಎಂಪಿ/2008 ದಿನಾಂಕ: 11.8.08

2) ಸರ್ಕಾರದ ಅಧೀನ ಕಾರ್ಯದರ್ಶಿ (ಸಿಬ್ಬಂದಿ) ರವರ ಟಿಪ್ಪಣಿ ಸಂಖ್ಯೆ: ಸಿಆಸುಇ 11 ಶಿಸಾಸೇ 2009 ದಿನಾಂಕ: 5.6.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರ ಪತ್ರದಲ್ಲಿ ಅಬಕಾರಿ ಆಯುಕ್ತರು, ರಾಜ್ಯದಲ್ಲಿ ಇತ್ತೀಚೆಗೆ ವಿಷಪೂರಿತ ಮದ್ಯ ಸೇವನೆಯಿಂದ ಆದ ಸಾವು–ನೋವುಗಳ ಹಿನ್ನಲೆಯಲ್ಲಿ ಕುಖ್ಯಾತ ಕಳ್ಳಭಟ್ಟಿ ಹಾಗೂ ವಿಷಪೂರಿತ ಮದ್ಯ ಮಾರಾಟ ಕೇಂದ್ರಗಳಿರುವ ಪ್ರದೇಶಗಳಲ್ಲಿ ಹಾಗೂ ಹೊರ ರಾಜ್ಯ ಅಥವಾ ಹೊರ ಜಿಲ್ಲಾ ಪ್ರದೇಶಗಳಿಂದ ವಿಷಪೂರಿತ ಮದ್ಯ ಸರಬರಾಜಾಗುವ ಸ್ಥಳಗಳಲ್ಲಿ 24 ಗಂಟೆಗಳ ಕಾಲ ಕಾರ್ಯ ನಿರ್ವಹಿಸುವ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿದರೆ ವಿಷಪೂರಿತ ಮದ್ಯ ಮಾರಾಟ ಹಾಗೂ ತಯಾರಿಕೆಯನ್ನು ನಿಯಂತ್ರಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 0? ಪ್ರದೇಶಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲು ಅಗತ್ಯವಿರುವ ವಿವಿಧ ವರ್ಗಗಳ 39 ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದ ಅದರನ್ವಯ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಇ 51 ಇಎಐ 2008, ಬೆಂಗಳೂರು, ದಿನಾಂಕ: 17ನೇ ಜೂನ್ 2009

ಅಬಕಾರಿ ಇಲಾಖೆಯು ನಿರ್ವಹಿಸಬೇಕಾದ ಕರ್ತವ್ಯಗಳಲ್ಲಿ ಒಂದಾದ ವಿಷಪೂರಿತ ಹಾಗೂ ನಕಲಿ ಮದ್ಯ ಮಾರಾಟವನ್ನು ನಿಯಂತ್ರಿಸಲು ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಲು ಈ ಕೆಳಕಂಡ ಅಬಕಾರಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲು ಹಾಗೂ ಅಗತ್ಯವಿರುವ ಈ ಕೆಳಕಂಡ ವಿವಿಧ ವರ್ಗಗಳ 39 ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಮಾತ್ರ ಸೃಜಿಸಲು ಸರ್ಕಾರವು ಆದೇಶಿಸಿದೆ.

ಕ್ರ ಸಂ.	ಚೆಕ್‌ಪೋಸ್ಟ್ ಕಛೇರಿ ಹೆಸರು	ಹುದ್ದೆಗಳ ವಿವರ		
		ಅಬಕಾರಿ ನಿರೀಕ್ಷಕರು	ಅಬಕಾರಿ ಉಪ ನಿರೀಕ್ಷಕರು	ಅಬಕಾರಿ ರಕ್ಷಕರು
1	ಬೈಲನರಸಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ	1	2	10
2	ಕಟ್ಟಿಗೇನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ	1	2	10
3	ಅಡಿಗಾರಕಲ್ಲಹಳ್ಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.	1	2	10
		3	**6**	**30**
			ಒಟ್ಟು 39 ಹುದ್ದೆಗಳು	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1653

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಅಬಕಾರಿ)

ಕಾರ್ಮಿಕ ಸಚಿವಾಲಯ

ವಿಷಯ: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಇಲ್ಲಿಗೆ ಮಂಜೂರು ಮಾಡಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: 1) ಆದೇಶ ಸಂಖ್ಯೆ : ಕಾಇ 287 ಇಟಿಐ 2008 (ಭಾಗ) ದಿನಾಂಕ: 06/09/2008.

2) ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ ಉತನಿ/ತರಬೇತಿ/ಯೋ–2/ವಿವ–04/2008–09 ದಿನಾಂಕ 1/10/2008 ಮತ್ತು 6/2/2009

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ 2008–09ನೇ ಸಾಲಿನಲ್ಲಿ 10 ಸ್ಥಳಗಳಲ್ಲಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿತ್ತು. ಈ 10 ಸ್ಥಳಗಳ ಪೈಕಿ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಮಂಜೂರು ಮಾಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರದಲ್ಲಿ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಮಂಜೂರಾಗಿರುವ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಬದಲಾಯಿಸಿ ಪ್ರವೇಶ ಅಧಿಸೂಚನೆಯನ್ನು ನೀಡಲಾಗಿರುತ್ತದೆ ಎಂದೂ, ಆದ್ದರಿಂದ ಈ ಬದಲಾವಣೆಗೆ ಘಟನೋತ್ತರ ಅನುಮೋದನೆ ನೀಡಿ ಪರಿಷ್ಕೃತ ಸರ್ಕಾರಿ ಆದೇಶ ಜಾರಿ ಮಾಡುವಂತೆ ಕೋರಿರುತ್ತಾರೆ.

ಅದರಂತೆ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 73 ಇಟಿಐ 2009, ಬೆಂಗಳೂರು, ದಿನಾಂಕ: 24ನೇ ಜೂನ್ 2009

ಆದೇಶ ಸಂಖ್ಯೆ ಕಾಇ 287 ಇಟಿಐ 2008 (ಭಾಗ) ದಿನಾಂಕ: 6/9/2008 ರಲ್ಲಿ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಮಂಜೂರು ಮಾಡಿರುವ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಇಲ್ಲಿಗೆ ಸ್ಥಳಾಂತರಿಸಲು ಘಟನೋತ್ತರ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1656

ಎ.ಎಸ್. ವಿಶ್ವೇಶ್ವರಯ್ಯ

ಪೀಠಾಧಿಕಾರಿ, ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ವಸತಿ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ: ಆಯುಕ್ತರು, ಕಕೊನಿಮ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಕೊನಿಮ/ಲೆಪಶಾ/ಅನುದಾನ/2009–10, ದಿನಾಂಕ: 7.5.2009

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿರವರ ಪತ್ರದಲ್ಲಿ, 2009–10ನೇ ಸಾಲಿನ ಆಯವ್ಯಯದ ಸವಿವರ ವೆಚ್ಚದ ಅಂದಾಜುಗಳ ಪುಸ್ತಕ ಸಂಪುಟ–5 ರಲ್ಲಿ ರೂ. 6900.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಹಾಗೂ ರೂ. 3275.63 ಲಕ್ಷಗಳನ್ನು ಯೋಜನೇತರದಡಿಯಲ್ಲಿ ಒಟ್ಟು ರೂ. 10175.63 ಲಕ್ಷಗಳನ್ನು ಒದಗಿಸಲಾಗಿರುವುದರಿಂದ 2009–10ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ (ಯೋಜನೆ ಮತ್ತು ಯೋಜನೇತರಡಡಿ) ರೂ. 143.91 ಲಕ್ಷಗಳು ಹಾಗೂ ಹುಡ್ಕೋ ಸಾಲಗಳ ಮೇಲು ಉಸ್ತುವಾರಿಗಾಗಿ 682.67 ಲಕ್ಷಗಳು (ಹುಡ್ಕೋ ಸಂಸ್ಥೆಯ ಬೇಡಿಕೆಯನ್ವಯ) ಒಟ್ಟು ಯೋಜನೆಯಡಿ ರೂ. 75.00 ಲಕ್ಷಗಳು ಹಾಗೂ ಯೋನೇತರದಡಿಯಲ್ಲಿ ರೂ. 751.58 ಲಕ್ಷಗಳು ಒಟ್ಟು ರೂ. 826.58 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 11 ಕೊಮಂಲೆ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ 2009–10ನೇ ಸಾಲಿಗೆ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ ಯೋಜನೆ ಮತ್ತು ಯೋಜನೇತರ ಹಾಗು ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ಒಟ್ಟು ರೂ. 826.57517 ಲಕ್ಷಗಳು (ಎಂಟು ಕೋಟಿ ಇಪ್ಪತ್ತಾರು ಲಕ್ಷದ ಐವತ್ತೇಳು ಸಾವಿರದ ಐದು ನೂರ ಹದಿನೇಳು ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಮೊದಲನೇ ತ್ರೈಮಾಸಿಕ		
		ಯೋಜನೆ	ಯೋಜನೇತರ	ಒಟ್ಟು
1	ಸಿಬ್ಬಂದಿ ವೆಚ್ಚ 2217–04–191–2–01	75.00	68.91	143.91
2	ಹುಡ್ಕೋ ಸಾಲಗಳ ಮೇಲು ಉಸ್ತುವಾರಿ 4217–60–800–3–01	–	682.67	682.66517
	ಒಟ್ಟು			**826.57517**

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು, ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತಾರೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು, ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್‌ಡಿ 376 ವೆಚ್ಚ–9/2009 ದಿನಾಂಕ:20/06/2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1657

ಜಿ.ಆರ್. ನಾಗರಾಜ

ಪೀಠಾಧಿಕಾರಿ–4, ವಸತಿ ಇಲಾಖೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ: ಮೀನುಗಾರಿಕೆ ಯಾಂತ್ರಿಕ ದೋಣಿಗಳ ನಿರ್ಮಾಣಕ್ಕಾಗಿ ಸಾಧ್ಯತಾ ಪ್ರಮಾಣ ಪತ್ರ ನೀಡುವ ವಾರ್ಷಿಕ ಗುರಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಪತ್ರ ಸಂಖ್ಯೆ: ಎಂಇಎಫ್/4/2009–10 ದಿನಾಂಕ:8/6/2009.

ಪ್ರಸ್ತಾವನೆ:

ಮೀನುಗಾರಿಕೆ ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಕಡಲ ಮೀನುಗಾರಿಕೆಯಲ್ಲಿ ಕರಾವಳಿ ತೀರ ಪ್ರದೇಶದಲ್ಲಿ ದೊರಕುವ ಮೀನಿನ ಪ್ರಮಾಣ ಕಡಿಮೆಯಾಗುತ್ತಿದ್ದು, ಯಾಂತ್ರಿಕ ದೋಣಿಗಳ ಮೀನುಗಾರರು ಆಳ ಸಮುದ್ರ ಮೀನುಗಾರಿಕೆಯತ್ತ ಹೆಚ್ಚಿನ ಗಮನ ಹರಿಸಿದ್ದು, ಈ ಉದ್ದೇಶಕ್ಕೆ ಆಳ ಸಮುದ್ರದಲ್ಲಿ ಮೀನುಗಾರಿಕೆಯನ್ನು ಮಾಡಲು ಸುಸಜ್ಜಿತ ಅರ್ಹ ಹಾಗೂ ದೊಡ್ಡ ಗಾತ್ರದ ದೋಣಿಗಳ ಅವಶ್ಯಕತೆ ಇದ್ದು, ಇತ್ತೀಚಿನ ವರ್ಷಗಳಲ್ಲಿ ಬಹುದಿನ ಮೀನುಗಾರಿಕೆಯು (8–12 ದಿನಗಳ ಮೀನುಗಾರಿಕೆ) ಹೆಚ್ಚಾಗುತ್ತಿದ್ದು, ಈ ಉದ್ದೇಶಕ್ಕೆ "Sea Worthy" ಇರುವ ಯಾಂತ್ರಿಕ ದೋಣಿಗಳ ಅವಶ್ಯಕತೆ ಹೆಚ್ಚಾಗಿದ್ದು, ಈ ದೋಣಿಗಳಲ್ಲಿ ಫಿಶ್ ಹೋಲ್ಡ್, ಐಸ್ ಹೋಲ್ಡ್ ಮತ್ತು ಅಧಿಕ ಪ್ರಮಾಣದ ಡೀಸೆಲ್ ಮತ್ತು ನೀರನ್ನು ಶೇಖರಿಸಿಟ್ಟುಕೊಳ್ಳುವ ವ್ಯವಸ್ಥೆಯೂ ಸಹ ಯಾಂತ್ರಿಕ ದೋಣಿಗಳಲ್ಲಿರಬೇಕಾಗುತ್ತದೆಂದು, ಹೀಗಾಗಿ ಯಾಂತ್ರಿಕ ದೋಣಿಗಳ ಮಾಲೀಕರು ಆಳ ಸಮುದ್ರ ಮೀನುಗಾರಿಕೆ ಮಾಡಬಲ್ಲ ದೊಡ್ಡ ಗಾತ್ರದ ಬೋಟುಗಳನ್ನು ನಿರ್ಮಿಸಲು ಸಾಧ್ಯತಾ ಪತ್ರಗಳನ್ನು ವಿತರಿಸುವಂತೆ ಕೋರಿರುತ್ತಾರೆ.

ಪ್ರಸ್ತುತ ರಾಜ್ಯದಲ್ಲಿರುವ ಯಾಂತ್ರಿಕ ದೋಣಿಗಳ ಸಂಖ್ಯೆ 3124 ಆಗಿದ್ದು, ಕೇಂದ್ರ ಸರ್ಕಾರವು ವಿವಿಧ ರಾಜ್ಯಗಳಲ್ಲಿ ಕಡಲ ಮೀನುಗಾರಿಕೆಗೆ ಬೇಕಾದ ಯಾಂತ್ರಿಕ ದೋಣಿಗಳ ಸಂಖ್ಯೆಯನ್ನು ಪರಾಮರ್ಶಿಸಿ ನಿಗದಿಪಡಿಸಲು ರಚಿತವಾದ ಸಮಿತಿಯೂ ಸಹ ಕರ್ನಾಟಕ ರಾಜ್ಯದಲ್ಲಿ 9ನೇ ಪಂಚವಾರ್ಷಿಕ ಯೋಜನೆ ಅಂತ್ಯದ ವೇಳೆಗೆ ಯಾಂತ್ರಿಕ ದೋಣಿಗಳ ಸಂಖ್ಯೆಯನ್ನು ಗರಿಷ್ಠ 3955ರೊಳಗೆ ಸೀಮಿತಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದು, ಅದರಂತೆ ಕರ್ನಾಟಕ ರಾಜ್ಯದಲ್ಲಿ ದೋಣಿಗಳ ಸಂಖ್ಯೆಯನ್ನು ಹೆಚ್ಚಿಸಬಹುದಾಗಿದ್ದು, 48 ಅಡಿಗಿಂತ ಹೆಚ್ಚಿನ ಉದ್ದದ ಯಾಂತ್ರಿಕ ದೋಣಿಗಳನ್ನು ನಿರ್ಮಿಸಲು ಸಾಧ್ಯತಾ ಪತ್ರ ನೀಡುವ ವಾರ್ಷಿಕ ಗುರಿಯನ್ನು ಸಹ ಪರಿಷ್ಕರಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಪಸಂಮೀ 114 ಮೀಇಯೋ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 48 ಅಡಿಗಿಂತ ಹೆಚ್ಚಿನ ಉದ್ದದ ಯಾಂತ್ರಿಕ ದೋಣಿಗಳನ್ನು ನಿರ್ಮಿಸಲು ಸಾಧ್ಯತಾ ಪತ್ರ ನೀಡುವ ವಾರ್ಷಿಕ ಗುರಿಯನ್ನು ಹೆಚ್ಚಿಸಿ ಈ ಕೆಳಕಾಣಿಸಿದ ಎರಡು ಜಿಲ್ಲೆಗಳಲ್ಲಿ ಅವುಗಳ ಮುಂದೆ ನಮೂದಿಸಿರುವಂತೆ ಆದೇಶ ಹೊರಡಿಸಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಹಾಲಿ ಇರುವ ವಾರ್ಷಿಕ ಮಿತಿ	ಪರಿಷ್ಕರಿಸಿದ ವಾರ್ಷಿಕ ಮಿತಿ
1)	ದಕ್ಷಿಣ ಕನ್ನಡ	15	50
2)	ಉಡುಪಿ	15	100

ಸಾಧ್ಯತಾ ಪ್ರಮಾಣ ಪತ್ರ ನೀಡಲು ರಚಿಸಲಾಗಿರುವ ಸಮಿತಿಯು ಅನುಸರಿಸಬೇಕಾದ ಮಾರ್ಗದರ್ಶನವನ್ನು ಸರ್ಕಾರದ ಆದೇಶ ಸಂಖ್ಯೆ: ಎಹೆಚ್‌ಎಫ್/481/ಎನ್‌ಎಫ್‌ಎಂ/94, ದಿನಾಂಕ: 15/12/1994 ಮತ್ತು ಅದರ ಅನುಬಂಧದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಎಂ. ರಾಜಣ್ಣ

ಪಿ.ಆರ್. 1658

ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ ಸಾಲ – ಅಸಲು ಮತ್ತು ಬಡ್ಡಿಯ ಮರುಪಾವತಿಗಾಗಿ 2009ರ ಜೂನ್ ಅಂತ್ಯದ 18ನೇ ಕಂತಿನ ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 22 ಪಿಆರ್‌ಎಂ 2002 ದಿನಾಂಕ:6.3.03.

2) ನಿರ್ದೇಶಕರು, ಮಾತಂ ಜೈತಂ ನಿರ್ದೇಶನಾಲಯರವರ ಪತ್ರ ಸಂಖ್ಯೆ ಮಾತಂನಿ/ಲೆಕ್ಕ–1/58/ಹುಡ್ಕೋ ಲೋನ್/ಡೆಬಿಟ್ಸ್ ಸರ್ವೀಸಸ್/180/2008–09, ದಿ: 16/6/2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 6–3–2003ರಲ್ಲಿ ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ (Housing and Urban Development Corporation) ಸಂಸ್ಥೆಯಿಂದ ರೂ. 20.00 ಕೋಟಿ ಸಾಲವನ್ನು ಎತ್ತುವಳಿ ಮಾಡಲು ಮಂಜೂರಾತಿ ನೀಡಲಾಗಿತ್ತು.

2005ನೇ ವರ್ಷದಿಂದ ಹುಡ್ಕೋ ಸಂಸ್ಥೆಯ ಅಸಲು, ಬಡ್ಡಿಯ ಮರುಪಾವತಿಸಲು ಕೆಬಿಟ್ಸ್ ಸಂಸ್ಥೆಗೆ ತ್ರೈಮಾಸಿಕ ಅನುದಾನಗಳನ್ನು ಸರ್ಕಾರವು ಆಗಿಂದಾಗ್ಗೆ ಬಿಡುಗಡೆ ಮಾಡುತ್ತಲಿದೆ.

2009–10ನೇ ಸಾಲಿನ ಆಯವ್ಯಯದಲ್ಲಿ ಸದರಿ ಸಾಲವನ್ನು ಮರುಪಾವತಿಸಲು ಲೆಕ್ಕಶೀರ್ಷಿಕೆ **'5465–01–190–1–08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ'** ಇದರ ಅಡಿಯಲ್ಲಿ ರೂ. 360.00 ಲಕ್ಷಗಳನ್ನು ಒದಗಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರದಲ್ಲಿ ಹುಡ್ಕೋ ಸಂಸ್ಥೆಗೆ 18ನೇ ಕಂತಿನ ಬಾಬ್ತು ಅಸಲು ರೂ. 62,50,000/– + ಬಡ್ಡಿ ಬಾಬ್ತು ರೂ. 22,72,328/– ಒಟ್ಟು ರೂ. 85,22,328/– ಗಳನ್ನು 2009ರ ಜೂನ್ ಅಂತ್ಯದೊಳಗಾಗಿ ಪಾವತಿ ಮಾಡಬೇಕಾಗಿರುತ್ತದೆಂದು ತಿಳಿಸುತ್ತಾ, ಸದರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 07 ಪಿಆರ್‌ಎಂ 2009, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಹುಡ್ಕೋ ಸಾಲದ ಬಾಬ್ತು ಹುಡ್ಕೋ ಸಂಸ್ಥೆಗೆ ಅಸಲು ಮತ್ತು ಬಡ್ಡಿಯ ಬಾಬ್ತು ಪಾವತಿಸಲು ದಿನಾಂಕ 30–06–2009ರ ಅಂತ್ಯದ 18ನೇ ತ್ರೈಮಾಸಿಕ ಕಂತಿನ ಹಣ ರೂ. 85,22,328/–ಗಳ [ಎಂಭತ್ತೈದು ಲಕ್ಷದ ಇಪ್ಪತ್ತೆರಡು ಸಾವಿರದ ಮುನ್ನೂರ ಇಪ್ಪತ್ತೆಂಟು ರೂಪಾಯಿಗಳು ಮಾತ್ರ] ಅನುದಾನವನ್ನು ಬಿಡುಡೆ ಮಾಡಲು ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಅಪರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'5465–01–190–1–08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ'** ಇದರ ಅಡಿಯಲ್ಲಿ ಒದಗಣೆ ಮಾಡಲಾದ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಸದರಿ ಅನುದಾನದ ಬಳಕೆಯ ಬಗ್ಗೆ ಕೆಬಿಟ್ಸ್ ಸಂಸ್ಥೆಯ ಅಪರ ವ್ಯವಸ್ಥಾಪಕ ನಿರ್ದೇಶಕರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ಪಡೆದು ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16.5.2008 ಇದರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವಿ. ಕೃಷ್ಣಮೂರ್ತಿ

ಪಿ.ಆರ್. 1659 **ಸರ್ಕಾರದ ಅಧೀನ ಕಾರ್ಯದರ್ಶಿ**

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ವಿಷಯ: ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ 19–1–2009

2) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, (1), ದಿನಾಂಕ : 4–2–2009

3) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, (2), ದಿನಾಂಕ 4–2–2009

4) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ 30–3–2009

5) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಹಾಗೂ ಅಧ್ಯಕ್ಷರು, ಬಿಪಿಓ ಸ್ಕ್ರೀನಿಂಗ್ ಕಮಿಟಿ ಇವರ ಪತ್ರದ ಸಂಖ್ಯೆ : ಕೆಬಿಟ್ಸ್/ಪಿಇ/ಗ್ರಾಮೀಣ ಬಿಪಿಓ ಕೇಂದ್ರ/42/09–10, ದಿನಾಂಕ:16–6–2009

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ತಾಲ್ಲೂಕು/ಹೋಬಳಿ ಕೇಂದ್ರ ಸ್ಥಳಗಳಲ್ಲಿ ಗ್ರಾಮಾಂತರ ಬಿ.ಪಿ.ಓ ಕೇಂದ್ರಗಳನ್ನು ಸ್ಥಾಪಿಸುವ ಹೊಸ ಯೋಜನೆಗೆ 2008–09ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದ.

ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ ಅರ್ಜಿಯ ನಮೂನೆಯನ್ನು ನಿಗದಿಪಡಿಸಲಾಗಿದೆ.

ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧದ ಅರ್ಜಿಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಅರ್ಹ ಅರ್ಜಿಗಳನ್ನು ಶಿಫಾರಸ್ಸು ಮಾಡುವ ಸಂಬಂಧ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸ್ಕ್ರೀನಿಂಗ್ ಕಮಿಟಿಯನ್ನು ರಚಿಸಲಾಗಿದೆ.

ಮೇಲೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 2008–09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ **"5465–01–190–1–14 ಗ್ರಾಮೀಣ ಬಿಪಿಓಗಳು 059 ಇತರೆ ಖರ್ಚು (ಯೋಜನೆ)"** ಇದರಡಿಯಲ್ಲಿ ರೂ. 100 ಲಕ್ಷಗಳನ್ನು ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಮೇಲೆ (5) ರಲ್ಲಿ ಓದಲಾದ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಪತ್ರದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಕೆಬಿಟ್ಸ್ ಸಂಸ್ಥೆಯವರು ಅರ್ಜಿಗಳನ್ನು ಆಹ್ವಾನಿಸಿದ್ದು, ನಿಗದಿಪಡಿಸಿದ ಕೊನೆಯ ದಿನಾಂಕ:21–2–2009 ರೊಳಗೆ 100 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳನ್ನು ಸರ್ಕಾರಿ ಆದೇಶ ದಿನಾಂಕ:4–2–2009ರಲ್ಲಿ ರಚಿಸಲಾದ ಸ್ಕ್ರೀನಿಂಗ್ ಕಮಿಟಿಯು ಸರ್ಕಾರದ ಮಾರ್ಗಸೂಚಿಯನ್ವಯ ಅರ್ಜಿಗಳನ್ನು ಪರಿಶೀಲಿಸಿ ಅರ್ಹರಾದ 27 ಅರ್ಜಿದಾರರನ್ನು ವೈಯಕ್ತಿಕ ಸಂದರ್ಶನ ನಡೆಸಿ, ಈ ಕೆಳಕಂಡ ನಾಲ್ಕು ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಸರ್ಕಾರದಿಂದ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕ್ರಮ ಸಂಖ್ಯೆ	ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ	ಬಿ.ಪಿ.ಓ. ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
1	ರತ್ನಾ ಶ್ರೀನಿವಾಸ್, ಎಂ.ಪ್ರೋ ಸಲೂಷನ್, ನಂ. 92, 1ನೇ ಮತ್ತು 2ನೇ ಮಹಡಿ, ಎಂ. ಪ್ರೋ ಟವರ್, 60, ಅಡಿ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–95.	ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
2	ಮಂಜುನಾಥ ಇ. ಅರ್ಮನ್ ಇನ್ಫೋಟೆಕ್, ನಂ. 24, 1ನೇ ಮಹಡಿ, 7ನೇ ಕ್ರಾಸ್, ಸಂಪಂಗಿ ರೋಡ್, ಕೆ.ಆರ್. ಪುರಂ, ಹಾಸನ	ಸಾಲೆಗಾಮೆ, ಹಾಸನ ಜಿಲ್ಲೆ
3	ಶ್ರೀಕಾಂತ್ ವಿ ರಾವ್ ಇನ್‌ಟೆಕ್, ಸಿಹೆಚ್–26, 1ನೇ ಮಹಡಿ, 7ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು	ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
4	ಕುಮಾರಿ ಶಿಲ್ಪಾ ಎಂ. ಡೈರೆಕ್ಟರ್, ಮೈಂಡ್‌ಗ್ಲೋ ಸಾಫ್ಟ್‌ವೇರ್, ನಂ.410, 3ನೇ ಮಹಡಿ, 65ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.	ಶಿಗ್ಗಾಂವ್, ಧಾರವಾಡ ಜಿಲ್ಲೆ

ಸ್ಕ್ರೀಸಿಂಗ್ ಕಮಿಟಿಯ ಶಿಫಾರಸ್ಸಿನಂತೆ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮೇಲಿನ ನಾಲ್ಕು ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಅನುಮೋದಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ: 22ನೇ ಜೂನ್ 2009

ಪ್ರಸ್ತಾವನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009–10ನೇ ಸಾಲಿನಲ್ಲಿ ಈ ಕೆಳಕಂಡ ನಾಲ್ಕು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಈ ಕೆಳಕಂಡ ನಿಬಂಧನೆ ಮೇರೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ:–

ಕ್ರಮ ಸಂಖ್ಯೆ	ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ	ಬಿ.ಪಿ.ಓ. ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
1	ರತ್ನಾ ಶ್ರೀನಿವಾಸ್, ಎಂ.ಪ್ರೋ ಸಲೂಷನ್, ನಂ. 92, 1ನೇ ಮತ್ತು 2ನೇ ಮಹಡಿ, ಎಂ. ಪ್ರೋ ಟವರ್, 60, ಅಡಿ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–95.	ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
2	ಮಂಜುನಾಥ ಇ. ಅರ್ಮನ್ ಇನ್ಫೋಟೆಕ್, ನಂ. 24, 1ನೇ ಮಹಡಿ, 7ನೇ ಕ್ರಾಸ್, ಸಂಪಂಗಿ ರೋಡ್, ಕೆ.ಆರ್. ಪುರಂ, ಹಾಸನ.	ಸಾಲೆಗಾಮೆ, ಹಾಸನ ಜಿಲ್ಲೆ
3	ಶ್ರೀಕಾಂತ್ ವಿ ರಾವ್ ಇನ್‌ಟೆಕ್, ಸಿಹೆಚ್–26, 1ನೇ ಮಹಡಿ, 7ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು.	ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಕ್ರಮ ಸಂಖ್ಯೆ	ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ	ಬಿ.ಪಿ.ಓ. ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
4	ಕುಮಾರಿ ಶಿಲ್ಪಾ ಎಂ. ಡೈರೆಕ್ಟರ್, ಮೈಂಡ್‌ಗ್ಲೋ ಸಾಫ್ಟ್‌ವೇರ್, ನಂ.410, 3ನೇ ಮಹಡಿ, 65ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.	ಶಿಗ್ಗಾಂವ್, ಧಾರವಾಡ ಜಿಲ್ಲೆ

1. ಕೆಬಿಟ್ಸ್ ಸಂಸ್ಥೆಯವರು ಉಲ್ಲೇಖ (1) ಮತ್ತು (2) ರಲ್ಲಿನ ಸರ್ಕಾರದ ಆದೇಶದನ್ವಯ ಹಾಗೂ ಮಾರ್ಗಸೂಚಿಯಂತೆ ಗ್ರಾಮೀಣ ಬಿಪಿಓ ಕೇಂದ್ರಗಳಿಗೆ ಪ್ರಗತಿಗೆ ಅನುಗುಣವಾಗಿ ಕಾಲಕಾಲಕ್ಕೆ ಹಂತಹಂತವಾಗಿ ಹಣ ಬಿಡುಗಡೆ ಮಾಡತಕ್ಕದ್ದು.
2. ಗ್ರಾಮೀಣ ಬಿಪಿಓ ಕಾರ್ಯವೈಖರಿಯನ್ನು ಆಗಿಂದಾಗ್ಗೆ ತಪಾಸಣೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
3. ಬಿಪಿಓ ಕೇಂದ್ರಗಳಿಂದ ವಿನಿಯೋಗಿತ ಪತ್ರಗಳನ್ನು ಪಡೆದು ಸರ್ಕಾರಕ್ಕೆ ಸಕಾಲದಲ್ಲಿ ಸಲ್ಲಿಸತಕ್ಕದ್ದು.
4. ಗ್ರಾಮೀಣ ಭಿಪಿಓ ಕೇಂದ್ರಗಳಿಗೆ ಬಿಡುಗಡೆ ಮಾಡುವ ಹಣ ದುರುಪಯೋಗವಾಗದಂತೆ ಹಾಗೂ ಯೋಜನೆಯ ಅನುಷ್ಠಾನವನ್ನು ಮಧ್ಯದಲ್ಲಿ ರದ್ದುಪಡಿಸಿದರೆ ಸರ್ಕಾರದಿಂದ ನೀಡಲಾದ ಆರ್ಥಿಕ ಸೌಲಭ್ಯವನ್ನು ವಸೂಲಿ ಮಾಡುವ ಬಗ್ಗೆ/ಮೂಲಭೂತ ಸೌಕರ್ಯವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಕರಾರಿನಲ್ಲಿ ಸೂಕ್ತ ನಿಬಂಧನೆಗಳನ್ನು ವಿಧಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವಿ. ಕೃಷ್ಣಮೂರ್ತಿ

ಪಿ.ಆರ್. 1660 ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಬಿಜಾಪುರ ಜಿಲ್ಲೆ, ಸಿಂಧಗಿ ತಾಲ್ಲೂಕು, ಮುಳಸಾವಳಗಿ ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ 1993–94ನೇ ಸಾಲಿನಲ್ಲಿ ರೋಜಗಾರ್ ಆಹಾರ ಧಾನ್ಯ ವಿತರಣೆಯಲ್ಲಿನ ಅವ್ಯವಹಾರ ಕುರಿತಂತೆ ಜಂಟಿ ಇಲಾಖಾ ವಿಚಾರಣೆ – ಆರೋಪಿತರಿಗೆ ದಂಡನೆ ವಿಧಿಸುವ ಬಗ್ಗೆ – ಆದೇಶ.

ಓದಲಾಗಿದೆ: 1) ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಬಿಜಾಪುರ ಇವರ ಪತ್ರ ಸಂಖ್ಯೆ ಜಿಪಅ/ಮಂಪಂ/ಸಿಬ್ಬಂದಿ/ಸಿಆರ್–131/94, ದಿನಾಂಕ 21–04–1995.

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ : ಗ್ರಾಅಪ 17 ಇಎನ್‌ಕ್ಯೂ 95, ದಿನಾಂಕ 8.1.1996.

3) ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 17 ಇಎನ್‌ಕ್ಯೂ 95, ದಿನಾಂಕ 07–06–1996.

4) ವಿಭಾಗಾಧಿಕಾರಿಗಳು, ಗುಲ್ಬರ್ಗಾ ಇವರ ಪತ್ರ ಸಂಖ್ಯೆ 22 ಸಿಸಿಎ : 96–97 ದಿನಾಂಕ 18–8–1996 ಮತ್ತು 29–12–1998.

5) ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 17 ಇಎನ್‌ಕ್ಯೂ 95, ದಿನಾಂಕ 21–9–2000.

6) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ 30–3–2007.

7) ಸರ್ಕಾರಿ ಪತ್ರ ಸಂಖ್ಯೆ ಗ್ರಾಅಪ 17 ಇಎನ್‌ಕ್ಯೂ 95, ದಿನಾಂಕ 24–8–2007.

8) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರ ಪತ್ರ ಸಂಖ್ಯೆ ಜಿಪಂಅ/ಗ್ರಾಪಂ/ಸಿಬ್ಬಂದಿ/ಸಿಆರ್–131/1994/6953 ದಿನಾಂಕ 28–8–2008.

9) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ PSC 195 CNS 08, ದಿನಾಂಕ 1–4–2009.

ಪ್ರಸ್ತಾವನೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಬಿಜಾಪುರ ಜಿಲ್ಲೆ, ಸಿಂಧಗಿ ತಾಲ್ಲೂಕಿನ ಮುಳಸಾವಳಗಿ ಮಂಡಲ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ಕೆ. ಮಹಾಲಿಂಗಪೂರ ಹಾಗೂ ಸದರಿ ಮಂಡಲ ಪಂಚಾಯತ್‌ನಲ್ಲಿ ಆಡಳಿತಾಧಿಕಾರಿಯಾಗಿದ್ದ ಶ್ರೀ ಆರ್.ಎಸ್. ನಂದಿಕೂರ ಇವರುಗಳು ಜವಾಹರ್ ರೋಜಗಾರ್ ಯೋಜನೆಯಲ್ಲಿ ಮಂಜೂರಾದ ಹಣ ಹಾಗೂ ಆಹಾರ ಧಾನ್ಯ ದುರುಪಯೋಗ ಪಡಿಸಿಕೊಂಡಿದ್ದರಿಂದ ಅವರುಗಳು ವಿರುದ್ಧ ಜಂಟಿ ವಿಚಾರಣೆ ನಡೆಸಲು ಪ್ರಸ್ತಾವನೆ ಸಲ್ಲಿಸಿದ್ದರು.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮುಳಸಾವಳಗಿ ಮಂಡಲ ಪಂಚಾಯತ್‌ನ ಹಿಂದಿನ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ಕೆ. ಮಹಾಲಿಂಗಪೂರ ಹಾಗೂ ಸದರಿ ಮಂಡಲ ಪಂಚಾಯತ್‌ನ ಹಿಂದಿನ ಆಡಳಿತಾಧಿಕಾರಿಗಳಾಗಿದ್ದ ಶ್ರೀ ಆರ್.ಎಸ್. ನಂದಿಕೂರ ಇವರುಗಳಿಗೆ ಅನುಬಂಧ 1 ರಿಂದ 4 ರವರೆಗಿನ ಆರೋಪ

ಪಟ್ಟಿಗಳೊಂದಿಗೆ ಮೇಲೆ (2) ರಲ್ಲಿ ಓದಲಾದ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು, ಸದರಿ ನೋಟೀಸಿಗೆ ಆರೋಪಿತರಾದ ಶ್ರೀ ಎಸ್.ಕೆ. ಮಹಾಲಿಂಗಪೂರ ಮತ್ತು ಶ್ರೀ ಆರ್.ಎಸ್. ನಂದಿಕೂರ ಇವರುಗಳು ತಮ್ಮ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿ, ತಮ್ಮ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ಅಲ್ಲಗಳೆದಿದ್ದರು.

ಈ ರೀತಿ ಆರೋಪಿತರು ಸಲ್ಲಿಸಿದ್ದ ರಕ್ಷಣಾ ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆಪಾದಿತರು ಬಿಜಾಪುರ ಜಿಲ್ಲೆ, ಸಿಂಧಗಿ ತಾಲ್ಲೂಕಿನ ಮುಳಸಾವಳಗಿ ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ ಜವಾಹರ್ ರೋಜಗಾರ್ ಯೋಜನೆಯಲ್ಲಿ ಹಣ ಮತ್ತು ಆಹಾರ ಧಾನ್ಯ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಈ ಪ್ರಕರಣದಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಮೇಲೆ (3) ರಲ್ಲಿ ಓದಲಾದ ದಿನಾಂಕ:7.6.1996ರ ಸರ್ಕಾರಿ ಆದೇಶದಲ್ಲಿ ವಿಭಾಗಾಧಿಕಾರಿ, ಗುಲ್ಬರ್ಗಾ ಇವರನ್ನು ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ಉಪ ಕಾರ್ಯದರ್ಶಿ (ಆಡಳಿತ), ಜಿಲ್ಲಾ ಪಂಚಾಯತ್, ಬಿಜಾಪುರ, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಲಾಗಿತ್ತು.

ಮೇಲೆ (4) ರಲ್ಲಿ ಓದಲಾದ ಪತ್ರಗಳಲ್ಲಿ ವಿಭಾಗಾಧಿಕಾರಿ, ಗುಲ್ಬರ್ಗಾ ಇವರು ತಮ್ಮನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುವ ಆದೇಶವನ್ನು ಮಾರ್ಪಡಿಸಲು ಕೋರಿದ್ದರು. ಅದರಂತೆ, ಮೇಲೆ (5) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಜಿಲ್ಲಾಧಿಕಾರಿ, ಬಿಜಾಪುರ ಇವರನ್ನು ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿ ಹಾಗೂ ಉಪ ಕಾರ್ಯದರ್ಶಿ (ಆಡಳಿತ), ಜಿಲ್ಲಾ ಪಂಚಾಯತ್, ಬಿಜಾಪುರ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ (6) ರಲ್ಲಿ ಓದಲಾದ ಪತ್ರದೊಂದಿಗೆ ಜಿಲ್ಲಾಧಿಕಾರಿ, ಬಿಜಾಪುರ ಜಿಲ್ಲೆ, ಬಿಜಾಪುರ ಇವರು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಸದರಿ ವರದಿಯಲ್ಲಿ ಶ್ರೀ ಎಸ್.ಕೆ. ಮಹಾಲಿಂಗಪೂರ, ಅಂದಿನ ಮಂಡಲ ಪಂಚಾಯತ್ ಕಾರ್ಯದರ್ಶಿ (ಪ್ರಸ್ತುತ ನಿವೃತ್ತ) ಇವರ ವಿರುದ್ಧ ಒಟ್ಟು ರೂ. 4,63.492–50 ಗಳ ಹಣ ದುರುಪಯೋಗದ ಆರೋಪಗಳು ರುಜುವಾತಾಗಿದ್ದು, ಜೊತೆಗೆ ಉಗ್ರಾಣ ಸಾಮಗ್ರಿಗಳು ಮತ್ತು ಆಹಾರ ಧಾನ್ಯ ದುರುಪಯೋಗಪಡಿಸಿಕೊಂಡಿರುವುದೂ ಸಹ ರುಜುವಾತಾಗಿರುತ್ತದೆ ಎಂದು ತಿಳಿಸಲಾಗಿದೆ. ಹಾಗೂ ಶ್ರೀ ಆರ್.ಎಸ್. ನಂದಿಕೂರ ಇವರ ಮೇಲೆ ಒಟ್ಟು 7 ಆಪಾದನೆಗಳನ್ನು ಮಾಡಲಾಗಿದ್ದು, ಅವುಗಳಲ್ಲಿ ಆಪಾದನೆ ಸಂಖ್ಯೆ 4 ಮಾತ್ರ ಭಾಗಶ: ಸ್ಥಿರಪಟ್ಟಿರುತ್ತದೆ ಎಂದೂ ಕೂಡ ತಿಳಿಸಲಾಗಿದೆ.

ಇಲಾಖಾ ವಿಚಾರಣಾ ವರದಿಯೊಂದಿಗೆ ಆರೋಪಿತ ನೌಕರರಿಗೆ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:24–8–2007ನ್ನು ಜಾರಿ ಮಾಡಲಾಗಿತ್ತು. ಸದರಿ ನೋಟೀಸಿಗೆ ಉತ್ತರ ಸಲ್ಲಿಸುತ್ತಾ, ಶ್ರೀ ಎಸ್.ಕೆ. ಮಹಾಲಿಂಗಪೂರ ಮತ್ತು ಶ್ರೀ ಆರ್.ಎಸ್.ನಂದಿಕೂರ ಇವರುಗಳು ತಮ್ಮ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ರುಜುವಾತಾದ ಆರೋಪಗಳನ್ನು ಅಲ್ಲಗಳೆದು, ತಾವು ಪ್ರಕರಣದಲ್ಲಿ ನಿರ್ದೋಷಿಯಾಗಿದ್ದು, ತಮ್ಮನ್ನು ಆರೋಪಮುಕ್ತಗೊಳಿಸಬೇಕೆಂದು ಕೋರಿದ್ದರು.

ಮೇಲೆ (7) ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಾಪುರ ಇವರಿಂದ ಪ್ರಕರಣದಲ್ಲಿ ದುರುಪಯೋಗಪಡಿಸಿಕೊಳ್ಳಲಾದ ಆಹಾರ ಧಾನ್ಯ ಹಾಗೂ ಉಗ್ರಾಣ ಸಾಮಗ್ರಿಗಳ ಮೌಲ್ಯದ ಬಗ್ಗೆ ವರದಿಯನ್ನು ಕೋರಲಾಗಿತ್ತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಾಪುರ ಇವರು ಮೇಲೆ (8) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಎಸ್.ಕೆ. ಮಹಾಲಿಂಗಪೂರ ಇವರು ದುರ್ಬಳಕೆ ಮಾಡಿದ ಆಹಾರ ಧಾನ್ಯ ಹಾಗೂ ಸಾಮಗ್ರಿಗಳ ಮೌಲ್ಯವು ಅಂದಿನ ದರಗಳ ಪ್ರಕಾರ ರೂ. 97,188–00 ಗಳೆಂದು ವರದಿ ಮಾಡಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ ಹಾಗೂ ಆರೋಪಿತರ ಲಿಖಿತ ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಆರೋಪಿತ ನೌಕರರಿಗೆ ಸೂಕ್ತ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಈ ಬಗ್ಗೆ ನಿವೃತ್ತ ಆಪಾದಿತ ನೌಕರರಾದ ಶ್ರೀ ಎಸ್.ಕೆ. ಮಹಾಲಿಂಗಪೂರ ಇವರಿಂದ ದುರುಪಯೋಗವಾದ ಹಣದ ಮೊತ್ತ ರೂ. 4.63,492–00 ಗಳನ್ನು ಹಾಗೂ ಆಹಾರ ಧಾನ್ಯ ಮತ್ತು ಉಗ್ರಾಣ ಸಾಮಗ್ರಿಗಳ ಮೊತ್ತ ರೂ. 97,188–00 ಗಳನ್ನು ಅಂದರೆ ಒಟ್ಟು ಮೊತ್ತ ರೂ. 5,60,680–00 ಗಳನ್ನು ಶೇಕಡಾ 8ರ ಬಡ್ಡಿಯೊಂದಿಗೆ ವಸೂಲಿ ಮಾಡಲು ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರನ್ವಯ ನಿವೃತ್ತರಾದ ಸದರಿ ಆರೋಪಿತ ನೌಕರರ ನಿವೃತ್ತಿ ವೇತನದಲ್ಲಿ ಶೇಕಡಾ 5ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ಲೋಕ ಸೇವಾ ಆಯೋಗದ ಸಹಮತಿ ಕೋರಲಾಗಿತ್ತು.

ಮೇಲೆ (9) ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವು ನಿವೃತ್ತ ಆರೋಪಿತ ನೌಕರರಾದ ಶ್ರೀ ಎಸ್.ಕೆ. ಮಹಾಲಿಂಗಪೂರ ಇವರ ವಿರುದ್ಧ ದಂಡನೆ ವಿಧಿಸುವ ಸರ್ಕಾರದ ಪ್ರಸ್ತಾವನೆಗೆ ಸಹಮತಿ ನೀಡಿರುತ್ತದೆ. ಅದರಂತೆ ಈ ಆದೇಶ.

ಆದೇಶ ಸಂಖ್ಯೆ: ಗ್ರಾಅಪ 17 ಇಎನ್‌ಕ್ಯೂ 95, ಬೆಂಗಳೂರು, ದಿನಾಂಕ: 16ನೇ ಜೂನ್ 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಎಸ್.ಕೆ. ಮಹಾಲಿಂಗಪೂರ, ಅಂದಿನ ಕಾರ್ಯದರ್ಶಿ, ಮುಳಸಾವಳಗಿ ಮಂಡಲ ಪಂಚಾಯತ್, ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ, (ಪ್ರಸ್ತುತ ನಿವೃತ್ತ) ಇವರಿಂದ ದುರುಪಯೋಗವಾದ ಹಣದ ಮೊತ್ತ ರೂ 4,63,492–00ಗಳನ್ನು ಹಾಗೂ ಆಹಾರ ಧಾನ್ಯ ಮತ್ತು ಉಗ್ರಾಣ ಸಾಮಗ್ರಿಗಳ

ಮೊತ್ತ ರೂ. 97,188–00 ಗಳನ್ನು ಅಂದರೆ ಒಟ್ಟು ಮೊತ್ತ ರೂ. 5,60,680–00 ಗಳನ್ನು 1993–94ನೇ ಸಾಲಿನಿಂದ ಅನ್ವಯವಾಗುವಂತೆ ಶೇಕಡಾ 8ರ ಬಡ್ಡಿಯೊಂದಿಗೆ ವಸೂಲಿ ಮಾಡಲು ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರನ್ವಯ ನಿವೃತ್ತರಾದ ಸದರಿ ಆರೋಪಿತ ನೌಕರರ ನಿವೃತ್ತಿ ವೇತನದಲ್ಲಿ ಶೇಕಡಾ 5ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಶ್ರೀ ಎಸ್.ಕೆ. ಮಹಾಲಿಂಗಪೂರ ಇವರಿಂದ ಮೇಲಿನಂತೆ ವಸೂಲಿ ಮಾಡಬೇಕಾಗಿರುವ ಮೊತ್ತವನ್ನು ಲೆಕ್ಕಾಚಾರ ಮಾಡಿ, ಸದರಿ ಮೊತ್ತವನ್ನು ಅವರಿಗೆ ಲಭ್ಯವಾಗುವ ನಿವೃತ್ತಿ ಸೌಲಭ್ಯಗಳಿಂದ ಹೊಂದಾಣಿಕೆ ಮಾಡಿಕೊಳ್ಳುವಂತೆ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ತಿಳಿಸಿದೆ.

ಹೊಂದಾಣಿಕೆಯ ನಂತರವೂ ಉಳಿಯುವ ಮೊತ್ತವನ್ನು ಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರಿಗೆ ಸೂಚಿಸಿದೆ.

ಶ್ರೀ ಆರ್.ಎಸ್. ನಂದಿಕೂರ, ಹಿಂದಿನ ಆಡಳಿತಾಧಿಕಾರಿ, ಮಂಡಲ ಪಂಚಾಯತಿ, ಮುಳಸಾವಳಗಿ, ಪ್ರಸ್ತುತ ಸಿ.ಡಿ.ಪಿ.ಓ. ಮಾನ್ವಿ, ರಾಯಚೂರು ಜಿಲ್ಲೆ, ಇವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (iii) ರಡಿ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ವೈ. ಸಾಗರ

ಪಿ.ಆರ್. 1661 ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಿಷಯ: ಶ್ರೀ ಹೆಚ್.ಎನ್. ಶ್ರೀನಿವಾಸ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಶ್ರೀ ಬಸವರಾಜಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮತ್ತು ಶ್ರೀ ಡಿ. ಕೃಷ್ಣಶೆಟ್ಟಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಇವರುಗಳು ಎಸಗಿದ ಅಕ್ರಮಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

ಓದಲಾಗಿದೆ: ಉಪ ನಿಬಂಧಕರು, (ವಿಚಾರಣೆ–2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂ. D.O.No.COMPT/UPLOK/BD-311/2008/DRE-2, ದಿ: 23.3.2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಉಪ ನಿಬಂಧಕರು, (ವಿಚಾರಣೆ–2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಶ್ರೀ ಹೆಚ್.ಎನ್. ಶ್ರೀನಿವಾಸ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ; ಶ್ರೀ ಬಸವರಾಜಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಮತ್ತು ಶ್ರೀ ಡಿ. ಕೃಷ್ಣಶೆಟ್ಟಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ ಇವರುಗಳ ವಿರುದ್ಧ ರಾಮನಗರ ತಾಲ್ಲೂಕು, ಮಾದಾಪುರ ಗ್ರಾಮದಲ್ಲಿ ಅಭಯ ಸೇವಾಶ್ರಮಕ್ಕೆ ರಸ್ತೆ ನಿರ್ಮಿಸುವಲ್ಲಿ ಎಸಗಿದ ಅಕ್ರಮ ಹಾಗೂ ಹಣ ದುರುಪಯೋಗಗಳ ಬಗ್ಗೆ ಶ್ರೀ ಕೆ. ರಾಮರಾಜು ಎಂಬುವರು ದೂರು ಸಲ್ಲಿಸಿದ್ದ ಮೇರೆಗೆ ಕೈಗೊಂಡ ತನಿಖೆ ವರದಿಯನ್ನು ಹಾಗೂ ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರಡಿ ನೀಡಿರುವ ವರದಿಯನ್ನು ಕಳುಹಿಸುತ್ತಾ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಸೆಕ್ಷನ್ 12(3) ರಡಿ ಕಳುಹಿಸಿರುವ ತಮ್ಮ ವರದಿಯಲ್ಲಿ ಶ್ರೀ ಹೆಚ್.ಎನ್. ಶ್ರೀನಿವಾಸ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ, ಶ್ರೀ ಬಸವರಾಜಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಮತ್ತು ಶ್ರೀ ಡಿ. ಕೃಷ್ಣಶೆಟ್ಟಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಇವರುಗಳ ವಿರುದ್ಧದ ಆರೋಪಗಳು ತನಿಖೆಯಲ್ಲಿ ನಿಜವೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿ ಆರೋಪಿಗಳ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14 (ಎ) ರಡಿಯಲ್ಲಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತಕ್ಕೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ, (1) ಶ್ರೀ ಹೆಚ್.ಎನ್. ಶ್ರೀನಿವಾಸ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ, (2) ಶ್ರೀ ಬಸವರಾಜಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಮತ್ತು (3) ಶ್ರೀ ಡಿ. ಕೃಷ್ಣಶೆಟ್ಟಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಇವರುಗಳ ವಿರುದ್ಧದ ಆರೋಪಗಳು ಲೋಕಾಯುಕ್ತರ ತನಿಖೆಯಲ್ಲಿ ನಿಜವೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಪ್ರಕರಣದಲ್ಲಿನ ಆರೋಪಿಗಳ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಅದಕ್ಕಾಗಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14 (ಎ) ರಡಿಯಲ್ಲಿ ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತಕ್ಕೆ ವಹಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಕೆಳಕಂಡ ಆದೇಶ.

ಆದೇಶ ಸಂಖ್ಯೆ ಗ್ರಾಅಪ 3 ಇಎನ್‌ಕ್ಯೂ 09 ಬೆಂಗಳೂರು, ದಿನಾಂಕ: 12ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಎನ್. ಶ್ರೀನಿವಾಸ, ಅಂದಿನ ಕಾರ್ಯಪಾಲಕ ಇಂಜಿನಿಯರ್, (ಪ್ರಸ್ತುತ ಅಧೀಕ್ಷಕ ಇಂಜಿನಿಯರ್, ಹೇಮಾವತಿ ಯೋಜನಾ ವೃತ್ತ) ಶ್ರೀ ಬಸವರಾಜಯ್ಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, (ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ) ಮತ್ತು ಶ್ರೀ ಡಿ. ಕೃಷ್ಣಶೆಟ್ಟಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ರಾಮನಗರ, ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ರೀತ್ಯಾ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಾವಳಿಗಳ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ವೈ. ಸಾಗರ

ಪಿ.ಆರ್. 1662

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ತೋಟಗಾರಿಕೆ ಸಚಿವಾಲಯ

ವಿಷಯ: ಬಿ.ಎಸ್ಸಿ. (ತೋಟಗಾರಿಕೆ) ಸ್ನಾತಕ ಪದವಿ ಕಾರ್ಯಕ್ರಮಕ್ಕೆ ಕೃಷಿಕರ/ಕೃಷಿಕರ ಮಕ್ಕಳ ಕೋಟಾದಡಿಯಲ್ಲಿ ಪ್ರವೇಶ ನೀಡಲು ಆಯ್ಕೆ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ: ಕುಲಸಚಿವರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆರವರ ಪತ್ರ ಸಂಖ್ಯೆ ತೋವಿವಿಬಾ/ವಿಅ/430/2009–10, ದಿನಾಂಕ 16–5–2009.

ಪ್ರಸ್ತಾವನೆ:

ಮೇಲೆ ಓದಲಾದ ಕುಲಸಚಿವರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆರವರ ಪ್ರಸ್ತಾವನೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆಯು 2008ನೇ ಸಾಲಿನಿಂದ ಕಾರ್ಯಚಟುವಟಿಕೆ ಪ್ರಾರಂಭವಾಗಿದ್ದು, 2009–10ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಬಿ.ಎಸ್ಸಿ. (ತೋಟಗಾರಿಕೆ) ಸ್ನಾತಕ ಪದವಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಒಟ್ಟು ಪ್ರವೇಶ ಸಂಖ್ಯೆಯ ಶೇ.23.8% ರಷ್ಟು ಸೀಟುಗಳನ್ನು ಕೃಷಿಕರು/ಕೃಷಿಕರ ಮಕ್ಕಳಿಗೆ ಮೀಸಲಿಟ್ಟಿರುವುದರಿಂದ ಪ್ರವೇಶ ಖೋಟಾವನ್ನು ಭರ್ತಿ ಮಾಡಲು ರಾಜ್ಯದ ವಿಶ್ವವಿದ್ಯಾಲಯಗಳಲ್ಲಿರುವಂತೆ ಈ ವಿಶ್ವವಿದ್ಯಾಲಯಕ್ಕೂ ಸಹ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಆಯ್ಕೆ ಸಮಿತಿ ರಚಿಸಲು ಕೋರಿರುತ್ತಾರೆ.

ಕ್ರ. ಸಂ.	ಸಮಿತಿ ಸದಸ್ಯರು	ಪದನಾಮ
1	ಡೀನ್ (ತೋಟಗಾರಿಕೆ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ	ಅಧ್ಯಕ್ಷರು
2	ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬಾಗಲಕೋಟೆ	ಸದಸ್ಯರು
3	ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು	ಸದಸ್ಯರು

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 187 ತೋಇವಿ 2009, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಗಳ ಹಿನ್ನೆಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ ಇಲ್ಲಿ ಬಿ.ಎಸ್ಸಿ. (ತೋಟಗಾರಿಕೆ) ಸ್ನಾತಕ ಪದವಿಗೆ ಒಟ್ಟು ಪ್ರವೇಶ ಸಂಖ್ಯೆಯ ಶೇ 23.8% ರಷ್ಟು ಸೀಟುಗಳನ್ನು ಕೃಷಿಕರು/ಕೃಷಿಕರ ಮಕ್ಕಳಿಗೆ ಮೀಸಲಿಡುವ ಬಗ್ಗೆ ಈ ಕೆಳಕಂಡಂತೆ ಆಯ್ಕೆ ಸಮಿತಿ ರಚಿಸಿ ಆದೇಶಿಸಲಾಗಿದೆ.

ಕ್ರ ಸಂ.	ಸಮಿತಿ ಸದಸ್ಯರು	ಪದನಾಮ
1	ಡೀನ್ (ತೋಟಗಾರಿಕೆ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ	ಅಧ್ಯಕ್ಷರು
2	ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬಾಗಲಕೋಟೆ	ಸದಸ್ಯರು
3	ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1664 **ಎಸ್. ರಾಜು**

ಸರ್ಕಾರದ ಅಧೀನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಮೂಅಇ 61 ಮೂಇವಿ 2008, ದಿನಾಂಕ: 22ನೇ ಜೂನ್ 2009

ವಿಷಯ: ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಶೇಷ ಕಾರ್ಯದರ್ಶಿಯವರಿಗೆ ನ್ಯೂ ಕಾರ್ ಮೊಬೈಲ್ ಇವರಿಂದ ಖಾಸಗಿ ವಾಹನ ಪಡೆದು ಅದನ್ನು ಕಛೇರಿ ಕೆಲಸಕ್ಕಾಗಿ ಉಪಯೋಗಿಸಿದ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ : ಮೂಅಇ 61 ಮೂಇವಿ 2008, ದಿನಾಂಕ: 5/6/2009

ಉಲ್ಲೇಖಿತ ಸರ್ಕಾರಿ ಆದೇಶದ ಕಂಡಿಕೆ 2ನ್ನು ಈ ಕೆಳಗಿನಂತೆ ಮಾರ್ಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

"ಈ ಮೊತ್ತವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2052–ಸಚಿವಾಲಯ ಸಾಮಾನ್ಯ ಸೇವೆಗಳು–090–ಸಚಿವಾಲಯ–01–ಕಸಸ–051"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1665 **ಎನ್. ಮಂಜುಳಗೀತ**

ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಉನ್ನತ ಶಿಕ್ಷಣ ಸಚಿವಾಲಯ

ಆದೇಶ

ಸಂಖ್ಯೆ: ಇಡಿ 193 ಯೋಯೋಕ 2008, ಬೆಂಗಳೂರು, ದಿನಾಂಕ: 25ನೇ ಜೂನ್ 2009

ವಿಷಯ: ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣ ಇಲಾಖೆಯಡಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಹೊರಡಿಸಿದ ಆದೇಶಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ : ಇಡಿ 144 ಯೋಯೋಕ 2007 ದಿನಾಂಕ 27–04–2007
(ಇಡಿ 66 ಸ್ವೀಮರ (ಯುನಿಕ್) 2007, ದಿನಾಂಕ 27–04–2007
2) ಇಡಿ 193 ಯೋಯೋಕ 2008 ದಿನಾಂಕ : 1806–2009 ರ ತಿದ್ದುಪಡಿ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 144 ಯೋಯೋಕ 2007 ದಿನಾಂಕ 27–04–2007ರ ಪುಟ 9ರ ಕ್ರಮ ಸಂಖ್ಯೆ 50ಕ್ಕೆ 2009–10ನೇ ಸಾಲಿನಿಂದ ಜಾರಿಗೆ ಬರುವಂತೆ ಬ್ಯಾಡಗಿ, ಹಾವೇರಿ ಜಿಲ್ಲೆ, ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ಚಿಕ್ಕಬಾಸೂರು ಗ್ರಾಮಕ್ಕೆ ಸ್ಥಳಾಂತರಿಸಿ ಹೊರಡಿಸಲಾದ ಸಮ ಸಂಖ್ಯೆಯ ದಿನಾಂಕ:18.06.2009ರ ತಿದ್ದುಪಡಿ ಆದೇಶವನ್ನು ಈ ಮೂಲಕ ರದ್ದುಪಡಿಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಬ್ಯಾಡಗಿ, ಹಾವೇರಿ ಜಿಲ್ಲೆ, ಇಲ್ಲಿಯೇ ಮುಂದುವರಿಸಲಾಗಿದೆ. ಹಾಗೂ ಚಿಕ್ಕಬಾಸೂರು, ಬ್ಯಾಡಗಿ ತಾಲ್ಲೂಕು, ಇಲ್ಲಿ ಪ್ರಸಕ್ತ ಸಾಲಿಗೆ ಬಿ.ಎ., ಬಿ.ಕಾಂ. ಬಿ.ಎಸ್.ಸಿ. ಕೋರ್ಸುಗಳನ್ನು ಪ್ರಾರಂಭಿಸಲು ಸಹ ಸರ್ಕಾರ ಅನುಮತಿ ನೀಡಿದೆ. ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1666 **ಎಸ್.ಎಂ. ನಂದಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಶಿಕ್ಷಣ ಸಚಿವಾಲಯ

ಕಛೇರಿ ಆದೇಶ

ವಿಷಯ: ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢ ವಿಭಾಗದಲ್ಲಿ ವಿಚಕ್ಷಣಾ ಕೋಶವನ್ನು (Vigilance Cell) ರಚಿಸುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಎರಡನೇ ಚಾಪ್ಟರ್‌ನ ಕಲಂ 8 (4) ರ ಅಡಿಯಲ್ಲಿ ಹಾಗೂ ಹತ್ತನೇ ಚಾಪ್ಟರ್‌ನ ಕಲಂ 57 (1) ರಡಿಯಲ್ಲಿ ವಿಚಕ್ಷಣಾ ಕೋಶವನ್ನು ರಚಿಸಲು ಅಧಿಕಾರ ಪ್ರದತ್ತವಾಗಿದೆ. ಆದರೆ ಇದುವರೆವಿಗೂ ಸರ್ಕಾರದ ಮಟ್ಟದಲ್ಲಿ ಈ ರೀತಿಯ ವಿಚಕ್ಷಣಾ ಕೋಶವನ್ನು ರಚಿಸಿರುವುದಿಲ್ಲ. ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢ ವಿಭಾಗದಲ್ಲಿ ಶಾಲೆಗಳು, ಪದವಿ ಪೂರ್ವ ಕಾಲೇಜುಗಳು ಮತ್ತು ಅಧೀನ ಇಲಾಖೆಗಳಿಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ದೂರುಗಳು ಸ್ವೀಕೃತವಾಗುತ್ತಿದ್ದು, ಇವುಗಳ ಪರಿಶೀಲನೆಗಾಗಿ ಕೆಲವು ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ವಿಚಕ್ಷಣಾ ಕೋಶವನ್ನು ರಚಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ಆದೇಶ.

ಆದೇಶ ಸಂಖ್ಯೆ: ಇಡಿ 86 ಡಿಜಿಎಂ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢ ವಿಭಾಗದಲ್ಲಿ ಸ್ವೀಕೃತವಾಗುವ ದೂರುಗಳ ಪರಿಶೀಲನೆಗಾಗಿ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳನ್ನು ಒಳಗೊಂಡ, ರಾಜ್ಯ ವ್ಯಾಪ್ತಿಯನ್ನು ಉಳ್ಳ, ವಿಚಕ್ಷಣಾ ಕೋಶವನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಲಾಗಿದೆ.

1. ಶ್ರೀ ಬಿ. ರಾಜಣ್ಣ – ನಾಯಕರು
   ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)
2. ಶ್ರೀ ಎಂ.ಎನ್. ಸೋಮಶೇಖರ್ – ಉಪ ನಾಯಕರು
   ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)
3. ಶ್ರೀಮತಿ ಜ್ಯೋತಿ ಆರ್.ಜೆ., ಶಾಖಾಧಿಕಾರಿ – ಸದಸ್ಯರು
4. ಶ್ರೀ ಶ್ರೀಪಾದು, ಶಾಖಾಧಿಕಾರಿ – ಸದಸ್ಯರು
5. ಶ್ರೀಮತಿ ಮುದ್ದುರತ್ನ, ಹಿರಿಯ ಸಹಾಯಕರು – ಸದಸ್ಯರು
6. ಶ್ರೀ ಬಾಣದ ರಂಗಯ್ಯ, ಸಹಾಯಕರು – ಸದಸ್ಯರು

ವಿಚಕ್ಷಣಾ ಕೋಶವು ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು

- ಪ್ರಧಾನ ಕಾರ್ಯದರ್ಶಿ ಇವರಿಗೆ ಮಾತ್ರ ವರದಿ ಮಾಡುವುದು.
- ಪ್ರಧಾನ ಕಾರ್ಯದರ್ಶಿಯವರ ಪೂರ್ವಾನುಮತಿಯನ್ನು ಪಡದುಕೊಂಡೇ ತಪಾಸಣೆ/ವಿಚಾರಣೆ ನಡೆಸುವುದು.
- ಉಪ ಕಾರ್ಯದರ್ಶಿ ಅಥವಾ ಅಧೀನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಮಾತ್ರ ತಪಾಸಣೆ/ವಿಚಾರಣೆ ನಡೆಸುವುದು.
- ತಪಾಸಣೆ/ವಿಚಾರಣೆ ನಡೆಸಿದ ಇಪ್ಪತ್ನಾಲ್ಕು ಗಂಟೆಗಳ ಒಳಗೆ ವರದಿಯನ್ನು ಪ್ರಧಾನ ಕಾರ್ಯದರ್ಶಿಯವರಿಗೆ ನೀಡುವುದು.
- ಸಂಗ್ರಹಿಸಿದ ಮಾಹಿತಿಯನ್ನು ಪ್ರಧಾನ ಕಾರ್ಯದರ್ಶಿಯವರ ಪೂರ್ವಾನುಮತಿ ಇಲ್ಲದೆ ಯಾವುದೇ ಪ್ರಾಧಿಕಾರಕ್ಕೆ ನೀಡುವಂತಿಲ್ಲ.
- ಯಾವುದೇ ಸಂದರ್ಭದಲ್ಲಿ ಮೂವರು ಸದಸ್ಯರಿಗಿಂತ ಕಡಿಮೆ ಸದಸ್ಯರು ತಪಾಸಣೆ/ವಿಚಾರಣೆಗೆ ಹೋಗುವಂತಿಲ್ಲ.
- ತಪಾಸಣೆ/ವಿಚಾರಣೆ ನಡೆಸುವ ಸಂದರ್ಭದಲ್ಲಿ ಒಬ್ಬ ಮಹಿಳಾ ಸದಸ್ಯರು ಕಡ್ಡಾಯವಾಗಿ ಇರಬೇಕು.
- ನಾಯಕರು/ಉಪ ನಾಯಕರು ಹಾಗೂ ಎಲ್ಲಾ ಸದಸ್ಯರು ತಮಗೆ ವಹಿಸಿದ ಕಾರ್ಯನಿರ್ವಹಣೆಯ ಬಗ್ಗೆ ಹಾಗೂ ಕಾರ್ಯ ನಿರ್ವಹಿಸಿದ ಬಗ್ಗೆ ರಹಸ್ಯ ಹಾಗೂ ಗೋಪ್ಯತೆಯನ್ನು ಪೂರ್ಣ ಪ್ರಮಾಣದಲ್ಲಿ ಕಾಪಾಡತಕ್ಕದ್ದು.

ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)
ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಪಿ.ಆರ್. 1667

ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲೆ ಉಪನ್ಯಾಸಕರ ಸೇವೆಯನ್ನು ಪಡೆಯುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ಇಡಿ 88 ಟಿಪಿಯು 2008 ದಿನಾಂಕ : 13/8/2008

2) ಆಯುಕ್ತರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆ ದಿನಾಂಕ : 25/8/2008

3) ಸರ್ಕಾರದ ಆದೇಶ ಸಂಖ್ಯೆ ಇಡಿ 152 ಟಿಪಿಯು 2008 ದಿನಾಂಕ : 14/10/2008

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 13/8/2008ರ ಸರ್ಕಾರದ ಆದೇಶದಲ್ಲಿ ಪದವಿ ಪೂರ್ವ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 4056 ಉಪನ್ಯಾಸಕರ ಹುದ್ದೆಗಳಿಗೆ ಆಯಾ ಆಯಾ ವಿಷಯದಲ್ಲಿನ ನಿವೃತ್ತ ಉಪನ್ಯಾಸಕರ ಸೇವೆಯನ್ನು ಮಾಸಿಕ ರೂ. 5,000/– ಗೌರವ ಸಂಭಾವನೆ ನೀಡಿ, ಅವರ ಸೇವೆಯನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಬಳಸಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 25/8/2008ರ ಪ್ರಸ್ತಾವನೆಯಲ್ಲಿ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಪ್ರಸ್ತುತ ರಾಜ್ಯದಲ್ಲಿ ಖಾಲಿ ಇರುವ ಸುಮಾರು 4056 ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿವಿಧ ವಿಷಯುಗಳ ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತದೆ. ಇಷ್ಟೊಂದು ಸಂಖ್ಯೆಯಲ್ಲಿ ನಿವೃತ್ತ ಉಪನ್ಯಾಸಕರು ಲಭ್ಯವಾಗದ ಹಿನ್ನೆಲೆಯಲ್ಲಿ ಆಯಾಯ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ಅವರ ಸೇವೆಯನ್ನು ಸಕ್ರಮವಾಗಿ ನಿಯಮಾನುಸಾರ ಖಾಲಿ ಉಪನ್ಯಾಸಕರುಗಳ ಹುದ್ದೆಯನ್ನು ಭರ್ತಿ ಮಾಡುವವರೆಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ಕೋರಿದ್ದರು. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ದಿನಾಂಕ:14/10/2008ರ ಆದೇಶದಲ್ಲಿ ಗೌರವಧನದ ಆಧಾರದ ಮೇಲೆ ಆಯಾಯ ವಿಷಯಗಳಲ್ಲಿ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಮಂಜೂರಾತಿ ನೀಡಿದೆ.

ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯು ಸಂಪೂರ್ಣವಾಗಿ ಆಗಿಲ್ಲದೇ ಇರುವುದರಿಂದ 2009–10ನೇ ಶೈಕ್ಷಣಿಕ ಸಾಲಿನಲ್ಲಿಯೂ ಸಹ ದಿನಾಂಕ:14/10/2008ರ ಸರ್ಕಾರದ ಆದೇಶ ಸಂಖ್ಯೆ ಇಡಿ 152 ಟಿಪಿಯು 2008 ರಲ್ಲಿನ ನಿಬಂಧನೆ/ಷರತ್ತುಗಳಂತೆ, 2009–10ನೇ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅಥವಾ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಮಾಡಿ ಹುದ್ದೆಗಳನ್ನು ಭರ್ತಿ ಮಾಡುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಮಾಸಿಕ ಗೌರವಧನದ ಮೇಲೆ ಅತಿಥಿ ಉಪನ್ಯಾಸಕರನ್ನು ಆಯಾಯ ಕಾಲೇಜಿನ ಪ್ರಾಂಶುಪಾಲರು ಹಾಗೂ ಹಿರಿಯ ಉಪನ್ಯಾಸಕರು ಇರುವ ಸಮಿತಿಗೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಅಧಿಕಾರವನ್ನು ನೀಡಲು ಸಚಿವ ಸಂಪುಟದ ಅನುಮೋದನೆ ನೀಡಿದೆ. ಆದ್ದರಿಂದ 2009–10ನೇ ಶೈಕ್ಷಣಿಕ ಸಾಲಿನಲ್ಲಿ ಗೌರವಧನದ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ. ಇಡಿ 88 ಟಿಪಿಯು 2009, ಬೆಂಗಳೂರು, ದಿನಾಂಕ: 16ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸ್ತುತ ನೇಮಕಾತಿಯಿಂದ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಕೊರತೆಯನ್ನು ನಿವಾರಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಆಯಾಯ ವಿಷಯಗಳಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಂದ ಅವರ ಕಾರ್ಯಭಾರಕ್ಕನುಗುಣವಾಗಿ ವಾರದಲ್ಲಿ ನಾಲ್ಕು ಘಂಟೆಗಳಂತೆ ತಿಂಗಳಲ್ಲಿ 16 ಘಂಟೆಗಳಿಗೆ, ತಿಂಗಳಿಗೆ ಗರಿಷ್ಠ ರೂ. 2400/– (ಎರಡು ಸಾವಿರದ ನಾಲ್ಕು ನೂರು) ಹಾಗೂ ವಾರದಲ್ಲಿ 8 ಘಂಟೆಗಳಂತೆ ತಿಂಗಳಿಗೆ 32 ಘಂಟೆಗಳಿಗೆ, ತಿಂಗಳಿಗೆ ಗರಿಷ್ಠ ರೂ. 4,800/– ಗಳಿಗೆ (ನಾಲ್ಕು ಸಾವಿರದ ಎಂಟು ನೂರು) ಮೀರದಂತೆ ಗೌರವಧನವನ್ನು ನೀಡಿ ಉಪನ್ಯಾಸಕರ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗಿ ಅವರ ಸೇವೆಯನ್ನು ಪಡೆಯಲು ಸರ್ಕಾರದ ಮಂಜೂರಾತಿ ನೀಡಿದೆ.

ಷರತ್ತುಗಳು

1) ಆಯಾಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಪದವೀಧರರ ಸೇವೆಯನ್ನು ಆಯಾಯ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ತಾತ್ಕಾಲಿಕವಾಗಿ ನಿಗದಿತ ಅವಧಿಗೆ ಮಾತ್ರ ಮಾಸಿಕ ಗೌರವಧನ ಪಾವತಿಯ ಮೇಲೆ ನೇಮಕಾತಿ ಮಾಡಿಕೊಳ್ಳತಕ್ಕದ್ದು.

2) ಮಂಜೂರಾದ ಹಾಗೂ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳಿಗೆ ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ಉಪಯೋಗಿಸಿಕೊಳ್ಳತಕ್ಕದ್ದು.

3) ಪ್ರತಿ ಅತಿಥಿ ಉಪನ್ಯಾಸಕರಿಗೆ ವಾರದಲ್ಲಿ ಗರಿಷ್ಠ 08 ಗಂಟೆಗಳ ಕಾರ್ಯಭಾರ ಮಾತ್ರ ನಿರ್ವಹಿಸಲು ಅನುಮತಿ ನೀಡತಕ್ಕದ್ದು.

4) ಈ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂ ಉಪನ್ಯಾಸಕರ ನೇಮಕಾತಿ ಆಗುವವರೆವಿಗೆ ಅಥವಾ 2009–10ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳತಕ್ಕದ್ದು.

5) ಸರ್ಕಾರದ ನಿಯಮಗಳನ್ವಯ ಈ ಅವಧಿಯಲ್ಲಿ ಖಾಯಂ ಉಪನ್ಯಾಸಕರು ನೇಮಕಾತಿ ಹೊಂದಿ ಕರ್ತವ್ಯಕ್ಕೆ ಹಾಜರಾದ ತಕ್ಷಣದಿಂದ ಅತಿಥಿ ಉಪನ್ಯಾಸಕರ ಕಾರ್ಯನಿರ್ವಹಣೆಯು ತಂತಾನೆ ರದ್ದಾಗುತ್ತದೆ.

6) ಉಪನ್ಯಾಸಕರೇ ಇಲ್ಲದಿರುವ ಸ್ಥಳದಲ್ಲಿ ಹಾಗೂ ನಿಯೋಜನೆಯಂತಹ ಬದಲಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದಿರುವ ಸ್ಥಳದಲ್ಲಿ ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳತಕ್ಕದ್ದು.

7) ಆಯಾಯ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಲು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಮುಂದೆ ಬಂದಲ್ಲಿ ಅಂತಹವರ ಪೈಕಿ ಆಯಾಯ ವಿಷಯದಲ್ಲಿನ ಸ್ನಾತಕೋತ್ತರ ಪದವಿಯಲ್ಲಿ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಯ ಸೇವೆಯನ್ನು ಆಯಾಯ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಯಾಯ ಕಾಲೇಜಿನ ಹಿರಿಯ ಉಪನ್ಯಾಸಕರು ಇರುವ ಸಮಿತಿಯ ಮೂಲಕ ಆಯ್ಕೆ ಮಾಡಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯತಕ್ಕದ್ದು.

8) ಪ್ರತಿ ಅತಿಥಿ ಉಪನ್ಯಾಸಕರಿಗೆ ಒಂದು ಗಂಟೆಯ ಬೋಧನಾ ಅವಧಿಗೆ ರೂ. 150–00 ರಂತೆ (ರೂ. ಒಂದು ನೂರ ಐವತ್ತು ಮಾತ್ರ) ಗೌರವ ಧನ ನೀಡಬಹುದು. ವಾರದಲ್ಲಿ ಗರಿಷ್ಠ 08 ಗಂಟೆಗಳ ಕಾರ್ಯಭಾರವನ್ನು ಮಾತ್ರ ಅತಿಥಿ ಉಪನ್ಯಾಸಕರಿಗೆ ವಹಿಸತಕ್ಕದ್ದು. ವಾರದಲ್ಲಿ 04 ಗಂಟೆಗಳಂತೆ ತಿಂಗಳಲ್ಲಿ 16 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಗರಿಷ್ಠ ರೂ. 2400–00 ಗಳನ್ನು ಹಾಗೂ ವಾರದಲ್ಲಿ 08 ಗಂಟೆಗಳಂತೆ ತಿಂಗಳಲ್ಲಿ 32 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಗರಿಷ್ಠ ರೂ. 4800–00 ಗಳಿಗೆ ಮೀರದಂತೆ ಗೌರವಧನವನ್ನು ನಿಗದಿಪಡಿಸತಕ್ಕದ್ದು. ಈ ಗೌರವಧನದ ಮೊತ್ತವನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ನಿಗಧಿಪಡಿಸಿದ ಲೆಕ್ಕ ಶೀರ್ಷಿಕೆಯಿಂದ ಪಡೆದು ನಿಯಮಾನುಸಾರ ವಿತರಿಸತಕ್ಕದ್ದು.

9) ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳುವಾಗ ಅವರಿಗೆ ಸಕ್ಷಮ ಪ್ರಾಧಿಕಾರದ ಆದೇಶವಿಲ್ಲದೆ ಯಾವುದೇ ಆದೇಶವನ್ನು ನೀಡಬಾರದು. ಗೌರವಧನ ವಿತರಣೆಗೆ ಸೂಕ್ತ ಸ್ವೀಕೃತಿಯನ್ನು ಪಡೆಯತಕ್ಕದ್ದು.

10) ಈ ರೀತಿ ಆಯ್ಕೆ ಆಗುವ ಅತಿಥಿ ಉಪನ್ಯಾಸಕರು ಅತಿಥಿ ಉಪನ್ಯಾಸಕರಾಗಿ ಸಲ್ಲಿಸುವ ಸೇವೆಯು ಇತರೆ ಯಾವುದೇ ಸರ್ಕಾರಿ ಸೇವಾ ಸಕ್ರಮಾತಿಗೆ ಪರಿಗಣಿಸತಕ್ಕದ್ದಲ್ಲ.

ಈ ಗೌರವಧನವನ್ನು ವೇತನ ಲೆಕ್ಕ ಶೀರ್ಷಿಕೆ "2202–02–109–0–13 (ಯೋಜನೇತರ)" ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ 20/5/2009ರ ಅನಧಿಕೃತ ಟಿಪ್ಪಣಿ ಸಂಖ್ಯೆ 792 ವೆಚ್ಚ.8/09 ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಸೇವಾ ನಿಯಮ) ಶಾಖೆಯ ದಿನಾಂಕ 11/5/2009ರ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿ.ಆ.ಸು.ಇ 190 ಸೇನಿಎ 2009 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1669

ಎಸ್.ಹೆಚ್. ಕುರಿಯವರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಸೇವೆಗಳು–1,2)

ಸಹಕಾರ ಸಚಿವಾಲಯ

ವಿಷಯ: ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು, ಇದರ 2006–07ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಕಾಶ ನೀಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ ಸಿಒ 74 ಸಿಎಲ್ಎಂ 2008, ದಿನಾಂಕ 6.6.2008
2) ಕಾರ್ಯದರ್ಶಿ, ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು, ಇವರ ಪತ್ರ ಸಂಖ್ಯೆ ಮೈಜಿಅ–1/2008–09, ದಿನಾಂಕ 03.03.2009.
3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರ ಆದೇಶ ಸಂಖ್ಯೆ ಜೆಆರ್ಎಂ.ಆಡಳಿತ. ಎಸ್6 ಎಕ್ಸ್‌ಜಿಎಂ.209.2008–09, ದಿನಾಂಕ 21.2.2009
4) ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರ ಪತ್ರ ಸಂಖ್ಯೆ: ಜೆಆರ್ಎ/ಆಡಳಿತ/ ಎಸ್–6/ಹೆಚ್‌ಹೆಚ್ಎಸ್/4/2009–10 ದಿನಾಂಕ: 13/4/2009

ಪ್ರಸ್ತಾವನೆ:

ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ಇದರ 2006–07ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 30–09–2008 ರವರೆಗೆ ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಕಾಲಾವಕಾಶ ನೀಡಲಾಗಿರುತ್ತದೆ. ಸಂಘದ ಕಾರ್ಯದರ್ಶಿಯವರು ಮೇಲೆ ಓದಲಾದ (2)ರ ಪತ್ರದಲ್ಲಿ ಮೈಸೂರು ಜಿಲ್ಲೆಯಲ್ಲಿ ಹಲವಾರು ಆನೆಗಳ ಸಾವಿನ ಪ್ರಕರಣಗಳು ಮತ್ತು ಆನೆಗಳು ಕಾಡಿನಿಂದ ಹಳ್ಳಿಗಳಿಗೆ ನುಗ್ಗಿ ಬೆಳೆ ನಾಶಪಡಿಸುವುದು ಸತತವಾಗಿ ನಡೆಯುತ್ತಿದ್ದು, ಸಂಘದ ಸದಸ್ಯರಾದ ಅರಣ್ಯ ಇಲಾಖಾ ಸಿಬ್ಬಂದಿಗಳು ಮುಂಜಾಗ್ರತಾ ಕ್ರಮಗಳಲ್ಲಿ ನಿರತರಾಗಿರುವ ಹಿನ್ನೆಲೆಯಲ್ಲಿ 2006–07 ಮತ್ತು 2007–08ನೇ ಸಾಲುಗಳ ವಾರ್ಷಿಕ ಮಹಾಸಭೆಗಳನ್ನು ನಡೆಸಲು ಮಾರ್ಚ್ 2009ರ ವರೆಗೆ ಕಾಲಾವಕಾಶ ಕೋರಲಾಗಿತ್ತೆಂದೂ ಮೇಲೆ ಓದಲಾದ (3) ರ ಆದೇಶದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಇವರು 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:29.03.2009 ರಂದು ನಡೆಸಲು ಅನುಮತಿ ನೀಡಿರುತ್ತಾರೆಂದೂ ತಿಳಿಸಿ 2006–07ನೇ ಸಾಲಿನ ಮಹಾಸಭೆಯನ್ನು ದಿನಾಂಕ 29.03.2009 ರಂದು ನಡೆಸಲು ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಓ 180 ಸಿಎಲ್‌ಎಂ 2009, ಬೆಂಗಳೂರು, ದಿನಾಂಕ: 16ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ಇದರ 2006–07ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 31.03.2009 ವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27 ಸದರಿ ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ:

27ರ ಪ್ರಕರಣದಲ್ಲಿ :

27ನೇ ಪ್ರಕರಣ ಉಪ ಪ್ರಕರಣ (1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: ಪ್ರಕರಣ 27(!) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 31.03.2009 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1) ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 1679

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ರಾಮನಗರ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ. ನಂ. 36–37ರ ಬದಲಿಗೆ ರಸ್ತೆ ಕೆಳಸೇತುವೆಗೆ ಕೂಡು ರಸ್ತೆಯ ನಿರ್ಮಿಸಲು ಕಾಮಗಾರಿಗೆ ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ : ಮೂಅಇ 56 ರಾರಾಹೆ 2007, ದಿನಾಂಕ : 22.12.2008
2) ದಿನಾಂಕ 31–1–2009 ಸಂಖ್ಯೆ ಕಾಅ/ಲೋಇ/ರಾಮನಗರ/ಲೆಶಾ/ಲೆಸ–2/2008–09ರ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ರಾಮನಗರ ವಿಭಾಗ, ರಾಮನಗರರವರ ಪತ್ರ
3) ದಿನಾಂಕ 23–6–2009 ಸಂಖ್ಯೆ:ಕಾಅ/ಲೋಇ/ರಾಮನಗರ/ಲೆಶಾ/ಲೆಸ–2/2009–10ರ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ರಾಮನಗರ ವಿಭಾಗ, ರಾಮನಗರರವರ ಪತ್ರ

ಪ್ರಸ್ತಾವನೆ:

ರಾಮನಗರ ರೈಲು ನಿಲ್ದಾಣದ ಬಳಿ ಎಲ್.ಸಿ. ನಂ. 36–37ರ ಬದಲಿಗೆ ರಸ್ತೆ ಕೆಳಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಗೆ ಶೇ 50 ರಷ್ಟು ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 2,86,44,480/- ಗಳನ್ನು ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆಯ ರಾಮನಗರ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರು ಸದರಿ ಕಾಮಗಾರಿಗೆ ಇತ್ತೀಚೆಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿದ್ದು, ಹಾಗೂ ಕಾಮಗಾರಿಯು ಪ್ರಗತಿಯಲ್ಲಿದ್ದು, ಗುತ್ತಿಗೆದಾರರಿಗೆ ರೂ. 75.00 ಲಕ್ಷಗಳನ್ನು ಪಾವತಿಸಬೇಕಾಗಿರುವುದರಿಂದ ಸದ್ಯಕ್ಕೆ ರೂ. 75.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ (2) ರ ಪತ್ರದಲ್ಲಿ ಕೋರಿದ್ದರ ಮೇರೆಗೆ ಅಷ್ಟೇ ಮೊತ್ತಕ್ಕೆ ಪೇಯೀಸ್ ರಸೀದಿಗೆ ಸಹಿ ಮಾಡಲಾಗಿತ್ತು.

ಈ ಕಾಮಗಾರಿಗೆ ಇದುವರೆಗೂ ರೂ. 75.00 ಲಕ್ಷಗಳು ಖರ್ಚಾಗಿದ್ದು, ಉಳಿಕೆ ರೂ. 2,11,44,480/- ಗಳಲ್ಲಿ ಸದ್ಯಕೆ ಗುತ್ತಿಗೆದಾರರಿಗೆ ರೂ. 50.00 ಲಕ್ಷಗಳನ್ನು ಪಾವತಿಸಬೇಕಾಗಿರುವುದರಿಂದ ಮತ್ತು ಕಾಮಗಾರಿಯ ಪ್ರಗತಿಯನ್ನು ಗಮನಿಸಿ ಹಣ ಬಿಡುಗಡೆಗೆ ಬೇಡಿಕೆಯ ಪತ್ರವನ್ನು ಸಲ್ಲಿಸಲಾಗುವುದು ಎಂದು ಮೇಲೆ ಓದಲಾದ (3)ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಮೂಅಇ 43 ರಾರಾಹೆ 2009, ಬೆಂಗಳೂರು, ದಿನಾಂಕ: 3ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಮನಗರ ರೈಲ್ವೇ ನಿಲ್ದಾಣದ ಬಳಿ ಇರುವ ಎಲ್.ಸಿ. ನಂ.36 ಮತ್ತು 37ರ ಬದಲಾಗಿ ನಿರ್ಮಿಸಿರುವ ರಸ್ತೆ ಕೆಳ ಸೇತುವೆಗೆ ಕೂಡು ರಸ್ತೆ ನಿರ್ಮಾಣದ ಈ ಕಾಮಗಾರಿಗೆ ತಗಲುವ ಶೇ 50 ರಷ್ಟು ರಾಜ್ಯ ಸರ್ಕಾರದ ಪಾಲಿನ ಬಾಕಿ ಮೊತ್ತ ರೂ. 2,11,44,480/- ಗಳಲ್ಲಿ ರೂ.50.00 ಲಕ್ಷಗಳನ್ನು (ರೂಪಾಯಿ ಐವತ್ತು ಲಕ್ಷ ಮಾತ್ರ) ಮೊತ್ತವನ್ನು 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಣೆ ಮಾಡಿರುವ ರೂ. 30.00 ಕೋಟಿಗಳಿಂದ ಲೆಕ್ಕ ಶೀರ್ಷಿಕೆ "5465-01-190-3-04 (ಯೋಜನೆ) ಬಂಡವಾಳ" ಇದರ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

2. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ರಾಮನಗರ ವಿಭಾಗ ಇವರು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲು ರುಜುವಿನೊಂದಿಗೆ ಪೇಯೀಸ್ ರಸೀತಿಯ ಮೂಲಕ ಡ್ರಾ ಮಾಡಿ ರಸ್ತೆ ಕೆಳಸೇತುವೆಯ ಕೂಡು ರಸ್ತೆ ನಿರ್ಮಾಣದ ವೆಚ್ಚ ಭರಿಸತಕ್ಕದ್ದು.

3. ಈ ಆದೇಶವನ್ನು ದಿನಾಂಕ:16.5.2008 ಸಂಖ್ಯೆ FD 1TFP 2008 ಸರ್ಕಾರಿ ಆದೇಶದಲ್ಲಿ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1684 **ಕೆ.ಎಸ್. ವೇಣುಗೋಪಾಲ**

ಸರ್ಕಾರದ ಅಧೀನ ಕಾಯದರ್ಶಿ, ಮೂಲಭೂತ ಅಭಿವೃದ್ಧಿ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಮುಜರಾಯಿ ಇಲಾಖೆಗೆ ಸೇರಿದ ಬೆಂಗಳೂರು ನಗರ ಚಾಮರಾಜಪೇಟೆ 3ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಚೌಬೀನ್ ಸುಬ್ಬರಾವ್ ಚಾರಿಟೀಸ್ ಸ್ವತ್ತಿನ ಖಾತೆ ಬದಲಾವಣೆಯಲ್ಲಿ ಭಾಗಿಯಾಗಿರುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸಿ.ಒ.ಡಿ. ತನಿಖೆ ನಡೆಸುವ ಬಗ್ಗೆ.

ಓದಲಾಗಿದೆ: ಕಂದಾಯ ಇಲಾಖೆಯ ಕಡತ ಸಂ. ಕಂಇ 109 ಮುಅಬಿ 06 ರಲ್ಲಿ ಸಲ್ಲಿಸಿರುವ ಪ್ರಸ್ತಾವನೆ.

ಪ್ರಸ್ತಾವನೆ:

ಮೇಲೆ ಉಲ್ಲೇಖಿಸಲಾದ ಕಂದಾಯ ಇಲಾಖೆಯ ಕಡತದಲ್ಲಿ ಬೆಂಗಳೂರು ನಗರದ ಚಾಮರಾಜಪೇಟೆ 3ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಚೌಬೀನ್ ಚಾರಿಟೀಸ್‌ಗೆ ಸೇರಿದ ಆಸ್ತಿಯನ್ನು 1992ರಲ್ಲಿ ನೋಂದಣಿ ಮೂಲಕ ಮುಜರಾಯಿ ಇಲಾಖೆಗೆ ವರ್ಗಾವಣೆಯಾಗಿದ್ದರೂ ಸುಮಾರು 90 ವರ್ಷಗಳ ನಂತರ ಸದರಿ ಸ್ವತ್ತನ್ನು ಮುಜರಾಯಿ ಇಲಾಖೆಯ ಗಮನಕ್ಕೆ ಬಾರದಂತೆ ಕೆಲವು ಭೂ ಮಾಫಿಯಾಗಳು ಹಾಗೂ ಮಹಾನಗರ ಪಾಲಿಕೆಯ ಅಧಿಕಾರಿ/ಸಿಬ್ಬಂದಿಗಳು ಹಾಗೂ ಮುಜರಾಯಿ ಇಲಾಖೆಯ ಸಿಬ್ಬಂದಿಗಳು ಈ ಪ್ರಕರಣದಲ್ಲಿ ಶಾಮೀಲಾಗಿ ಆಸ್ತಿಯನ್ನು ಲಪಟಾಯಿಸಲು ಸಂಚು ರೂಪಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕ್ರಿಮಿನಲ್ ಮೊಕದ್ದಮೆ ಹೂಡುವ ಮೊದಲು ಇತೀ ಪ್ರಕರಣವನ್ನು ಸಿ.ಒ.ಡಿ. ತನಿಖೆಗೆ ಒಳಪಡಿಸುವಂತೆ ಕೋರಲಾಗಿರುತ್ತದೆ.

ಕಂದಾಯ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ ಒಇ 88 ಸಿಒಡಿ 09 ಬೆಂಗಳೂರು, ದಿನಾಂಕ: 7ನೇ ಜುಲೈ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಬೆಂಗಳೂರು ನಗರ ಚಾಮರಾಜಪೇಟೆ 3ನೇ ಮುಖ್ಯರಸ್ತೆಯಲ್ಲಿರುವ ಶ್ರೀ ಚೌಬೀನ್ ಸುಬ್ಬರಾವ್ ಚಾರಿಟೀಸ್ ಸ್ವತ್ತಿನ ಖಾತೆ ಬದಲಾವಣೆಯಾಗಿರುವ ಪ್ರಕರಣವನ್ನು ಸಿ.ಐ.ಡಿ. ವಿಚಾರಣೆಗೆ ವಹಿಸಲು ಆದೇಶಿಸಲಾಗಿದೆ

ಸಿ.ಐ.ಡಿ. ತಂಡವು ಈ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಶೀಘ್ರದಲ್ಲಿ ವರದಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಕಂದಾಯ ಇಲಾಖೆಯು ವಿಚಾರಣೆಗೆ ಬೇಕಾಗಬಹುದಾದ ಅಗತ್ಯ ದಾಖಲೆ/ಮಾಹಿತಿಯನ್ನು ಸಿ.ಐ.ಡಿ ಅಧಿಕಾರಿಗಳಿಗೆ ಒದಗಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1689 ಪಿ. ಶಿವರಾಮ ಭಟ್

ಸರ್ಕಾರದ ಅಧೀನ ಕಾಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು)

ಅಲ್ಪಸಂಖ್ಯಾತರ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಕಇ 2 ಭಾಮಮ 2007, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಸರ್ಕಾರಿ ಅಧಿಸೂಚನೆ ಸಂಖ್ಯೆ : ಸಕಇ 2 ಭಾಮಮ 2007, ದಿನಾಂಕ: 3.1.2009ರಲ್ಲಿ ನಮೂದಿಸಿರುವ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಅನುಷ್ಠಾನ–ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿಯ ಕ್ರಮ ಸಂಖ್ಯೆ : 21(3) ಸದಸ್ಯರ ಹೆಸರಾದ "ಶ್ರೀ ಗೇರಾಲ್ಡ್ ಫೆರ್ನಾಂಡಿಸ್ ಬಿನ್ ಫಿಲಿಕ್ಸ್ ಫರ್ನಾಂಡಿಸ್, ಜಿಲ್ಲಾ ಪಂಚಾಯತ್ ಸದಸ್ಯರು, ಶಿರ್ವ, ಉಡುಪಿ ಜಿಲ್ಲೆ" ಎಂಬುವುದರ ಬದಲಾಗಿ **"ಶ್ರೀ ಜೆರಾಲ್ಡ್ ಫೆರ್ನಾಂಡೀಸ್ ಬಿನ್ ಫೆಲಿಕ್ಸ್ ಫೆರ್ನಾಂಡೀಸ್, ಜಿಲ್ಲಾ ಪಂಚಾಯತ್ ಸದಸ್ಯರು, ಶಿರ್ವ, ಉಡುಪಿ ಜಿಲ್ಲೆ"**, ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1696 ಆರ್. ನಿಸಾರ್ ಅಹಮದ್

ಸರ್ಕಾರದ ಅಧೀನ ಕಾಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

INFRASTRUCTURE DEVELOPMENT SECRETARIAT

Sub: Constitution of Apex Level Co-ordination group for overseeing the implementation of Dabol-Bangalore (Bidadi) Gas pipeline.

Read: MoU for Natural Gas Infrastructure and City Gas Distribution entered into between GAIL India Ltd., and Infrastructure Development Department on 29.04.2009.

Preamble:

A Memorandum of Understanding (MoU) between GOK and GAIL for providing the required framework was signed on 29.4.2009 between the Principal Secretary to Govt. IDD, GOK and Director (Mktg), GAIL. The State is experiencing deficit in energy. The State owned power producing companies viz., Karnataka Power Corporation Ltd., (KPCL) and Power Company of Karnataka Ltd., (PCKL) are having proposals to set up power projects at various locations. The State Government is also encouraging Independent Power Producers to set up power plants in the State.

2. The Gas Authority of India Ltd., (GAIL), a Navaratna PSU of Govt. of India, which is laying the Dabhol–Bangalore Gas Pipeline has requested State Government to provide supportive measures for implementation of the project. These projects when operationalised will offer tremendous opportunities for industries as well as power projects for utilizing natural gas to meet their energy requirements. It is estimated that, the demand for LNG will be at about 45 MMSCMD, by 2011-2012.

3. In view of the importance of the gas grid for economic prosperity of the State, a framework for co-operation between Government of Karnataka and GAIL is required to be put in place.

4. Hence the following order.

Government Order No.IDD 14 UIP 2008, Bangalore, Dated: 10th July 2009

Government of Karnataka are pleased to constitute the following Apex Level Co-ordination Group (CoG) for overseeing the implementation of Dabol-Bangalore (Bidadi) Gas Pipeline project in order to promote gas pipeline project.

Co-ordination Group	GAIL	State Govt Agency
Chairman	Principal Secretary to Govt, IDD/Director (Marketing) , GAIL	
Members	1. Executive Director (Mktg) 2. Executive Director (Projects) 3. Chief Executive Officer, GGL	1. M.D. KSIIDC 2. MD, KPCL 3. M.D, KSRTC
Co-ordinator	Zonal OIC, Bangalore, HOD Gas Marketing, Bangalore.	1. Dy. Secretary, IDD 2. Executive Director, KSIIDC

2. The working terms of the Co-ordination Group will be as follows :

(i) CoG shall meet preferably at least once in a quarter to co-ordinate the activities and set time frame for the implementation in terms of this MoU.

(ii) There shall be a co-ordinator from GAIL and IDD who shall be regularly interacting to hold CoG meetings.

(iii) From GAIL:, the Co-ordinator shall provide the necessary facilities for the co-ordination meeting and in his absence by any person so authorized by GAIL. Similarly, Dy. Secretary, IDD shall be Co-ordinator from IDD.

(iv) The Co-ordination meeting shall be attended by at least two members from each party to complete the quorum.

(v) GAIL's Zonal Office at Bangalore shall provide all organizational assistance.

(vi) The respective co-ordinators shall obtain the necessary approvals/sanctions from the respective organizations.

By Order and in the name of the Governor of Karnataka,

K.S. VENUGOPAL

P.R. 1697

Under Secretary to Government (I/c)

Infrastructure Development Department.

ಶಿಕ್ಷಣ ಸಚಿವಾಲಯ

ವಿಷಯ: ಹೂವಿನಹಡಗಲಿಯಿಂದ ಬಳ್ಳಾರಿ ನಗರಕ್ಕೆ ಸ್ಥಳಾಂತರಿಸಲಾಗಿದ್ದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಹೂವಿನಹಡಗಲಿಯಲ್ಲಿಯೇ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ : ಇಡಿ 60 ಟಿಇಸಿ 2007, ದಿನಾಂಕ 12–7–2007.

2) ಸರ್ಕಾರದ ಆದೇಶ ಸಂಖ್ಯೆ : ಇಡಿ 186 ಟಿಇಸಿ 2008, ದಿನಾಂಕ : 23–10–2008.

ಪ್ರಸ್ತಾವನೆ:

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು 2009–10ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಬಳ್ಳಾರಿ ನಗರಕ್ಕೆ ಸ್ಥಳಾಂತರಿಸಿ ಆದೇಶಿಸಲಾಗಿತ್ತು. ಆದರೆ ಪ್ರಸ್ತುತ ಕಾಲೇಜನ್ನು ಬಳ್ಳಾರಿಗೆ ಸ್ಥಳಾಂತರಿಸದೇ ಹೂವಿನಹಡಗಲಿಯಲ್ಲಿಯೇ ಮುಂದುವರೆಸುವಂತೆ ಕೋರಿ ಹಲವಾರು ಮನವಿಗಳು ಬಂದಿರುವ ಹಿನ್ನೆಲೆಯಲ್ಲಿ ಹಾಗೂ ಜನಪ್ರತಿನಿಧಿಗಳು ಹಿಂದುಳಿದ ಪ್ರದೇಶವಾದ ಹೂವಿನಹಡಗಲಿಯಲ್ಲಿ ಪಸ್ತಾಪಿತ ಇಂಜಿನಿಯರಿಂಗ್ ಕಾಲೇಜನ್ನು ಮುಂದುವರೆಸಿದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಸದರಿ ಕಾಲೇಜನ್ನು ಹೂವಿನಹಡಗಲಿಯಿಂದ ಬಳ್ಳಾರಿಗೆ ಸ್ಥಳಾಂತರಿಸಲು ತೆಗೆದುಕೊಳ್ಳಲಾಗಿರುವ ತೀರ್ಮಾನವನ್ನು ರದ್ದುಪಡಿಸಿ ಹೂವಿನಹಡಗಲಿಯಲ್ಲಿಯೇ ಮುಂದುವರೆಸುವಂತೆ ಕೋರಿರುತ್ತಾರೆ.

ಹೂವಿನಹಡಗಲಿಯಲ್ಲಿ ಪ್ರಾರಂಭಿಸಲ್ಪಟ್ಟಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ದಿನಾಂಕ: 23–10–2008ರ ಆದೇಶದನ್ವಯ ಬಳ್ಳಾರಿಗೆ ಸ್ಥಳಾಂತರಿಸಲು ಆದೇಶಿಸಲಾಗಿದ್ದರೂ ಉಳಿದ ಯಾವುದೇ ಪೂರ್ವ ತಯಾರಿಯನ್ನು ಕೈಗೊಂಡಿರುವುದಿಲ್ಲ. 2009–10ನೇ ಸಾಲಿಗೆ ಸಂಬಂಧಿಸಿದಂತೆ ಎಐಸಿಟಿಇ ಯು ಸದರಿ ಕಾಲೇಜಿಗೆ ಸಂಬಂಧಿಸಿದಂತೆ ಹೂವಿನಹಡಗಲಿಗೆ ಅನುಮೋದನೆಯನ್ನು ನೀಡಿದ್ದು ಅದರಂತೆಯೇ ಪ್ರಸ್ತುತ ಸಾಲಿನಲ್ಲಿ ಕೆಲವಾರು ಪ್ರವೇಶಾತಿಗಳು ನಡೆದಿರುವುದಾಗಿ ತಿಳಿದುಬಂದಿರುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸದರಿ ಇಂಜಿನಿಯರಿಂಗ್ ಕಾಲೇಜನ್ನು ಹೂವಿನಹಡಗಲಿಯಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 186 ಟಿಇಸಿ 2008, ಬೆಂಗಳೂರು, ದಿನಾಂಕ: 7ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 186 ಟಿಇಸಿ 2008, ದಿನಾಂಕ:23.10.2008 ರಲ್ಲಿ 2009–10ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ ಇದನ್ನು ಬಳ್ಳಾರಿ ನಗರಕ್ಕೆ ಸ್ಥಳಾಂತರಿಸಲಾಗಿದ್ದ ಸರ್ಕಾರಿ ಆದೇಶವನ್ನು ರದ್ದುಪಡಿಸಿದೆ ಮತ್ತು ಸದರಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಹೂವಿನಹಡಗಲಿಯಲ್ಲಿಯೇ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1699

ಎನ್.ಆರ್. ಪ್ರಭು

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ENERGY SECRETARIAT

Sub: Transfer of 1.6 MW Wind Power Capacity in favour of M/s R.B. Seth Shreeram Narsingdas-reg.

Read:
1. Government Order No: EN 398 NCE 2005 dated: 20.4.2006.
2. Government Order No: EN 209 NCE 2006 dated: 26.5.2006.
3. Government Order No: EN 146 NCE 2007 dated: 17.5.2007.
4. Government Order No: EN 303 NCE 2008 dated: 19.12.2008.
5. Letter No: KRED/08/RBS-EIL/2009/841 dated: 12.2.2009 received from the Managing Director, Karnataka Renewable Energy Development Limited, Bangalore.
6. Government letter No: EN 67 NCE 2009 dated: 28.3.2009.
7. KREDL letter No: KRED/08/RBS-EIL/2009/1545 dated: 16/18.4.2009.

Preamble:

In the Government order read at (1) and (2) above the sanction has been accorded for implementation of 261.61 MW capacity Wind Power Project at different locations of Belgaum and Gadag Districts in favour of M/s Enercon India Limited.

In the Government Order read at (3) above, sanction has been accorded for enhancement of the allotted wind power capacity from 32.2 MW to 86.4 MW [serial No. 2 and 4 G.O. read at (1)] and also for enhancement of allotted wind power capacity from 40.00 MW to 182.4 MW [serial No. 9 G.O read at (1)] above in favour of M/s Enercon India Limited.

In the Government Order read at (4) above, permission has been accorded for transfer of 3.2 MW Wind Power capacity at Harti, Nagavi and Beladadi villages of Gadag District in favour of M/s R.B. Seth Shreeram Narsingdas from out of sanctioned part capacity of (182.4 MW) 457.61 MW Wind Power Capacity from M/s Enercon India Limited.

The Managing Director, Karnataka Renewable Energy Development Limited, Bangalore in his letter read at (5) above has recommended to the Government for transfer of 1.6 MW Wind Power capacity in favour of M/s R.B Seth Shreeram Narsingdas from out of sub-capacity of 182.4 MW of the total 457.61 MW capacity of M/s Enercon India Limited at Harti village, Gadag Taluk, Gadag District.

In the Government letter read at (6) above, KREDL has been requested to furnish the progress achieved in the implementation of 457.61 MW capacity Wind Power project by M/s Enercon India Limited.

In the letter read at (7) above, the M.D., KREDL has furnished the progress achieved by M/s Enercon India Limited in implementing the 457.61MW capacity wind power project.

The proposal of the Managing Director, Karnataka Renewable Energy Development Limited has been examined in detail and issued the following Order:-

Government Order No: EN 67 NCE 2009, Bangalore, Dated: 6th July 2009

In addition to 3.2 MW capacity already transferred vide Government Order read at (4) above, Government is pleased to accord approval for transfer of 1.6 MW Wind Power capacity in favour of M/s

R.B. Seth Shreeram Narsingdas from out of sub-capacity of 182.4 MW of the total 457.61 MW capacity of M/s Enercon India Limited at Harti village, Gadag Taluk, Gadag District.

The other terms and conditions of the Government Order read at (1) above shall IPSO FACTO applicable.

By Order and in the name of Governor of Karnataka,

P.R. 1685

S.J. SAMPATH KUMAR

Under Secretary to Government, Energy Department.

ಇಂಧನ ಸಚಿವಾಲಯ

ವಿಷಯ: ಮೆ:: ಗೋದಾವರಿ ಶುಗರ್ ಮಿಲ್ಸ್ ಲಿಮಿಟೆಡ್‌ಗೆ **2x20** ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆ ಸ್ಥಾಪನೆಗೆ ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ:

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಜಿಎಸ್‌ಎಂಎಲ್/08/2173 ದಿನಾಂಕ:15/19.12.2008.
2. ಸರ್ಕಾರಿ ಪತ್ರ ಸಂಖ್ಯೆ: ಇಎನ್ 25 ಎನ್‌ಸಿಇ 2009 ದಿನಾಂಕ: 23.1.2009.
3. ಕ್ರೆಡಲ್ ಪತ್ರ ಸಂಖ್ಯೆ: ಕೆಆರ್‌ಇಡಿ/04/ ಜಿಎಸ್‌ಎಂಎಲ್/09/2029 ದಿನಾಂಕ: 23/25.6.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಗೋದಾವರಿ ಶುಗರ್ ಮಿಲ್ಸ್ ಲಿಮಿಟೆಡ್‌ಗೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಸಮೀರವಾಡಿ ಎಂಬ ಗ್ರಾಮದಲ್ಲಿ **2x20** ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರದ ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಪತ್ರದಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಪೂರಕ ದಾಖಲಾತಿಗಳನ್ನು ಒದಗಿಸುವಂತೆ ಕ್ರೆಡಲ್‌ನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಕೋರಿದ್ದ ಪೂರಕ ದಾಖಲಾತಿಗಳನ್ನು ಒದಗಿಸಿರುತ್ತಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 25 ಎನ್‌ಸಿಇ 2009, ಬೆಂಗಳೂರು, ದಿನಾಂಕ: 13ನೇ ಜುಲೈ 2009.

ಮೆ:: ಗೋದಾವರಿ ಶುಗರ್ ಮಿಲ್ಸ್ ಲಿಮಿಟೆಡ್‌ಗೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಸಮೀರವಾಡಿ ಎಂಬ ಗ್ರಾಮದಲ್ಲಿ **2x20** ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆ ಸ್ಥಾಪನೆಗೆ ಈ ಕೆಳಗಿನ ನಿಬಂಧನೆಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಿದೆ :–

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments / Organizations such as Forest Department, Revenue Department, & Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1724

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

HEALTH AND FAMILY WELFARE SECRETARIAT

Sub: Capacity Development Project by Swasthya Karnataka in Tumkur district on a pilot basis.

Read: 1. Proceedings of the 14th meeting of the Programme Steering Committee dated:27.05.2009.

2. Email from Task Team Leader, World Bank dt. 11.7.09.

3. Delegation of Powers G.O. No. HFW/KHSDRP/Sect/Est-14/2007-08, dt.2.4.2008.

Preamble:

Swasthya Karnataka, a consortium of 5 NGOs namely Karuna Trust, Institute of Public Health, Institute of Health Management and Research, Centre for Leadership and Management in Public Services, Centre for Global Health Research had proposed a project for Capacity Development of the District Health Team in Tumkur district on a pilot basis. The consortium had also shared their views with the World Bank curing its Mission in May-2009. This subject was also discussed at length in the 14th meeting of the Programme Steering Committee held on 27.5.2009. The consortium has a comprehensive expertise in various aspects of capacity building like Good governance, Community participation, Hospital management, Information system etc. better management practices, effective utilisation of budget, human resource management effective monitoring better outcomes in national programmes, institutional deliveries etc., are some of the results expected out of the pilot project.

The consortium plans to meet all expenditure related to the training aspects like printing of manuals, developing of training modules, cost of training, hiring of mentors, trainers, training materials etc. The Govt on the other hand plans to extend logistics support to the organisation, arranging venue, TA/DA to trainees/participants, contingency expenses for the training, other miscellaneous arrangements, etc. As the said training programme has to be commenced immediately i.e. by the 1st week of August 2009, it is felt necessary to release funds immediately to the DPMO, Tumkur with a view avoid procedural delays and to enable the DPMO to meet the expenditure as and when required for the purpose of conducting training programme.

Hence the following orders.

Govt. Order No. HFW (PR) 104 WBA 2009, Bangalore, Dated: 21st July 2009

Government are pleased to release Rs. 8.00 lakhs (Rs. Eight lakhs only) to the District Project Management Officer, Tumkur under the Head of Account "2210-06-800-0-81 (Plan) (015) Subsidiary Expenditure" for the year 2009-10 towards meeting the expenditure as and when required for the purpose of conducting Capacity Development training programme in collaboration with Swasthya Karnataka, a consortium of 5 NGOs. The DPMO shall do this under the guidance and intimation of the District Healh Society. The DPMO shall exercise the powers as delegated to him from this Office.

The Chief Finance Officer, KHSDRP is hereby authorised to take necessary steps to release the amount through Treasury.

By Order and in the name of the Governor of Karnataka,

SUSHAMA GODBOLE

Deputy Secretary to Government,

KHSDRP, Health and Family Welfare Department.

P.R. 1741

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ 10,000 ಕಿಮೀ.ಗಳಷ್ಟು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಿಗೆ "ಐಡೆಕ್" ಸಂಸ್ಥೆಯನ್ನು "Transaction Advisor" ಆಗಿ ನೇರವಾಗಿ ನೇಮಿಸುವ ಬಗ್ಗೆ.

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ. ಕರಅನಿನಿ/ಮು.ಅ–ಪಿಪಿಪಿ/2009–10/282 ದಿನಾಂಕ:18.04.2009.

2) ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಇ 296 ವೆಚ್ಚ–12/09 ದಿನಾಂಕ: 12.05.2009.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರು ಐಡೆಕ್ (iDeCK) ಸಂಸ್ಥೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ 10,000 ಕಿಮೀ.ಗಳ ರಸ್ತೆ ಅಭಿವೃದ್ಧಿ ಯೋಜನೆಗೆ "Transaction Advisor" ಆಗಿ ನೇಮಿಸಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಇದರಂತೆ ಮೇಲೆ ಓದಲಾದ (2)ರ ಅಧಿಸೂಚನೆಯಲ್ಲಿ ಆರ್ಥಿಕ ಇಲಾಖೆಯು ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವ ಐಡೆಕ್ (iDeCK) ಅನ್ನು ನೇರವಾಗಿ "Transaction Advisor" ಆಗಿ ನೇಮಿಸಲು ಕೆ.ಟಿ.ಪಿ.ಪಿ. ಅಧಿನಿಯಮ 1999ರ ಕಲಂ4 (ಜಿ) ಅಡಿ ಪ್ರದತ್ತವಾಧ ಅಧಿಕಾರದಂತೆ ವಿನಾಯಿತಿ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆಲೋಇ 1 ಇಎಪಿ 2009, ಬೆಂಗಳೂರು, ದಿನಾಂಕ: 17ನೇ ಜುಲೈ 2009

ರಾಜ್ಯ ಸರ್ಕಾರವು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ 10,000 ಕಿಮೀ. ಉದ್ದದ ರಸ್ತೆಗಳ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವ ಐಡೆಕ್ (iDeCK) ಸಂಸ್ಥೆಯನ್ನು ನೇರವಾಗಿ "Transaction Advisor" ಆಗಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಆರ್. ರೇವಣ್ಣ
ಪಿ.ಆರ್. 1742 ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ) (ಪ್ರ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 2009-10ನೇ ಸಾಲಿನ ಹೊಸ ಯೋಜನೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ ರೂ.10.00 ಕೋಟಿಗಳ ಅನುದಾನ – ಆಡಳಿತಾತ್ಮಕ ಮಂಜೂರಾತಿ.

ಓದಲಾಗಿದೆ:
1) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ:20.2.2009 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು 2009-10ನೇ ಸಾಲಿಗೆ ಮಾಡಿದ ಆಯವ್ಯಯ ಭಾಷಣದ ಘೋಷಣೆ.
2) ಸರ್ಕಾರದ ಆದೇಶ ಸಂಖ್ಯೆ: ವಿಯಇ 51 ವಿತ್ರಮ 2008, ದಿನಾಂಕ:11.9.2008 ಮತ್ತು 14.10.2008 ಪ್ರೊ.ಸಿ.ಎನ್.ಆರ್.ರಾವ್, FRS ಇವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ರಚನೆ.
3) ದಿನಾಂಕ:28.05.2009 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ 3ನೇ ಸಭೆಯಲ್ಲಿನ ತೀರ್ಮಾನ.
4) ಕಾರ್ಯ ನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಪತ್ರ ಸಂಖ್ಯೆ: ವಿ.ತಂ.ದಾ.ಸ/2009 ದಿನಾಂಕ: 22.06.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ 2009-10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರೊ.ಸಿ.ಎನ್.ಆರ್.ರಾವ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ವಿಜ್ಞಾನ ಮತ್ತು ತಂತ್ರಜ್ಞಾನ ವಿಷನ್ ಗ್ರೂಪ್ ಸಲಹೆಯಂತೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ವಿದ್ಯಾರ್ಥಿ – ವಿಜ್ಞಾನಿ ಸಂವಾದ, ವಿಜ್ಞಾನ ಮೇಳ, ವಿಜ್ಞಾನ ಸಂಘಗಳ ಸ್ಥಾಪನೆ, ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠ ಸಂಸ್ಥೆಗಳನ್ನು ಸ್ಥಾಪಿಸಲು ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಶಿಕ್ಷಣದ ಉನ್ನತೀಕರಣ, ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ ಮತ್ತು ವಸ್ತು ಸಂಗ್ರಹಾಲಯ, ಇತ್ಯಾದಿ ನೂತನ ಕಾರ್ಯಕ್ರಮಗಳಿಗೆ ರೂ.10.00 ಕೋಟಿ ಕೊಡಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಸರ್ಕಾರದ ಆದೇಶದಲ್ಲಿ ಪ್ರೊ.ಸಿ.ಎನ್.ಆರ್.ರಾವ್, FRS ಇವರ ಅಧ್ಯಕ್ಷತೆಯಲ್ಲಿ 10 ಜನ ಸದಸ್ಯರನ್ನೊಳಗೊಂಡಂತೆ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವನ್ನು ರಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ದಿನಾಂಕ:28.05.2009 ರಂದು 3ನೇ ಸಭೆಯಲ್ಲಿ ಶಿಕ್ಷಣ ಕಾರ್ಯಕ್ರಮಗಳನ್ನು 2009-10ನೇ ಸಾಲಿನಲ್ಲಿ ನಡೆಸಲು ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗದಿಪಡಿಸಿರುವ ರೂ.10.00 ಕೋಟಿಗಳಿಗೆ ಕಾರ್ಯಕ್ರಮವನ್ನು ರೂಪಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಕಾರ್ಯ ನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಪತ್ರದಲ್ಲಿ ದಿನಾಂಕ:22.06.2009 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ

ಸಮೂಹದ 3ನೇ ಸಭೆಯ ತೀರ್ಮಾನದಂತೆ ಶಿಕ್ಷಣ ಕಾರ್ಯಕ್ರಮಕ್ಕೆ ರೂ.10.00 ಕೋಟಿಗಳ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕಾರ್ಯ ನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ವಿಯಇ 33 ವಿತ್ರಮ 2009, ಬೆಂಗಳೂರು, ದಿನಾಂಕ: 13ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 2009–10ನೇ ಸಾಲಿನ ಹೊಸ ಯೋಜನೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಶಿಕ್ಷಣ ಕಾರ್ಯಕ್ರಮಗಳಿಗೆ ರೂ.10.00 ಕೋಟಿ (ರೂಪಾಯಿ ಹತ್ತು ಕೋಟಿಗಳು ಮಾತ್ರ) ಶಿಕ್ಷಣ ಕಾರ್ಯ ಚಟುವಟಿಕೆಗಳನ್ನು ಅನುಬಂಧ–1 ರಲ್ಲಿರುವಂತೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ವೆಚ್ಚವನ್ನು ಲೆಕ್ಕಶೀರ್ಷಿಕೆ "3425–60–600–0–02 (059) (ಯೋಜನೆ) ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 197 ವೆಚ್ಚ 2/2009 ದಿನಾಂಕ: 03.07.2009 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 48 ಎಂಇ 2009 ದಿನಾಂಕ:02.07.2009 ರಲ್ಲಿ ನೀಡಿದ ಸಹಮತಿ ಮೇರೆಗೆ ಮತ್ತು ದಿನಾಂಕ:06.07.2009ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೋರಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ವಿಯಇ 33 ವಿತ್ರಮ 2009, ದಿನಾಂಕ:13/07/2009ರ ಅನುಬಂಧ

ಕ್ರ ಸಂ.	ಕಾರ್ಯಯೋಜನೆಗಳು	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
1	ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ (ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ನೇರ ಸಂವಾದ ವಿಜ್ಞಾನ ಶಿಕ್ಷಣ ಕಾರ್ಯಕ್ರಮ)	91.00
2	ರಾಜ್ಯ ಮಟ್ಟದ ವಿದ್ಯಾರ್ಥಿ – ವಿಜ್ಞಾನ ನೇರ ಸಂವಾದ ಕಾರ್ಯಕ್ರಮ	52.00
3	ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಕರಿಗೆ ಚಳಿಗಾಲ ಹಾಗೂ ಬೇಸಿಗೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವುದು.	ಡಿ.ಎಸ್.ಇ.ಆರ್.ಟಿ./ ಪದವಿ ಪೂರ್ವ ಇಲಾಖೆ ಭರಿಸುವುದು
4	ಪ್ರೌಢಶಾಲೆಗಳಲ್ಲಿ ವಿಜ್ಞಾನ ಸಂಘಗಳ (Science Club) ಸ್ಥಾಪನೆ	39.00
5	ವಿಜ್ಞಾನ ಮೇಳಗಳ ಆಯೋಜನೆ	19.5
6	ವಸ್ತು ಸಂಗ್ರಹಾಲಯವನ್ನೊಳಗೊಂಡ ವಿಜ್ಞಾನ ಕೇಂದ್ರದ ಸ್ಥಾಪನೆ	ಮುಂದಿನ ದಾರ್ಶನಿಕ ಸಭೆಗಳಲ್ಲಿ ಕೈಗೊಳ್ಳಲಾಗುವ ತೀರ್ಮಾನದನ್ವಯ
7	ಇಂಜಿನಿಯರಿಂಗ್ ಕಾಲೇಜುಗಳ ಉಪನ್ಯಾಸಕರಿಗೆ ಕಾರ್ಯಾಗಾರ	
8	ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಎನ್‌ಪಿಟಿಇಎಲ್ (National Programme on Technology Enhanced Learning – NPTEL) ಚಟುವಟಿಕೆಯಡಿ ತಯಾರಿಸಿರುವ ಉತ್ಕೃಷ್ಟ ಗುಣಮಟ್ಟದ ಬೋಧನಾ ಸಾಮಗ್ರಿಗಳನ್ನು ಅಂತರ್ಜಾಲದಿಂದ ಪಡೆಯಲು ಅಗತ್ಯವಾದ ಯಂತ್ರಾಂಶ ಮತ್ತು ತಂತ್ರಾಂಶಗಳನ್ನು ನೀಡುವುದು	
9	ತಾಂತ್ರಿಕ ಆವಿಷ್ಕಾರ ಮತ್ತು ಸಂಶೋಧನಾ ಕೇಂದ್ರ	
10	ಸಂಶೋಧನೆಗೆ ಮೂಲಧನ	50.00
11	ಶ್ರೇಷ್ಠ ಸಂಶೋಧನಾ ಲೇಖನಗಳ ಪ್ರಕಟಣೆಗೆ ವಿಜ್ಞಾನ ಭೋಧಕರಿಗೆ/ವಿಜ್ಞಾನಿಗಳಿಗೆ ಬಹುಮಾನ	05.00
12	ಶ್ರೇಷ್ಠ ಶಿಕ್ಷಕರಿಗೆ ಬಹುಮಾನಗಳು	10.00
13	ವಿಜ್ಞಾನ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದು	200.00
14	ವಿಜ್ಞಾನ ಪ್ರಯೋಗಾಲಯ ಸೌಲಭ್ಯವನ್ನು ಪ್ರೌಢಶಾಲೆಗಳಿಗೆ ಸ್ಥಾಪಿಸುವುದು	100.00
15	ಶ್ರೇಷ್ಠ ವಿಜ್ಞಾನ ಮತ್ತು ತಾಂತ್ರಿಕ ಕೇಂದ್ರಗಳ ಸ್ಥಾಪನೆ	100.00

ಕ್ರ ಸಂ.	ಕಾರ್ಯಯೋಜನೆಗಳು	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
16	ಶ್ರೇಷ್ಠ ವಿಜ್ಞಾನ ಶಿಕ್ಷಣ ಕೇಂದ್ರಗಳನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸುವುದು	100.00
17	ಗಣಕಯಂತ್ರಗಳನ್ನು ಮಾಧ್ಯಮಿಕ ಶಾಲೆಗಳಿಗೆ ನೀಡುವುದು/ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣದ ಡಿವಿಡಿಗಳನ್ನು ಶಾಲೆಗಳಿಗೆ ಪೂರೈಸುವುದು	50.00
18	ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ಮುಖೇನ ಕಾರ್ಯಕ್ರಮಗಳ ನಿರ್ವಹಣೆ	47.00
19	ಇತರೆ ವೈಜ್ಞಾನಿಕ ಕಾರ್ಯಕ್ರಮಗಳು	136.50
	ಒಟ್ಟು ಮೊತ್ತ ರೂ.	**1000.00**

ಕೆ. ಬೋರಲಿಂಗಯ್ಯ

ಪಿ.ಆರ್. 1743 ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಭಾರತ ಮೂಲಸೌಲಭ್ಯ ವಾರ ಪತ್ರಿಕೆ ಮತ್ತು ವರದಿ / ವಾರ್ತಾ ಪತ್ರಗಳನ್ನು ಹಾಗೂ India Infrastructure Publishing Ltd., ನವದೆಹಲಿ ಇವರಿಂದ ಖರೀದಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ.ಮೂಅಇ 05 ಯುಐಪಿ 2006 (ಪಿ) ದಿನಾಂಕ 18.06.2007.

2) ಸರ್ಕಾರದ ಆದೇಶ ಸಂಖ್ಯೆ.ಮೂಅಇ 77 ಮೂಇವಿ 2007 ದಿನಾಂಕ 25.10.2007.

3) ಸರ್ಕಾರದ ಆದೇಶ ಸಂಖ್ಯೆ.ಮೂಅಇ 80 ಮೂತಾಂವಿ 2008 ದಿನಾಂಕ 23.10.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಸಂಖ್ಯೆ (1)ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಪಿಪಿಪಿ ಕೋಶವನ್ನು ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ತಜ್ಞರನ್ನು ಒಳಗೊಂಡಂತೆ ರಚಿಸಲು ಅನುಮೋದನೆಯನ್ನು ನೀಡಿದೆ.

2. ಕ್ರಸಂಖ್ಯೆ (2) ರ ಆದೇಶದಲ್ಲಿ ಹೊಸ ಮೂಲಸೌಲಭ್ಯ ಅಭಿವೃದ್ಧಿ ನೀತಿ 2007 ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪಿಪಿಪಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಯ ಅಧಿಕಾರಿಗಳಿಗೆ/ಏಜೆನ್ಸಿಗಳಿಗೆ ತರಬೇತಿ ನೀಡುವುದಕ್ಕೆ ರೂ.5.00 ಲಕ್ಷಗಳನ್ನು ಹಾಗೂ ಮಾಹಿತಿ ಮತ್ತು ದಾಖಲೆ ಕೇಂದ್ರಕ್ಕಾಗಿ (Information & Documentation Centre) ರೂ.5.00 ಲಕ್ಷಗಳು ಒಟ್ಟು ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

3. ಕ್ರಸಂಖ್ಯೆ (3) ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ನೀತಿ – 2007 ರಂತೆ ಸಾಮರ್ಥ್ಯ ಅಭಿವೃದ್ಧಿ (Capacity Development) ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಮಾಹಿತಿ ಮತ್ತು ದಾಖಲೆ ಕೇಂದ್ರ ಸ್ಥಾಪಿಸಲು ಉನ್ನತೀಕರಣ ಮತ್ತು ಲಾಜಿಸ್ಟಿಕ್ಸ್‌ಗಳಿಗಾಗಿ ಅಗತ್ಯವಾದ ಸಾಮಗ್ರಿಗಳನ್ನು ಐಡೆಕ್ ಸಂಸ್ಥೆಯ ಮುಖಾಂತರ ಖರೀದಿಸಲು ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

3. The proposal of Railways has been examined and it has been decided to release an amount of Rs.10.26 crore out of the Budget of Rs.100.00 crore provided under the Head of Account "5465-01-190-3-05" (Plan) 211 investment towards cost sharing for new railway projects during 2009-10. Hence this order.

Government Order No. IDD 15 NSW 2008, Bangalore, Dated: 21st July 2009

After careful examination of the request of Railways, Government is pleased to release Rs.10.26 crore (Rupees Ten Crore Twenty Six Lakhs only) towards Kotturu-Harihar new railway line being the part of the balance 2/3rd share of Government of Karnataka. The above amount shall be met under the Head of Account **"5465-01-190-3-05"** (Plan) 211 investment out of the budget provision Rs.100.00 crore. towards cost sharing for new railway projects during 2009-10.

2. The Chief Executive Officer, K-RIDE is authorised to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

3. This order is issued in accordance with the concurrence of Finance Department given vide U.O.Note. No.FD 1122 Exp-I/09 dated 9.7.2009.

By Order and in the name of Governor of Karnataka,

K.S. VENUGOPAL

Under Secretary to Government, (I/c)

Infrastructure Development Department.

P.R. 1750

INFORMATION TECHNOLOGY, BIOTECHNOLOGY AND SCIENCE & TECHNOLOGY SECRETARIAT

CORRIGENDUM

No. ITD 39 MDA 2008, Bangalore, Dated: 25th July 2009

Sub: Setting up of Rural Business Process Outsourcing [BPO] units.

In the operative portion of the Government Order No. ITD 39 MDA 2008 [1], dated 4.2.09 under **"Guidelines for Rural BPO Project"** Para [2] **Evaluation Matrix marks** at Sl. Nos. 7 & 9 Criteria, the existing marks 5 shall be read as 10. The Sl. No. 8 Criteria is deleted.

By Order and in the name of Governor of Karnataka,

M.V. KRISHNAMURTHY

Under Secretary to Government,

P.R. 1767 Information Technology, Biotechnology and Science & Technology Department.

ENERGY SECRETARIAT

Sub: Allotment of 3.00 MW capacity Ajri Mini Hydel Project to M/s Chamundeeswari Energy Pvt. Ltd.-reg.

Read: 1) Letter No: KRED/06/Ajri/07/2972 dated: 24/28.1.2008 received from the Managing Director, Karnataka Renewable Energy Development Limited, Bangalore.

2) Allotment Committee Meeting Proceedings dated: 13.2.2009.

Preamble:

In the letter read at (1) above, the Managing Director, Karnataka Renewable Energy Development Limited, Bangalore has recommended to Government for allotment of 3.00 MW capacity Ajri Mini Hydel Project in favour of M/s Chamundeeswari Energy Pvt. Ltd. across Kubja river near Ajri Village, Kundapur Taluk, Udupi District.

The proposal was examined in detail in the Allotment Committee meeting as per proceedings read at (2) above and considered for allotment. Hence the following Order:-

Government Order No: EN 50 NCE 2008, Bangalore, Dated: 19th May 2009

Government accords approval for allotment of 3.00 MW capacity Ajri Mini Hydel Project in favour of M/s Chamundeeswari Energy Pvt. Ltd. across Kubja river near Ajri Village, Kundapur Taluk, Udupi District (**Latitude:** 13°42'40", **Longitude:** 74°54'39") subject to the following conditions:-

1(a) This project should not affect the down stream and upstream projects.

(b) The allottee shall execute an agreement with Government within three months from the date of the capacity allotment order failing which the allotment order shall become automatically cancelled. The company will have to apply denovo for capacity allocation. There shall also be no refund of the application fee received by Karnataka Renewable Energy Development Limited, Bangalore.

(c) Such an agreement on Rs. 400.00 Stamp Paper shall be routed through the Managing Director, Karnataka Renewable Energy Development Limited, Bangalore who shall certify as to its correctness after due scrutiny.

(d) Before executing the agreement the project developer shall deposit in advance with Karnataka Renewable Energy Development Limited, Bangalore the detailed project report (DPR) processing fee at the rate of Rs. 25,000/- per MW subject to a minimum of Rs. 1.00 lakh.

2(a) The project Developer shall obtain all statutory clearance from the respective authorities such as Water Resources Development Department, Forest, Ecology & Environment Department, Karnataka Power Transmission Corporation Limited, Karnataka Power Corporation Limited, Karnataka State Pollution Control Board, Revenue Department etc. Thereafter, the allottee shall submit the detailed project report within one year from the date of the execution of the agreement.

(b) The Deposit amount payable by the projet allottee to Karnataka Renewable Energy Development Limited, Bangalore shall be adjusted towards a Detailed Project Report processing fee.

3. The allottee shall achieve financial closure within six months from the date of technical clearance for the Detailed Project Report by Karnataka Renewable Energy Development Limited, Bangalore.

4. The allottee shall take action to complete the project implementation within 24 months from the date of achieving financial closure.

5. Failure to reach any of the project milestones specified in Sl.No. 2,3, & 4 in the same order would constitute sufficient grounds to result in automatic cancellation of allotment. No notice on his account will be given to the allottee.

6. The project Developer shall enter into a Wheeling and Banking Agreement with Karnataka Power Transmission Corporation Limited (KPTCL) IN CASE OF SELLING POWER TO the third party and Power Purchase Agreement in case of KPTCL.

7. The allottee Company may seek full co-operation from the concerned Officers of the Government at the District and State level to ensure speedy completion of the project.

8. In the allotted site if any of the Government Project comes up Hydel/Irrigation/Drinking Water Projects, the Government Projects will have priority and the developer should not claim any compensation.

9. The Developer is wholly responsible for the objections raised by local people if any.

10. The Developer is wholly responsible for the any problems/Submerssion of the project from KPCL project.

11. The Government has got power to Cancel/modify this Order.

12 After due scrutiny of the D.P.R. from KREDL, developer has to make an application to the concerned Departments for approval and then the developer should apply for KREDL for technical clearance.

By Order and in the name of Governor of Karnataka,

P.R. 1786

S.J. SAMPATHKUMAR

Under Secretary to Government, Energy Department.

ವಸತಿ ಸಚಿವಾಲಯ

ವಿಷಯ: ಡಾ. ಡಿ. ಎಂ. ನಂಜುಂಡಪ್ಪನವರ ವರದಿಯಲ್ಲಿ ಸೂಚಿಸಿದ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳನ್ನು ಗುಡಿಸಲುರಹಿತ ತಾಲ್ಲೂಕುಗಳನ್ನಾಗಿ ಮಾಡುವ ಬಗ್ಗೆ.

ಪ್ರಸ್ತಾವನೆ:

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರವು ಕಂಕಣಬದ್ಧವಾಗಿದ್ದು, ಇವರಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿಶೇಷವಾಗಿ ಸರ್ಕಾರವು ಡಾ. ಡಿ. ಎಂ. ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಿರುವಂತೆ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳನ್ನು ಗುಡಿಸಲುರಹಿತ ತಾಲ್ಲೂಕುಗಳನ್ನಾಗಿ ಮಾಡಲು ನಿರ್ಣಯಿಸಿದ್ದು, ಅದರಂತೆ ಮಹಾತ್ವಾಕಾಂಕ್ಷೆಯ ಯೋಜನೆಯೊಂದನ್ನು ರೂಪಿಸಲಾಗಿದೆ. ಹಿಂದುಳಿದ ತಾಲ್ಲೂಕುಗಳಲ್ಲಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವ ಗುಡಿಸಲುವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಸರ್ವೆ ಮಾಡಿ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ. ಅರ್ಹ ಗುಡಿಸಲುವಾಸಿಗಳ ಪಟ್ಟಿಯನ್ನು ಕ್ರೋಢೀಕರಿಸಿ, ಎಲ್ಲ ವಿವರಗಳುಳ್ಳ ಒಂದು ಸಮಗ್ರ ಪುಸ್ತಕವನ್ನು ತಯಾರಿಸಿ, ಆಯಾ ತಾಲ್ಲೂಕಿನ ಪ್ರತಿಯೊಂದು ಗುಡಿಸಲಿಗೆ, ಗುಡಿಸಲು ಇರುವ ಸ್ಥಳದಲ್ಲಿಯೇ (Insitu) ಕನಿಷ್ಠ ಎರಡು ಚದರಗಳ ಮನೆಗಳನ್ನು ನಿರ್ಮಿಸಲು ಮತ್ತು ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಬೇಕಾಗುವ ಅನುದಾನದ ವಿವರಗಳನ್ನೊಳಗೊಂಡ ತಾಲ್ಲೂಕುವಾರು ಸವಿವರ ಯೋಜನಾ ವರದಿಗಳನ್ನು (Detailed Project Report) ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಯೋಜಿಸಲಾಗಿದೆ.

ಮೇಲ್ಕಾಣಿಸಿದಂತೆ ಗ್ರಾಮೀಣ ಮಟ್ಟದಿಂದ ಜಿಲ್ಲಾ ಮಟ್ಟದವರೆಗಿನ ವಿವಿಧ ಹಂತದ ಕೆಲಸ–ಕಾರ್ಯಗಳನ್ನು ನಿಗದಿತ ಅವಧಿಯಲ್ಲಿ ಸಂಪೂರ್ಣಗೊಳಿಸಲು ಸಮನ್ವಯ ಅಧಿಕಾರಿಗಳ ಅವಶ್ಯಕತೆ ಇರುತ್ತದೆ. ಈ ಅವಧಿಬದ್ಧ ಕಾರ್ಯಕ್ರಮಕ್ಕಾಗಿ ಪ್ರತ್ಯೇಕ ಅಧಿಕಾರಿಗಳನ್ನು ನೇಮಕ ಮಾಡುವ ಬದಲಾಗಿ ಈಗಾಗಲೇ ಸೇವೆಯಲ್ಲಿರುವ ದಕ್ಷ ಮತ್ತು ಸಮರ್ಥ ಅಧಿಕಾರಿಗಳಿಗೆ ಈ ಕಾರ್ಯವನ್ನು ವಹಿಸಿಕೊಡಲು ನಿರ್ಧರಿಸಲಾಗಿದೆ. ಸಮನ್ವಯ ಅಧಿಕಾರಿಗಳನ್ನು ನೇಮಕ ಮಾಡುತ್ತ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 86 ಹೆಚ್‌ಎಎಮ್ 2009, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಡಾ. ಡಿ. ಎಂ. ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಿರುವಂತೆ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳನ್ನು ಗುಡಿಸಲುರಹಿತ ತಾಲ್ಲೂಕುಗಳನ್ನಾಗಿ ಮಾಡಲು, ಸವಿವರ ಯೋಜನಾ ವರದಿಗಳನ್ನು (Detailed Project Report) ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಹಮ್ಮಿಕೊಂಡಿರುವ ಕೆಲಸ–ಕಾರ್ಯಗಳನ್ನು ಸಂಘಟಿಸಲು ರಾಜ್ಯದ ಎಲ್ಲ ವಿಭಾಗಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಈ ಕೆಳಗಿನಂತೆ ಸಮನ್ವಯ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ:

1	ಬೆಂಗಳೂರು ವಿಭಾಗ	ಶ್ರೀ ಸಣ್ಣಚಿತ್ತಯ್ಯ, ತಾಂತ್ರಿಕ ನಿರ್ದೇಶಕರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು
2	ಮೈಸೂರು ವಿಭಾಗ	ಶ್ರೀ ಕೆ. ಪಿ. ಶಿವಕುಮಾರ್, ಅಧೀಕ್ಷಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
3	ಬೆಳಗಾವಿ ವಿಭಾಗ	ಶ್ರೀ ಎನ್. ಎಸ್. ಮಹದೇವ ಪ್ರಸಾದ್, ಪ್ರಧಾನ ವ್ಯವಸ್ಥಾಪಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು
4	ಗುಲಬರ್ಗಾ ವಿಭಾಗ	1. ಶ್ರೀ ಇನಾಮ್‌ದಾರ್, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಗುಲಬರ್ಗಾ 2. ಶ್ರೀ ಖಯೂಂ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಗುಲಬರ್ಗಾ

ಸಮನ್ವಯ ಅಧಿಕಾರಿಗಳ ಕರ್ತವ್ಯಗಳು ಈ ಕೆಳಗಿನಂತಿವೆ:

1. ಸಮನ್ವಯ ಅಧಿಕಾರಿಗಳು ತಮ್ಮ ಇಲಾಖೆಯ ದಿನನಿತ್ಯದ ಕೆಲಸಗಳೊಂದಿಗೆ ಸಮನ್ವಯ ಅಧಿಕಾರಿಯ ಕರ್ತವ್ಯವನ್ನೂ ನಿಭಾಯಿಸುವರು. ಅನುಬಂಧದಲ್ಲಿನ ಪಟ್ಟಿಯಂತೆ ತಮ್ಮ ವ್ಯಾಪ್ತಿಗೆ ಬರುವ ತಾಲ್ಲೂಕುಗಳನ್ನು ಗುರುತಿಸಿಕೊಳ್ಳುವುದು.
2. ಗುಡಿಸಲುವಾಸಿಗಳ ಪಟ್ಟಿ ತಯಾರಿಸಲು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಈಗಾಗಲೆ ಸೂಚನೆಗಳನ್ನು ನೀಡಲಾಗಿದ್ದು, ಅದರಂತೆ ಅವರೊಂದಿಗೆ ಸತತ ಸಂಪರ್ಕದಲ್ಲಿದ್ದು, ಈ ಕಾರ್ಯಕ್ರಮವನ್ನು ನಿಗದಿತ ಅವಧಿಯೊಳಗಾಗಿ ಸಂಪೂರ್ಣಗೊಳಿಸುವುದು.
3. ಗುಡಿಸಲುವಾಸಿಗಳ ಪಟ್ಟಿ ತಯಾರಿಸುವಲ್ಲಿ ಎದುರಿಸಬಹುದಾದ ತೊಡಕುಗಳನ್ನು ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಅಥವಾ ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ನಿವಾರಿಸುವುದು.

4. ಸಮನ್ವಯ ಅಧಿಕಾರಿಗಳ ಈ ಕಾರ್ಯನಿರ್ವಹಣೆಯಲ್ಲಿ ಭರಿಸಬಹುದಾದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ತಮ್ಮ ಕಛೇರಿಯಿಂದಲೇ ನಿಯಮಾನುಸಾರ ಪಡೆಯಲು ಅರ್ಹರಾಗಿರುತ್ತಾರೆ. ಈ ವೆಚ್ಚಗಳಲ್ಲದೆ ಸವಿವರ ಯೋಜನಾ ವರದಿ ಮತ್ತಿತರ ವರದಿಗಳನ್ನು ಸಿದ್ಧಪಡಿಸುವ ಸಲುವಾಗಿ ಸರ್ಕಾರೇತರ ಸಂಸ್ಥೆಗಳ ನೇಮಕಾತಿ ಮತ್ತಿತರ ವೆಚ್ಚಗಳಿಗಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಭರಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ವಿ. ಕೊಂಗವಾಡ

ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ.

ಅನುಬಂಧ

Identification of Regional Backwardness Based on the Comprehensive Composite Development Index, 2001

Sl. No.	District	Most Backward Taluks (index in the range from 0.53 to 0.79)	Index	More Backward Taluks (index in the range from 0.80 to 0.88)	Index	Backward Taluks (index in the range from 0.89 to 0.99)	Index
1	Bellary	Sandur	0.75	Siruguppa	0.86		
	Bellary	Kidligi	0.74	H.B.Halli	0.84		
	Bellary			Hadagali	0.81		
2	Bidar	Bhalki	0.74				
	Bidar	Humnabad	0.73				
	Bidar	Basavakalyan	0.69				
	Bidar	Aurad	0.65				
3	Gulbarga	Sedam	0.72			Gulbarga	0.89
	Gulbarga	Shorapur	0.70				
	Gulbarga	Yadgir	0.67				
	Gulbarga	Chittapur	0.65				
	Gulbarga	Afzalpur	0.62				
	Gulbarga	Shahapur	0.62				
	Gulbarga	Aland	0.61				
	Gulbarga	Chincholi	0.57				
	Gulbarga	Jevargi	0.57				
4	Koppal	Kushtagi	0.64	Koppal	0.81	Gangavathi	0.93
	Koppal	Yalburga	0.63				
5	Raichur	Sindhanur	0.78	Raichur	0.87		
	Raichur	Manvi	0.69				
	Raichur	Lingsugur	0.63				
	Raichur	Devdurga	0.53				
I	**Gulbarga Division**	21		5		2	
6	Bagalkot	Bilagi	0.77	Hunugund	0.85		
	Bagalkot			Badami	0.82		

Sl. No.	District	Most Backward Taluks (index in the range from 0.53 to 0.79)	Index	More Backward Taluks (index in the range from 0.80 to 0.88)	Index	Backward Taluks (index in the range from 0.89 to 0.99)	Index
7	Belgaum			Athani	0.88	Raybag	0.97
	Belgaum			Gokak	0.86	Bailhongala	0.95
	Belgaum			Soundatti	0.86	Raidurg	0.90
						Hukkeri	0.89
8	Bijapur	Muddebihal	0.69			Bijapur	0.92
	Bijapur	B. Bagewadi	0.69				
	Bijapur	Indi	0.66				
	Bijapur	Sindgi	0.64				
9	Dharwad			Kalghatagi	0.84	Navalgund	0.99
						Kundagol	0.95
10	Gadag			Mundaragi	0.88	Ron	0.92
	Gadag					Shirahatti	0.89
11	Haveri			Savanur	0.87	Haveri	0.99
	Haveri			Shiggaon	0.84	Byadagi	0.97
				Hirekerur	0.88	Hanagal	0.92
12	Uttara Kannada			Supa (Joida)	0.87	Ankola	0.98
	Uttara Kannada			Bhatkal	0.82	Siddapur	0.92
II	**Belgaum Division**	**5**		**12**		**14**	
13	Bangalore (U)					Anekal	0.90
14	Bangalore (R)	Kanakapura	0.74			Hosakote	0.97
		Magadi	0.79			Chennapatna	0.95
15	Chitradurga	Hosadurga	0.78	Hiriyur	0.87		
	Chitradurga			Molakalmuru	0.84		
	Chitradurga			Holalkere	0.84		
				Challakere	0.81		
16	Davanagere	Channagiri	0.78	Honnali	0.86		
	Davanagere	Harapanahalli	0.72	Jagalur	0.80		
17	Kolar	Bagepalli	0.76	Mulbagal	0.88	Srinivasapura	0.98
	Kolar			Gudibanda	0.84	Chintamani	0.97
	Kolar			Gowribidanur	0.83	Bangarpet	0.96
	Kolar					Malur	0.93
	Kolar					Sidlaghatta	0.91
18	Shimoga			Soraba	0.82	Shikaripura	0.92
19	Tumkur	Kunigal	0.79	Turuvekere	0.86		
	Tumkur	Madhugiri	0.74	Koratagere	0.83		
	Tumkur	Gubbi	0.73	C.N.Halli	0.83		
	Tumkur	Sira	0.73				
		Pavagada	0.72				

Sl. No.	District	Most Backward Taluks (index in the range from 0.53 to 0.79)	Index	More Backward Taluks (index in the range from 0.80 to 0.88)	Index	Backward Taluks (index in the range from 0.89 to 0.99)	Index
III	**Bangalore Division**	11		13		9	
20	Chamarajanagar Chamarajanagar	Chamarajanagar	0.78	Gundlupet Kollegal	0.81 0.80		
21	Chikmagalur			Kadur	0.81	Tarikere	0.89
22	Dakshina Kannada						
23	Hassan			Arakalgud	0.84	Holenarasipura Belur Channarayapatna Arasikere	0.97 0.94 0.92 0.91
24	Kodagu						
25	Mandya Mandya Mandya			Malavalli Nagamangala Krishnarajpet	0.84 0.83 0.80	Srirangapattana Maddur Pandavapura	0.98 0.95 0.94
26	Mysore Mysore Mysore	H.D. Kote	0.72	Hunsur T.Narasipur Nanjanagud	0.88 0.87 0.87	Periyapatna K.R.Nagar	0.97 0.92
27	Udupi						
IV	**Mysore Division**	2		10		10	
A	Northern Region (I + II)	26		17		16	59
B	Southern Region (III + IV)	13		23		19	55
	Grand Total	39		40		35	114

Note: Blanks in the columns indicate that there are no taluks under concerned groups.

6. The division-wise breakup of these 114 taluks is as follows:

Divisions	Most Backward	More Backward	Backward	Total
Gulbarga	21	5	2	28
Belgaum	5	12	14	31
Bangalore	11	13	9	33
Mysore	2	10	10	22
Total	39	40	35	114

7. While apparently there seems to be an insignificant regional disparity, there being 59 backward taluks in the Northern Region as against 55 backward taluks in the Southern Region, a closer inspection reveals that at the lowest strata of development, the Northern Region is definitely worse off, considering that it has 26 "Most Backward Taluks" as against only 13 in the Southern Region. The North-South divide is clearly apparent.

ಜಿ.ವಿ. ಕೊಂಗವಾಡ

ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ.

ಪಿ.ಆರ್. 1651

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ಸ್ವತಂತ್ರ ಮೌಲ್ಯಮಾಪನ ಪ್ರಕ್ರಿಯೆಗಾಗಿ ಇಲಾಖಾ ಮೌಲ್ಯಮಾಪನ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ದಿನಾಂಕ 5.6.2003ರ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸುತ್ತೋಲೆ ಸಂಖ್ಯೆ ಯೋಇ 41 ಇವಿ ಎಫ್(1)2003.

2. ದಿ:17.3.2009ರ ಸುತ್ತೋಲೆ ಸಂಖ್ಯೆ: ಪಿಡಿ 4 ಮೌಮಾವಿ 2008.

ಪ್ರಸ್ತಾವನೆ:

ಒಂದು ಕೋಟಿ ರೂ.ಗಳಿಗಿಂತ ಹೆಚ್ಚಿನ ಆಯವ್ಯಯ ಹೊಂದಿರುವ ಯೋಜನೆಗಳನ್ನು ಪ್ರತಿ ವರ್ಷ ಮೌಲ್ಯಮಾಪನ ಮಾಡುವ ಸಲುವಾಗಿ ಸರ್ಕಾರದ ಪ್ರಮುಖ ಯೋಜನೆ ಹಾಗೂ ಯೋಜನೇತರ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಮೌಲ್ಯಮಾಪನ ಮಾಡುವ ಕುರಿತಂತೆ ಉಲ್ಲೇಖ (1)ರ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಉಲ್ಲೇಖ(2)ರ ಸುತ್ತೋಲೆಯಲ್ಲಿ ದಿ:5.6.2003ರ ಸರ್ಕಾರದ ಸುತ್ತೋಲೆಯಂತೆ ಯಾವುದೇ ಇಲಾಖೆಗಳು ಪರಿಷ್ಕೃತ ಮಾರ್ಗಸೂಚಿಗಳನ್ವಯ ಕ್ರಮ ತೆಗೆದುಕೊಳ್ಳದೆ ಇರುವುದರಿಂದ ಇಲಾಖೆಗಳು ವಿಷಯಕ್ಕೆ ಹೆಚ್ಚಿನ ಮಹತ್ವ ನೀಡಿ ಸ್ವತಂತ್ರ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಯಾವ ಯಾವ ಯೋಜನೆ/ಕಾರ್ಯಕ್ರಮಗಳನ್ನು ಮೌಲ್ಯಮಾಪನ ಪ್ರಕ್ರಿಯೆಗೆ ಅಳವಡಿಸಿಕೊಳ್ಳಬೇಕೆಂದು ತೀರ್ಮಾನಿಸಿ ಇಲಾಖಾ ಮೌಲ್ಯಮಾಪನ ಸಮಿತಿಯಲ್ಲಿ ಚರ್ಚಿಸಬೇಕೆಂದು ಸೂಚಿಸಿರುವುದರಿಂದ, ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸುವ ವಿಧಿ ವಿಧಾನಗಳನ್ನೊಳಗೊಂಡಂತೆ ಒಂದು ಇಲಾಖಾ ಮೌಲ್ಯಮಾಪನ ಸಮಿತಿಯನ್ನು ಹಾಗೂ ಆ ಸಮಿತಿಯ ಪ್ರಕಾರ್ಯಗಳನ್ನು ಒಳಗೊಂಡಂತೆ ಆದೇಶವನ್ನು ಹೊರಡಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 196 ಸ್ವೀಮರ 2009, ಬೆಂಗಳೂರು, ದಿನಾಂಕ: 30ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸ್ವತಂತ್ರ ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಒಂದು ಕೋಟಿ ರೂ.ಗಳಿಗಿಂತ ಹೆಚ್ಚಿನ ಆಯವ್ಯಯ ಹೊಂದಿರುವ ಯೋಜನೆಗಳನ್ನು ಪ್ರತಿ ವರ್ಷ ಮೌಲ್ಯಮಾಪನ ಮಾಡುವ ಸಲುವಾಗಿ ಸರ್ಕಾರದ ಪ್ರಮುಖ ಯೋಜನೆ ಹಾಗೂ ಯೋಜನೇತರ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಮೌಲ್ಯ ಮಾಪನ ಮಾಡುವ ಕುರಿತಂತೆ ಇಲಾಖೆಗಳು ಹೆಚ್ಚಿನ ಮಹತ್ವ ನೀಡಿ ಸ್ವತಂತ್ರ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕಾಗಿರುವುದರಿಂದ ಯಾವ ಯಾವ ಯೋಜನೆ/ಕಾರ್ಯಕ್ರಮಗಳನ್ನು ಮೌಲ್ಯಮಾಪನ ಪ್ರಕ್ರಿಯೆಗೆ ಅಳವಡಿಸಿಕೊಳ್ಳಬೇಕೆಂಬ ಬಗ್ಗೆ ತೀರ್ಮಾನಿಸಲು ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಇಲಾಖಾ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿದೆ.

ಇಲಾಖಾ ಮೌಲ್ಯಮಾಪನ ಸಮಿತಿಯು (ಡಿ.ಇ.ಸಿ.) ಈ ಕೆಳಕಂಡಂತಿರುತ್ತದೆ.

1. ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು	– ಅಧ್ಯಕ್ಷರು
2. ಅನುಷ್ಠಾನಗೊಳಿಸುತ್ತಿರುವ ಇಲಾಖೆಯ ಮುಖ್ಯಸ್ಥರುಗಳು	– ಸದಸ್ಯರು
3. ಹಿರಿಯ ನಿರ್ದೇಶಕರು, ಮೌಲ್ಯಮಾಪನ ವಿಭಾಗ ಯೋಜನಾ ಇಲಾಖೆ	– ಸದಸ್ಯರು
4. ಆಂತರಿಕ ಆರ್ಥಿಕ ಸಲಹೆಗಾರರು	– ಸದಸ್ಯರು
5. ಮಾಹಿತಿ ತಂತ್ರಜ್ಞಾನ ಇಲಾಖೆಯ ಪ್ರತಿನಿಧಿ	– ಸದಸ್ಯರು
6. ಸಂಬಂಧಪಟ್ಟ ಇಲಾಖೆಯಲ್ಲಿ ಯೋಜನೆ ಮತ್ತು ಮಾನಿಟರಿಂಗ್ ಕಾರ್ಯ ನಿರ್ವಹಿಸುತ್ತಿರುವ ಉಪ ಕಾರ್ಯದರ್ಶಿಗಳು	– ಸದಸ್ಯ – ಕಾರ್ಯದರ್ಶಿಗಳು

ಸಮಿತಿಯ ಪ್ರಕಾರ್ಯಗಳು ಕೆಳಗಿನಂತಿವೆ:

1. ಮೌಲ್ಯಮಾಪನಕ್ಕೆ ಒಳಪಡಿಸಬೇಕಾದ ಯೋಜನೆ/ಕಾರ್ಯಕ್ರಮಗಳ ಬಗ್ಗೆ ನಿರ್ಧರಿಸುವುದು.
2. ಮೌಲ್ಯಮಾಪನವನ್ನು ಹೊರಗಿನ ಸಂಸ್ಥೆಗಳಿಗೆ ವಹಿಸುವುದು
3. ಮೌಲ್ಯಮಾಪನ ಸಂಸ್ಥೆಗಳು ತಯಾರಿಸಿದ ಮೌಲ್ಯಮಾಪನ ವರದಿಗಳನ್ನು ಪರಿಶೀಲಿಸಿ ಅಂತಿಮಗೊಳಿಸುವುದು
4. ಮೌಲ್ಯಮಾಪನ ಅಧ್ಯಯನದಲ್ಲಿನ ಶಿಫಾರಸ್ಸುಗಳನ್ನು ಅಂತಿಮಗೊಳಿಸುವುದು ಹಾಗೂ ಶಿಫಾರಸ್ಸುಗಳ ಮೇಲಿನ ಅನುವರ್ತನಾ ಕ್ರಮಗಳನ್ನು ಸೂಚಿಸುವುದು.
5. ಮೇಲಿನ 4ರಲ್ಲಿ ಅಂತಿಮಗೊಳಿಸಿದ ಅನುವರ್ತನಾ ಕ್ರಮಗಳ ಅನುಷ್ಠಾನದ ಪರಿಶೀಲನೆ.

ಮೌಲ್ಯಮಾಪನ ಪ್ರಕ್ರಿಯೆಗೆ ಅಳವಡಿಸುವ ಯೋಜನೆಗಳು ಕನಿಷ್ಠ 2–3 ವರ್ಷಗಳಿಂದ ಅನುಷ್ಠಾನದಲ್ಲಿರಬೇಕು ಮತ್ತು 2009–10ನೇ ಸಾಲಿನಲ್ಲಿ ಅದು ಮುಂದುವರೆದ ಯೋಜನೆಯಾಗಿರತಕ್ಕದ್ದು. ಹಾಗೂ ಇಲಾಖೆಗಳು ಮೌಲ್ಯಮಾಪನ ಯೋಜನೆಗಳನ್ನು ಆಯ್ಕೆ ಮಾಡಿದ ನಂತರ ದಿ:5.6.2003ರ ಸುತ್ತೋಲೆಯ ಪ್ಯಾರಾ–6ರಲ್ಲಿ ಸೂಚಿಸಿರುವಂತೆ ಕರಡು ಸಂಕ್ಷಿಪ್ತ ಪರಿಕಲ್ಪನಾ ಬರಹವನ್ನು ಈ ಕೆಳಕಂಡ ವಿಷಯಗಳನ್ನೊಳಗೊಂಡಿರುವಂತೆ ತಯಾರಿಸತಕ್ಕದ್ದು.

1. ಮೌಲ್ಯಮಾಪನಕ್ಕೆ ಈ ಯೋಜನೆಯನ್ನು ಏಕೆ ಆಯ್ಕೆ ಮಾಡಲಾಗಿದೆ
2. ಮೌಲ್ಯಮಾಪನದಿಂದ ಏನನ್ನು ತಿಳಿಯಲು ಬಯಸಲಾಗಿದೆ (ಮೌಲ್ಯಮಾಪನದ ಉದ್ದೇಶ ಮತ್ತು ಅಳತೆ ಗೋಲುಗಳನ್ನು ವಿವರಿಸುವುದು)
3. ಮೌಲ್ಯ ಮಾಪನದ ವಿನ್ಯಾಸ ಉದಾ: ಸಮೀಕ್ಷೆ/ವಿಷಯ ಅಧ್ಯಯನ (Case study)ಮುಂತಾದವು.
4. ಸಂಬಂಧಪಟ್ಟ ಇಲಾಖೆಗಳು ಮೌಲ್ಯಮಾಪನದ ಫಲಿತಾಂಶವನ್ನು ಹೇಗೆ ಉಪಯೋಗಿಸಿಕೊಳ್ಳುತ್ತವೆ.

ಮೇಲಿನ ಅಂಶಗಳಲ್ಲದೆ ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯೋಜನಾ ಇಲಾಖೆಯು ದಿನಾಂಕ:5.6.2003ರಂದು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಗಳನ್ವಯ ಸಮಿತಿಯು ಕಾರ್ಯನಿರ್ವಹಿಸತಕ್ಕದ್ದು. ಆ ಮಾರ್ಗಸೂಚಿಗಳನ್ನು ಅನುಬಂಧ –1ರಲ್ಲಿ ನೀಡಲಾಗಿದೆ.

ಇಲಾಖಾ ಮೌಲ್ಯಮಾಪನ ಸಮಿತಿಯು ಈ ಕೆಳಕಂಡ ವೇಳಾಪಟ್ಟಿಯನ್ವಯ ಕಾರ್ಯನಿರ್ವಹಿಸತಕ್ಕದ್ದು.

(1)	(2)	(3)	(4)
ಮೌಲ್ಯಮಾಪನ ಅಧ್ಯಯನಕ್ಕೆ ವಿಷಯವನ್ನು ಆಯ್ಕೆ ಮಾಡುವುದು, ಸಲಹೆಗಾರರ ಪೂರ್ವಾರ್ಹತೆ ಕಿರುಪಟ್ಟಿ ಮತ್ತು ಷರತ್ತುಗಳನ್ನು ಅನುಮೋದಿಸಲು ಇಲಾಖಾ ಮೌಲ್ಯಮಾಪನ ಸಮಿತಿ ಸಭೆ (ಏಪ್ರಿಲ್)	ಮೌಲ್ಯಮಾಪನ ಅಧ್ಯಯನ ವರದಿಗಳನ್ನು ಅನುಮೋದಿಸಲು ಇಲಾಖಾ ಮೌಲ್ಯಮಾಪನ ಸಮಿತಿ ಸಭೆ (ಆಗಸ್ಟ್–ಸೆಪ್ಟೆಂಬರ್)	ಅಧ್ಯಯನ ವರದಿಯ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಳ್ಳಲು ಅಂಶಗಳನ್ನು ನಿರ್ಧರಿಸಲು ಹಾಗೂ ಸಾಧ್ಯವಿರುವೆಡೆ ಯೋಜನೆಯ ಜಾರಿಯಲ್ಲಿ ಮಧ್ಯಂತರ ತಿದ್ದುಪಡಿಗಳನ್ನು ಸೂಚಿಸುವುದು (ಅಕ್ಟೋಬರ್ – ಡಿಸೆಂಬರ್)	ಶಿಫಾರಸ್ಸುಗಳ ಸಾರಾಂಶ ಮತ್ತು ಕ್ರಮ ತೆಗೆದುಕೊಂಡ ವರದಿಯನ್ನು ಮೌಲ್ಯಮಾಪನ ಸಮನ್ವಯ (ಇಸಿಸಿ)ಸಮಿತಿಯ ಮುಂದಿರಿಸುವುದು. (ಡಿಸೆಂಬರ್–ಮಾರ್ಚ್)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

ANNEXURE – I

Revised Guidelines for independent evaluation initiative

1. To initiate evaluation, one major plan/non-plan scheme has to be selected.
2. It should be done by an independent agency.
3. No special finance will, be provided for the same by Planning Department.
4. The department can take up different types of evaluations like impact monitoring, process evaluation and impact evaluation.
5. The Administrative Departments should ask the field departments to initiate evaluation and submit at least one evaluation report within 31st March of every year.
6. A department which intends to outsource the Evaluation study to an external agency should prepare a draft concept paper summarizing-
   a. Why the scheme is being picked for Evaluation.
   b. What is hoped will be learnt from the Evaluation (defining the parameters and objectives of the evaluation).
   c. How it is planned that this will be learnt (evaluation design e.g. survey/case study etc.,)
   d. How the information will be used by the department concerned.
7. Pre-qualifying criteria for short-listing consultants.
   a. The department can circulate the concept paper among the consultants (list of addresses provided by the Planning Department) and ask for their expression of interest.
   b. The concept paper should be sent to those consultant who are specialized in a particular area.
   c. An advertisement inviting offers from the interested agencies may be published in selected newspapers giving 3 weeks time for submission of proposals from the date of publication.

d. The agency can be selected on the basis of a comparative statement of offers prepared by the Department.

e. Particulars of the selected agencies may be obtained through direct communication with them.

f. The agency can be selected on the basis of comparative merits of the agencies.

g. A single agency can also be selected, provided such an agency is having good reputation, experience in conducting studies and best suited for the study proposed.

8. Utilizing the concept paper, the Terms of Reference will be drafted and an agreement (with the agency) entered into.

9. Once the evaluation questions are decided as mentioned in 7(b) & 7(c), by looking at the evaluation design the Department can ask the agency to conduct the evaluation study at per the design.

10. As far as possible, the department must integrate gender issues in the evaluation questions and design.

11. A draft report will be submitted by the agency within the stipulated time to the department concerned. The department in turn before making final payment should satisfy itself that all the issues mentioned in the TOR have been covered.

12. If the draft report submitted by the external agency is unsatisfactory with regard to the TOR then the department may impose a penalty and this should be mentioned in the TOR.

13. Draft reports submitted by the agencies will be discussed in the DEC.A separate meeting need not be called for this. The MMR can be a forum for such discussions. In that case, only the other two members namely, Senior Director, Evaluation Division of Planning Department and the representative of Directorate of IT who are the members of the DEC have to be invited for the meeting. Further, the services of the Nodal Officers of the Planning Department may be utilized for the purpose.

14. Each such meeting should invariably have proceedings for follow-up actions.

15. The department which has outsourced the study should prepare a one page summary of the report and present the findings and recommendations of the study in the DEC meeting. The Committee can finalize the recommendations, approve the report and suggest actions on the recommendations. The one page summary of the report should be sent to the Evaluation Division through a Floppy so as to enable the Planning Department to corporate the abstract in the Evaluation Database.

16. The Committee should take follow-up action on the recommendations so that the report and the Action Taken Report (ATR) could be placed before the ECC for its approval. The ATR should be sent to the planning Department within 2 months after the DEC meeting.

17. The Department should forward Two hard copies and a soft copy (CD) of the report to the Senior Director, Evaluation Division, Planning, Statistics, Science & Technology Department, 6th floor, II stage, M.S. Building in order to submit to the ECC and put the same on the website of the planning Department. The soft copy should be prepared in Portable Document Format (PDF) with a file name, and links to all the chapters of the report, through index.

18. The agencies should prepare the report with the following contents; executive summary, the TOR, the questionnaire used, the statistical tools used, background notes and a separate chapter on findings and recommendations.

19. The Departments should send the Quarterly Progress Report (QPR) to the Planning Department, within a week after the end of the quarter.

20. The above mentioned are only broad guidelines. Departments can select any scheme either plan or non-plan- if it is significant, even if the allocation for the scheme is less than Rs. 1 crore.

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1780

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

ಸಹಕಾರ ಸಚಿವಾಲಯ

ವಿಷಯ: ದಿನಾಂಕ:31.03.2009 ರೊಳಗೆ ನಡೆಸಬೇಕಾಗಿರುವ ಕರ್ನಾಟಕ ಸಿಲ್ಕ್ ಟ್ವಿಸ್ಟರ್ಸ್ ಮತ್ತು ವೀವರ್ಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ನಿ., ಬೆಂಗಳೂರು ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್ಎಂ 2009, ದಿನಾಂಕ:04.03.2009.

2. ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್ಎಂ 2009, ದಿನಾಂಕ:13.05.2009.

3. ಕಾರ್ಯದರ್ಶಿ, ಕರ್ನಾಟಕ ಸಿಲ್ಕ್ ಟ್ವಿಸ್ಟರ್ಸ್ ಮತ್ತು ವೀವರ್ಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ ಬೆಂಗಳೂರು ಇವರ ಪತ್ರ ದಿನಾಂಕ:27.06.2009.

ಪ್ರಸ್ತಾವನೆ:

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್ಎಂ 2009, ದಿನಾಂಕ:04.03.2009ರ ಆದೇಶದಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ 2009–10ರಿಂದ ಐದು ವರ್ಷದ ಅವಧಿಗೆ ಆಡಳಿತ ಸಮಿತಿಗೆ ಚುನಾವಣೆ ನಡೆಸಬೇಕಾದ ಸಹಕಾರ ಸಂಘಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದೆಂದು ಆದರೆ, ದಿನಾಂಕ:04.03.2009ಕ್ಕೆ ಹಿಂದೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದು ಚುನಾವಣೆಯು ಮುಕ್ತಾಯವಾಗದಿದ್ದ ಸಂದರ್ಭಗಳಲ್ಲಿ ಮಾತ್ರ ದಿನಾಂಕ:04.03.2009ರಲ್ಲಿದ್ದಂತೆ ಚುನಾವಣಾ ವೇಳಾ ಪಟ್ಟಿಯ ಯಾವ ಹಂತದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಿಲ್ಲಿಸಲಾಗಿತ್ತೋ ಆ ಹಂತದಿಂದ ಚುನಾವಣಾ ಪ್ರಕ್ರಿಯೆಯನ್ನು ಮುಂದುವರಿಸಿ ದಿನಾಂಕ:04.03.2009ರ ಆದೇಶದಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕದ್ದೆಂದು ಆದೇಶಿಸಿರುತ್ತದೆ. ಮೇಲೆ ಓದಲಾದ (3)ರ ಮನವಿಯಲ್ಲಿ ಕರ್ನಾಟಕ ಸಿಲ್ಕ್ ಟ್ವಿಸ್ಟರ್ಸ್ ಮತ್ತು ವೀವರ್ಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ ಬೆಂಗಳೂರು ಇದರ ಕಾರ್ಯದರ್ಶಿಯವರು ಸಂಘದ ಆಡಳಿತ ಮಂಡಳಿಗೆ 2009–10 ರಿಂದ 2013–14ನೇ ಅವಧಿಗೆ ನಡೆಸಬೇಕಾದ ಚುನಾವಣೆಯನ್ನು ನಿಗದಿಪಡಿಸಿದ ದಿನಾಂಕದ ಬಗ್ಗೆ ತಿಳುವಳಿಕೆ ಇಲ್ಲದೆ ಅಚಾತುರ್ಯವೆಸಗಿರುವ ಪರಿಣಾಮವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಸಂಘದ ಆಡಳಿತ ಮಂಡಳಿಯ ಚುನಾವಣಾ ಕಾಲವನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಸದರಿ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 122 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 13ನೇ ಜುಲೈ 2009

ಮೇಲಿನ ಪರಿಸ್ಥಿತಿಯಲ್ಲಿ ಕರ್ನಾಟಕ ಸಿಲ್ಕ್ ಟ್ವಿಸ್ಟರ್ಸ್ ಮತ್ತು ವೀವರ್ಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ನಿ., ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ, ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಅನ್ನು ಮಾರ್ಪಾಟು ಮಾಡಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಒ 47 ಸಿಎಲ್ಎಂ 2009, ದಿನಾಂಕ:04.03.2009 ಅನ್ನು ಭಾಗಶಃ ಮಾರ್ಪಡಿಸಿ ಸದರಿ ಸಹಕಾರ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು 30.09.2009ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ: ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:30.09.2009 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್. 1748

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ನಿರ್ವಹಿಸುವ ಸ್ಥಳದಲ್ಲಿ ಅಕುಶಲ ದೈಹಿಕ ಕೆಲಸಗಾರರಿಗೆ ಸಲಕರಣೆ/ಸಾಮಗ್ರಿಗಳನ್ನು ಒದಗಿಸುವ ಕುರಿತು.

ಓದಲಾಗಿದೆ: 1. ಇದೇ ಸಮ ಸಂಖ್ಯೆ ಪತ್ರ ದಿನಾಂಕ : 23.03.2009

2. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಸಂಬಂಧ ದಿನಾಂಕ:05.05.2009 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.

ಪ್ರಸ್ತಾವನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳ ಸ್ಥಳದಲ್ಲಿ ಅಕುಶಲ ದೈಹಿಕ ಕೆಲಸಗಾರರಿಗೆ ಯಾವುದೇ ಕಾರಣಕ್ಕೂ ಜಿಲ್ಲಾ ಪಂಚಾಯತಿ/ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆಲಸಗಾರರಿಗೆ ಸಲಕರಣೆ/ಸಾಮಗ್ರಿಗಳನ್ನು ಖರೀದಿ ಮಾಡದಂತೆ ಕ್ರಮವಹಿಸಲು ಹಾಗೂ 10 ಕೂಲಿಗಾರರ ಸಮೂಹ ನಿರ್ವಹಿಸುವ ಕೆಲಸಗಳ ಸಂಬಂಧ ವಿವಿಧ ಸಲಕರಣೆ/ಸಾಮಗ್ರಿಗಳನ್ನು ಬಳಸಬಹುದಾದ ಕೆಲಸಗಾರರಿಗೆ ಅನುಗುಣವಾಗಿ ನಿಗಧಿತ ಹಣ ಪಾವತಿಸಲು ಕ್ರಮಕೈಗೊಳ್ಳುವಂತೆ ಮೇಲೆ ಓದಲಾದ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ.

ಆದರೆ, ಸದರಿ ಪತ್ರದಲ್ಲಿ ತಿಳಿಸಿರುವಂತೆ ಸಲಕರಣೆ/ಸಾಮಗ್ರಿಗಳ ಬಾಬ್ತು ಕೆಲಸಗಾರರಿಗೆ ಹಣ ಸಂದಾಯ ಮಾಡುವ ಪ್ರಕ್ರಿಯೆಯನ್ನು ಸರಳೀಕರಿಸುವಂತೆ ಮತ್ತು ಸದರಿ ಸಲಕರಣೆ/ಸಾಮಗ್ರಿಗಳ ಬಾಬ್ತು ಯೋಜನೆಯಡಿ ಕೆಲಸನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00 ರೂ.ಗಳನ್ನು ದಿನಗೂಲಿ ಜೊತೆಗೆ ನೀಡುವುದು ಸೂಕ್ತವೆಂದು ಮೇಲೆ ಓದಲಾಗದ -2 ರ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಆದ ಕಾರಣ, ತಕ್ಷಣವೇ ಜಾರಿಗೆ ಬರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00 ರೂ. (ಮೂರು ರೂಪಾಯಿ ಮಾತ್ರ) ಗಳನ್ನು ಸಲಕರಣೆ/ಸಾಮಗ್ರಿಗಳ ಮೊತ್ತವಾಗಿ ದಿನಗೂಲಿ ಮೊತ್ತದ ಜೊತೆಗೆ ಸದರಿಯವರ ಬ್ಯಾಂಕ್/ಅಂಚೆ ಕಛೇರಿಯ ಖಾತೆಗೆ ಪಾವತಿ ಮಾಡುವಂತೆ ಕ್ರಮವಹಿಸಬೇಕಾಗಿದೆ. ಆದುದರಿಂದ, ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 39 ಉಖಾಯೋ 2008, ಬೆಂಗಳೂರು, ದಿನಾಂಕ: 6ನೇ ಮೇ 2009

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00 ರೂ. (ಮೂರು ರೂಪಾಯಿ ಮಾತ್ರ) ಗಳನ್ನು ಸಲಕರಣೆ/ಸಾಮಗ್ರಿಗಳ ಮೊತ್ತವಾಗಿ ದಿನಗೂಲಿ ಮೊತ್ತದ ಜೊತೆಗೆ ಸದರಿಯವರ ಬ್ಯಾಂಕ್/ಅಂಚೆ ಕಛೇರಿಯ ಖಾತೆಗೆ ಪಾವತಿ ಮಾಡುವಂತೆ ಕ್ರಮವಹಿಸುವಂತೆ ಮತ್ತು ಸದರಿ ಸಲಕರಣೆ/ಸಾಮಗ್ರಿಗಳ ಬಾಬ್ತು ಕೆಲಸಗಾರರಿಗೆ ನೀಡಲಾಗುವ ಹಣದ ವೆಚ್ಚವನ್ನು ಯೋಜನೆಯ ಸಾಮಗ್ರಿ ಬಾಬ್ತಿನ ವೆಚ್ಚದಲ್ಲಿ ಭರಿಸುವಂತೆ ಅದೇಶಿಸಿದೆ.

ಮೇಲೆ ತಿಳಿಸಲಾಗಿರುವ ಸಲಕರಣೆ/ಸಾಮಗ್ರಿಗಳ ಬಾಬ್ತಿನ ವೆಚ್ಚವನ್ನು ಆಯಾ ಕಾಮಗಾರಿಗಳ ಸಾಮಗ್ರಿ ವೆಚ್ಚಕ್ಕಾಗಿ ನಿಗದಿಪಡಿಸಿರುವ ಮೊತ್ತದಲ್ಲಿ ಖರ್ಚು ಭರಿಸತಕ್ಕದ್ದು ಮತ್ತು ಪ್ರಗತಿ ವರದಿಯಲ್ಲಿ ಅದೇ ರೀತಿ ಖರ್ಚು ತೋರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಪಿ.ಸಿ. ಜಾಫರ್

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 1375

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕುರಿತು

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂ:ಗ್ರಾಅಪ 41 ರಾಗ್ರಾಉಖಾಯೋ 06 ದಿನಾಂಕ: 01-02-2007

ಪ್ರಸ್ತಾವನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ನೋಂದಾಯಿತ ಕೆಲಸಗಾರರ ಬೇಡಿಕೆಗೆ ಅನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ನೀಡುವುದು ಮತ್ತು ದೀರ್ಘಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಹಾಗೂ ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಬಲಪಡಿಸುವುದು ಯೋಜನಯೆ ಮುಖ್ಯ ಉದ್ದೇಶವಾಗಿರುತ್ತದೆ. ಈ ಸಂಬಂಧ ಮೇಲೆ ಓದಲಾದ ಅಧಿಸೂಚನೆ ಕ್ರಮ ಸಂಖ್ಯೆ 12ರಲ್ಲಿ ಯೋಜನೆಯಡಿ ಆದ್ಯತೆಯ ಮೇಲೆ ತಗೆದುಕೊಳ್ಳಬೇಕಾದ 9 ವಿಧದ ಕಾಮಗಾರಿಗಳನ್ನು ತಿಳಿಸಲಾಗಿರುತ್ತದೆ. ಈ ಯೋಜನೆಯನ್ನು ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಸದರಿ ಕಾಮಗಾರಿಗಳ ಪಟ್ಟಿಯಲ್ಲಿನ ಕ್ರ.ಸಂ. 4ರಲ್ಲಿ ಭೂ ಅಭಿವೃದ್ಧಿ ಮತ್ತು ನೀರಾವರಿ ಸೌಲಭ್ಯಗಳ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ

ಪಂಗಡ, ಬಿ.ಪಿ.ಎಲ್., ಸಣ್ಣ ಮತ್ತು ಅತಿ ಸಣ್ಣ ರೈತರು, ಐ.ಎ.ವೈ. ಫಲಾನುಭವಿಗಳ ಮತ್ತು ಭೂ ಸುಧಾರಣಾ ಕಾಯಿದೆಯನ್ವಯ ಜಮೀನು ಹೊಂದಿರುವ ಫಲಾನುಭವಿಗಳ ಜಮೀನಿನಲ್ಲಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಸೌಲಭ್ಯವನ್ನು ಇತರೆ ರೈತರಿಗೂ ವಿಸ್ತರಿಸುವ ಕುರಿತು ಮತ್ತು ಕೃಷಿ ಚಟುವಟಿಕೆ ಕೈಗೊಂಡ ನಂತರ ಕೃಷಿ ಉತ್ಪನ್ನಗಳನ್ನು ರೈತರ ಹೊಲಗಳಿಂದ ಅಥವಾ ಜಮೀನುಗಳಿಂದ ಸಾಗಾಣಿಕೆಗಾಗಿ ಸಮರ್ಪಕ ರಸ್ತೆ ಸೌಲಭ್ಯಕ್ಕಾಗಿ ಹೆಚ್ಚಿನ ಬೇಡಿಕೆ ಇರುತ್ತದೆ. ಅದರಂತೆ, ಮೇಲೆ ತಿಳಿಸಲಾದ ಎರಡೂ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸಲು ರಾಜ್ಯ ಉದ್ಯೋಗ ಖಾತರಿ ಯೋಜನಾ ಪರಿಷತ್ತಿನ ಅನುಮೋದನೆ ನಿರೀಕ್ಷೆಯ ಮೇರೆಗೆ ರಾಜ್ಯ ಉದ್ಯೋಗ ಖಾತರಿ ಯೋಜನಾ ಪರಿಷತ್ತಿನ ಅಧ್ಯಕ್ಷರು ಅನುಮೋದನೆ ನೀಡಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 8 ಉಖಾಯೋ 2008, ದಿನಾಂಕ: 6ನೇ ಮೇ 2009

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ಮೇಲೆ ಓದಲಾದ–1 ರ ಸರ್ಕಾರದ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ: 12 ರಲ್ಲಿ ತಿಳಿಸಲಾಗಿರುವ ಕಾಮಗಾರಿಗಳ ಜೊತೆಗೆ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಸದರಿ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಆದೇಶಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಈ ಕೆಳಕಂಡ ಕೆಲಸಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

1) ರೈತರ ಹೊಲ/ಗದ್ದೆ/ತೋಟ/ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯ ಮೊತ್ತದ ಶೇ 10 ಮೀರದಂತೆ ಕಾಮಗಾರಿಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದು.

2) ವೈಯಕ್ತಿಕ ಭೂ ಅಭಿವೃದ್ಧಿಗಾಗಿ ಎಸ್.ಸಿ/ಎಸ್.ಟಿ., ಸಣ್ಣ ಮತ್ತು ಅತಿ ಸಣ್ಣ ರೈತರು, ಐ.ಎ.ವೈ. ಫಲಾನುಭವಿಗಳು, ಭೂ ಸುಧಾರಣಾ ಫಲಾನುಭವಿಗಳು ಮತ್ತು ಬಿ.ಪಿ.ಎಲ್. ಫಲಾನುಭವಿಗಳಲ್ಲದೇ ಇದರ ಜೊತೆಗೆ ರೈತರ ಜಮೀನನ್ನು ಗರಿಷ್ಠ ಹೆಕ್ಟೇರ್‌ಗೆ ಸೀಮಿತಗೊಳಿಸಿ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಪಿ.ಸಿ. ಜಾಫರ್

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಪಿ.ಆರ್. 1376 ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕೆ. ಶಂಕರಪ್ಪ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಳ್ಳಾರಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (1)ರ ಪ್ರಕಾರ ನಿವೃತ್ತಿ ವೇತನಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಸೇರ್ಪಡೆಗೆ ಪರಿಗಣಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ –I, ಸಂ: ಲಾ 67 ಪಿಪಿಇ 82, ದಿನಾಂಕ: 22.12.82
2. ಸರ್ಕಾರದ ಆದೇಶದ ಸಂ; ಲಾ 55 ಪಿಪಿಇ 83, ದಿನಾಂಕ: 21/23.06.83
3. ಸದರಿ ಅಧಿಕಾರಿಯವರ ಮನವಿ ದಿನಾಂಕ 18.08.2008
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರ ಪತ್ರ ಸಂ: ಡಿಪಿಎನ್/ಲೆಕ್ಕ–1/198/2008–09, ದಿನಾಂಕ 13.04.2009.

ಪ್ರಸ್ತಾವನೆ:

ಶ್ರೀ ಕೆ. ಶಂಕರಪ್ಪ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಳ್ಳಾರಿ, ಇವರು ಮೇಲೆ (1) ರಲ್ಲಿ ಓದಲಾದ ದಿನಾಂಕ 22.12.1982ರ ಸರ್ಕಾರದ ಅಧಿಸೂಚನೆ–I ರ ಕ್ರ. ಸಂ. 3ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ 04.01.1983ರ ಅಪರಾಹ್ನ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸದರಿ ನಿವೃತ್ತ ಅಧಿಕಾರಿಯವರ ಜನ್ಮ ದಿನಾಂಕ: 12.06.1950 ಆಗಿದ್ದು, ಸದರಿಯವರ ಜನ್ಮ ದಿನಾಂಕವನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ 21/23/06.1983ರ ಸರ್ಕಾರದ ಆದೇಶದಲ್ಲಿ ಒಪ್ಪಲಾಗಿದೆ.

ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ, ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ: 04.01.1983 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿದ್ದು, ಇವರ ಜನ್ಮ ದಿನಾಂಕವನ್ನು 12.06.1950 ಎಂದು ಸರ್ಕಾರವು ಒಪ್ಪಿರುವುದರಿಂದ, 32 ವರ್ಷ, 06 ತಿಂಗಳು, 22 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ

ಆಗಿರುತ್ತದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (1)ರನ್ವಯ ಎರಡು ವರ್ಷಗಳ ಹೆಚ್ಚುವರಿ ಸೇವೆಯನ್ನು ಸದರಿಯವರ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗದ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರುರವರು, ಶ್ರೀ ಕೆ. ಶಂಕರಪ್ಪ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಳ್ಳಾರಿ, ಇವರು ದಿನಾಂಕ 04.01.1983 ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಹಾಜರಾಗಿರುತ್ತಾರೆ. ಇವರ ಜನ್ಮ ದಿನಾಂಕ 12.06.1950 ಆಗಿರುತ್ತದೆ. ಸದರಿ ಅಧಿಕಾರಿಯು ಅವರ 32 ವರ್ಷ, 06 ತಿಂಗಳು, 22 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಎರಡು ವರ್ಷಗಳ ಹೆಚ್ಚುವರಿ ಸೇವೆಯನ್ನು ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸುರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 222 ಪಿಪಿಇ 2009 ಬೆಂಗಳೂರು, ದಿನಾಂಕ: 1ನೇ ಜೂನ್ 2009

ಶ್ರೀ ಕೆ. ಶಂಕರಪ್ಪ, ನಿವೃತ್ತ ಸರ್ಕಾರಿ ಅಭಿಯೋಜಕರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247 (ಎ)(1)ರನ್ವಯ ಎರಡು ವರ್ಷಗಳ ಅಧಿಕ ಸೇವೆಯನ್ನು ಶ್ರೀಯುತರ ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆ (ಸೇವೆಗಳು –3) ಯ ಟಿಪ್ಪಣಿ ಸಂ: ಆಇ 719 ಸೇ3/09, ದಿನಾಂಕ:07.05.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ಧಪ್ಪ

ಪಿ.ಆರ್. 1395 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ವಿಷಯ: ಶ್ರೀ ಎಂ.ಎನ್. ಈನೋಸ್, ನಿವೃತ್ತ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಚಿಕ್ಕಮಗಳೂರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಸೇರ್ಪಡೆಗೆ ಪರಿಗಣಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ –II ಸಂ. ಲಾ 161 ಪಿಪಿಇ 86, ದಿನಾಂಕ : 24.07.1989
2. ಸರ್ಕಾರದ ಪತ್ರದ ಸಂ; ಲಾ 206 ಪಿಪಿಇ 91, ದಿನಾಂಕ: 05.12.91
3. ಸದರಿ ಅಧಿಕಾರಿಯವರ ಮನವಿ ದಿನಾಂಕ 25.02.2009
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರ ಪತ್ರ ಸಂ: ಡಿಪಿಎನ್/ಲೆಕ್ಕ–1/419/2008–09, ದಿನಾಂಕ 03.03.2009.

ಪ್ರಸ್ತಾವನೆ:

ಶ್ರೀ ಎಂ.ಎನ್. ಈನೋಸ್, ನಿವೃತ್ತ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಚಿಕ್ಕಮಗಳೂರು, ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 24.07.1989ರ ಸರ್ಕಾರದ ಅಧಿಸೂಚನೆಯ ಕ್ರ.ಸಂ. 36ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ: 04.08.1989 ರಂದು ಸಹಾಹಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸದರಿ ನಿವೃತ್ತ ಅಧಿಕಾರಿಯವರ ಜನ್ಮ ದಿನಾಂಕ: 15.05.1950 ಆಗಿದ್ದು, ಸದರಿಯವರ ಜನ್ಮ ದಿನಾಂಕವನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ: 05.12.91ರ ಸರ್ಕಾರದ ಪತ್ರದಲ್ಲಿ ಒಪ್ಪಲಾಗಿದೆ.

ಮೇಲೆ (3) ರಲ್ಲಿ ಓದಲಾದ ಮನವಿಯಲ್ಲಿ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ: 04.08.1989 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿದ್ದು, ಇವರ ಜನ್ಮ ದಿನಾಂಕವನ್ನು 15.05.1950 ಎಂದು ಸರ್ಕಾರವು ಒಪ್ಪಿರುವುದರಿಂದ, 39 ವರ್ಷ, 02 ತಿಂಗಳು, 19 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ ಆಗಿರುತ್ತದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ) (1)ರನ್ವಯ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಹೆಚ್ಚುವರಿ ಸೇವೆಯನ್ನು ಸದರಿಯವರ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಶ್ರೀ ಎಂ.ಎನ್. ಈನೋಸ್, ನಿವೃತ್ತ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಚಿಕ್ಕಮಗಳೂರು, ಇವರು ದಿನಾಂಕ: 04.08.1989 ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಹಾಜರಾಗಿರುತ್ತಾರೆ. ಇವರ ಜನ್ಮ ದಿನಾಂಕ: 15.05.1950 ಆಗಿರುತ್ತದೆ. ಸದರಿ ಅಧಿಕಾರಿಯು ಅವರ 39 ವರ್ಷ 02 ತಿಂಗಳು 19 ದಿನಗಳ ವಯಸ್ಸಿನಲ್ಲಿ

ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247 (ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಹೆಚ್ಚುವರಿ ಸೇವೆಯನ್ನು ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 148 ಪಿಪಿಇ 2009, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಶ್ರೀ ಎಂ.ಎನ್. ಈನೋಸ್, ನಿವೃತ್ತ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1) ರನ್ವಯ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಅಧಿಕ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆ (ಸೇವೆಗಳು–3) ಯ ಟಿಪ್ಪಣಿ ಸಂ:ಆ.ಇ. 792 ಸೇ3/09 ದಿನಾಂಕ:13.05.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ
ಪಿ.ಆರ್. 1396 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಕಂದಾಯ ಸಚಿವಾಲಯ

ವಿಷಯ: ಶ್ರೀ ಅನಿಲ್‌ಕುಮಾರ್, ಹಿಂದಿನ ತಹಶೀಲ್ದಾರ್, ಮಂಡ್ಯ ತಾಲ್ಲೂಕು ಹಾಗೂ ಇತರೆ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕುರಿತು – ಆರೋಪದಿಂದ ದೋಷಮುಕ್ತ ಮಾಡುವ ಬಗ್ಗೆ.

ಓದಲಾಗಿದೆ:
1. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಇವರ ಪತ್ರ ಸಂ. ಇಎಸ್‌ಟಿ (2) 57/2005–06, ದಿನಾಂಕ:08.06.2007
2. ಅಧಿಕಾರಿ/ನೌಕರರಿಗೆ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟೀಸು ದಿನಾಂಕ:06.09.2007
3. ಅಧಿಕಾರಿ/ನೌಕರರ ಲಿಖಿತ ಹೇಳಿಕೆ :
   - (i) ಶ್ರೀ ಎಸ್.ಬಿ. ಅನಿಲ್‌ಕುಮಾರ್, ಹಿಂದಿನ ತಹಶೀಲ್ದಾರ್, ಮಂಡ್ಯ, ದಿನಾಂಕ:15.10.2007
   - (ii) ಶ್ರೀ ಬಸವರಾಜಯ್ಯ, ಹಿಂದಿನ ಶಿರಸ್ತೇದಾರ್, ಮಂಡ್ಯ ತಾಲ್ಲೂಕು ಕಛೇರಿ, ದಿನಾಂಕ:20.10.2008
   - (iii) ಶ್ರೀ ಆರ್.ಬಿ. ರಾಮಣ್ಣನವರ್, ಹಿಂದಿನ ಶಿರಸ್ತೇದಾರ್, ಮಂಡ್ಯ ತಾಲ್ಲೂಕು ಕಛೇರಿ, ದಿನಾಂಕ: 05.12.2007
   - (iv) ಶ್ರೀ ಎಸ್.ಆರ್. ಲಕ್ಷ್ಮೀಕಾಂತಾಚಾರ್, ಹಿಂದಿನ ರಾಜಸ್ವ ನಿರೀಕ್ಷಕರು, ಮಂಡ್ಯ –. ಸಲ್ಲಿಸಿರುವುದಿಲ್ಲ.
   - (v) ಶ್ರೀ ಕೆ.ಎಸ್. ರಾಮರಾವ್, ಹಿಂದಿನ ಗ್ರಾಮಲೆಕ್ಕಿಗ, ಮಂಡ್ಯ ತಾಲ್ಲೂಕು, ಸಲ್ಲಿಸಿರುವುದಿಲ್ಲ.
   - (vi) ಶ್ರೀ ಗುರುಸ್ವಾಮಿ, ಹಿಂದಿನ ದ್ವಿ.ದ.ಸ., ಮಂಡ್ಯ ತಾಲ್ಲೂಕು, ದಿನಾಂಕ: 15.10.2007
   - (vii) ಶ್ರೀ ಎಸ್. ಶೇಷಾದ್ರಿ, ಹಿಂದಿನ ದ್ವಿ.ದ.ಸ., ಮಂಡ್ಯ ತಾಲ್ಲೂಕು, ದಿನಾಂಕ: 15.10.07
   - (viii) ಶ್ರೀ ಎನ್.ಜಿ. ಪ್ರಾಣೇಶ್, ಹಿಂದಿನ ದಫ್ತರ್‌ಬಂದ್, ಮಂಡ್ಯ ತಾಲ್ಲೂಕು, ದಿನಾಂಕ:03.10.2007

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1), ದಿನಾಂಕ 8.6.2007ರಲ್ಲಿ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಇವರು ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಬೂದನೂರು ಗ್ರಾಮದ ಸ.ನಂ: 273ರ ಸರ್ಕಾರಿ ರಸ್ತೆ ಜಮೀನಿನ ಪೈಕಿ 0–08 ಗುಂಟೆ ವಾಸಗಿಯವರಿಗೆ ಅಕ್ರಮವಾಗಿ ಸರ್ಕಾರಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟು ಅಧಿಕಾರ ದುರುಪಯೋಗ ಪಡಿಸಿಕೊಂಡ ಹಾಗೂ ಕರ್ತವ್ಯಲೋಪ ಎಸಗಿದ ಆರೋಪಗಳ ಮೇಲೆ ಈ ಕೆಳಕಂಡ ಎಂಟು ಅಧಿಕಾರಿ/ನೌಕರರ ವಿರುದ್ಧ ಕೆ.ಸಿ.ಎಸ್ (ಸಿಸಿಎ) ನಿಯಮಗಳು 1957ರ ನಿಯಮ 13ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸುವಂತೆ ಅನುಬಂಧ 1 ರಿಂದ 4ರವರಗಿನ ದೋಷಾರೋಪಣಾ ಪಟ್ಟಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

(1) ಶ್ರೀ ಎಸ್.ಬಿ. ಅನಿಲ್‌ಕುಮಾರ್, ಹಿಂದಿನ ತಹಶೀಲ್ದಾರ್, ಮಂಡ್ಯ ತಾಲ್ಲೂಕು
(2) ಶ್ರೀ ಬಸವರಾಜಯ್ಯ, ಹಿಂದಿನ ಶಿರಸ್ತೇದಾರ್, ತಾಲ್ಲೂಕು ಕಛೇರಿ, ಮಂಡ್ಯ
(3) ಶ್ರೀ ಆರ್.ಬಿ. ರಾಮಣ್ಣನವರ್, ಹಿಂದಿನ ಶಿರಸ್ತೇದಾರ್, ತಾಲ್ಲೂಕು ಕಛೇರಿ, ಮಂಡ್ಯ

(4) ಶ್ರೀ ಎಸ್.ಆರ್. ಲಕ್ಷ್ಮೀಕಾಂತಾಚಾರ್, ಹಿಂದಿನ ರಾಜಸ್ವ ನಿರೀಕ್ಷಕರು, ಕಸಬಾ, 2ನೇ ವೃತ್ತ, ಮಂಡ್ಯ ತಾಲ್ಲೂಕು

(5) ಶ್ರೀ ಕೆ.ಎಸ್. ರಾಮರಾವ್, ಹಿಂದಿನ ಗ್ರಾಮ ಲೆಕ್ಕಿಗ, ಬೂದನೂರು ವೃತ್ತ, ಮಂಡ್ಯ ತಾಲ್ಲೂಕು,

(6) ಶ್ರೀ ಗುರುಸ್ವಾಮಿ, ಹಿಂದಿನ ದ್ವಿ.ದ.ಸ., ತಾಲ್ಲೂಕು ಕಛೇರಿ, ಮಂಡ್ಯ,

(7) ಶ್ರೀ ಎಸ್. ಶೇಷಾದ್ರಿ, ದ್ವಿ.ದ.ಸ., ತಾಲ್ಲೂಕು ಕಛೇರಿ, ಮಂಡ್ಯ

(8) ಶ್ರೀ ಎನ್.ಜಿ. ಪ್ರಾಣೇಶ್, ದಫ್ತರ್‌ಬಂದ್, ತಾಲ್ಲೂಕು ಕಛೇರಿ, ಮಂಡ್ಯ

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿಗಳನ್ವಯ ಮೇಲ್ಕಂಡ ಎಂಟು ಅಧಿಕಾರಿ/ನೌಕರರಿಗೆ ಮೇಲೆ ಓದಲಾದ ಕ್ರ.ಸಂ. (2) ದಿನಾಂಕ: 6.9.2007ರಲ್ಲಿ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಸದರಿ ನೋಟೀಸಿಗೆ ಮೇಲೆ ಓದಲಾದ ಕ್ರ.ಸಂ. (3) ರನ್ವಯ ಲಿಖಿತ ಸಮಾಜಾಯಿಷಿಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತಾ ತಮ್ಮಗಳ ವಿರುದ್ಧ ಹೊರಿಸಲಾದ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ. ಶ್ರೀ ಅನಿಲ್‌ಕುಮಾರ್, ಹಿಂದಿನ ತಹಶೀಲ್ದಾರ್, ಮಂಡ್ಯ ತಾಲ್ಲೂಕು, ಇವರು ತಮ್ಮ ಲಿಖಿತ ಸಮಜಾಯಿಷಿಯಲ್ಲಿ ಈಗಾಗಲೇ ಉಪವಿಭಾಗಾಧಿಕಾರಿಗಳು, ಮಂಡ್ಯ ಉಪ ವಿಭಾಗ, ಇವರು ದಿನಾಂಕ: 16.10.2006 ರಲ್ಲಿ ಈ ಪ್ರಕರಣದ ಕುರಿತು ತನಿಖೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮಂಡಿಸಿರುವ ವರದಿಯಲ್ಲಿ ತಹಶೀಲ್ದಾರ್, ಮಂಡ್ಯರವರಿಂದ ಉದ್ದೇಶಪೂರ್ವಕವಾಗಿ ಲೋಪ ಕಂಡುಬರುತ್ತಿಲ್ಲವಾದ್ದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿದ್ದ ಹಿನ್ನಲೆಯಲ್ಲಿ, ತಮ್ಮನ್ನು ಈ ಆರೋಪದಿಂದ ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ. ಅದರಂತೆ, ಉಪ ವಿಭಾಗಾಧಿಕಾರಿಗಳೂ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ವರದಿ ಮಾಡಿರುವುದನ್ನು ಪರಿಗಣಿಸಿ, ಉಳಿದ ನೌಕರರು ಸಲ್ಲಿಸಿರುವ ಲಿಖಿತ ಸಮಜಾಯಿಷಿಗಳು ಸಮರ್ಥನಿಯವಲ್ಲವೆಂದು ಅವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ತೀರ್ಮಾನಿಸಿದೆ. ಶ್ರೀ ಅನಿಲ್‌ಕುಮಾರ್, ಹಿಂದಿನ ತಹಶೀಲ್ದಾರ್, ಮಂಡ್ಯ ಇವರನ್ನು ಈ ಪ್ರಕರಣದಲ್ಲಿ ಹೂಡಲಾಗಿದ್ದ ಆರೋಪಗಳಿಂದ ಮುಕ್ತರನ್ನಾಗಿ ಮಾಡಲು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ. ಆರ್‌ಡಿ 25 ಎಡಿಇ 2007, ಬೆಂಗಳೂರು, ದಿನಾಂಕ: 26.05.2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಶ್ರೀ ಅನಿಲ್‌ಕುಮಾರ್ ಹಿಂದಿನ ತಹಶೀಲ್ದಾರ್, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ, ಪಸ್ತುತ ತಹಶೀಲ್ದಾರ್, ಭೂಮಿ ಉಸ್ತುವಾರಿ ಕೋಶ, ಬೆಂಗಳೂರು, ಇವರು ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯನ್ನು ಒಪ್ಪಿ, ಇನ್ನು ಮುಂದೆ ಎಚ್ಚರಿಕೆಯಿಂದ ಕೆಲಸವನ್ನು ನಿರ್ವಹಿಸುವಂತೆ ತಿಳಿಸಿ, ಅವರ ವಿರುದ್ಧ ಹೂಡಲಾಗಿದ್ದ ಆರೋಪದಿಂದ ಕೈ ಬಿಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1400

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

ಅಧಿಸೂಚನೆ

ಸಂಖ್ಯೆ: ಕಂಇ 300 ಮುನೋಮು 2008, ಬೆಂಗಳೂರು, ದಿನಾಂಕ: 26ನೇ ಮೇ 2009

ಹೊಸ ಕೈಗಾರಿಕಾ ನೀತಿ 2006 – 2011ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ 198 ಮುನೋಮು 2007, ದಿನಾಂಕ: 26.05.2007 ರಲ್ಲಿ ವಲಯ 1 ರಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳಿಗೆ ಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿ, ವಲಯ 2 ರಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳಿಗೆ ಶೇ. 75 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ವಲಯ 1 ಮತ್ತು 2 ರಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳಿಗೆ ರೂ. 1,000/– ಗಳಿಗೆ ರೂ.1/– ರಂತೆ ನೋಂದಣಿ ಶುಲ್ಕ ಪಾವತಿಸುವಂತೆ ನೀಡಿರುವ ಸೌಲಭ್ಯವನ್ನು ಐಟಿ/ಬಿಟಿ ಘಟಕಗಳಿಗೂ ಸಹ ವಿಸ್ತರಿಸಿ ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಕಲಂ 9(1) ಮೇರೆಗೆ ಹಾಗೂ ನೋಂದಣಿ ಕಾಯ್ದೆ, 1908 ರ ಕಲಂ 78 ರ ಮೇರೆಗೆ ಅಧಿಸೂಚನೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ

ಪಿ.ಆರ್. 1401

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ವಿಷಯ: ಶ್ರೀ ಎನ್. ಸುಬ್ಬಣ್ಣ, ಹಿಂದಿನ ತಹಶೀಲ್ದಾರ್, ಕುಂದಾಪುರ (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂ: ಆರ್.ಡಿ. 47 ಎಡಿಇ 2005, ದಿನಾಂಕ 03.03.2009.

2. ಶ್ರೀ ಟಿ. ಹರಿಯಪ್ಪಗೌಡ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಬೆಂಗಳೂರು ಇವರ ಮನವಿ ದಿನಾಂಕ: 06.04.2009

ಪ್ರಸ್ತಾವನೆ :

ಶ್ರೀ ಎನ್. ಸುಬ್ಬಣ್ಣ, ನಿವೃತ್ತ ತಹಶೀಲ್ದಾರ್ ಇವರು ಈ ಹಿಂದೆ ಕುಂದಾಪುರ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ 61 ರಂತೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನನ್ನು ಭೂ ನ್ಯಾಯ ಮಂಡಳಿಯಿಂದ ಅಂತಿಮ ತೀರ್ಪಿನ 15 ವರ್ಷದ ಒಳಗೆ ಪರಭಾರೆ ಮಾಡಲು ನಿರ್ಬಂಧವಿದ್ದರೂ ಸಹ ಕಂದಾವರ ಗ್ರಾಮದ ರಘುರಾಮ ಹೆಗಡೆಯವರ ಮಕ್ಕಳಾದ ಬಾಲಕೃಷ್ಣ ಹೆಗಡೆ ಮತ್ತು ಶ್ರೀಮತಿ ವೆಂಕಮ್ಮ ಹೆಗ್ಗಡತಿ ಎಂಬುವವರಿಗೆ ಕುಂದಾಪುರ ಭೂ ನ್ಯಾಯ ಮಂಡಳಿಯ ಟಿ.ಆರ್.ಐ.ಸಂ: 1682/77-78, 1683/77-78, ದಿನಾಂಕ:17.03.2003 ರಂತೆ ಕುಂದಾಪುರ ಕಸಬಾ ಗ್ರಾಮದ ಸ.ನಂ. 59/6ಎ(ಪಿ1) ರಲ್ಲಿ 0.41 ಎಕರೆ, ಸ.ನಂ. 59/5 ಎ (ಪಿ1) ರಲ್ಲಿ 0-17 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಅಭಿಯೋಗದ ಹಕ್ಕು ಮಂಜೂರಾದ 15 ವರ್ಷದ ಪರಭಾರೆ ನಿರ್ಬಂಧವಿದ್ದ ಅವಧಿಯಲ್ಲಿ ಅಂದರೆ, ದಿನಾಂಕ: 21-04-2003 ರಂದು ಮಾರಾಟ ಮಾಡಲು ನಿರಾಕ್ಷೇಪಣಾ ಪತ್ರ ನೀಡಿರುವುದಾಗಿ ಹಾಗೂ ಇದೇ ವಿಷಯಕ್ಕೆ ಸಂಬಂಧಿಸಿದಂತೆ, ನಿರಾಕ್ಷೇಪಣಾ ದೃಢೀಕರಣ ಪತ್ರ ನೀಡಲು ಕಛೇರಿ ಟಿಪ್ಪಣಿ ಮಂಡಿಸಿ, ಶಿಫಾರಸ್ಸು ಮಾಡಿರುವ ಬಗ್ಗೆ ಹಾಗೂ ಕರ್ತವ್ಯ ನಿಷ್ಠೆ ಇಲ್ಲದೆ ದುರ್ನಡತೆಯನ್ನು ಎಸಗಿರುತ್ತಾರೆ. ಸರ್ಕಾರಿ ಅಧಿಕಾರಿ/ನೌಕರರಾಗಿ ಗಂಭೀರ ಸ್ವರೂಪದ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಶ್ರೀ ಎನ್. ಸುಬ್ಬಣ್ಣ (ನಿ) ತಹಶೀಲ್ದಾರ್ ಹಾಗೂ ಶ್ರೀ ಜಿ.ಟಿ. ಮಂಡಲೀಕರಾವ್, ನಿವೃತ್ತ ಶಿರಸ್ತೇದಾರ್, ಕುಂದಾಪುರ ತಾಲ್ಲೂಕು ಕಛೇರಿ ಇವರುಗಳ ವಿರುದ್ಧ ಆರೋಪಗಳ ಕುರಿತು ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಲು ಮೇಲೆ ಓದಲಾದ ಕ್ರ.ಸಂ. (1) ದಿನಾಂಕ:03.03.2009ರ ಆದೇಶದಲ್ಲಿ ಶ್ರೀ ಹರಿಯಪ್ಪಗೌಡ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು. ಮೇಲೆ ಓದಲಾದ ಕ್ರ.ಸಂ. (2) ದಿನಾಂಕ: 06-04-2009ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ತಾವು ಸದ್ಯ ಪೂರ್ಣಾವಧಿ ಕರ್ತವ್ಯದ ಮೇರೆಗೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಹೈಗ್ರೌಂಡ್ಸ್, ಬಸವ ಭವನ, ಬೆಂಗಳೂರು ಇಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದು, ತಮಗೆ ವಹಿಸಿರುವ ವಿಚಾರಣಾಧಿಕಾರಿಯ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ವಿಚಾರಣಾಧಿಕಾರಿಗಳ ಮನವಿಯನ್ನು ಪರಿಗಣಿಸಿ ಶ್ರೀ ಹರಿಯಪ್ಪಗೌಡ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ಬದಲಾಗಿ ಶ್ರೀ ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು, ಗಣಪತಿ ಗುಡಿ ಹತ್ತಿರ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ-580002 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಆರ್‌ಡಿ 47 ಎಡಿಇ 2005, ಬೆಂಗಳೂರು, ದಿನಾಂಕ: 4ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರ ಈ ಪ್ರಕರಣದಲ್ಲಿ ಈ ಹಿಂದೆ ದಿನಾಂಕ:03.03.2009ರ ಅದೇಶದಲ್ಲಿ ನೇಮಿಸಲಾಗಿದ್ದ ವಿಚಾರಣಾಧಿಕಾರಿಗಳಾದ ಶ್ರೀ ಹರಿಯಪ್ಪಗೌಡ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ಬದಲಿಗೆ ಶ್ರೀ ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗಣಪತಿ ಗುಡಿ ಹತ್ತಿರ, ಸಂಗೊಳ್ಳಿರಾಯಣ್ಣ ನಗರ, ಧಾರವಾಡ-580002 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಉಡುಪಿ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸಿದ ಸ್ಥಳದಲ್ಲಿ ಇಲಾಖಾ ವಿಚಾರಣೆಯನ್ನು ನೆಡೆಸತಕ್ಕದ್ದು ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶವನ್ನು ನೀಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

ಉಳಿದ ಅಂಶಗಳು ಸರ್ಕಾರದ ಆದೇಶ ಸಂ: ಆರ್‌ಡಿ 47 ಎಡಿಇ 2005, ದಿನಾಂಕ:03-03-2009 ರಲ್ಲಿರುವಂತೆ ಮುಂದುವರೆಯುತ್ತದೆ.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಾವಳಿಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ ಜರುಗಿಸಿ ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1402

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು-3)

FOREST, ENVIRONMENT AND ECOLOGY SECRETARIAT

NOTIFICATION

No .FEE 18 FEG 2004, Bangalore, Dated: 2nd June 2009

In modification of Government Notification of even No. Dated 02-09-2005, the following officers are assigned eligibility dates of promotion in the cadre of Deputy Conservator of Forests as mentioned against their names.

Sl. No.	Name of the Officer	Date of Eligibility
1.	Sri Syed Hussain	01-11-1956
2.	Sri D.G. Wesley	01-11-1956
3.	Sri A.Krishnaswamy	01-11-1956
4.	Sri T.G. Chandrashekaraih	14-02-1957
5.	Sri S.C. Thippeswamy	18-09-1958
6.	Sri M.D. Mahadev	18-09-1958

The Accountant General, Bangalore shall regulate the pay and allowances of these officers as per Section 4 of the KCS (RPP&P) Act; 1973.

The Notification of even No. Dated 18-10-2007 is hereby rescinded with immediate effect.

By Order and in the name of the Governor of Karnataka

VADAGAVE BASAVARAJ

P.R. 1409

Under Secretary to Government,

Forest, Environment and Ecology Department (Services)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: 2008–09ನೇ ಸಾಲಿನಲ್ಲಿ ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನಾ ಕ್ಷೇತ್ರದಲ್ಲಿ ವಿಶಿಷ್ಠ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ಸಂಸ್ಥೆಗಳಿಗೆ 'ಕರ್ನಾಟಕ ರಾಜ್ಯ ಪರಿಸರ" ಪ್ರಶಸ್ತಿ ಪ್ರಧಾನ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ಅಪಜೀ 16 ಇಎನ್‌ಜಿ 2007 ದಿನಾಂಕ: 16–09–2008
2. ಪತ್ರಿಕಾ ಪ್ರಕಟಣೆ ದಿನಾಂಕ: 23–09–2008
3. ಸರ್ಕಾರದ ಆದೇಶ ಸಂಖ್ಯೆ : ಅಪಜೀ 16 ಇಎನ್‌ಜಿ 2007 (ಭಾಗ) ದಿನಾಂಕ: 19–11–2008

ಪ್ರಸ್ತಾವನೆ:

ಪರಿಸರ ಸಂರಕ್ಷಣೆಗಾಗಿ ವ್ಯಕ್ತಿ ಮತ್ತು ಸಂಸ್ಥೆಗಳು ಸಲ್ಲಿಸಿರುವ ಸೇವೆಯನ್ನು ಗುರುತಿಸುವ ಸಲುವಾಗಿ 2008–09ನೇ ಸಾಲಿನ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಯನ್ನು ನೀಡಲು ಸರ್ಕಾರವು ಉದ್ದೇಶಿಸಿರುತ್ತದೆ. ಈ ಪ್ರಶಸ್ತಿ ತಲಾ ರೂ.1,00,000/– (ರೂ. ಒಂದು ಲಕ್ಷಗಳು ಮಾತ್ರ) ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಯನ್ನು ಆಯ್ಕೆಯಾದ ವ್ಯಕ್ತಿ, ಮತ್ತು ಸಂಸ್ಥೆಗಳಿಗೆ ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆ ಕ್ಷೇತ್ರದಲ್ಲಿ ಆರಂಭ ಶೀಲತೆ / ಕೊಡುಗೆಗೆ ಸಲ್ಲಿಸಿರುವ ಗಣನೀಯ ಸೇವೆಗಾಗಿ ನೀಡಲಾಗುವುದು. ರಾಜ್ಯದಲ್ಲಿ ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿರುವ ಈ ಕೆಳಕಂಡ ವ್ಯಕ್ತಿ ಹಾಗೂ ಸಂಸ್ಥೆಗಳನ್ನು ಸರ್ಕಾರವು ಆಯ್ಕೆ ಮಾಡಿದ್ದು, ಇವರಿಗೆ ಪರಿಸರ ಪ್ರಶಸ್ತಿಗಳನ್ನು ನೀಡಲು ನಿರ್ಧರಿಸಲಾಗಿದೆ.

	ವಲಯ	ಆಯ್ಕೆಯಾದ ವ್ಯಕ್ತಿ	ಆಯ್ಕೆಯಾದ ಸಂಸ್ಥೆ
1	ಉತ್ತರ ವಲಯ	ಪ್ರೊ: ಎಸ್. ಮಂಜಪ್ಪ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ಮತ್ತು ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾಲಯ, ದಾವಣಗೆರೆ.	ಪೂಜ್ಯ ಶ್ರೀ ಮಾನಿಪ, ಶಿವಕುಮಾರ ಸ್ವಾಮಿಗಳು, ಕಪೋತಗಿರಿ, ಶ್ರೀ ನಂದಿವೀರಿ ಮಹಾ ಸಂಸ್ಥಾನ ಮಠ, ಸಿದ್ಧರಾಮೇಶ್ವರ ನಗರ, ಗದಗ.
2	ದಕ್ಷಿಣ ವಲಯ	ಸುಮಂಗಲ ಎಸ್. ಮುಮ್ಮಿಗಟ್ಟಿ ಟ್ರಾನ್ಸ್‌ಮಿಷನ್ ಎಕ್ಸಿಕ್ಯೂಟಿವ್ (ಸೈನ್ಸ್ ರಿಪೋರ್ಟಿಂಗ್) ಆಲ್ ಇಂಡಿಯಾ ರೇಡಿಯೋ, ರಾಜಭವನ ರೋಡ್, ಬೆಂಗಳೂರು.	ಟಿ.ಕೆ. ಪಟೇಲ್, ಬೆನಕಟ್ಟಿ ಚಾರಿಟಬಲ್ ಟ್ರಸ್ಟ್, ಬಸಂತವನ, ಶ್ರೀ ರುಕ್ಮಾಂಗದ ಮಹಾರಾಜ್ ಮಂದಿರದ ಹತ್ತಿರ, ಉಕ್ಕಲಿ ರಸ್ತೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13, ಬಿಜಾಪುರ (ನೋಂದಣಿ ಕಛೇರಿ: ಬೆಂಗಳೂರು)

	ವಲಯ	ಆಯ್ಕೆಯಾದ ವ್ಯಕ್ತಿ	ಆಯ್ಕೆಯಾದ ಸಂಸ್ಥೆ
3	ಮಲೆನಾಡು ಮತ್ತು ಕರಾವಳಿ ವಲಯ	ಶ್ರೀ ಸತೀಶ್ ನಂ. 14, ಕೂರ್ಗ ಪಬ್ಲಿಕ್ ಸ್ಕೂಲ್, ಗೋಣಿಕೊಪ್ಪ, ಕೊಡಗು ಜಿಲ್ಲೆ.	ಗ್ರಾಮ ಭಾರತಿ ಟ್ರಸ್ಟ್, ಕರ್ನಾಗಿರಿ ಅಂಚೆ, ಹಾನಿಯಾ ಹೊಸನಗರ, ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಅಪಜೀ 7 ಇಎನ್‌ಜಿ 2008, ಬೆಂಗಳೂರು, ದಿನಾಂಕ: 6ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನಾ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಕೆಳಕಂಡ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಸರ್ಕಾರವು 2008–09ನೇ ಸಾಲಿನ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಗೆ ಆಯ್ಕೆ ಮಾಡಿದೆಯೆಂದು ಘೋಷಿಸಲು ಪ್ರಸನ್ನಚಿತ್ತವಾಗಿದೆ. ಈ ಪ್ರಶಸ್ತಿಯು ತಲಾ ರೂ. 1,00,000/– (ರೂ. ಒಂದು ಲಕ್ಷ ಮಾತ್ರ) ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

	ವಲಯ	ಆಯ್ಕೆಯಾದ ವ್ಯಕ್ತಿ	ಆಯ್ಕೆಯಾದ ಸಂಸ್ಥೆ
1	ಉತ್ತರ ವಲಯ	ಪ್ರೊ: ಎಸ್. ಮಂಜಪ್ಪ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ಮತ್ತು ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾಲಯ, ದಾವಣಗೆರೆ.	ಪೂಜ್ಯ ಶ್ರೀ ಮಾನಿಪ, ಶಿವಕುಮಾರ ಸ್ವಾಮಿಗಳು, ಕಪೋತಗಿರಿ, ಶ್ರೀ ನಂದಿವೀರಿ ಮಹಾ ಸಂಸ್ಥಾನ ಮಠ, ಸಿದ್ಧರಾಮೇಶ್ವರ ನಗರ, ಗದಗ.
2	ದಕ್ಷಿಣ ವಲಯ	ಸುಮಂಗಲ ಎಸ್. ಮುಮ್ಮಿಗಟ್ಟಿ ಟ್ರಾನ್ಸ್‌ಮಿಷನ್ ಎಕ್ಸಿಕ್ಯೂಟಿವ್ (ಸೈನ್ಸ್ ರಿಪೋರ್ಟಿಂಗ್) ಆಲ್ ಇಂಡಿಯಾ ರೇಡಿಯೋ, ರಾಜಭವನ ರೋಡ್, ಬೆಂಗಳೂರು.	ಟಿ.ಕೆ. ಪಟೇಲ್, ಬೆನಕಟ್ಟಿ ಚಾರಿಟಬಲ್ ಟ್ರಸ್ಟ್, ಬಸಂತವನ, ಶ್ರೀ ರುಕ್ಮಾಂಗದ ಮಹಾರಾಜ್ ಮಂದಿರದ ಹತ್ತಿರ, ಉಕ್ಕಲಿ ರಸ್ತೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13, ಬಿಜಾಪುರ (ನೋಂದಣಿ ಕಛೇರಿ: ಬೆಂಗಳೂರು)
3	ಮಲೆನಾಡು ಮತ್ತು ಕರಾವಳಿ ವಲಯ	ಶ್ರೀ ಸತೀಶ್ ನಂ. 14, ಕೂರ್ಗ ಪಬ್ಲಿಕ್ ಸ್ಕೂಲ್, ಗೋಣಿಕೊಪ್ಪ, ಕೊಡಗು ಜಿಲ್ಲೆ.	ಗ್ರಾಮ ಭಾರತಿ ಟ್ರಸ್ಟ್, ಕರ್ನಾಗಿರಿ ಅಂಚೆ, ಹಾನಿಯಾ ಹೊಸನಗರ, ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1410

ಎನ್.ಆರ್. ಜಗನ್ನಾಥ

ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಸ್ಥಅ 2009 ಬೆಂಗಳೂರು, ದಿನಾಂಕ: 11ನೇ ಜೂನ್ 2009

ವಿಷಯ: ಹತ್ತು ವರ್ಷಕ್ಕಿಂತಲೂ ಹೆಚ್ಚಿನ ಅವಧಿಯ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರಿಗೆ ತಿಂಗಳಿಗೆ ರೂ.1,000–00 ಹೆಚ್ಚುವರಿ ಹಣ ನೀಡುವ ಬಗ್ಗೆ.

ಪ್ರಸ್ತಾವನೆ :

ದಿನಾಂಕ: 20.02.2009 ರಂದು ವಿಧಾನ ಮಂಡಲದಲ್ಲಿ ಮಂಡಿಸಲಾದ 2009–10ರ ಆಯವ್ಯಯ ಭಾಷಣದ ಪ್ಯಾರಾ 252ರಲ್ಲಿ ಹೀಗೆ ಹೇಳಲಾಗಿದೆ.

"10 ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿರುವ ದಿನಗೂಲಿ ನೌಕರರಿಗೆ ತಿಂಗಳಿಗೆ ರೂ.1,000/– ರವರೆಗೆ ಹೆಚ್ಚಿಸಲಾಗುವುದು"

ಆಯವ್ಯಯ ಭಾಷಣದ ಈ ಘೋಷಣೆಯ ಹಿನ್ನೆಲೆಯಲ್ಲಿ ಆದೇಶ ಹೊರಡಿಸುವುದನ್ನು ಪರಿಶೀಲಿಸಲಾಗಿದೆ.

ಆದೇಶ

ದಿನಾಂಕ:01.07.1984ರ ನಂತರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಈಗ ನೀಡುತ್ತಿರುವ ಒಟ್ಟು ದಿನಗೂಲಿಯ ಜೊತೆಗೆ ಮಾಸಿಕ ರೂ.1,000/– ಗಳನ್ನು (ಒಂದು ಸಾವಿರ ರೂಪಾಯಿಗಳು ಮಾತ್ರ) ದಿನಾಂಕ: 01.04.2009 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಮಂಜೂರಾತಿ ನೀಡಿದೆ:
Dr. H.S. Sudhira would be paid a consolidated compensation of Rs.30,000/- per month.

By Order and in the name of the Governor of Karnataka,

M.S. PREMACHANDRA

P.R. 1554

Under Secreatary to Government,
Urban Development Department

Sub: Continuation of Sri B.N. Viswanath as Technical Advisor in Directorate of Urban Land Transport for a period of 6 months from 5.6.2009 (beyond June 2009)

Read:
1. Government Order No.UDD 134 BMR 2007 (1) BANGALORE, Dated 08.03.2007
2. Government Order No.UDD 01 CAR 2008 BANGALORE, Dated 28.02.2008
3. Government Order No. UDD 01 CAR 2008 BANGALORE, Dated 28.02.2009.

Preamble:

As per the recommendation for the National Working Group on Urban Transport for the 11th Plan and the guidelines of the National Urban Transport Policy, the Government of Karnataka in its Government Order read at (1) has created the State Directorate of Urban Land Transport (DULT) under the Urban Development Department. The key objective of the DULT is to ensure integration and co-ordination of land-use planning and development of transport related infrastructure in urban areas.

The functions of DULT has been defined in G.O. read at (1) with jurisdictions of seven Municipal Corporations in the State, viz., Bangalore, Mysore, Mangalore, Hubli-Dharwad, Belgaum, Gulbarga and Bellary. Accordingly, one of the key functions is to take up Comprehensive Traffic and Transportation Studies (CTTS) for six cities, excluding Bangalore. Thus the need for integrating land-use planning and transporation is seen as a major thrust and challenge for the DULT.

The team under the Commissioner, DULT is required to address the above mentioned critical areas on priority. It is noted that addressing theses tasks and challenges requires the active role of specialists with multidisciplinary approaches. The specialists should have an understanding of the planning, technology for planning, land-use changes, planning with focus on mobility related aspects and capacity building competencies.

Sri B.N. Viswanath, M.Tech, Indian Institute of Technology, Delhi earlier worked as the Executive Director in Karnataka Power Corporation Limited (KPCL) prior to his retirement and he was involved in the execution of major power projects in Karnataka. He has extensive experience in Project Management and Contract Management areas.

Sri B.N. Viswanath worked as Technical Advisor, JnNurm at Brhuat Bangalore Mahanagara Palike (BBMP) during 2007-08. He was actively involved in the preparation of Detailed Project Reports for Road and Road related Infrastructures. Storm Water Drains and Basic Services to Urban Poor. He has vast experience in laisoning with the consultants and during his tenure in BBMP, he had extensively interacted with MoUD for getting the DPRs reviewed before the same were swanctioned by Government of India.

As per GO No. Urban Development Department 01 CAR 2008 Bangalore dated 28-02-2008 Sri B.N.Viswanath has worked as Technical Advisor in Directorate of Urban Land Transport on contract

basis from 06-03-2008 for a period of one year (i.e. 05-03-2009). The services are utilized for a further period of 3 months.from 06-03-2009 as per the GO No.UDD No.UDD 01 CAR 2008 BANGALORE, Dated 28-02-2009 under reference No.3.

Since the DULT has taken up number of project studies and also intends to initiated new schemes as per the NUTP guidelines, it finds essential to continue services f Sri B.N. Viswanath as Technical Advisor to a further period of 6 months on Contract basis from 06-03-2009. This has reference of approval from Principal Secretary, Urban Development Department, on file No.DULT 61/ADM/ 2007/2009-10, dated 04.06.2009. Hence the following order.

Government Order No. UDD 01 CAR 2008, Bangalore, Dated: 4th June 2009

Government are pleased to accord sanction to utilize the services of Sri B.N.Viswanath, Technical Advisor on Contract basis for an extension period of 6 months from 06-06-2009.

His services can be utilized in the following areas :

1. Contract Management (relating to Consultants)
   a) Floating of bids, Evaluation
   b) Fixing terms and conditions, award of work
   c) Monitoring of Projects
2. Project Management (relating to ULBs and parasatatal agencies)
   a) Intensive monitoring of certain high priority projects of agencies
   b) Deciding milestones of project and follow up with agencies involved
   c) Formatting new projects relating to traffic and transportation leading to convergence of work between different agencies, and lading to an integrated road net work
   d) Proposing projects under JNNURM
3. Compilation, Collation, updation and maintenance of transport network data
   a) Road network planning
   b) Identifying critical interventions required for improvement of traffic like improving geometrics, construction of grade separators, bridges or tunnels etc.,
   c) Putting out information for general public on the website.
4. Interacting with BBMP, BDA, BMRDA, BMTC, Banalore Airport, RTA, Traffic Police, Bangalore Metro Rail Corporation Ltd., etc.,
   a) Follow up action to be taken on the BMLTA and HLTF etc.,
5. Any other work assigned by the Commissioner, Directorate of Urban Land Transport.

The services of Sri B.N.Viswanath, Technical Advisor, will be utilized until such time the Commissioner, DULT deems fit.

In the extended period of six months, Sri B.N.Viswanath would be paid a consolidated compensation of Rs. 35,000-00 per month.

By Order and in the name of the Governor of Karnataka,

M.S. PREMACHANDRA

Under Secreatary to Government,

Urban Development Department

P.R. 1555

Sub: Financial assistance towards payment of consultancy assignment from Megacity Fund of Rs. 25 lakhs – Refunding the same to KUIDFC.

Ref: 1. D.O No.DULT/95/ADM/2008 dated 23.01.2009
2. Proceedings of 22nd SLSC meeting held on 12.02.2009 (Subject No.07)
3. KUIDFC/MCS/DULT/2008-09, dated 16-03-2009
4. Approval by Princiapl Secretary, UDD, on file No.DULT/170/ADM/2009 Dated:01.06.2009

Preamble:

DULT had requested the KUIDFC under Ref (1), to sanction an interest free loan of Rs.100 lakhs to enable DULT to make payment for the services rendered by the various consultants in connection with the following five assignments :

a) Preparation of Policy paper for Parking in Bangalore Metropolitan Region
b) Preparation of Policy paper for Pedestrian Policy in Banalore Metropolitan Region
c) Package-2 : Enhancing Traffic, Flow and Easing Congestion
d) Package 6: Preparation of Bangalore Mobility Indicators – 2008
e) Package -1 – Better Access to Majestic Area

In the 22nd SLSC meeting under Megacity Scheme held on 12-02-2009 under the Chairmanship Additional Chief Secretary at Room No.331, Vidhana Soudha, the Committee pleased to approve to release Rs.25 lakhs of Megacity Fund to DULT for the payment of the above said 5 schemes. Accordingly the KUIDF has forwarded a Cheque bearing No. 076351, dated 16-03-2009 for Rs.25 Lakhs drawn on Vijaya Bank, Indiranagar Branch to DULT under ref (3) above, with the condition that it should be refunded back to Megacity fund immediately on receipt of Central Financial Assistance and the State Budgetary Support by DULT. The above fund received is utilized for the initial payment of the above said 5 scheme.

DULT has received State Budgetary Support of Rs.500.02 Lakhs for the Financial Year 2009-10, under the head of Account 2217-80-800-0-23 and also Rs.6,07,200 from the MoUD (UT) Govt. of India, New Delhi, as Central Financial Assistance for initial payment of above 5 schemes at 10% of 80% (CFA) of the total cost of the above 5 schemes.

Now the DULT has to pay the above Megacity fund to KUIDFC. Hence the following order.

Government Order No. UDD 142 BMR 2009 Bangalore, Dated: 8th June 2009

Under the circumstances as explained above the Government are pleased to approve to refund to KUIDFC the Megacity Fund of Rs.25 Lakhs, obtained by DULT, from KUIDFC for making initial payment to the Consultants in connection with the following 5 assignments.

a. Preparation of Policy paper for Parking in Bangalore Metropolitan Region
b. Preparation of Policy for Pedestrian Policy in Bangalore Metropolitan Region
c. Package -2: Enhaning Traffic, Flow and Easing Congestion
d. Package – 6: Preparation of Bangalore Mobility indicators – 2008
e. Package -1 : Better Access to Majestic Area.

By Order and in the name of the Governor of Karnataka.

M.S. PREMACHANDRA
Under Secreatary to Government,
Urban Development Department

P.R. 1556

ಕಂದಾಯ ಸಚಿವಾಲಯ

ವಿಷಯ: ಶ್ರೀ ದಾದರಾವ್, ಹಿಂದಿನ ತಹಶೀಲ್ದಾರ್, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಮತ್ತಿತರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸುವ ಬಗ್ಗೆ.

ಓದಲಾಗಿದೆ:
1. ಕೋಲಾರ ಜಿಲ್ಲಾಧಿಕಾರಿಯವರ ಪತ್ರ ಸಂ.ಸಿಸಿಎ:ಸಿಆರ್:11:2004–05 ದಿನಾಂಕ: 07–01–2005
2. ಶ್ರೀ ದಾದರಾವ್. ತಹಶೀಲ್ದಾರ್ ಮತ್ತು ಇತರ ನೌಕರರಿಗೆ ನೀಡಿರುವ ತಿಳುವಳಿಕೆ ಪತ್ರ ಸಂ ಸಂ;ಕಂಇ44 ಎಡಿಇ 04, ದಿನಾಂಕ : 07–03–2005
3. ಅಧಿಕಾರಿ/ನೌಕರರರು ನೀಡಿರುವ ಲಿಖಿತ ಹೇಳಿಕೆ :
   ಅ) ಶ್ರೀ ದಾದರಾವ್, ತಹಶೀಲ್ದಾರ್, ದಿನಾಂಕ : 11–10–2002
   ಆ) ಶ್ರೀ ಎಂ.ಎನ್. ಸತೀಶ್ ಕುಮಾರ್, ಗ್ರಾಮಲೆಕ್ಕಿಗ, ದಿನಾಂಕ: 02–05–2005
   ಇ) ಶ್ರೀ ಕೆ.ವಿ. ಚಂಗಲರಾಯಪ್ಪ, ಪ್ರ..ದ.ಸ., ದಿನಾಂಕ: 12–05–2005
   ಈ) ಶ್ರೀ ಶ್ರೀನಿವಾಸ್, ಶಿರಸ್ತೇದಾರ್. ದಿನಾಂಕ: –05–2005
   ಉ) ಶ್ರೀ ಗಂಗಯ್ಯ, ಪ್ರ.ದ.ಸ., ದಿನಾಂಕ: 13–05–2005
   ಊ) ಶ್ರೀ ಎ. ಶಿವರಾಜು. ಬೆರಳಚ್ಚುಗಾರರು, ದಿನಾಂಕ: 30–04–2005

4. ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2004, ದಿನಾಂಕ: 08-08=2005
5 ಶ್ರೀ ಎನ್.ಸಿ. ಲಕ್ಷ್ಮೀನರಸಿಂಹಯ್ಯ, ವಿಚಾರಣಾಧಿಕಾರಿಗಳು ಹಾಗೂ ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರ ವಿಚಾರಣಾ ವರದಿ, ದಿನಾಂಕ: 27-06-2006
6 ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ : 02-11-2006
7 ಎರಡನೇ ಕಾರಣ ಕೇಳುವ ನೋಟೀಸಿಗೆ ಅಧಿಕಾರಿ/ನೌಕರರು ನೀಡಿರುವ ಲಿಖಿತ ಹೇಳಿಕೆ:
ಅ) ಶ್ರೀ ದಾದರಾವ್, ತಹಶೀಲ್ದಾರ್, ದಿ: 23-11-2006
ಆ) ಶ್ರೀ ಗಂಗಯ್ಯ, ಪ್ರ.ದ.ಸ. ದಿನಾಂಕ: 08-12-2006
ಇ) ಶ್ರೀ ಶ್ರೀನಿವಾಸ್, ನಿವೃತ್ತ ಶಿರಸ್ತೇದಾರ್, ದಿ: 28-11-2006
8 ಸರ್ಕಾರದ ಆದೇಶ ಸಂ. ಆರ್‌ಡಿ 44 ಎಡಿಇ 2004, ದಿನಾಂಕ : 28-03-2007
9 ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಇವರ ಪತ್ರ ಸಂ. ಪಿಎಸ್‌ಸಿ 226 ಸಿಎನ್‌ಎಸ್ 2006, ದಿನಾಂಕ: 20-02-2009

ಪ್ರಸ್ತಾವನೆ :

ಕೋಲಾರ ತಾಲ್ಲೂಕು, ಸುಗಟೂರು ಹೋಬಳಿ, ಕೆಂಬತ್ತನಹಳ್ಳಿ ಗ್ರಾಮ ಸರ್ಕಾರಿ ಖರಾಬು ಜಮೀನು 8 ರಲ್ಲಿ ಶ್ರೀಮತಿ ಮುನಿಯಮ್ಮ ಕೋಂ ಕೆ.ಜಿ.ಭೈರೇಗೌಡ ಇವರಿಗೆ ನಿಯಮಬಾಹಿರವಾಗಿ ಅನಧಿಕೃತ ಸಾಗುವಳಿ ಸಕ್ರಮೀಕರಣ ಯೋಜನೆಯಡಿ 4 ಎಕರೆ ಜಮೀನನ್ನು ಸಕ್ರಮೀಕರಣಗೊಳಿಸಲು ಸಹಕರಿಸಿ ಕರ್ತವ್ಯಲೋಪ ಎಸಗಿದ ಕೋಲಾರ ತಾಲ್ಲೂಕಿನ ಹಿಂದಿನ ತಹಶೀಲ್ದಾರ್‌ರಾದ ಶ್ರೀ ದಾದರಾವ್ ಹಾಗೂ ಇನ್ನಿತರ 5 ಮಂದಿ ಸಿಬ್ಬಂದಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಇವರುಗಳ ವಿರುದ್ಧ ಕರಡು ದೋಷಾರೋಪಣೆಗಳನ್ನು ತಯಾರಿಸಿ ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ:07.01.2005ರ ಪತ್ರದಲ್ಲಿ ಕೋಲಾರ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 13ರಡಿಯಲ್ಲಿ ದೋಷಾರೋಪಣೆಗಳನ್ನು (ಅನುಬಂಧ 1 ರಿಂದ 4ರವರೆಗೆ) ಆರೋಪಿತ ಅಧಿಕಾರಿ/ನೌಕರರುಗಳಿಗೆ ಜಾರಿ ಮಾಡಿ, ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ದಿನಾಂಕ: 07-03-2005ರ ನೋಟೀಸು ಮೂಲಕ ತಿಳುವಳಿಕೆ ಪತ್ರ ನೀಡಲಾಗಿತ್ತು.

ಆಪಾದಿತ ಅಧಿಕಾರಿ/ನೌಕರರಲ್ಲಿ ಮೇಲೆ ಓದಲಾದ ಕ್ರ.ಸಂ. (3) ರಲ್ಲಿ ಹೇಳಲಾಗಿರುವ ಆರೋಪಿತ ಅಧಿಕಾರಿ/ನೌಕರರಾದ ಶ್ರೀ ದಾದರಾವ್, ಶ್ರೀ ಎಂ.ಎನ್. ಸತೀಶ್ ಕುಮಾರ ಮತ್ತು ಶ್ರೀ ಕೆ.ವಿ. ಚಂಗಲರಾಯಪ್ಪ ರವರುಗಳು ತಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆಯುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಉಳಿದ ನೌಕರರು ಈಗಾಗಲೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಕಾರಣ ಕೇಳುವ ನೋಟೀಸಿನಲ್ಲಿ ತಿಳಿಸಿರುವಂತೆ, ನಿಗದಿಪಡಿಸಿದ ಅವಧಿಯೊಳಗೆ ಲಿಖಿತ ಸಮಜಾಯಿಷಿ ನೀಡದಿದ್ದಲ್ಲಿ, ಅವರ ಪ್ರತಿವಾದವೇನು ಇಲ್ಲವೆಂದು ಭಾವಿಸಿ, ಏಕಪಕ್ಷೀಯವಾಗಿ ಕ್ರಮ ಜರುಗಿಸಬಹುದಾಗಿರುವುದರಿಂದ ಸರ್ಕಾರವು ಆರೋಪಿತರ ವಿರುದ್ಧದ ಆರೋಪಗಳನ್ನು ಹಾಗೂ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ, ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ನಿರ್ಧರಿಸಿ ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸುವುದು ಸೂಕ್ತವೆಂದು ತೀರ್ಮಾನಿಸಿ ಮೇಲೆ ಓದಲಾದ ಕ್ರ. ಸಂ. (4) ರ ದಿನಾಂಕ: 08-08-2005ರಲ್ಲಿ ಶ್ರೀ ಲಕ್ಷ್ಮೀನರಸಿಂಹಯ್ಯ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೋಲಾರ ಜಿಲ್ಲಾಧಿಕಾರಿಗಳ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಗಳು ಈ ಪ್ರಕರಣದ ಬಗ್ಗೆ ಜಂಟಿ ಇಲಾಖಾ ವಿಚಾರಣೆ ಜರುಗಿಸಿ, ಮೇಲೆ ಓದಲಾದ ಕ್ರ.ಸಂ. (5)ರ ದಿನಾಂಕ: 27-06-2006ರಲ್ಲಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ಈ ಕೆಳಕಂಡಂತೆ ಅಧಿಕಾರಿ/ನೌಕರರ ವಿರುದ್ಧ ಆರೋಪಗಳ ಕುರಿತು ನಿರ್ಣಯಿಸಿರುತ್ತಾರೆ.

1) ಶ್ರೀ ದಾದರಾವ್, ಹಿಂದಿನ ತಹಶೀಲ್ದಾರ್, ಕೋಲಾರ	– ಆರೋಪ ಸಾಬೀತಾಗಿರುತ್ತದೆ.
2) ಶ್ರೀ ಶ್ರೀನಿವಾಸ್, ಹಿಂದಿನ ಶಿರಸ್ತೇದಾರ್, ಕೋಲಾರ	– ಆರೋಪ ಸಾಬೀತಾಗಿರುತ್ತದೆ
3) ಶ್ರೀ ಗಂಗಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು	– ಆರೋಪ ಸಾಬೀತಾಗಿರುತ್ತದೆ
4) ಶ್ರೀ ಎ. ಶಿವರಾಜ್, ಹಿಂದಿನ ಬೆರಳಚ್ಚುಗಾರರು	– ಆರೋಪ ಸಾಬೀತಾಗಿರುತ್ತದೆ
5) ಶ್ರೀ ಎಂ. ಎನ್. ಸತೀಶ್, ಹಿಂದಿನ ಗ್ರಾಮಲೆಕ್ಕಿಗ	– ಆರೋಪ ಸಾಬೀತಾಗಿರುವುದಿಲ್ಲ
6) ಶ್ರೀ ಕೆ.ವಿ. ಚಂಗಲರಾಯಪ್ಪ, ಹಿಂದಿನ ಪ್ರ.ದ.ಸ.	– ಆರೋಪ ಸಾಬೀತಾಗಿರುವುದಿಲ್ಲ

ಮೇಲ್ಕಂಡ ವಿಚಾರಣಾ ವರದಿಯಂತೆ, ಕ್ರ.ಸಂ. (1) ರಿಂದ 4 ರವರೆಗೆ ಅಧಿಕಾರಿ/ನೌಕರರ ವಿರುದ್ಧ ಆರೋಪಗಳು ಸಾಬೀತಾಗಿದ್ದರಿಂದ, ಅವರುಗಳಿಗೆ ಮೇಲೆ ಓದಲಾದ ಕ್ರ.ಸಂ. (6) ದಿನಾಂಕ: 02-11-2006 ರಲ್ಲಿ 2ನೇ ಕಾರಣ ಕೇಳುವ

ನೋಟೀಸನ್ನು ವಿಚಾರಣಾ ವರದಿಯೊಂದಿಗೆ ಜಾರಿ ಮಾಡಲಾಗಿತ್ತು. ಈ ಮಧ್ಯೆ ವಿಚಾರಣಾ ವರದಿಯಲ್ಲಿ, ಆರೋಪಗಳು ಸಾಬೀತಾಗಿಲ್ಲದ ಕಾರಣ, ಶ್ರೀ ಎಂ.ಎನ್. ಸತೀಶ್, ಹಿಂದಿನ ಗ್ರಾಮಲೆಕ್ಕಿಗರು ಹಾಗೂ ಶ್ರೀ ಕೆ.ವಿ. ಚಂಗಲರಾಯಪ್ಪ, ಹಿಂದಿನ ಪ್ರ.ದ.ಸ. ಇವರುಗಳನ್ನು ಮೇಲೆ ಓದಲಾದ ಕ್ರ.ಸಂ. (8)ರ ದಿನಾಂಕ:28-03-2007ರಲ್ಲಿ ಆರೋಪಗಳಿಂದ ದೋಷಮುಕ್ತರನ್ನಾಗಿ ಆದೇಶ ಹೊರಡಿಸಲಾಗಿರುತ್ತದೆ. ಮುಂದುವರೆದು, ಸರ್ಕಾರ ಎರಡನೇ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರ.ಸಂ. (7)ರನ್ವಯ ಅಧಿಕಾರಿ/ನೌಕರರು ಈ ಕೆಳಕಂಡಂತೆ, ತಮ್ಮ ಲಿಖಿತ ಸಮಜಾಯಿಷಿಗಳನ್ನು ಸಲ್ಲಿಸಿರುತ್ತಾರೆ.

1) ಶ್ರೀ ದಾದಾರಾವ್, ಹಿಂದಿನ ತಹಶೀಲ್ದಾರ್, ಕೋಲಾರ :

"ಸಕ್ರಮೀಕರಣ ಸಮಿತಿಯ ಸಭೆಯಲ್ಲಿ ಏಕೆ ಕಾಲಕ್ಕೆ ಸುಮಾರು ನೂರೈವತ್ತರಿಂದ ಇನ್ನೂರು ನಮೂನೆ 53ರ ಅರ್ಜಿಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಪ್ರತಿ ಅರ್ಜಿಯನ್ನು ಸಹ ಕೂಲಂಕುಷವಾಗಿ ಪರಿಶೀಲಿಸುವ ಜವಾಬ್ದಾರಿಯನ್ನು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು, ಶಿರಸ್ತೇದಾರರು ಹಾಗೂ ವಿಷಯ ನಿರ್ವಾಹಕರ ಜವಾಬ್ದಾರಿಯೂ ಸಹ ಆಗಿರುತ್ತದೆ. ಈ ತರಹದ ಲೋಪ ದೋಷಗಳ ಬಗ್ಗೆ ನನ್ನನ್ನು ಹೊಣೆಗಾರನನ್ನಾಗಿ ಮಾಡುವುದು ಸರಿಯಿಲ್ಲವೆಂದು ಭಾವಿಸಲು ಕೋರಿದೆ. ನನ್ನ ಮೇಲೆ ಎಸಗಿರುವ ಆಪಾದನೆ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ ವಿಚಾರಣಾಧಿಕಾರಿಗಳು ತೋರಿಸಿರುವ ಆಪಾದನೆಗಳನ್ನು ಆಧಾರ ರಹಿತವೆಂದು ಪರಿಗಣಿಸಿ ನನ್ನ ವಿರುದ್ಧ ಹೂಡಲಾದ ಆಪಾದನೆಗಳನ್ನು ತಳ್ಳಿಹಾಕಿ ನನ್ನನ್ನು ದೋಷ ಮುಕ್ತನಾಗಿ ಮಾಡಲು ಈ ಮೂಲಕ ವಿನಂತಿಸಿಕೊಂಡಿರುತ್ತೇನೆ."

2) ಶ್ರೀ ಶ್ರೀನಿವಾಸ್, ಹಿಂದಿನ ಶಿರಸ್ತೇದಾರ್ :

"ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮೋಜಣಿದಾರರು ತಪ್ಪಿತಸ್ತರಾಗಿದ್ದು, ಇವರನ್ನು ಕೈ ಬಿಟ್ಟು ವಿಚಾರಣೆ ಮಾಡಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಆದ್ದರಿಂದ ವಿಚಾರಣೆಯಲ್ಲಿ ನನ್ನನ್ನು ದೋಷಮುಕ್ತಗೊಳಿಸಲು ಕೋರುತ್ತೇನೆ. ಅಥವಾ ಬೇರೆಯವರಿಂದ ನ್ಯಾಯಯುಕ್ತ ವಿಚಾರಣೆ ಮಾಡಲು ತಮ್ಮಲ್ಲಿ ಕೋರುತ್ತೇನೆ".

3) ಶ್ರೀ ಗಂಗಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು :

"ಆರೋಪದಲ್ಲಿನ ಅಂಶಗಳಲ್ಲಿ ಯಾವುದೇ ತಪ್ಪನ್ನು ಎಸಗಿಲ್ಲವೆಂದು ನಿವೇದಿಸುತ್ತಾ ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ".

4) ಶ್ರೀ ಎ. ಶಿವರಾಜ್, ಹಿಂದಿನ ಬೆರಳಚ್ಚುಗಾರರು :

"ನಾನು ಒಬ್ಬ ಬೆರಳಚ್ಚುಗಾರನಾಗಿದ್ದರೂ ಕೂಡ, ನನ್ನ ಮೇಲಾಧಿಕಾರಿಗಳೂ ಸರ್ಕಾರದ/ಸಾರ್ವಜನಿಕ ಕೆಲಸದ ಹಿತದೃಷ್ಟಿಯಿಂದ, ಬೆರಳಚ್ಚು ಕೆಲಸ ಜೊತೆ, ಕೆಲಸದ ಒತ್ತಡವಿರುವ ಬೇರೆ ಕೆಲಸವನ್ನು ನನಗೆ ಮೌಖಿಕ ಆದೇಶಾನುಸಾರ ವಹಿಸುತ್ತಿದ್ದರು. ಆದುದರಿಂದ ನಿಷ್ಠೆಯಂತೆ ಕರ್ತವ್ಯ ನಿರ್ವಹಿಸಿರುತ್ತೇನೆ. ಅದರಲ್ಲಿ ಆಗಿರುವುದೆಂದು ಹೇಳಲಾದ ಅಕ್ರಮಗಳಿಗೆ ನಾನು ಹೊಣೆಗಾರನಲ್ಲ. ನನ್ನ ಮೇಲಾಧಿಕಾರಿಗಳ ಆದೇಶ ಪಾಲಿಸಿರುವುದಕ್ಕೆ ನನಗೆ ದಂಡನೆ ವಿಧಿಸುವುದು ಸರಿಯಲ್ಲ. ನಾನು ಸರ್ಕಾರದ ಕೆಲಸವನ್ನು ನಿಷ್ಠೆಯಿಂದ ಮಾಡಿದ್ದಕ್ಕೆ ನನ್ನನ್ನು ದೋಷಿಯೆಂದು ತೀರ್ಮಾನಿಸಿ ದಂಡನೆ ವಿಧಿಸುವುದು ಸೂಕ್ತವಲ್ಲ. ದಯಪಟ್ಟು ಇದರಲ್ಲಿ ನನ್ನ ತಪ್ಪೇನಿಲ್ಲವೆಂದು ಪರಿಗಣಿಸಿ ದೋಷಮುಕ್ತರನ್ನಾಗಿಸುವಂತೆ ಕೋರಿರುತ್ತಾರೆ".

ಮೇಲ್ಕಂಡ ಲಿಖಿತ ಸಮಜಾಯಿಷಿಗಳನ್ನು ಸರ್ಕಾರವು ಪರಿಶೀಲಿಸಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ ತಹಶೀಲ್ದಾರ್, ಶಿರಸ್ತೇದಾರ್, ಕಂದಾಯ ನಿರೀಕ್ಷಕರು ಹಾಗೂ ಬೆರಳಚ್ಚುಗಾರರು ಒಟ್ಟಿಗೆ ಸೇರಿ ಕಾನೂನಿಗೆ ವಿರುದ್ಧವಾಗಿ, ಕರ್ನಾಟಕ ಭೂ ಮಂಜೂರಾತಿಗೆ ವಿರುದ್ಧವಾಗಿ 4 ಎಕರೆ ಸರ್ಕಾರೀ ಜಮೀನನ್ನು, ಖೊಟಾ ದಾಖಲೆಗಳನ್ನು ಸೃಷ್ಟಿಸಿ, ಭೈ ಮಂಜೂರಾತಿ ಮಾಡಿದ್ದಾರೆಂದು, ನಿರ್ಣಯಿಸಿ, ವಿಚಾರಣಾಧಿಕಾರಿಗಳು ಸಲ್ಲಿಸಿದ್ದ ವರದಿಯನ್ನು ಒಪ್ಪಿ, ಮೇಲ್ಕಂಡ ಕ್ರ. ಸಂ. (1) ರಿಂದ (4) ರ ವರೆಗಿನ ಅಧಿಕಾರಿ/ನೌಕರರ ವಿರುದ್ಧ ಕಠಿಣ ದಂಡನೆಯನ್ನು ವಿಧಿಸಲು ತೀರ್ಮಾನಿಸಿರುತ್ತದೆ. ಅದರಂತೆ, ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿ, ಆಯೋಗದವರು ಮೇಲೆ ಓದಲಾದ ಕ್ರ.ಸಂ. (9)ರ 20.02.2009ರಲ್ಲಿ " ಈ ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲದ ಕಾರಣದಿಂದ ಮತ್ತು ತಪ್ಪು ಗ್ರಹಿಕೆಯಿಂದ ಮಂಜೂರಾಗಿರುವ ಸರ್ಕಾರಿ ಭೂಮಿಯನ್ನು ಹಿಂದಕ್ಕೆ ಪಡೆಯಲು ಎಲ್ಲಾ ಕ್ರಮಗಳನ್ನು ತಹಶೀಲ್ದಾರ್‌ರವರು ತೆಗೆದುಕೊಂಡಿರುತ್ತಾರೆ. ತಹಶೀಲ್ದಾರರು ಮತ್ತು ಇತರೆ ಸಿಬ್ಬಂದಿ ವರ್ಗದವರಿಗೆ ಸಿಸಿಎ ನಿಯಮಗಳಡಿ ಸರ್ಕಾರ ವಿಧಿಸುವ ದಂಡ ಆಪಾದಿತ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಎಸಗಿರುವ ದುಷ್ಕೃತ್ಯಕ್ಕೆ ಸಮರ್ಪಕವಾಗಿರುವಂತಹದ್ದಾಗಿರಬೇಕಾಗಿರುತ್ತದೆ (Appropriate). ಆದರೆ ಈ ಪ್ರಕರಣದಲ್ಲಿನ ಆಪಾದಿತ ಅಧಿಕಾರಿ ಮತ್ತು ಸಿಬ್ಬಂದಿಗಳು ಎಸಗಿರುವ ಕೃತ್ಯವು ಅವರುಗಳನ್ನು ಸೇವೆಯಿಂದಲೇ ತೆಗೆದುಹಾಕಬಹುದಾದಂತಹ ಕಠಿಣ ದಂಡನೆ ವಿಧಿಸಬಹುದಾದ ತೀವ್ರತೆ ಹೊಂದಿಲ್ಲವಾದ್ದರಿಂದ ಪ್ರಕರಣದಲ್ಲಿ ಶ್ರೀ ದಾದಾರಾವ್, ತಹಶೀಲ್ದಾರ್ ಮತ್ತು ಇತರೆ ಸಿಬ್ಬಂದಿ ವರ್ಗದವರಿಗೆ ಸಿಸಿಎ 8 (ii) ರಿಂದ 8 (iv-ಎ) ರಲ್ಲಿನ ಯಾವುದಾದರೂ ಒಂದು "ಲಘು ದಂಡನೆ" ವಿಧಿಸುವುದು ಸೂಕ್ತವೆಂದು ಆಯೋಗ ಅಭಿಪ್ರಾಯಪಡುತ್ತದೆ.

ಹಾಗೆಯೇ ಪ್ರಕರಣದಲ್ಲಿ ಆಪಾದಿತರಲ್ಲೊಬ್ಬರಾದ ಶ್ರೀ ಶ್ರೀನಿವಾಸ್, ಶಿರಸ್ತೇದಾರ್ ಇವರು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಂತೆ ದಂಡನೆ ವಿಧಿಸಬೇಕಾಗಿರುತ್ತದೆ. ಲೋಕಸೇವಾ ಆಯೋಗವು ನೀಡಿರುವ ಸಹಮತಿಯನ್ವಯ ಸರ್ಕಾರವು ಪರಿಶೀಲಿಸಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಈ ಕೆಳಕಂಡಂತೆ, ದಂಡನೆ ವಿಧಿಸಲು ನಿರ್ಧರಿಸಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ. ಆರ್‌ಡಿ 44 ಎಡಿಇ 2004, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಪ್ರಸ್ತುತ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (ii) ರಿಂದ 8 (iv)ರನ್ವಯ ದಂಡನೆಯನ್ನು ವಿಧಿಸಿ ಆದೇಶಿಸಿದೆ.

1) ಶೀ ದಾದಾರಾವ್, ಹಿಂದಿನ ತಹಶೀಲ್ದಾರ್, ಕೋಲಾರ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಬಿ.ಎಂ.ಟಿ.ಎಫ್, ಬೆಂಗಳೂರು – ಇವರಿಗೆ ವಾಗ್ದಂಡನೆ.
2) ಶ್ರೀ ಗಂಗಯ್ಯ, ಹಿಂದಿನ ಕಂದಾಯ ನಿರೀಕ್ಷಕರು – ಇವರಿಗೆ ಒಂದು ವಾರ್ಷಿಕ ವೇತನ ಬಡ್ತಿ ಸಂಚಿತ ಪರಿಣಾಮ ಬೀರದಂತೆ ಒಂದು ವರ್ಷದವರೆಗೆ ತಡೆಹಿಡಿಯುವ ದಂಡನೆ
3) ಶ್ರೀ ಎ. ಶಿವರಾಜ್, ಹಿಂದಿನ ಬೆರಳಚ್ಚುಗಾರರು – ಇವರಿಗೆ ಒಂದು ವಾರ್ಷಿಕ ವೇತನ ಬಡ್ತಿ ಸಂಚಿತ ಪರಿಣಾಮ ಬೀರದಂತೆ ಒಂದು ವರ್ಷದವರೆಗೆ ತಡೆಹಿಡಿಯುವ ದಂಡನೆ.
4) ಶ್ರೀ ಶ್ರೀನಿವಾಸ್, ಹಿಂದಿನ ಶಿರಸ್ತೇದಾರ್ – ಇವರು ಈಗಾಗಲೇ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 214 ರಡಿಯಲ್ಲಿ ದಂಡನೆ ವಿಧಿಸಲು ಪ್ರತ್ಯೇಕವಾಗಿ ಕ್ರಮಕೈಗೊಳ್ಳಲಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1557 **ಬಿ.ವಿ. ಚೌಕಿಮಠ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು –3)

ವಿಷಯ: ಶ್ರೀ ಟಿ.ವಿ. ಪ್ರಕಾಶ್, ತಹಶೀಲ್ದಾರ್ ಗ್ರೇಡ್–2, ಪ್ರಸ್ತುತ ತಹಶೀಲ್ದಾರ್ , ಹರಪನಹಳ್ಳಿ ತಾಲ್ಲೂಕು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂ. ಕಂಇ 110 ಎಎಸ್‌ಡಿ 2006, ದಿನಾಂಕ: 22–06–2006
2. ಶ್ರೀ ಟಿ.ವಿ. ಪ್ರಕಾಶ್, ಇವರ ಮನವಿ ದಿನಾಂಕ: 13–12–2006

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1), ದಿನಾಂಕ 22–06–2006ರ ಅಧಿಸೂಚನೆಯಲ್ಲಿ, ಶ್ರೀ ಟಿ.ವಿ. ಪ್ರಕಾಶ್ ಇವರು ಕಂದಾಯ ಇಲಾಖೆಯ ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ನೇಮಕಾತಿಗೊಂಡಿರುತ್ತಾರೆ. ಸದರಿಯವರು ಈ ಹುದ್ದೆಗೆ ಸೇರುವ ಪೂರ್ವದಲ್ಲಿ ಕರ್ನಾಟಕ ಪೋಲೀಸ್ ಅಕಾಡೆಮಿ, ಮೈಸೂರಿನಲ್ಲಿ ಪ್ರೊಬೇಷನರಿ ಪಿ.ಎಸ್.ಐ. ಆಗಿ ದಿನಾಂಕ: 01–09–2005 ರಿಂದ 05–07–2006ರ ರೆಗೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಮಂಜೂರಾತಿಗೆ ಪರಿಗಣಿಸಲು ಕೋರಿರುತ್ತಾರೆ. ಸದರಿಯವರು ನಿರ್ದೇಶಕರು, ಕರ್ನಾಟಕ ಪೋಲೀಸ್ ಅಕಾಡೆಮಿ, ಮೈಸೂರು ಇವರ ಜ್ಞಾಪನ ಪತ್ರ ಸಂ: ತರಬೇತಿ/06/2005–06 ದಿನಾಂಕ:5.7.2006 ರನ್ವಯ ಪೋಲೀಸ್ ಇಲಾಖೆಯಿಂದ ಬಿಡುಗಡೆ ಹೊಂದಿರುತ್ತಾರೆ. ಆದ್ದರಿಂದ ಸದರಿಯವರು ಪೋಲೀಸ್ ಇಲಾಖೆಯಲ್ಲಿ ದಿನಾಂಕ: 01–09–2005 ರಿಂದ 05–07–2006 ರ ವರೆಗೆ ಸೇವಾ ಅವಧಿಯನ್ನು ಪೂರೈಸಿದ್ದು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಟಿ.ವಿ. ಪ್ರಕಾಶ್ ಇವರ ಮನವಿಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಸದರಿಯವರ ಮೂಲ ಸೇವಾ ಪುಸ್ತಕದಲ್ಲಿ ದಾಖಲಿಸಿರುವಂತೆ ಇವರು ಈ ಹಿಂದೆ ಪೋಲೀಸ್ ಇಲಾಖೆಯಲ್ಲಿ ಪ್ರೊಬೇಷನರಿ ಪಿ.ಎಸ್.ಐ. ಆಗಿ ಸಲ್ಲಿಸಿದ್ದ ದಿನಾಂಕ: 01–09–2005 ರಿಂದ 05–07–2006ರ ವರೆಗೆ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224 (ಎ) ರೀತ್ಯಾ ಪ್ರಸ್ತುತ ಹುದ್ದೆಯ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ. ಆರ್‌ಡಿ 40 ಎಎಸ್‌ಡಿ 2007, ಬೆಂಗಳೂರು, ದಿನಾಂಕ: 2ನೇ ಜೂನ್ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಟಿ.ವಿ. ಪ್ರಕಾಶ್, ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಪೋಲೀಸ್ ಇಲಾಖೆಯಲ್ಲಿ ಪ್ರೊಬೇಷನರಿ ಪಿ.ಎಸ್.ಐ. ಆಗಿ ದಿನಾಂಕ 01–09–2005 ರಿಂದ 05–07–2006 ರ ವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224 (ಎ) ರೀತ್ಯಾ ಅವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ–7) ರವರ ಟಿಪ್ಪಣಿ ಸಂ.ಆಇ 111 ವೆಚ್ಚ–7/2009 ದಿನಾಂಕ:17/04/2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1558

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

ವಿಷಯ: ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಶ್ರೀ ಕೆ.ಜಿ. ದುಂಡಪ್ಪ, ಅಧೀಕ್ಷಕರು (ತಾಂ) (ನಿವೃತ್ತಿ) ಅವರ ವಿರುದ್ಧ ಇಲಾಖಾ ವಿಚಾರಣೆ – ಆರೋಪ ಮುಕ್ತರನ್ನಾಗಿ ಅಂತಿಮ ಆದೇಶ ಹೊರಡಿಸುವ ಬಗ್ಗೆ

ಓದಲಾಗಿದೆ:
1. ನೋಟೀಸ್ ಸಂ. ಕಂಇ 26 ಭೂದಾಸೇ (1) 2001 ದಿ: 22–09–2001
2. ಶ್ರೀ ವಿ. ಪ್ರಸನ್ನಕುಮಾರ್, ಭೂ.ಉ.ನಿ. ಅವರ ದಿ: 31–12–2001 ರ ಲಿಖಿತ ಹೇಳಿಕೆ
3. ಶ್ರೀ ಕೆ.ಜಿ. ದುಂಡಪ್ಪ, ಅಧೀಕ್ಷಕರು (ತಾಂ) ರವರ ದಿ: 5–11–2001ರ ಲಿಖಿತ ಹೇಳಿಕೆ.
4. ಸರ್ಕಾರದ ಆದೇಶ ಸಂ. ಕಂಇ 26 ಭೂದಾಸೇ (1) 2001 ದಿನಾಂಕ 21–09–2007
5. ಶ್ರೀ ಸೋಸಲೆ ಇಂದೂಧರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ದಿನಾಂಕ: 04–03–2009ರ ವಿಚಾರಣಾ ವರದಿ.

ಪ್ರಸ್ತಾವನೆ:

ಶ್ರೀ ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಶ್ರೀ ಕೆ.ಜಿ. ದುಂಡಪ್ಪ, ಅಧೀಕ್ಷಕರು (ತಾಂತ್ರಿಕ) (ನಿವೃತ್ತಿ) ರವರು ಈ ಹಿಂದೆ ದಿನಾಂಕ: 8–6–95 ರಿಂದ 11–7–2000ರವರೆಗೆ ಕ್ರಮವಾಗಿ ಭೂದಾಖಲೆಗಳ ಉಪ ನಿರ್ದೇಶಕರು ಮಂಗಳೂರು ವಿಭಾಗ, ಮಂಗಳೂರು ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಮಡಿಕೇರಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಮಡಿಕೇರಿ ತಾಲ್ಲೂಕು, ಬಾಗಮಂಡಲ ಹೋಬಳಿ, ಚೆಟ್ಟಿತ್ತೂರು ಗ್ರಾಮದ ಸ.ನಂ.1/24ಎ ಮತ್ತು 1/21ಜಿ ಇವುಗಳ ಗ್ರಾಮ ನಕಾಶೆಯಲ್ಲಿ ತಪ್ಪಾಗಿ ಪ್ಲಾಟ್ ಮಾಡಿ ಅದನ್ನಾಧರಿಸಿ ಮರ ಕಡಿತಲೆ ಮಾಡಲು ಜಂಟಿ ಅಳತೆ ನಕ್ಷೆಗೆ ಸಹಿ ಮಾಡಿ ಅರ್ಜಿದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಹೊಂದಿ ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ–3(i) ಹಾಗೂ (iii)ನ್ನು ಉಲ್ಲಂಘಿಸಿದ ಆರೋಪಗಳಿಗಾಗಿ ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು, ಭೂಮಾಪನ ಇಲಾಖೆ, ಹಾಗೂ ಶ್ರೀ ಕೆ.ಜಿ. ದುಂಡಪ್ಪ, ಅಧೀಕ್ಷಕರು(ತಾಂ) (ನಿವೃತ್ತಿ) ಇವರುಗಳ ಮೇಲೆ (1) ರಲ್ಲಿ ಓದಲಾದ ದಿನಾಂಕ:22.9.2001 ನೋಟೀಸನ್ನು ಜಾರಿ ಮಾಡಿ ಸಮಜಾಯಿಷಿ ಕೇಳುವ ಮೂಲಕ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಯಿತು. ನೋಟೀಸಿಗೆ ಮೇಲೆ (2) ಮತ್ತು (3) ರಲ್ಲಿ ಓದಲಾದ ದಿನಾಂಕ: 31–12–2001 ಹಾಗೂ 5–11–2001 ರ ಲಿಖಿತ ಉತ್ತರ ಸಲ್ಲಿಸಿದ ಆರೋಪಿತ ಅಧಿಕಾರಿ/ನೌಕರರು ತಮ್ಮ ಮೇಲೆ ಹೊರಿಸಲಾದ ದೋಷಾರೂಪಣೆಯನ್ನು ನಿರಾಕರಿಸಿರುತ್ತಾರೆ. ಆದ್ದರಿಂದ ಆರೋಪದಲ್ಲಿನ ಸತ್ಯಾಸತ್ಯತೆಯನ್ನು ವಿಚಾರಣೆ ಮೂಲಕ ತಿಳಿಯುವ ದೃಷ್ಟಿಯಿಂದ ವಿಚಾರಣೆಯನ್ನು ಮುಂದುವರಿಸಲು ಸರ್ಕಾರವು ತೀರ್ಮಾನಿಸಿ ಸರ್ಕಾರಿ ಸರ್ಕಾರಿ ಆದೇಶ ಸಂ. ಕಂಇ 26 ಭೂದಾಸೇ (1) 2001, ದಿ: 21–1–2002ರಲ್ಲಿ ಶ್ರೀ ಕೆ. ಈಶ್ವರಭಟ್, ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಲಾಗಿತ್ತು. ಆದರೆ, ಶ್ರೀಯುತರು ವಿಳಾಸದಲ್ಲಿಲ್ಲ ಎಂದು ದಾಖಲೆಗಳು ಹಿಂದಿರುಗಿ ಬಂದಿರುತ್ತದೆ. ನಂತರ ಸರ್ಕಾರಿ ಆದೇಶ ಸಂ. ಕಂಇ 26 ಭೂದಾಸೇ (1) 2001, ದಿ: 08–04–2004 ರಲ್ಲಿ ಶ್ರೀ ಎಂ.ಜೆ. ಇಂದ್ರಕುಮಾರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಲಾಗಿತ್ತು. ಆದರೆ ಶ್ರೀ ಎಂ.ಜೆ. ಇಂದ್ರಕುಮಾರ್ ರವರು ಸದರಿ ವಿಚಾರಣೆಯನ್ನು ತಮ್ಮಿಂದ ತೆಗೆದುಕೊಳ್ಳಲು ಸಾಧ್ಯವಾಗದಿರುವುದರಿಂದ ಬೇರೆಯವರಿಗೆ ವಹಿಸಿಕೊಡಲು ಸೂಚಿಸಿರುತ್ತಾರೆ. ಸರ್ಕಾರಿ ಆದೇಶ ಸಂ. ಕಂಇ 26 ಭೂದಾಸೇ (1) 2001, ದಿ:23.7.2004 ರಲ್ಲಿ ಶ್ರೀ ಪಿ.ಎನ್. ಕುಲಕರ್ಣಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಲಾಗಿತ್ತು ಆದರೆ ಸದರಿಯವರು ಸಹ ವಿಳಾಸದಲ್ಲಿಲ್ಲವಾದುದರಿಂದ, ಸರ್ಕಾರದ ಆದೇಶ ಸಂಖ್ಯೆ: ಕಂಇ 26 ಭೂದಾಸೇ (1) 2001, ದಿನಾಂಕ: 15–6–2007ರಲ್ಲಿ ಶ್ರೀ ಎಸ್.ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಆದರೆ ಶ್ರೀ ಎಸ್.ಎಸ್. ಸಂಗೊಳ್ಳಿ, ನಿವೃತ್ತ ನ್ಯಾಯಾಧೀಶರು ಅವರ ವೈಯಕ್ತಿಕ ಕಾರಣಗಳಿಂದಾಗಿ ವಿಚಾರಣೆಯನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿರುವ ಕಾರಣ, ಮೇಲೆ (4) ರಲ್ಲಿ ಓದಲಾದ ದಿನಾಂಕ:21.9.2007ರ ಸರ್ಕಾರಿ ಆದೇಶದಲ್ಲಿ. ಶ್ರೀ ಎಸ್. ಇಂದೂಧರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಸಾಕ್ಷ್ಯಾಧಾರವನ್ನು ಪರಿಗಣಿಸಿ ಶ್ರೀ ವಿ. ಪ್ರಸನ್ನಕುಮಾರ್ ಮತ್ತು ಶ್ರೀ ಕೆ.ಜಿ.ದುಂಡಪ್ಪ ರವರ ಮೇಲೆ ಹೊರಿಸಲಾಗಿರುವ ಆಪಾದನೆ ರುಜುವಾತಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಮೇಲೆ (5) ರಲ್ಲಿ ಓದಲಾದ

ದಿನಾಂಕ:4.3.2009 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ವಿಚಾರಣಾ ವರದಿಯನ್ನು ಆರೋಪಣಾ ದಾಖಲೆಗಳೊಂದಿಗೆ ಪುನರ್ ಪರಿಶೀಲಿಸಲಾಯಿತು.

1) ಭೂದಾಖಲೆಗಳ ಜಂಟಿ ನಿರ್ದೇಶಕರಾದ ಶ್ರೀ ಶಿವಮಾದಯ್ಯನವರು ತಮ್ಮ ಸಾಕ್ಷಿ ಹೇಳಿಕೆಯಲ್ಲಿ ಮೇಲ್ಕಂಡ ಎರಡು ಜಮೀನುಗಳು ಭೂಮಾಪಕರು ನಮೂದಿಸಿರುವ ಹಾಗೆ ಸಂಪೂರ್ಣವಾಗಿ ಅರಣ್ಯ ಪ್ರದೇಶದ ಒಳಗಡೆ ಬರುತ್ತದೆ ಎಂದು ತಿಳಿಸಿರುವುದು ಸರಿಯಾಗಿರುತ್ತದೆ. ಕೊಡಗಿನಲ್ಲಿ ಯಾವುದೇ ಭೂಮಿಯನ್ನು ಅಳತೆ ಮಾಡಬೇಕಾದರೆ ಗ್ರಾಮ ನಕ್ಷೆಯನ್ನೇ ಮೂಲ ಆಧಾರವಾಗಿಟ್ಟುಕೊಂಡು ಅಳತೆ ಮಾಡಲಾಗುತ್ತದೆ ಎಂದು ಸಾಕ್ಷಿದಾರರಾದ ಶ್ರೀ ಶಿವಮಾದಯ್ಯನವರು ತಿಳಿಸಿರುತ್ತಾರೆ. ಆಪಾದಿತರು ಹಾಗೂ ಜಿಲ್ಲಾಧಿಕಾರಿಯವರಿಂದ ನಿಶಾನೆ ಡಿ-3ನ್ನು ಪಡೆದು ಹಾಜರುಪಡಿಸಿರುತ್ತಾರೆ ಎಂದೂ ಮತ್ತು 1:24ಬಿ ಜಮೀನಿನ ಸುತ್ತ ಇರುವ ಜಮೀನು ಸರ್ಕಾರಿ ಪೈಸಾರಿ ಎಂದು ನಮೂದಿಸಿರುತ್ತದೆ ಎಂದು ಹೇಳುವುದು ಸರಿಯಾಗಿದೆ. ನಿಶಾನೆ ಪಿ-3 ಮತ್ತು ನಿಶಾನೆ ಪಿ-2 ಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲವೆಂದೂ ಮತ್ತು ಇದರಿಂದಾಗಿ ನಿಶಾನೆ ಪಿ-2 ಅನ್ನು ತಯಾರಿಸುವಲ್ಲಿ ಯಾವ ತಪ್ಪು ಇರುವುದಿಲ್ಲ ಎಂದು ಶ್ರೀ ಶಿವಮಾದಯ್ಯನವರು ತಿಳಿಸಿರುತ್ತಾರೆ.

2) ಸಾಕ್ಷಿದಾರರಾದ ಶ್ರೀ ಶಿವಮಾದಯ್ಯ ಅವರು ತಮ್ಮ ಸಾಕ್ಷಿ ಹೇಳಿಕೆಯಲ್ಲಿ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿ ಅದರ ಆಧಾರದ ಮೇಲೆ ಪ್ಲಾಟ್ ನಕ್ಷೆಯನ್ನು ತಯಾರಿಸಿ ಅದನ್ನು ತಮ್ಮ ವರದಿಯೊಂದಿಗೆ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ತಾವು ತಯಾರಿಸಿದ ಕಚ್ಚಾ ನಕ್ಷೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲವೆಂದೂ ಮತ್ತು ಅದನ್ನು ತಮ್ಮ ಮೇಲಾಧಿಕಾರಿಯವರಿಗೂ ಸಹ ವರದಿ ಜೊತೆ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

3) ಭೂಮಾಪಕರು ಜಮೀನನ್ನು ಅಳತೆ ಮತ್ತು ಗುರುತು ಮಾಡುವುದು ಭೂದಾಖಲೆಗಳ ಆಧಾರದ ಮೇಲೆ ವಿನಃ ಚಕ್ಕುಬಂದಿ ಆಧಾರದ ಮೇಲಾಗಿರುವುದಿಲ್ಲ, ವಿವಾದಿತ ಸ.ನಂ.ಗಳ ಉತ್ತರ ಭಾಗದಲ್ಲಿ ಗ್ರಾಮನಕಾಶೆಯಂತೆ ಪೂರ್ವ ಪಶ್ಚಿಮವಾಗಿ ಹರಿಯುವ ಕೋಡಿನ ಗುರುತು ಇರುತ್ತದೆಂದೂ ಮತ್ತು ಇದರಿಂದಾಗಿ ಸಾಕ್ಷಿದಾರರು ಸ್ಥಳ ಪರೀಕ್ಷೆ ನಡೆಸಿದ ಸಮಯದಲ್ಲಿ ಮೇಲ್ಕಂಡ ನೀರು ಹರಿಯುವ ತೋಡು ಕಂಡುಬರಲಿಲ್ಲವಾದ್ದರಿಂದ ಆಪಾದಿತರು ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆಂದು ಮಂಡನಾಧಿಕಾರಿಯವರು ತಮ್ಮ ಲಿಖಿತ ವಾದದಲ್ಲಿ ತಿಳಿಸಿರುತ್ತಾರೆ. ಸ್ಥಳ ತಣಿಖೆ ಸಮಯದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ, ಅಳತೆಯನ್ನು ನಿಲ್ಲಿಸಿ, ವಿಷಯವನ್ನು ಮೇಲಾಧಿಕಾರಿಯವರ ಗಮನಕ್ಕೆ ತರಬೇಕಾಗಿದ್ದುದು ಸಾಕ್ಷಿದಾರರ ಕರ್ತವ್ಯವಾಗಿದ್ದರೂ ಅವರು ಹಾಗೆ ಮಾಡಿರುವುದಿಲ್ಲ. ತಮ್ಮ ಸ್ಥಳ ಪರೀಕ್ಷೆ ಸಮಯದಲ್ಲಿ ಆಪಾದಿತರು ಹಾಜರಿರಲಿಲ್ಲವೆಂದು ಶ್ರೀ ಶಿವಮಾದಯ್ಯನವರು ತಿಳಿಸಿರುತ್ತಾರೆ.

4) ಈ ಪ್ರಕರಣದ 1:24 (ಎ) ಮತ್ತು 1:24 (ಬಿ) ಜಮೀನಿಗೆ ಸಂಬಂಧಿಸಿದ ಜಮಾಬಂದಿ ದಾಖಲೆಗಳನ್ನು ಹಾಜರುಪಡಿಸಲಾಗಿದೆ. ಇದರಲ್ಲಿ ಭೂಮಾಲೀಕರ ಹೆಸರನ್ನು ನಮೂದಿಸಿರುವುದರಿಂದ ಹಾಗೂ ಈ ಭೂಮಿಗೆ ಕಂದಾಯವನ್ನು ನಿಷ್ಕರ್ಷೆ ಮಾಡಿರುವುದು ಕಂಡು ಬಂದಿರುವುದರಿಂದ ಇದು ಪಟ್ಟಾ ಜಮೀನೆಂದು ಸ್ಪಷ್ಟವಾಗಿ ದೃಢಪಡುತ್ತದೆ. ಈ ಜಮೀನನ್ನು ಮಾಲೀಕರು ದಸ್ತಾವೇಜು ನಂ 319:82-83 ರಂತೆ ಕಾವೇರಪ್ಪ ಮತ್ತು ಇತರೆ 9 ಮಂದಿಯಿಂದ ಕ್ರಯಕ್ಕೆ ಪಡೆದಿರುವುದು ಕಂಡುಬಂದಿರುವುದರಿಂದ, ಮೇಲ್ಕಂಡ ಜಮೀನು ಪಟ್ಟಾ ಜಮೀನೆಂದು ದೃಢಪಟ್ಟಿರುತ್ತದೆ.

5) ಜಂಟಿ ಅಳತೆಯಲ್ಲಿ ಸಹ ಮೂಲ ನಕ್ಷೆಯಂತೆ ಇರುವ ಚಕ್ಕುಬಂದಿಯನ್ನು ನಮೂದಿಸಿರುವುದು ಕಂಡುಬರುತ್ತಿರುವುದರಿಂದ ಹಾಗೂ ಅರಣ್ಯ ಇಲಾಖೆಯವರ ಸಮಕ್ಷಮ ಅಳತೆ ಮಾಡಲಾಗಿದ್ದು, ಅರಣ್ಯ ಇಲಾಖೆಯವರು ಯಾವುದೇ ಆಕ್ಷೇಪಣೆಯನ್ನು ಎತ್ತದೆ ಅಳತೆಯನ್ನು ಒಪ್ಪಿ ಸಹಿ ಮಾಡಿರುತ್ತಾರೆ.

6) ಸಾಮಾನ್ಯವಾಗಿ ಭೂಮಾಪಕರು ಅರಣ್ಯ ಇಲಾಖೆಗೆ ಪತ್ರ ಬರೆಯುವ ಅಧಿಕಾರವನ್ನು ಹೊಂದಿಲ್ಲದೇ ಇದ್ದರೂ ಸಹ ಈ ಪ್ರಕರಣದಲ್ಲಿ ಸರ್ವೇಯರ್‌ರವರು ಅರಣ್ಯ ವಲಯಾಧಿಕಾರಿಯವರಿಗೆ ಪತ್ರ ಬರೆದಿರುತ್ತಾರೆ. ಭೂಮಾಪಕರು ತನಿಖಾ ಸಮಯದಲ್ಲಿ ವ್ಯತ್ಯಾಸವನ್ನು ಗಮನಿಸಿದ್ದರೆ, ಈ ವಿಷಯವನ್ನು ತಮ್ಮ ಮೇಲಾಧಿಕಾರಿಯವರ ಗಮನಕ್ಕೆ ತರಬೇಕಾಗಿದ್ದಿತು. ಹಾಗಲ್ಲದೆ, ಭೂಮಪಕರೆ ನೇರವಾಗಿ ಅರಣ್ಯ ವಲಯಾಧಿಕಾರಿಯವರಿಗೆ ಪತ್ರವನ್ನು ಬರೆದಿರುವುದನ್ನು ಗಮನಿಸಿದರೆ, ಈ ಪ್ರಕರಣದ ಹಿನ್ನಲೆಯಲ್ಲಿ ಭೂಮಾಪಕರ ನಕ್ಷೆ ಮತ್ತು ವರದಿ ಸಂಶಯಾಸ್ಪದದಿಂದ ಕೂಡಿರುವುದು ಕಂಡುಬರುತ್ತದೆ.

7) ಸರ್ವೆ ನಂ 1:24 (ಎ) ಮತ್ತು ಸರ್ವೆ ನಂ. 1:24 (ಬಿ) ಕಾಯ್ದಿರಿಸಿದ ಅರಣ್ಯ ಮಧ್ಯೆ ಬರುತ್ತದೆ ಎಂದು ತೋರಿಸಲು ಸ್ಪಷ್ಟ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸರ್ವೆ ನಂ.1 1:24 (ಎ) ಮತ್ತು 1:24 (ಬಿ) ಕಾಯ್ದಿರಿಸಿದ ಅರಣ್ಯ ಪ್ರದೇಶದಲ್ಲಿ ಬರುತ್ತದೆ ಎಂಬುದು ರುಜುವಾತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

8) ಈ ಪ್ರಕರಣದಲ್ಲಿ ನಿಶಾನೆ ಪಿ-2 ನ್ನು ಆಪಾದಿತರು ಸ್ಥಳ ಪರಿಶೀಲಿಸಿದೆ, ಅದು ಮೂಲ ದಾಖಲೆಗಳಂತೆ ಸರಿ ಇದೆ ಎಂದು ತಪ್ಪಾಗಿ ದೃಢೀಕರಿಸಿದ್ದಾರೆ ಎಂದು ಆಪಾದಿಸಿರುವುದು ಕಂಡುಬರುತ್ತದೆ. ನಿಶಾನೆ ಪಿ-2 ನ್ನು ಪರಿಶೀಲಿಸಲಾಗಿ ಸಂಪಾಜೆ ಮತ್ತು ಚೆಟ್ಟಿತ್ತೂರು ಗ್ರಾಮದ ಗಡಿಯಿಂದ ಮಡಿಕೇರಿ ಮಂಗಳೂರು ರಸ್ತೆಯನ್ನು ಅಳತೆ ಮಾಡಿರುವುದು ಕಂಡುಬರುತ್ತದೆ

ನಿಶಾನೆ ಪಿ–2 ರಲ್ಲಿ ಕಾಣಿಸಿರುವ ಎಲ್ಲಾ ವಿವರಗಳು ಮೂಲ ನಕ್ಷೆಯಲ್ಲಿ ಇರುತ್ತದೆ ಎಂದು ಮತ್ತು ಇದರಿಂದಾಗಿ ಆಪಾದಿತರು ಏನನ್ನೂ ಹೊಸದಾಗಿ ಸ್ಪಷ್ಟ ಮಾಡಿರುವುದಿಲ್ಲವೆಂದೂ ಹಾಗೂ ನಿಶಾನೆ ಪಿ–2 ಮತ್ತು ನಿಶಾನೆ ಪಿ–3 ರಲ್ಲಿ ಯಾವ ವ್ಯತ್ಯಾಸವೂ ಕಂಡುಬರುತಿಲ್ಲವಾದ್ದರಿಂದ ನಿಶಾನೆ ಪಿ–2 ತಯಾರಿಸಿರುವುದಿಲ್ಲ. ಯಾವ ತಪ್ಪೂ ಇರುವುದಿಲ್ಲವೆಂದು ಸಾಕ್ಷಿದಾರರಾದ ಶ್ರೀ ಶಿವಮಾದಯ್ಯನವರು ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿರುವುದು ಕಂಡುಬರುತ್ತದೆ. ಇದರಿಂದಾಗಿ ಜಂಟಿ ನಕ್ಷೆಯನ್ನು ಆಪಾದಿತರು ಸ್ಥಳ ಪರಿಶೀಲಿಸದೇ, ಅದು ಮೂಲ ದಾಖಲಾತಿಗಳಂತೆ ಸರಿ ಇದೆ ಎಂದು ತಪ್ಪಾಗಿ ದೃಢೀಕರಿಸಿರುತ್ತಾರೆಂದು ಆಪಾದಿತರ ಮೇಲೆ ಹೊರಸಿರುವ ಆರೋಪ **"ರುಜುವಾತಾಗಿರುವುದಿಲ್ಲ."**

9) ಆಪಾದಿತರಿಗೂ ಅರ್ಜಿದಾರರಿಗೂ ಸಂಪರ್ಕ ಇರುವ ಬಗ್ಗೆಯಾಗಲೀ ಅಥವಾ ಸರ್ಕಾರಕ್ಕೆ ನಷ್ಟ ಉಂಟುಮಾಡುವ ಉದ್ದೇಶ ಆಪಾದಿತರಿಗೆ ಇದ್ದಿತು ಎಂಬ ಬಗ್ಗೆ ಯಾವ ಸಾಕ್ಷ್ಯಾಧಾರವನ್ನು ಕೊಟ್ಟಿರುವುದಿಲ್ಲ. ಈ ಪ್ರಕರಣದಲ್ಲಿ ಜಂಟಿ ಅಳತೆಯನ್ನು ಸಿವಿಲ್ ನ್ಯಾಯಾಲಯ ಆದೇಶ ಮತ್ತು ಜಿಲ್ಲಾಧಿಕಾರಿಗಳಿಂದ ಬಂದ ಸೂಚನೆಗಳನ್ವಯ ಸಹಾಯಕ ನಿರ್ದೇಶಕರು, ಕಾನೂನು ರೀತ್ಯಾ ಅಳತೆಗೆ ಆದೇಶಿಸಿರುವುದು ಕಂಡುಬರುತ್ತದೆ. ಇದರಿಂದಾಗಿ ಆಪಾದಿತರ ಮೇಲಿನ ಮೇಲ್ಕಂಡ ಆಪಾದನೆ ಸಮಂಜಸವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

10) ಜಂಟಿ ನಕ್ಷೆಗೆ ಸಹಿ ಮಾಡಿರುವ ಆಗಿನ ಕಛೇರಿ ಮುಖ್ಯಸ್ಥರಾದ ಶ್ರೀ ಶ್ರೀನಿವಾಸಯ್ಯರವರನ್ನು ಹಾಗೂ ಸ್ಥಳ ಪರಿಶೀಲನಾ ಕಾಲದಲ್ಲಿ ಜಂಟಿ ನಿರ್ದೇಶಕರೊಂದಿಗೆ ಹಾಜರಿದ್ದ ಶ್ರೀ ಜೈಪ್ರಕಾಶ್‌ರವರನ್ನು ಸಾಕ್ಷಿಗೆ ಕರೆಸದೆ ಇರುವುದು ಸಂಶಯಕ್ಕೆ ಎಡೆ ಮಾಡಿದಂತಾಗುತ್ತದೆ. ಮೇಲಾಗಿ ಜಂಟಿ ಕಾರ್ಯವನ್ನು ದಿನಾಂಕ 22–3–97 ರಂದು ಮಾಡಿ ಮುಗಿಸಿದ್ದರೂ, ಅದರಲ್ಲಿ ಸಹಿ ಮಾಡಿರುವ ಅರಣ್ಯ ಇಲಾಖೆಯ ಸರ್ವೆ ರೇಂಜರ್ ಮೇಲಾಗಲೀ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮೇಲಾಗಲೀ, ಭೂದಾಖಲೆಗಳ ಸಹಾಯಕ ನಿರ್ದೇಶಕರ ಮೇಲಾಗಲೀ, ಯಾವುದೇ ವಿಚಾರಣೆ ನಡೆಸದೆ, ಈ ಪ್ರಕರಣದ ಆಪಾದಿತರಿಬ್ಬರ ಮೇಲೆ ಆರೋಪ ಹೊರಿಸಿರುವುದನ್ನು ಗಮನಿಸಿದರೆ, ಆಪಾದಿತರ ಮೇಲಿನ ಸೇಡಿನಿಂದಾಗಿ ಆಪಾದಿತರ ಮೇಲೆ ಈ ಪ್ರಕರಣವನ್ನು ದಾಖಲಿಸಿರುವುದು ಕಂಡುಬರುತ್ತದೆ ಹಾಗೂ ಸಾಕ್ಷಿದಾರರು ಸ್ಥಳದಲ್ಲಿ ಸಿದ್ಧಪಡಿಸಿದ ಕಚ್ಚಾ ನಕ್ಷೆಯನ್ನು ವಿಚಾರಣೆ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ.

ಹಾಗೂ ಒಂದನೇ ಸಾಕ್ಷಿದಾರರು ತಮ್ಮ ಮೇಲಾಧಿಕಾರಿಯವರಿಗೂ ಕಳುಹಿಸಿರುವುದಿಲ್ಲ. ನಿಶಾನೆ ಪಿ–2 ಹಾಗೂ ನಿಶಾನೆ ಪಿ–3 ಗೂ ಯಾವುದೇ ವ್ಯತ್ಯಾಸ ಇರುವುದಿಲ್ಲವೆಂದೂ ಹಾಗೂ ನಿಶಾನೆ ಪಿ–2ರಲ್ಲಿ ಕಾಣಿಸಿರುವ ಎಲ್ಲಾ ವಿವರಗಳು ಮೂಲ ನಕ್ಷೆಯಲ್ಲಿ ಇರುತ್ತದೆ ಹಾಗೂ ನಿಶಾನೆ ಪಿ–2 ತಯಾರಿಸಿರುವುದರಲ್ಲಿ ಯಾವ ತಪ್ಪೂ ಇರುವುದಿಲ್ಲವೆಂದು ಸಾಕ್ಷಿದಾರರಾದ ಶ್ರೀ ಶಿವಮಾದಯ್ಯನವರು ಒಪ್ಪಿರುವುದು ಕಂಡುಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಹಾಗೂ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಸಾಕ್ಷ್ಯಾಧಾರವನ್ನು ಪರಿಗಣಿಸಿ, ಶ್ರೀ ವಿ. ಪ್ರಸನ್ನಕುಮಾರ್ ಮತ್ತು ಶ್ರೀ ಕೆ.ಜಿ. ದುಂಡಪ್ಪ ರವರ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿಲ್ಲವೆಂಬ ವಿಚಾರಣಾಧಿಕಾರಿಯವರ ನಿರ್ದಿಷ್ಟ ನಿರ್ಣಯದ ಹಿನ್ನೆಲೆಯಲ್ಲಿ ವಿಚಾರಣಾ ವರದಿಯನ್ನು ಒಪ್ಪಿಕೊಂಡ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 26 ಭೂದಾಸೇ (1) 2001 ಬೆಂಗಳೂರು, ದಿನಾಂಕ: 1ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸಂದರ್ಭಗಳಿಂದಾಗಿ ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು, ಹಾಗೂ ಶ್ರೀ ದುಂಡಪ್ಪ, ಅಧೀಕ್ಷಕರು (ತಾಂ) (ನಿವೃತ್ತಿ) ರವರುಗಳನ್ನು ದಿನಾಂಕ: 22–9–2001 ರ ನೋಟೀಸಿನಲ್ಲಿ ಮಾಡಲಾದ ಆರೋಪಗಳಿಂದ ಆರೋಪಮುಕ್ತಗೊಳಿಸಿ ಆದೇಶಿಸಿದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ, ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಶ್ರೀ ಕೆ.ಜಿ. ದುಂಡಪ್ಪ, ಅಧೀಕ್ಷಕರು (ತಾಂ) (ನಿವೃತ್ತಿ) ಅವರುಗಳು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1559

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, (ಭೂಮಾಪನ)

ವಿಷಯ: ಶ್ರೀ ಎಸ್.ಡಿ.ಸ್ವಾದಿ, ಹಿಂದಿನ ತಹಶೀಲ್ದಾರ್, ಭಾಲ್ಕಿ ತಾಲ್ಲೂಕು. ಬೀದರ್ ಜಿಲ್ಲೆ, ಹಾಲಿ ನಿವೃತ್ತರು, ಮತ್ತು ಇತರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸುವ ಬಗ್ಗೆ.

ಓದಲಾಗಿದೆ 1. ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಯವರ ದಿನಾಂಕ: 20–06–2003ರ ಪತ್ರ ಸಂ. ಕಂ/ಸಿಬ್ಬಂದಿ/ವಿಚಾರಣೆ/ಸಿಆರ್:23/2002–03/3393

2. ದಿನಾಂಕ: 06-04-2004ರ ಕಾರಣ ಕೇಳುವ ನೋಟೀಸು ಸಂ: ಆರ್‌ಡಿ 9 ಎಡಿಇ 2004
3 ಲಿಖಿತ ಉತ್ತರ :
   ಎ) ಶ್ರೀ ಸುಭಾಷ್, ಗ್ರಾಮಲೆಕ್ಕಿಗ, ದಿನಾಂಕ: 14-05-2004
   ಬಿ) ಶ್ರೀ ಎಸ್. ಡಿ. ಸ್ವಾದಿ, ನಿವೃತ್ತ ತಹಶೀಲ್ದಾರ್, ದಿ: 20-05-04
   ಸಿ) ಶ್ರೀ ಕಾಶೀನಾಥ್‌ರಾವ್, ಕಂದಾಯ ನಿರೀಕ್ಷಕ, ದಿನಾಂಕ: 10-06-2004
4 ಸರ್ಕಾರದ ಆದೇಶ ಸಂ. ಆರ್‌ಡಿ 9 ಎಡಿಇ 2004, ದಿನಾಂಕ: 30-03-2005
5 ವಿಚಾರಣಾಧಿಕಾರಿಗಳ ದಿನಾಂಕ : 09-10-2006ರ ವಿಚಾರಣಾ ವರದಿ
6 ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ 05-05-2007.
7 ಶ್ರೀ ಸುಭಾಷ್, ಹಿಂದಿನ ಗ್ರಾಮಲೆಕ್ಕಿಗ, ಭಾಲ್ಕಿ, ಅವರ ದಿನಾಂಕ: 14-08-2007ರ ಲಿಖಿತ ಉತ್ತರ.

ಪ್ರಸ್ತಾವನೆ:

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಭಾತಂಭ್ರಾ ಗ್ರಾಮದ ಸರ್ವೆ ನಂ. 162/3ರ 2 ಎಕರೆ 20 ಗುಂಟೆ ಜಮೀನನ್ನು 1961ರ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 79(ಬಿ) ಉಲ್ಲಂಘಿಸಿ ಶ್ರೀ ದಸ್ತಗೀರ, ಅಧ್ಯಕ್ಷರು, ದಾರೂಲ ಉಲಮ ಅರಬಿಯಾ ಇಸ್ಲಾಮಿಯಾ ಸಂಸ್ಥೆ, ಭಾತಂಬ್ರಾ ಇವರ ಹೆಸರಿಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿದ್ದು, ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಬಳಸಿಕೊಳ್ಳಲು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಮೇಲಾಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ ಎಂಬ ಕಾರಣಕ್ಕಾಗಿ ಈ ಕೆಳಕಂಡ ಅಧಿಕಾರಿ ಹಾಗೂ ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸುವಂತೆ ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಪತ್ರದಲ್ಲಿ ಬೀದರ್ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿರುತ್ತಾರೆ.

1) ಶ್ರೀ ಎಸ್.ಡಿ. ಸ್ವಾದಿ, ಹಿಂದಿನ ತಹಶೀಲ್ದಾರ್, ಭಾಲ್ಕಿ ತಾಲ್ಲೂಕು, ಹಾಲಿ ನಿವೃತ್ತರು
2) ಶ್ರೀ ಕಾಶೀನಾಥ್, ಹಿಂದಿನ ಕಂದಾಯ ನಿರೀಕ್ಷಕ, ಹಾಲಿ ನಿವೃತ್ತರು
3) ಶ್ರೀ ಸುಭಾಷ್, ಹಿಂದಿನ ಗ್ರಾಮ ಲೆಕ್ಕಿಗ, ತಾಲ್ಲೂಕು ಕಛೇರಿ, ಭಾಲ್ಕಿ

ಸದರಿ ಅಧಿಕಾರಿ/ನೌಕರರ ವಿರುದ್ಧದ ದೋಷಾರೋಪಣಾ ಪಟ್ಟಿಗಳನ್ನು (ಅನುಬಂಧ 1 ರಿಂದ 4ರವರೆಗೆ) ಮೇಲೆ ಕ್ರ.ಸಂ.(2) ರಲ್ಲಿ ಓದಲಾದ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿಗೊಳಿಸಿ ಆ ಬಗ್ಗೆ ಅವರುಗಳ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದಕ್ಕೆ ಉತ್ತರವಾಗಿ ಶ್ರೀ ಎಸ್.ಡಿ. ಸ್ವಾದಿ, ಹಿಂದಿನ ತಹಶೀಲ್ದಾರ್, ಶ್ರೀ ಸುಭಾಷ್, ಗ್ರಾಮಲೆಕ್ಕಿಗ, ಶ್ರೀ ಕಾಶೀನಾಥ್‌ರಾವ್, ಕಂದಾಯ ನಿರೀಕ್ಷಕ ಇವರುಗಳ ಮೇಲೆ ಕ್ರ.ಸಂ. (3) ರಲ್ಲಿ ಓದಲಾದ ತಮ್ಮ ಲಿಖಿತ ಹೇಳಿಕೆಯಲ್ಲಿ ಅವರ ವಿರುದ್ಧದ ಆರೋಪಗಳನ್ನು ಒಪ್ಪಿಕೊಳ್ಳದೆ ಅಲ್ಲಗೆಳೆದಿರುತ್ತಾರೆ. ಆದುದರಿಂದ ಆರೋಪಿತ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಹಾಗೂ ಇದಕ್ಕೆ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಶ್ರೀ ಕುಲಕರ್ಣಿ ರಾಮರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನಾಯಾಧೀಶರು, ತುರುವಿಹಾಳ್ ಅಂಚೆ, ಸಿಂಧನೂರು, ಇವರನ್ನು ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ 30-03-2005 ರಲ್ಲಿ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಈ ಪ್ರಕರಣದ ಕುರಿತು ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಮೇಲೆ ಓದಲಾದ ಕ್ರ.ಸಂ. (5) ರ ದಿನಾಂಕ 9-10-2006 ರಲ್ಲಿ ಸಲ್ಲಿಸಿರುತ್ತಾರೆ. ಶ್ರೀ ಎಸ್.ಡಿ. ಸ್ವಾದಿ, ತಹಶೀಲ್ದಾರ್, ಇವರು ದಿನಾಂಕ 29-02-2000 ರಂದು ವಯೋ ನಿವೃತ್ತಿ ಹೊಂದಿದ್ದು, ನಿವೃತ್ತಿ ಹೊಂದಿದ 4 ವರ್ಷಗಳ ನಂತರ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 214ರನ್ವಯ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದ್ದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ ಎಂದು, ಶ್ರೀ ಕಾಶೀನಾಥ್‌ರಾವ್ ರವರು ನಿಧನ ಹೊಂದಿದ್ದರಿಂದ ಅವರ ವಿರುದ್ಧ ವಿಚಾರಣೆಯು ಸಹ ಅಂತ್ಯಗೊಂಡಿದೆಯೆಂದು ಶ್ರೀ ಸುಭಾಷ್, ಗ್ರಾಮಲೆಕ್ಕಿಗ, ಇವರು ವಿರುದ್ಧ ಆಪಾದನೆ ಮಾತ್ರ ಸಾಬೀತಾಗಿದೆಯೆಂದು ವಿಚಾರಣಾಧಿಕಾರಿಗಳು ವರದಿ ನೀಡಿದ್ದಾರೆ.

ಆಪಾದಿತ ನೌಕರರಾದ ಶ್ರೀ ಸುಭಾಷ್ ಇವರಿಗ ಮೇಲೆ ಓದಲಾದ ಕ್ರ.ಸಂ. (6) ರ ದಿನಾಂಕ 05-05-2007 ರಲ್ಲಿ ಎರಡನೇ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿತ್ತು. ಸದರಿಯವರ ಲಿಖಿತ ಉತ್ತರವನ್ನು ಮೇಲೆ ಓದಲಾದ ಕ್ರ. ಸಂ. (7) ರಲ್ಲಿ ಸಲ್ಲಿಸಿರುತ್ತಾರೆ. ಭಾತಂಬ್ರಾ ಗ್ರಾಮದ ಸರ್ವೆ ನಂ. 162/3, ವಿಸ್ತೀರ್ಣ 2 ಎಕರೆ 20 ಗುಂಟೆ ಜಮೀನು ಟ್ರಸ್ಟಿನ ಪರ ಮಾರಾಟ ಆಗಿರುವುದು ತಮಗೆ ತಿಳಿದು ಬಂದಿಲ್ಲವೆಂದು ಶ್ರೀ ಗೂಲಮ ದಸ್ತಗಿರಿ, ತಂದೆ ಇಸ್ಮಾಯಿಲ್ ಅವರ ಪರ ಮಾರಾಟವಾಗಿರುವುದಾಗಿ ತಿಳಿದು ಬಂದಿದ್ದು ಹಾಗೂ ಸದರಿ ಭೂ ವ್ಯವಹಾರ ಕಲಂ 79 (ಬಿ) ಕೆ.ಎಲ್.ಆರ್. ಕಾಯ್ದೆ

ಉಪಬಂಧಗಳ ಅಡಿಯಲ್ಲಿ ನಿಷೇಧಕ್ಕೆ ಒಳಗಾಗಿರುವ ವಿಷಯ ತಿಳಿದು ಬಂದಿಲ್ಲವೆಂದು ಹಾಗೂ ಜಂಟಿ ಇಲಾಖಾ ವಿಚಾರಣೆಯಲ್ಲಿ ಇನ್ನುಳಿದ ಇಬ್ಬರು ಆಪಾದಿತರನ್ನು ಆಪಾದನೆಯಿಂದ ಮುಕ್ತಗೊಳಿಸಿ, ಕೇವಲ ತಮ್ಮ ವಿರುದ್ಧದ ಆಪಾದನೆ ಸಾಬೀತಾಗಿದೆಯೆಂದು ಹೇಳುವುದು ಸಮಂಜಸವಾಗಿಲ್ಲ ಹಾಗೂ ಇನ್ನು ಮುಂದೆ ನಿರ್ವಹಿಸುವ ಕರ್ತವ್ಯಗಳಿಗೆ ಸಂಬಂಧಿತ ಕಾಯ್ದೆ ಕಾನೂನುಗಳ ತಿಳುವಳಿಕೆ ಮಾಡಿಕೊಂಡು ಸರಿಯಾಗಿ ಕಾರ್ಯ ನಿರ್ವಹಿಸಲು ಒಂದು ಅವಕಾಶ ಮಾಡಿಕೊಡುವಂತೆ ತಿಳಿಸಿ ಅವರ ವಿರುದ್ಧ ಆಪಾದನೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಶ್ರೀ ಸುಭಾಷ್, ಹಿಂದಿನ ಗ್ರಾಮಲೆಕ್ಕಿಗರು, ಭಾತಂಬ್ರಾ ಗ್ರಾಮ ಇವರು ವಿರುದ್ಧ ಆಪಾದನ ಸಾಬೀತಾಗಿರುವುದರಿಂದ ಹಾಗೂ ನಿಯಮಗಳ ಉಲ್ಲಂಘನೆ ಬಗ್ಗೆ ತಿಳುವಳಿಕೆ ಇಲ್ಲವೆಂದು ಪರೋಕ್ಷವಾಗಿ ಒಪ್ಪಿಕೊಂಡಿರುತ್ತಾರೆ. ಮೇಲೆ ಕಾಣಿಸಿದಂತೆ, ವಿಚಾರಣಾಧಿಕಾರಿಗಳು, ವಿಚಾರಣಾ ವರದಿಯನ್ನು ಒಪ್ಪಿ, ಶ್ರೀ ಎಸ್.ಡಿ ಸ್ವಾದಿ, ನಿವೃತ್ತ ತಹಶೀಲ್ದಾರ್ ಮತ್ತು ಕಾಶೀನಾಥರಾವ್ (ದಿವಂಗತ) ಇವರುಗಳ ವಿರುದ್ಧ ಮಾಡಲಾದ ಆಪಾದನೆಯಿಂದ ಮುಕ್ತಗೊಳಿಸಲು ಹಾಗೂ ಶ್ರೀ ಸುಭಾಷ್, ಗ್ರಾಮ ಲೆಕ್ಕಾಧಿಕಾರಿಗಳು ಇವರ ವಿರುದ್ಧ ಮಾಡಲಾದ ಆಪಾದನ ಸಾಬೀತಾಗಿರುವುದರಿಂದ ಇವರಿಗೆ ದಂಡನೆ ವಿಧಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ. 09 ಎಡಿಇ 2004, ಬೆಂಗಳೂರು, ದಿನಾಂಕ: 3ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದ ಜಂಟಿ ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರವು ಒಪ್ಪಿ, (1) ಶ್ರೀ ಎಸ್.ಡಿ. ಸ್ವಾದಿ, ನಿವೃತ್ತ ತಹಶೀಲ್ದಾರ್, (23) ದಿವಂಗತ ಕಾಶೀನಾಥರಾವ್ ಇವರುಗಳ ವಿರುದ್ಧ ಮಾಡಲಾದ ಆಪಾದನೆಯಿಂದ ಮುಕ್ತಗೊಳಿಸಿದೆ ಹಾಗೂ ಶ್ರೀ ಸುಭಾಷ್, ಗ್ರಾಮ ಲೆಕ್ಕಾಧಿಕಾರಿಗಳು, ಭಾತಂಬ್ರಾ, ಭಾಲ್ಕಿ ತಾಲ್ಲೂಕು, ಪ್ರಸ್ತುತ ಗ್ರಾಮಲೆಕ್ಕಾಧಿಕಾರಿಗಳು, ಕೀಕುಳಗಿ, ಬೀದರ್ ತಾಲ್ಲೂಕು, ಇವರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1560

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

ವಿಷಯ: ಪುತ್ತೂರು ತಾಲ್ಲೂಕು, ಬೆಳಿನೆಲೆ ಗ್ರಾಮದ ಸರ್ವೆ ನಂ. 12/1ಎ2, 12/1ಬಿ, 19/3ಎ ಮಾಫಿ ಪಾಸು ಪ್ರಕರಣದಲ್ಲಿ ಗಡಿಗಳನ್ನು ಗುರುತಿಸುವಾಗ ಪಕ್ಕದ ಸರ್ಕಾರಿ ಜಾಗವನ್ನು ಸೇರಿಸಿ ಗಡಿ ಗುರುತುಗಳನ್ನು ನಿಗದಿಪಡಿಸಿ, ಸರ್ಕಾರಕ್ಕೆ ನಷ್ಟ ಉಂಟಾಗಲು ಕಾರಣರಾದ ಭೂದಾಖಲೆಗಳ ಉಪ ನಿರ್ದೇಶಕರು, ಮಂಗಳೂರು ಹಾಗೂ ಇತರೆ ಭೂಮಾಪನ ಸಿಬ್ಬಂದಿ ವಿರುದ್ಧ ಜಂಟಿ ಇಲಾಖಾ ವಿಚಾರಣೆ–ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 7 ಭೂದಾಸೇ (1) 2001, ದಿ: 1–6–2001
2. ಶ್ರೀ ಆರ್. ಸುರೇಶ್ ರಾವ್, ಪ್ರಥಮ ದರ್ಜೆ ಭೂಮಾಪಕರುರವರ ದಿ:16–02–2002ರ ರಕ್ಷಣಾ ಹೇಳಿಕೆ
3 ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರುರವರ ದಿ: 18–4–2002ರ ರಕ್ಷಣಾ ಹೇಳಿಕೆ
4 ಶ್ರೀ ಪಿ. ಪ್ರಸನ್ನಕುಮಾರ್, DDLR ರವರ ದಿ: 13-7-2001ರ ರಕ್ಷಣಾ ಹೇಳಿಕೆ
5 ಸರ್ಕಾರದ ಆದೇಶ ಸಂಖ್ಯೆ: ಕಂಇ 7 ಭೂದಾಸೇ (1) 2001, ದಿ: 21–8–2002
6 ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ದಿ: 6–4–2004
7 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 7 ಭೂದಾಸೇ (1) 2001, ದಿ:26.5.2004
8 ಶ್ರೀ ಪಿ. ಪ್ರಸನ್ನಕುಮಾರ್, DDLRರವರ 2ನೇ ಕಾರಣ ಕೇಳಿ ನೋಟೀಸಿಗೆ ದಿ: 1–1–2005ರ ಲಿಖಿತ ಉತ್ತರ
9 ಶ್ರೀ ಆರ್. ಸುರೇಶ್‌ರಾವ್‌ರವರು 2ನೇ ಕಾರಣ ಕೇಳಿ ನೋಟೀಸ್‌ಗೆ ದಿ: 23–7–2004 ಲಿಖಿತ ಉತ್ತರ
10 ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರುರವರ 2ನೇ ಕಾರಣ ಕೇಳಿ ನೋಟೀಸ್‌ಗೆ ದಿ: 16–7–2004ರ ಲಿಖಿತ ಉತ್ತರ
11 ಸರ್ಕಾರದ ಆದೇಶ ಸಂಖ್ಯೆ ಕಂಇ 7 ಭೂದಾಸೇ (1) 2001, ದಿನಾಂಕ: 29–5–2008
12 ಸರ್ಕಾರದ ಪತ್ರ ಸಂಖ್ಯೆ : ಕಂಇ 7 ಭೂದಾಸೇ (1) 2001, ದಿ: 5–6–2008
13 ಕರ್ನಾಟಕ ಲೋಕಸೇವಾ ಆಯೋಗದ ಸಹಮತಿ ಸಂಖ್ಯೆ : ಪಿಎಸ್ಸಿ 54 ಸಿಎನ್‌ಎಸ್ 08, ದಿ:3.2.2009

ಪ್ರಸ್ತಾವನೆ:

ಶ್ರೀ ವಿ. ಪ್ರಸನ್ನಕುಮಾರ್‌ರವರು ಭೂದಾಖಲೆಗಳ ಉಪ ನಿರ್ದೇಶಕರು, ಮಂಗಳೂರು, ಶ್ರೀ ಆರ್. ಸುರೇಶ್‌ರಾವ್, ಪ್ರ.ದ.ಭೂ. ಉಪ ನಿರ್ದೇಶಕರು ಭೂದಾಖಲೆಗಳ ಇಲಾಖೆರವರ ಕಛೇರಿ, ಮಂಗಳೂರು, ಶ್ರೀ ಮಲ್ಲೇಶಪ್ಪ, ದ್ವಿ.ದ.ಭೂ. ಸಹಾಯಕ ನಿರ್ದೇಶಕರ ಕಛೇರಿಯ ಪುತ್ತೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಪುತ್ತೂರು ತಾಲ್ಲೂಕು, ಬಿಳಿನೆಲೆ ಗ್ರಾಮದ ಸ.ನಂ. 12:1ಎ2, 12:1ಜಿ, 19:3ಎ ಬಾಬ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರು ಪುತ್ತೂರು ಕಛೇರಿಯ ಕಡತ ನಂ. ಎಫ್.ಓ.ಆರ್ 81/95–96ಕ್ಕೆ ಸಂಬಂಧಿಸಿದಂತೆ ಜಂಟಿ ನಕ್ಷೆ ತಯಾರಿಸುವಾಗ ವಾಸ್ತವವಾಗಿ ಇರಬೇಕಾದ ಗಡಿಗಳನ್ನು ಸ್ಥಳದಲ್ಲಿ ಬದಲಾಯಿಸಿ ಪಟ್ಟಾ ಸ್ಥಳದ ಸರ್ವೆ ನಂಬರ್‌ಗಳಾದ 12:1ಎ2 ಮತ್ತು 12:1ಜಿ ಹಾಗೂ 19:3ಎ ಗಳಿಗೆ ಹೊಂದಿಕೊಂಡಂತೆ ಇರುವ ಸರ್ಕಾರಿ ಸ್ಥಳವಾದ 12:1ಎ:ಬಿ, 19:3ಬಿ ಮತ್ತು ಸಂರಕ್ಷಿತ ಅರಣ್ಯದಿಂದ ಕೂಡಿರುವ ಸರ್ವೆ ನಂಬರ್ 175 ರಲ್ಲಿ ಇರುವ 76 ಮರಗಳನ್ನು ಮೇಲಿನ ಪಟ್ಟಾ ಸ್ಥಳದೊಳಗಡೆ ಬರುತ್ತವೆಂದು ಜಂಟಿ ನಕ್ಷೆ ಮತ್ತು ಕಡಿಯಲಿರುವ ಮರಗಳ ಪಟ್ಟಿಯಲ್ಲಿ ಸೇರಿಸಿ ಆ ಸರ್ಕಾರಿ ಜಾಗದಲ್ಲಿನ 76 ಮರಗಳು ಕಡಿತಗೊಳ್ಳಲು ಕಾರಣರಾಗಿ ಸರ್ಕಾರಕ್ಕೆ ಈ ದುರ್ನಡತೆಯಿಂದ ರೂ. 4,25,869–00 ರೂಪಾಯಿಗಳ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಮಾಡಿಕೊಟ್ಟು ಪರಿಸರ ನಾಶಕ್ಕೂ ಜವಾಬ್ದಾರರಾಗಿರುತ್ತಾರೆ. ಇದರಿಂದಾಗಿ ಕರ್ನಾಟಕ ಸರ್ಕಾರಿ (ನಡತೆ) ನಿಯಮಾವಳಿ 1966ರ ನಿಯಮ 3 (i) ಮತ್ತು (iii) ನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಅಕ್ರಮ ಎಸಗಿರುತ್ತಾರೆ. ಈ ಬಗ್ಗೆ ಸದರಿ ಅಧಿಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನ ಕೈಗೊಂಡು ಮೇಲೆ (1) ರಲ್ಲಿ ಓದಲಾದ ದಿ: 1–6–2001 ಕಾರಣ ಕೇಳುವ ನೋಟೀಸು ಹಾಗೂ ಆರೋಪಣಾ ಪಟ್ಟಿಯನ್ನು ಹೊರಡಿಸಲಾಯಿತು. ಈ ಬಗ್ಗೆ ಮೇಲೆ ಓದಲಾದ (2), (3) ಮತ್ತು (4) ರಲ್ಲಿ ಕ್ರಮವಾಗಿ ದಿನಾಂಕ : 16–2–2002, 18–4–2002 ಮತ್ತು 13–7–2001 ರ ಲಿಖಿತ ಹೇಳಿಕೆಗಳಲ್ಲಿ ಶ್ರೀ ಆರ್. ಸುರೇಶ್‌ರಾವ್, ಪ್ರಥಮ ದರ್ಜೆ ಭೂಮಾಪಕರು, ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರು, ಮತ್ತು ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪನಿರ್ದೇಶಕರು ರವರುಗಳು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗೆಳೆದು ತಮ್ಮನ್ನು ಆರೋಪ ಮುಕ್ತರನ್ನಾಗಿಸಲು ಕೋರಿರುತ್ತಾರೆ.

ಈ ಬಗ್ಗೆ ಆರೋಪಿತ ಅಧಿಕಾರಿ ನೌಕರರುಗಳು ಎಸಗಿರುವ ಗಂಭೀರ ದುರ್ನಡತೆ ಕರ್ತವ್ಯ, ನಿರ್ಲಕ್ಷ್ಯತೆ ತೋರಿರುವ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡು ಬಂದಿರುವುದರಿಂದ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಮೇಲೆ (5) ರಲ್ಲಿ ಓದಲಾದ ದಿನಾಂಕ 21–8–2002 ರ ಸರ್ಕಾರಿ ಆದೇಶದಲ್ಲಿ ಶ್ರೀ ಎಂ.ಜೆ. ಇಂದ್ರಕುಮಾರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (6) ರಲ್ಲಿ ಓದಲಾದ ದಿ: 6–4–2004 ರ ವಿಚಾರಣಾ ವರದಿಯನ್ನು ಸಲ್ಲಿಸಿ "ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ಸರ್ವೆ ನಂಬರ್ 12:1ಎ2, 12:1ಬಿ, 19:3ಎ ಜಮೀನುಗಳಿಗೆ ಸಂಬಂಧಿಸಿದಂತೆ ಮಾಫಿಪಾಸು ನೀಡುವ ಪ್ರಕರಣದಲ್ಲಿ ಅದರ ಗಡಿಗಳನ್ನು ಗುರ್ತಿಸುವಾಗ ಪಟ್ಟಾ ಜಮೀನಿನ ಗಡಿ ಅಳತೆ ಜೊತೆಗೆ ಸರ್ಕಾರಿ ಜಮೀನನ್ನೂ ಸೇರಿಸಿ, ಸರ್ವೆ ಮಾಡಿ, 76 ಮರಗಳು ಪಟ್ಟಾ ಜಮೀನಿನಲ್ಲಿ ಬರುತ್ತದೆ ಎಂಬುದಾಗಿ ತೋರಿಸಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಲು 1, 2 ಮತ್ತು 3ನೇ ಆರೋಪಿತ ಅಧಿಕಾರಿ/ನೌಕರರು ಕಾರಣಕರ್ತರು ಎಂಬುದರ ಬಗ್ಗೆ ಸಂದೇಹವಿಲ್ಲ. ಆರೋಪಿತ ಅಧಿಕಾರಿಗಳು ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳಾಗಿದ್ದು, ಗುರುತರ ಕಾರ್ಯವನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಮನೋಭಾವವನ್ನು ತೋರಿಸಿ ಸರ್ಕಾರದ ಜಾಗದಲ್ಲಿರುವ ಅರಣ್ಯ ಸಂಪತ್ತಿನ ನಷ್ಟಕ್ಕೆ ಕಾರಣರಾಗಿ, ಕರ್ತವ್ಯ ಲೋಪವನ್ನು ಎಸಗಿದ್ದಾರೆ, ಹಾಗೂ ಸರ್ಕಾರಿ ನೌಕರರಾಗಿರಲು ಅರ್ಹರಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಸಾಬೀತುಪಡಿಸಲ್ಪಟ್ಟಿದೆ. "ಎಂದು ತಿಳಿಸುತ್ತಾ 3 ಜನ ಆರೋಪಿ ಅಧಿಕಾರಿಗಳ ವಿರುದ್ಧ ಮಾಡಿರುವ ಆರೋಪಣೆಗಳು ಸಾಬೀತಾಗಿರುತ್ತದೆಂದು ತಮ್ಮ ವರದಿಯಲ್ಲಿ ತೀರ್ಮಾನ ನೀಡಿದ್ದಾರೆ. ಈ ಬಗ್ಗೆ ಮೇಲೆ (7) ರಲ್ಲಿ ಓದಲಾದ ದಿ: 26–5–2004ರ 2ನೇ ಕಾರಣ ಕೇಳುವ ನೋಟೀಸನ್ನು ಆರೋಪಿತರುಗಳಿಗೆ ಜಾರಿ ಮಾಡಿ ಅದರೊಡನೆ ವಿಚಾರಣಾ ವರದಿಯ ಪ್ರತಿ ಒದಗಿಸಲಾಗಿತ್ತು.

ಈ ಬಗ್ಗೆ ಲಿಖಿತ ಹೇಳಿಕೆ ನೀಡಿದ ಆರೋಪಿತರುಗಳಾದ, ಶ್ರೀ ವಿ. ಪ್ರಸನ್ನಕುಮಾರ್‌ರವರು ಮೇಲೆ (8) ರಲ್ಲಿ ಓದಲಾದ ದಿ: 1–1–2005ರ ತಮ್ಮ 2ನೇ ಕಾರಣ ಕೇಳಿ ನೋಟೀಸ್‌ಗೆ ಉತ್ತರಿಸುತ್ತಾ ಪ್ರಸ್ತುತ ಪ್ರಕರಣದಲ್ಲಿ ತಮ್ಮಿಂದ ಯಾವುದೇ ತಪ್ಪು ನಡೆದಿಲ್ಲ ಎಂದು ತಿಳಿಸುತ್ತಾ ಆರೋಪಮುಕ್ತರನ್ನಾಗಿಸಲು ಹಾಗೂ ಅಮಾನತ್ತಿನ ಅವಧಿಯನ್ನು ಕ್ರಮಬದ್ಧಗೊಳಿಸಲು ಕೋರಿದ್ದಾರೆ.

ಶ್ರೀ ಆರ್. ಸುರೇಶ್‌ರಾವ್, ಪ್ರಥಮ ದರ್ಜೆ ಭೂಮಾಪಕರು ಮೇಲೆ (9) ರಲ್ಲಿ ಓದಲಾದ ದಿ: 23–7–2004ರ 2ನೇ ಕಾರಣ ಕೇಳಿ ನೋಟೀಸ್‌ಗೆ ಲಿಖಿತ ಉತ್ತರ ಮತ್ತು ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರು ಮೇಲೆ (10)ರಲ್ಲಿ ಓದಲಾದ ದಿ: 6–7–2004 ಲಿಖಿತ ಉತ್ತರ ನೀಡಿ ಈ ಹಿಂದೆ ನೀಡಿದ್ದ ಹೇಳಿಕೆಗಳನ್ನು ಪರಿಗಣಿಸಬೇಕೆಂದು ತಮ್ಮಿಂದ ಯಾವುದೇ ತಪ್ಪಾಗಿಲ್ಲ, ಮೇಲಾಧಿಕಾರಿಗಳ ನಿರ್ದೇಶನದಂತೆ ಕಾರ್ಯ ಮಾಡಿದ್ದೇವೆ, ಆದುದರಿಂದ ಆರೋಪ ಮುಕ್ತರನ್ನಾಗಿಸಲು ಕೋರಿದ್ದಾರೆ.

ಪ್ರಸ್ತುತ ಪ್ರಕರಣದಲ್ಲಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ತಿಳಿದು ಬರುತ್ತದೆ.

(ಅ) ವಿಚಾರಣಾ ವರದಿಯಲ್ಲಿ 3 ಜನ ಆರೋಪಿತರ ವಿರುದ್ಧ ಮಾಡಿರುವ ಆರೋಪಗಳು ಸಾಬೀತಾಗಿರುತ್ತದೆ

(ಆ) ಖಾಸಗಿ ಹಿಡುವಳಿದಾರರೊಂದಿಗೆ ಬಳಸಂಚು ನಡೆಸಿ ದುರುದ್ದೇಶದಿಂದ ಸರ್ಕಾರಿ ಜಾಗ ಮತ್ತು ರಕ್ಷಿತ ಅರಣ್ಯದಲ್ಲಿ ಬರುವ 76 ಮರಗಳನ್ನು ಅಕ್ರಮವಾಗಿ ಕಡಿಯಲು ಅವಕಾಶ ಮಾಡಿಕೊಟ್ಟು ಈ ಅಕ್ರಮದಿಂದ ಸರ್ಕಾರಕ್ಕೆ ಅಂದಿನ ಬೆಲೆ ರೂ. 4,25,869–00 ನಷ್ಟ ಉಂಟಾಗಿರುತ್ತದೆ.

(ಇ) ಆರೋಪಿತರು ಪರಿಸರ ನಾಶ ಹಾಗೂ ಅಮೂಲ್ಯವಾದ ಪ್ರಕೃತಿ ಮತ್ತು ಅರಣ್ಯ ನಾಶಕ್ಕೂ ಜವಾಬ್ದಾರರಾಗಿರುತ್ತಾರೆ.

(ಈ) ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ (ನಡತೆ) ನಿಯಮಾವಳಿ 1966ರ ನಿಯಮ 3 (i) ಮತ್ತು (iii)ನ್ನು ಉಲ್ಲಂಘಿಸಿರುತ್ತಾರೆ.

ಮೇಲೆ (11) ರಲ್ಲಿ ಓದಲಾದ ದಿನಾಂಕ 29–5–2008 ರ ಆದೇಶದಲ್ಲಿ ಶ್ರೀ ವಿ. ಪ್ರಸನ್ನಕುಮಾರ್, ಭೂದಾಖಲೆಗಳ ಉಪ ನಿರ್ದೇಶಕರು ಮತ್ತು ಶ್ರೀ ಆರ್. ಸುರೇಶ್‌ರಾವ್, ಪ್ರಥಮ ದರ್ಜೆ ಭೂಮಾಪಕರವರುಗಳಿಗೆ ದಂಡನೆ ವಿಧಿಸಿ ಆದೇಶ ಹೊರಡಿಸಿದೆ.

ಆರೋಪಿತ ನೌಕರರಲ್ಲಿ ಒಬ್ಬರಾದ ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರವರು ದಿನಾಂಕ 21–12–2007 ರಂದು ಮೃತರಾಗಿರುವ ಅವರ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಬೇಕಾಗಿದ್ದುದರಿಂದ, ದಿವಂಗತ ಮಲ್ಲೇಶಪ್ಪನವರ ವಿರುದ್ಧ ಆರೋಪಗಳು ಸಾಬೀತಾಗಿದ್ದು, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದರಿಂದ ಸರ್ಕಾರಕ್ಕೆ ಉಂಟಾದ ಒಟ್ಟಾರೆ ನಷ್ಟ ರೂ. 4,25,869/– ರ ಪೈಕಿ 1/3 ಭಾಗಾಂಶವಾದ ರೂ. 1,41,956/– ಹಾಗೂ ಅದರ ಮೇಲೆ ನಷ್ಟವುಂಟಾದ ದಿನಾಂಕದಿಂದ ಅಂದರೆ, ಮಾರ್ಚಿ 1996 ರಿಂದ ಹಣ ಪೂರ್ತಿಯಾಗಿ ವಸೂಲಿಯಾಗುವವರೆಗೆ ಸರ್ಕಾರದ ನೋಟಿಫಿಕೇಷನ್ No.DPAR 16 SDE 2004, ದಿನಾಂಕ 17–11–2005 ರಂತೆ ಶೇಕಡ 8 ರಷ್ಟು ಬಡ್ಡಿ ದರದಲ್ಲಿ ಲೆಕ್ಕ ಹಾಕಿ ಮೃತ ಆರೋಪಿತರ ಲೆಕ್ಕದಲ್ಲಿ ಅವರಿಗೆ ದೊರೆಯಬಹುದಾದ ಆರ್ಥಿಕ ಸೌಲಭ್ಯದಿಂದ ವಸೂಲಿಸಲು ಮೇಲೆ (12) ರಲ್ಲಿ ಓದಲಾದ ಸರ್ಕಾರದ ಪತ್ರ ದಿನಾಂಕ 5–6–2008 ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿ ನೀಡುವಂತೆ ಕೋರಲಾಗಿತ್ತು. ಮೇಲೆ (13) ರಲ್ಲಿ ಓದಲಾದ ದಿನಾಂಕ 3–2–2009 ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ದಿವಂಗತ ಶ್ರೀ ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರ ವಿರುದ್ಧ ದಂಡನೆ ಆದೇಶ ಹೊರಡಿಸಲು ತನ್ನ ಸಹಮತಿ ನೀಡಿರುವುದರಿಂದ ಕೆಸಿಎಸ್‌ಆರ್ ನಿಯಮ 214 (ಎ) (ಬಿ) ರ ಪ್ರಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 7 ಭೂದಾಸೇ (1) 2001 (ಭಾ), ಬೆಂಗಳೂರು, ದಿನಾಂಕ: 2ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8 (iv) ರನ್ವಯ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 1958ರ ನಿಯಮ 214ರ (i) (ಎ) (ಬಿ) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಆರೋಪಿತರುಗಳಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 4,25,869–00 ಗಳ ಪೈಕಿ ಅದರ 1/3 ಭಾಗ ಅಂದರೆ ತಲಾ ರೂ. 1,41,956–00 (ಒಂದು ಲಕ್ಷದ ನಲವತ್ತೊಂದು ಸಾವಿರದ ಒಂಭೈನೂರ ಐವತ್ತಾರು ರೂಪಾಯಿಗಳು ಮಾತ್ರ) ದಿ: ಮಲ್ಲೇಶಪ್ಪ, ದ್ವಿತೀಯ ದರ್ಜೆ ಭೂಮಾಪಕರಿಂದ ಮಾರ್ಚಿ 1996 ರಿಂದ ಹಣವನ್ನು ಪೂರ್ಣವಾಗಿ ಪಾವತಿಸುವವರೆಗೆ ಶೇಕಡ 8% ದರದಲ್ಲಿ ಬಡ್ಡಿ ಸೇರಿಸಿ, ದಿವಂಗತ ಶ್ರೀ ಮಲ್ಲೇಶಪ್ಪನವರಿಗೆ ದೊರೆಯಬಹುದಾದ ಆರ್ಥಿಕ ಸೌಲಭ್ಯದಿಂದ ವಸೂಲು ಮಾಡುವುದೆಂದು ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1561

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಮಾಪನ)

ವಿಷಯ: ಶ್ರೀ ಕೆ. ಕೇಶವರಾಜು, ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಇವರನ್ನು ಲೋಕಾಯುಕ್ತ ದಾಳಿಯ ಹಿನ್ನಲೆಯಲ್ಲಿ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರ ಅ.ಸ. ಪತ್ರ ಸಂ. ಇಎಸ್‌ಟಿ(1):ಸಿಆರ್-42/2009-10 ದಿನಾಂಕ: 07-05-2009

2. ತನಿಖಾಧಿಕಾರಿಗಳು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ, ಇವರ ಪತ್ರ ಸಂ. ಲೋಕ್/ಎಸ್‌ಎಂಜಿ/ಪಿಐ/ಸಿಆರ್ ನಂ:5/2009, ದಿನಾಂಕ:07-05-2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರ. ಸಂ. (1)ರ ದಿನಾಂಕ: 07-05-2009ರ ಅ.ಸ. ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅನಧಿಕೃತ ಮರಳು ಸಾಗಾಣಿಕೆ ಸಂಬಂಧಿಸಿದಂತೆ, ತನಿಖಾಧಿಕಾರಿಗಳು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಇವರ ದಿನಾಂಕ: 07-05-2009ರ ಪ್ರಥಮ ಮಾಹಿತಿ ವರದಿಯಲ್ಲಿ ಶ್ರೀ ಕೆ. ಕೇಶವರಾಜು, ತಾಲ್ಲೂಕ ತಹಶೀಲ್ದಾರ್, ತೀರ್ಥಹಳ್ಳಿ, ತಾಲ್ಲೂಕ್ ಶಿವಮೊಗ್ಗ ಜಿಲ್ಲೆ, ಇವರನ್ನು ದಿನಾಂಕ: 07-05-2009 ರಂದು ಲೋಕಾಯುಕ್ತ ಪ್ರಕರಣದಲ್ಲಿ ದಸ್ತಗಿರಿ ಮಾಡಿ ಲಂಚ ನಿರೋಧಕ ಕಾಯ್ದೆ 1988ರ ಕಲಂ 7(13)(1)(ಡಿ) ರಡಿ 13(2) ರ ಜೊತೆಯಲ್ಲಿ ಕ್ರೈಂ ಸಂ: 5/2009ರ ಪ್ರಕರಣವನ್ನು ದಾಖಲಿಸಿರುವುದಾಗಿ ವರದಿ ಮಾಡುತ್ತಾ ಸದರಿಯವರನ್ನು ಶಿವಮೊಗ್ಗ ಜಿಲ್ಲಾ ಘನ ವಿಶೇಷ ಹಾಗೂ ಪ್ರಧಾನ ಸತ್ರ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಪೊಲೀಸ್ ಠಾಣೆಯ ತನಿಖಾಧಿಕಾರಿ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಇವರು ದಿನಾಂಕ 07-05-09 ರಂದು ವರದಿ ಮಾಡಿರುವಂತೆ ಶ್ರೀ ಕೆ. ಕೇಶವರಾಜು, ತಹಶೀಲ್ದಾರ್, ತೀರ್ಥಹಳ್ಳಿ ಇವರು ಈ ಪ್ರಕರಣದಲ್ಲಿ ಕ್ರಿಮಿನಲ್ ಮೊಕದ್ದಮೆಗೆ ಗುರಿಯಾಗಿರುವ ಕಾರಣ, ಅವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಎ) ರನ್ವಯ ಸೇವೆಯಿಂದ ಅಮಾನತ್ತುಗೊಳಿಸುವಂತೆ ಕೋರಿ, ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಶ್ರೀ ಕೆ. ಕೇಶವರಾಜು, ತಹಶೀಲ್ದಾರ್, ತೀರ್ಥಹಳ್ಳಿ, ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇವರು ಲೋಕಾಯುಕ್ತ ಪ್ರಕರಣದಲ್ಲಿ ದಸ್ತಗಿರಿಯಾಗಿ ಕ್ರಿಮಿನಲ್ ಮೊಕದ್ದಮೆಗೆ ಗುರಿಯಾಗಿರುವ ಕಾರಣ ಅವರನ್ನು ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರಿಸಿ, ಅಮಾನತ್ತಿನಲ್ಲಿಡಲು ತೀರ್ಮಾನಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂ. ಆರ್‌ಡಿ 08 ಎಡಿಇ 2009, ಬೆಂಗಳೂರು, ದಿನಾಂಕ: 27ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಕೆ. ಕೇಶವರಾಜು, ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಇವರು. ಲೋಕಾಯುಕ್ತ ಪ್ರಕರಣದಲ್ಲಿ ದಸ್ತಗಿರಿಯಾಗಿ ಕ್ರಿಮಿನಲ್ ಮೊಕದ್ದಮೆಗೆ ಗುರಿಯಾಗಿರುವ ಕಾರಣ ಇವರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರಿಸಿ, ಈ ಕೂಡಲೇ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಎ)ರನ್ವಯ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಸದರಿ ಅಧಿಕಾರಿಗಳು ಅಮಾನತ್ತಿನ ಅವಧಿಯಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 98ರನ್ವಯ ಜೀವನಾಧಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಅನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1562

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು-3)

ವಿಷಯ: ಚಿತ್ರದುರ್ಗ ಜಿಲ್ಲೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಯ ಎರಡನೇಯ ಕ್ಯಾಂಪಸ್ ಸ್ಥಾಪಿಸಲು ಸರ್ಕಾರಿ ಜಮೀನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ರವರ ಪತ್ರ ಸಂಖ್ಯೆ ಎಲ್‌ಎನ್‌ಡಿ:ಸಿಆರ್/382/2008-09 ದಿನಾಂಕ:02-02-2009

ಪ್ರಸ್ತಾವನೆ:

ಭಾರತೀಯ ವಿಜ್ಞಾನ ಸಂಸ್ಥೆಯು ಎರಡನೇ ಕ್ಯಾಂಪಸ್ ಸ್ಥಾಪಿಸುವ ಸಲುವಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಸ.ನಂ. 47ರ ಖುದಾಪುರ ಕಾವಲ್ ಸರ್ಕಾರಿ ಜಮೀನಿನಲ್ಲಿ 1700 ಎಕರೆಯನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಖುದಾಪುರ ಕಾವಲ್ ಜಮೀನಿನ ಒಟ್ಟು ವಿಸ್ತೀರ್ಣ 2819.23 ಎಕರೆಗಳಾಗಿದ್ದು, ಇದರಲ್ಲಿ 290–00 ಎಕರೆ ಜಮೀನನ್ನು ಪಿ.ಓ.ಡಿ. 179ನ್ನು ಸ್ಥಳಾಂತರಿಸುವ ಸಲುವಾಗಿ ಡಿ.ಆರ್.ಡಿ.ಓ ಕೇಂದ್ರ ಸರ್ಕಾರ ಇವರಿಗೆ ಮಂಜೂರು ಮಾಡಿ ಆದೇಶ ಸಂಖ್ಯೆ: ಆರ್‌ಡಿ:14:ಎಲ್‌ಜಿಸಿ: 2008 ದಿನಾಂಕ:21–5–2009ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ಉಳಿದ ಜಮೀನಿನಲ್ಲಿ 1500 ಎಕರೆ ಭಾರತೀಯ ವಿಜ್ಞಾನ ಸಂಸ್ಥೆ ಎರಡನೆಯ ಕ್ಯಾಂಪಸ್ ಸ್ಥಾಪನೆಗಾಗಿಯೂ ಮತ್ತು 200–00 ಎಕರೆ ಜಮೀನು ಸಂಸ್ಥೆಯ ಅಧಿಕಾರಿಗಳ ಹಾಗೂ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸಲು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ. ಸದರಿ ಕಾವಲ್‌ನ ಖುಷ್ಕಿ ಜಮೀನಿನ ಮಾರ್ಗಸೂಚಿ ಬೆಲೆ ಎಕರೆ ಒಂದಕ್ಕೆ ರೂ. 30,000/– ಸಾವಿರಗಳೆಂದು ವರದಿ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಚಿತ್ರದುರ್ಗರವರು ನೀಡಿರುವ ವರದಿ ಪ್ರಕಾರ ಸದರಿ ಜಮೀನು ಅಮೃತ್ ಮಹಲ್ ಕಾವಲ್ ಜಮೀನಾಗಿದ್ದು, ಇದರಲ್ಲಿ ಬೆಲೆಬಾಳುವ ಗಿಡ ಮರಗಳು ಇರುವುದಿಲ್ಲ. ಮತ್ತು ಸದರಿ ಜಮೀನಿನಲ್ಲಿ ಪಶುಸಂಗೋಪನಾ ಇಲಾಖೆಯ ಆಡಳಿತ ವ್ಯಾಪ್ತಿಯ ಕುರಿ ಸಂವರ್ಧನಾ ಕೇಂದ್ರವಿರುತ್ತದೆ. ಹಾಲಿ ಪಶುಸಂಗೋಪನಾ ಇಲಾಖೆಯ ಅಧೀನದಲ್ಲಿರುವ ಸದರಿ ಜಮೀನು ಯಾವ ಉದ್ದೇಶಕ್ಕಾಗಿ ಮಂಜೂರಾಗಿದೆಯೋ ಆ ಉದ್ದೇಶಕ್ಕೆ ಬಳಸುತ್ತಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸುತ್ತಾ, IISC ನ ಕ್ಯಾಂಪಸ್, ಚಿತ್ರದುರ್ಗ ಜಿಲ್ಲೆಯಲ್ಲಿ ಸ್ಥಾಪಿಸಿದಲ್ಲಿ ಹೆಸರಾಂತ ಸಂಶೋಧನಾ ಸಂಸ್ಥೆಯ ಎರಡನೇ ಕ್ಯಾಂಪಸ್ ಹೊಂದುವ ಹೆಗ್ಗಳಿಕೆ ಕರ್ನಾಟಕ ರಾಜ್ಯದಾಗುತ್ತದೆ ಎಂದು ಅಭಿಪ್ರಾಯ ಪಟ್ಟು, ಸದರಿ ಸಂಸ್ಥೆಯ ಸ್ಥಾಪನೆಗೆ ಸರ್ಕಾರಿ ಜಮೀನು ಮಂಜೂರು ಮಾಡುವಂತೆ ಕೋರಿದ್ದಾರೆ.

ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಚಿತ್ರದುರ್ಗರವರ ವರದಿಯಂತೆ ಕಾವಲಿನ ಸುತ್ತಮುತ್ತಲಿನ ಜಾನುವಾರುಗಳು ಕಾವಲಿನಲ್ಲಿ ಮೇಯಲು ಅವಕಾಶವಿರುವುದಿಲ್ಲ. ಪಶುಪಾಲಕರು ಅವರ ರಾಸುಗಳನ್ನು ಅವರದ್ದೇ ಜಮೀನಿನಲ್ಲಿ, ಗೋಮಾಳಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮೇಯಿಸಿಕೊಳ್ಳುತ್ತಿದ್ದು, ಕುರಿ ಸಂವರ್ಧನಾ ಕೇಂದ್ರಕ್ಕೆ ಸೇರಿರುವ 823 ಜಾನುವಾರುಗಳಿಗೆ 177–00 ಎಕರ ಜಮೀನಿನ ಅವಶ್ಯಕತೆ ಇರುವುದಾಗಿ ತಿಳಿದುಬರುತ್ತದೆ. ಅಮೃತ್ ಮಹಲ್ ಕಾವಲ್ ಜಮೀನುಗಳಲ್ಲಿ ಮೇವು ಅಭಿವೃದ್ಧಿಯ ಯಾವುದೇ ಯೋಜನೆಗಳು/ಕಾರ್ಯಗಳು ನಡೆಯುತ್ತಿರುವುದಿಲ್ಲ, ಪ್ರಸ್ತುತ ಕಾವಲ್ ಜಮೀನುಗಳು ಪಶುಸಂಗೋಪನಾ ಇಲಾಖೆಯ ರಕ್ಷಣೆಯಲ್ಲಿದ್ದಾಗ್ಯೂ, ಯೋಜಿತ ಉದ್ದೇಶಕ್ಕೆ ಬಹುತೇಕ ಜಮೀನುಗಳು ಬಳಕೆಯಾಗುತ್ತಿಲ್ಲ, ಹಾಗೂ ಈ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ, ಅನಧಿಕೃತ ಗಣಿಗಾರಿಕೆ ಹಾಗೂ ಒತ್ತುವರಿ ತಡೆಯಲು ಯೋಜಿತ ಯೋಜನೆಗೆ ಪ್ರಸ್ತಾಪಿತ ಜಮೀನನ್ನು ಶಿಫಾರಸ್ಸು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರು ಅಭಿಪ್ರಾಯ ನೀಡಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ: 15: ಎಲ್‌ಜಿಸಿ : 2009 ಬೆಂಗಳೂರು, ದಿನಾಂಕ: 28ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಖುದಾಪುರ ಕಾವಲ್ ಗ್ರಾಮದ ಸ.ನಂ. 47ರಲ್ಲಿ 1500 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4)ರಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ರೂ.30,000/– (ಮೂವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ದರ ವಿಧಿಸಿ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯ ಎರಡನೆಯ ಕ್ಯಾಂಪ್ ಸ್ಥಾಪಿಸುವ ಸಲುವಾಗಿ ಮಂಜೂರು ಮಾಡಿದೆ. ಈ ಮಂಜೂರಾತಿಯು ಸದರಿ ಸಂಸ್ಥೆಯು 2 ವರ್ಷದೊಳಗೆ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಗತಿ ಸಾಧಿಸುವ ಷರತ್ತು ಹಾಗೂ ಇತರೆ ಭೂ ಮಂಜೂರಾತಿ ಷರತ್ತುಗಳಿಗೆ ಒಳಪಟ್ಟಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ: 521: ವೆಚ್ಚ 7/2009 ದಿನಾಂಕ 21–5–2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1563

ಎಂ.ಕೆ. ನರಸಿಂಹಲು

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ–3)

HEALTH AND FAMILY WELFARE SECRETARIAT

Sub : In sourcing of Specialists services to Government health facilities-reg.

Read: 1. Govt Order No. HFW/KHSDRP/Sect-43/07-08, dt.2.4.2008.

2. Govt Order No. HFW/KHSDRP/Sect-43/07-08, dt. 4.9.2008

3. Govt Order No.HFW/KHSDRP/Sect-43/07-08, dt. 4.9.2008 (Sourcing–in Specialists, regarding).

PREAMBLE:

In Govt Order read at (1) above , sanction was accorded for contracting-in the services of private specialists on payment of prescribed rates fee in the cases of emergency i.e., OBG, Paediatric, Anaesthesia and other emergency situations requiring services of specialists like Orthopaedics, Physicians and Surgeons in the Government hospitals where posts of specialists fallen vacant or where no posts specialists have been sanctioned but situation requires services of such specialists.

In the Govt Order read at (2) above, certain emergency cases which were not covered under Govt Order read at (1) above have also been included duly prescribing the rates of fee payable to such specialists.

In the Govt Order read at (3) above, certain incentives have been sanctioned for the Govt Medical Officers having specialization for treatment of emergency cases outside their duty place and hours.

Since National Rural Health Mission is mainly focusing on Maternal & Child Health and a policy decision has been taken to expenditure incurred for obtaining services of specialists for Maternal and Child Health have to be met out by the NRHM funds only and expenditure incurred on other emergencies have to be met out by the KHSDRP funds.

Hence, the following order.

Govt Order No. HFW/KHSDRP/Sect-43/07-08, Bangalore, Dated:10th February 2009

Under the circumstances mentioned in the preamble, in supersession of the Government Orders read at (1) and (2) above, Government are pleased to accord approval for contracting-in services of Private Specialists to Government health facilities where the posts of Specialists are vacant on actual requirements of specialists based on health challenge in particular areas. Accordingly, the following rates of fee /remuneration is hereby prescribed for payment under NRHM funds and under KHSDRP funds to private specialists

Under NRHM funds

1) Maternal and Child Health: A retention fee of Rs. 5000/- on monthly basis for availability at all times, incentive for conducting LSCS in first referral hospitals of Rs. 1500/- for Gynaecologists, Rs 1000/- for Anaesthetists, Rs. 500/- for paediatricians.

2) General Specialists Rs. 5000/- as retention fee on a monthly basis for availability times, Rs, 1000/- per day for OPD subject to at least 2 days of OPD in a week.

Apart from this, following rates per visit and per surgery are hereby approved.

Sl. No.	Case of	Rate per surgery (in Rs.)
	Emergancy Obstetric & Gynaecological Conditions	
1	Rupture Uterus	2000.00
2	Tubal Pregnancy	2000.00
3	Accidental Haemorrhage	1000.00
4	Uterine Bleeding	2000.00
5	Uterine Perforation	2000 00
6	Injury-Genito Urinary Tract	2000.00

Sl. No.	Case of	Rate per surgery (in Rs.)
7	Foreign body in Genito Urinary Tract	500.00
8	Abortions	300.00
9	Retention of Placenta	1000/-
10	Obstructed Labour	1000/-
	Anaesthesia	
11	General Anaesthesia	1250/-
12	Spinal/Epidural Anaesthesia	1000/-
13	Nerve Block (in case the procedure is not completed under local anaesthesia, the procedure can be done under general anaesthesia and the rates claimed for general anaesthesia only)	500

Under KHSDRP funds

The following rates of fee /remuneration are hereby prescribed for payment under KHSDRP funds to private specialists in case of following other emergencies.

Sl. No.	Medical Emergencies	Rate per visit (in Rs.)	Maximum rate per day (in Rs.)
1	Myocardial infarction	100	500
2	Cardio Vascular Accidents	100	500
3	Cerebro Vascular Accidents	100	500
4	Acute Respiratory Infection	100	500
5	Foreign Bodies in Airo Digestive Tract	100	500
6	Chest Injuries	100	500
7	Status Asthmaticus	100	500
8	Acute Renal Failure	100	500
9	Coma (Shock)	100	500
10	Acute Congestive Glaucoma (Eye)	100	500
11	Acute Poisoning	100	500
12	Snake Bite	100	500

Sl.No.	Surgical Emergencies	Rate per Surgery (in Rs)
1	Burns Injuries more than 30%	1000.00
2	Acute Appendicitis	1500.00
3	Perforations (Abdominal)	3000.00
4	Colic Attacks (pain leading to laparotomy)	3000.00
5	Bleeding Haemmorhoids	500.00
6	Foreign Bodies in the Eye	300.00
7	Lens induced Glaucoma (Eye)	1500.00
8	Tracheostomy	1000.00
9	Supra Public cystotomy	1000.00
10	Acute Abscess	300.00
11	Acute Cellulites due to snake bite	500.00
12	Acute Retention of Urine	500.00
13	Acute management of shocks	500.00

Sl.No.	Orthopaedic Surgeries	Rate per Surgery (in Rs)
1	Dislocation of joints a. Closed Reduction b. Open Reduction	 500 4000.00
2	Haemorthorosis	500.00

Sl. No.	Orthopaedic Surgeries	Rate per Surgery (in Rs)
3	Ligament Tear	2500.00
4	Fracture neck & Femor	4000.00
5	Fracture of Long Bones-close reduction	500.00
	Open reduction	3000.00
6	Tapping with inter costal drainage	500.00
7	Intubations to remove foreign body in respiratory tract	1000.00
8	Head Injury management	1000.00
9	Fracture rib Haemothorax	500.00

The Govt Orders read at (3) above in which certain incentives have been sanctioned for the Govt Medical Officers having specialization for treatment of emergency cases outside their duty place and hours is hereby continued without any changes.

The Government is hereby authorize the District Level Committee headed by the Deputy Commissioner for shortilsting a panel of specialists to be contracted in wherever specialists' posts are vacant by giving wide publicity and following transparent process.

For any existing vacancy of a particular specialization, a panel of 2 doctors shall be shortilisted and after assessment of the time that any specialist can devote for this, chose one of them for retention and contracting in Approval for such contracting in shall be given by the District Level Committee.

In case no vacancy of a particular specialization exists, but the health challenge in that area requires specialist of particular discipline be contracted,-in then the District Level Committee can recommend to the Project Administrator for such contracting in be allowed.

The Project Administrator, KHSDRP will examine such requests of District Level Committee and decide whether such contracting in be allowed even without vacancy of such specialization without posts for such specialization exist in the Government facility.

By Order and in the name of Governor of Karnataka,

SUSHAMA GODBOLE

Deputy Secretary to Government,

KHSDRP

Department of Health & Family Welfare.

P.R. 653

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಜಾಗೃತಿ ವಿಭಾಗ, ಬೆಂಗಳೂರು, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:

1. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಬಿಡಿ–42/ಸಿಆರ್–1/2007/ರಾಮನಗರ, ದಿನಾಂಕ:9.10.2008.
2. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಬಿ–42/ಸಿಆರ್–1/2007/ರಾಮನಗರ, ದಿನಾಂಕ:21.11.2008.
3. ತನಿಖಾಧಿಕಾರಿಯವರ ವರದಿ ಸಂಖ್ಯೆ:ಕೆಎಲ್.ಎ/ರಾ.ಜಿ.ಮೊ.ಸಂ.01/2007,ದಿನಾಂಕ:22.9.2008
4. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ:

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ದಿನಾಂಕ:9.1.2008ರಲ್ಲಿ ದಿ:6.12.2007ರಂದು ಶ್ರೀ ಕೆ.ಕೆ. ನಂಜಪ್ಪ, ವ್ಯವಸ್ಥಾಪಕ ನಿರ್ದೇಶಕರು, ಫ್ಲೋರಾಡ್ ಸೇಲ್ ಡ್ಯೆ ಕಾಸ್ಟ್ ಮಿಷನರಿ ಪ್ರೈವೇಟ್

ಲಿಮಿಟೆಡ್, ಕೆಂಚನಕುಪ್ಪೆ ಗ್ರಾಮ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ, ಇವರ ಕಂಪೆನಿಯಿಂದ ಟ್ರಕ್ ಸಂಖ್ಯೆ:ಟಿಎನ್-23-3895 ರಲ್ಲಿ ಚನ್ನೈಗೆ ಸಾಗಾಣಿಕೆ ಮಾಡಬೇಕಾಗಿದ್ದ ಯಂತ್ರೋಪಕರಣಗಳ ಅಗತ್ಯ ಸಾಗಾಣಿಕೆ ದಾಖಲೆಗಳೊಡನೆ ವಾಣಿಜ್ಯ ಮತ್ತು ಮಾರಾಟ ತೆರಿಗೆ ಕಂಗೇರಿ ಕಛೇರಿಯ ವಾ.ತೆ.ಅ. ಆದ ಶ್ರೀ ಚಿದಂಬರಮೂರ್ತಿಯವರು ಈ ವಾಹನ ತಡೆದು ದಾಖಲಾತಿಗಳು ಕ್ರಮಬದ್ಧವಾಗಿಲ್ಲವೆಂದು ಆರೋಪಿಯವರು ವಾಹನವನ್ನು ಬಿಡುಗಡೆಗೊಳಿಸಲು ರೂ. 25,000/- ಗಳ ಅಕ್ರಮ ಸಂಭಾವನೆಯನ್ನು ಒತ್ತಾಯಿಸಿ ನಂತರ ಫಿರ್ಯಾದಿಯವರ ಮೇಲ್ಕಂಡ ಸಂಸ್ಥೆಯೊಂದಿಗೆ ನಡೆಸಿದ ಮಾತುಕತೆಯಿಂದ ಪ್ರಕರಣ ದಾಖಲಿಸದೇ ಸದರಿ ಟ್ರಕ್‌ನ್ನು ಬಿಟ್ಟಿದ್ದು, ಈ ರೀತಿ ಬಿಡುಗಡೆಗೊಳಿಸಲು ರೂ. 5,000/- ಗಳ ಅಕ್ರಮ ಸಂಭಾವನೆ ಪಡೆಯಲು ಈ ಅಧಿಕಾರಿಯವರ ಪ್ರತಿನಿಧಿಯಾದ 2ನೇ ಆರೋಪಿ ಶ್ರೀ ಎಂ.ಎಂ. ರವಿಕುಮಾರ್ ಎಂಬುವವರನ್ನು ಕಳುಹಿಸಿರುತ್ತಾರೆ . ಆದರೆ ಫಿರ್ಯಾದುದಾರರಿಗೆ ಅಕ್ರಮ ಸಂಭಾವನೆ ಕೊಡಲು ಇಷ್ಟವಿಲ್ಲದ ಕಾರಣ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ರಾಮನಗರ, ಇಲ್ಲಿ ಸಲ್ಲಿಸಿದ ದೂರನ್ನು, ಲಂಚ ನಿರೋಧಕ ಕಾಯ್ದೆ 1988ರ ಕಲಂ7 (13)(1)(ಡಿ)ರ ಜೊತೆಗೆ 13(2)ರ ಪ್ರಕಾರ ಮೊಕದ್ದಮೆ ಸಂಖ್ಯೆ:1/2007ರಲ್ಲಿ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ತನಿಖಾಧಿಕಾರಿಯವರು ಪಂಚ ಸಾಕ್ಷಿಗಳು ಮತ್ತು ಸಿಬ್ಬಂದಿ ವರ್ಗದವರೊಂದಿಗೆ 6.12.2007 ರಂದು ಬೀಸಿದ ಬಲೆಯು ಯಶಸ್ವಿಯಾಗಿದ್ದು, ಆರೋಪಿತ ಅಧಿಕಾರಿಯಾದ ಶ್ರೀ ಚಿದಂಬರಮೂರ್ತಿ, ಇವರು ಅಕ್ರಮ ಸಂಭಾವನೆಯನ್ನು ಸ್ವೀಕರಿಸಲು ಕಳುಹಿಸಿದ್ದ ಶ್ರೀ ರವಿಕುಮಾರ್ ಎಂಬುವವರು ಮೇಲ್ಕಂಡ ಕಂಪೆನಿಗೆ ಹಾಜರಾಗಿ ಫಿರ್ಯಾದುದಾರರಿಂದ ರೂ. 5,000/- ಗಳ ಅಕ್ರಮ ಸಂಭಾವನೆಯನ್ನು ಸ್ವೀಕರಿಸುವಾಗ ನೆರಳು ಸಾಕ್ಷಿದಾರರ ಸಮಕ್ಷಮ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿರುತ್ತಾರೆ.

ಈ ರೀತಿ ಆರೋಪಿ-2 ಶ್ರೀ ಎಂ.ಎಂ. ರವಿಕುಮಾರ್, ಇವರು ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದ ನಂತರ ಇವರ ಎರಡು ಕೈಬೆರಳುಗಳನ್ನು ತೊಳೆಸಿದ ದ್ರಾವಣದ ಬಣ್ಣ ಬದಲಾಗಿ, ಇವರು ಅಕ್ರಮ ಸಂಭಾವನೆಯನ್ನು ಪಡೆದಿರುವುದು ದೃಢಪಟ್ಟಿರುತ್ತದೆ. ಈ ಮೊತ್ತವನ್ನು ಆರೋಪಿತರ ಜರ್ಕಿನ್ ಜೇಬಿನಿಂದ ವಶಪಡಿಸಿಕೊಳ್ಳಲಾಗಿದೆ. ಆರೋಪಿ-2 ಶ್ರೀ ರವಿಕುಮಾರ್ ರವರು ಅವರ ಹೇಳಿಕೆಯಲ್ಲಿ ಶ್ರೀ ಹೆಚ್.ಎಸ್. ಚಿದಂಬರ ಮೂರ್ತಿ, ವಾ.ತೆ.ಅ., ಇವರ ಸೂಚನೆಯಂತೆ ಫಿರ್ಯಾದುದಾರರಿಂದ ಅಕ್ರಮ ಸಂಭಾವನೆಯನ್ನು ಸ್ವೀಕರಿಸಿರುವುದಾಗಿ ಹೇಳಿಕೆಯಲ್ಲಿ ತಿಳಿಸಿರುವುದಾಗಿ ವರದಿ ಮಾಡಿ, ಈ ಹಿನ್ನೆಲೆಯಲ್ಲಿ ಆರೋಪಿತ ಸರ್ಕಾರಿ ನೌಕರರಾದ ಶ್ರೀ ಹೆಚ್.ಎಸ್. ಚಿದಂಬರ ಮೂರ್ತಿ, ವಾ.ತೆ.ಅ. ಇವರ ಮೇಲಿನ ಭ್ರಷ್ಟಾಚಾರವು ಮೇಲ್ನೋಟಕ್ಕೆ ಸಾಭೀತಾಗಿರುವುದಾಗಿ ಲೋಕಾಯುಕ್ತವು ತಿಳಿಸಿ, ಆಪಾದಿತ ಅಧಿಕಾರಿಯಾದ ಶ್ರೀ ಚಿದಂಬರಮೂರ್ತಿ ಇವರು ಸುಗಮ ತನಿಖೆಗೆ ಅಡ್ಡಿಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಅಥವಾ ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಅವರ ಲೀನ (ಸ್ಥಾನ)ವನ್ನು ಬೇರೆ ಕಡೆಗೆ ವರ್ಗಾಯಿಸಲು ಲೋಕಾಯುಕ್ತವು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(1) ರ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಜಾಗೃತಿ ವಿಭಾಗ, ಬೆಂಗಳೂರು, ಇವರ ವಿರುದ್ಧ ಗುನ್ನೆ ಸಂಖ್ಯೆ:1/2007 ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ರಾಮನಗರ, ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(2) ರ ದಿನಾಂಕ:21.11.2008ರ ಪತ್ರದೊಡನೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19ನೇಯ ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(2) ರ ಪತ್ರ ದಿನಾಂಕ:21.11.2008 ರೊಂದಿಗೆ ಕಳುಹಿಸಿ ಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1) ಶ್ರೀ ಕೆ.ಕೆ. ನಂಜಪ್ಪ, ವ್ಯವಸ್ಥಾಪಕ ನಿರ್ದೇಶಕರು, ಫ್ಲೋರೊ ಸೀಲ್ಸ್ ಡೈಕ್ಯಾಸ್ಟಿಂಗ್ ಪ್ರೈ.ಲಿ. ಬಿಡದಿ, ಇವರ ದೂರು ದಿನಾಂಕ:6.12.2007.

2) ಪ್ರಾಯೋಗಿಕ ಪಂಚನಾಮೆ ದಿನಾಂಕ:6.12.2007.

3) ಟ್ರ್ಯಾಪ್ ಮಹಜರ್ ದಿನಾಂಕ:6.12.2007

4 ರಾಸಾಯನಿಕ ಪರೀಕ್ಷಕರ ಪರೀಕ್ಷಾ ವರದಿ ಸಂಖ್ಯೆ: ಎಹೆಚ್‌ಐ/ಸಿಎಂಇ/ಲೋಕ್-134/07-08 ದಿನಾಂಕ: 1-2-2008

5) ಶ್ರೀ ಹೆಚ್.ಆರ್. ರಾಮಚಂದ್ರಯ್ಯ, ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಮನಗರ, ಇವರು ಜಾಗವನ್ನು ತೋರಿಸಿದ ಆಧಾರದ ಮೇಲೆ ತಯಾರಿಸಲಾದ ಕೃತ್ಯ ನಡೆದ ಸ್ಥಳದ ನಕಾಶೆ.

6) ಸಾಕ್ಷಿ ಹೇಳಿಕೆಗಳ ಪಟ್ಟಿ:

1. ಶ್ರೀ ಕೆ. ಕೆ. ನಂಜಪ್ಪ, ವ್ಯವಸ್ಥಾಪಕ ನಿರ್ದೇಶಕರು, ಪ್ಲೋರೋ ಸೀಲ್ಸ್ ಡೈಕ್ಯಾಸ್ಟಿಂಗ್ ಪ್ರೈ.ಲಿ. ಬಿಡದಿ
2. ಶ್ರೀ ಹೆಚ್. ರವಿ ಬಿನ್ ಹಾಲಾನಾಯಕ, ಅಕೌಂಟ್ಸ್ ಮ್ಯಾನೇಜರ್ , ಪ್ಲೋರೋ ಸೀಲ್ಸ್ ಡೈಕ್ಯಾಸ್ಟಿಂಗ್ ಪ್ರೈ.ಲಿ. ಬಿಡದಿ.
3. ಶ್ರೀ ಹೆಚ್.ಆರ್. ರಾಮಚಂದ್ರಯ್ಯ ಬಿನ್ ಲೇ:ರಾಮೇಗೌಡ, ಸಹಾಯಕ ತೋಟಗಾರಿಕೆ ಅಧಿಕಾರಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಮನಗರ.
4. ಶ್ರೀ ಕೆ. ಬೋರೇಗೌಡ ಬಿನ್ ಕಪನೀಗೌಡ, ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಮನಗರ.
5. ಶ್ರೀ ನವೀನ್ ಬಹದ್ದೂರ್ ಬಿನ್ ಮೀನ ಬಹದ್ದೂರ್, ಸೆಕ್ಯೂರಿಟಿ ಗಾರ್ಡ್, ಪ್ಲೋರೋ ಸೀಲ್ಸ್ ಡೈಕ್ಯಾಸ್ಟಿಂಗ್ ಮಿಷನರೀಸ್ ಪ್ರೈ.ಲಿ. ಬಿಡದಿ ರಾಮನಗರ ತಾಲ್ಲೂಕು.
6. ಶ್ರೀ ಎಂ. ಗೋಪಾಲ್ ಬಿನ್ ಮುನಿಯಪ್ಪ, ಗುಮಾಸ್ತರು, ಶ್ರೀ ಕುಮಾರ್ ಟ್ರಾನ್ಸ್ ಪೋರ್ಟ್ಸ್, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು.
7. ಶ್ರೀ ರಾಜ ಬಿನ್ ದೀನ್ ದಯಾಳ್, ನಂ. 02/70, ಭಜನ್ ಕೊಯಿಲ್ ಬೀದಿ, ನಂದಿ ಹಾಲಂ ಗ್ರಾಮ,. ರತ್ನಗಿರಿ ಪೋಸ್ಟ್, ವಾಲಜಾ ತಾಲ್ಲೂಕು, ವೆಲ್ಲೂರು ಜಿಲ್ಲೆ, ತಮಿಳುನಾಡು.
8. ಶ್ರೀ ಎನ್. ಪ್ರಭಾಕರ್, ಕಿರಿಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ.
9. ಶ್ರೀ ಕೆ.ಜಿ. ಸತ್ಯನಾರಾಯಣ, ಪೊಲೀಸ್, ಪೇದೆ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು.
10. ಶ್ರೀ ಎಸ್.ಬಿ. ಚಂದ್ರಶೇಖರ್, ಪೊಲೀಸ್ ಪೇದೆ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
11. ಶ್ರೀ ಬಿ.ಪಿ ಪ್ರವೀಣ್, ಪೊಲೀಸ್ ಪೇದೆ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
12. ಶ್ರೀ ಎಸ್.ಕೆ. ಸುರೇಶ್, ಪೊಲೀಸ್ ಪೇದೆ, ಸಂಚಾರ ಪೊಲೀಸ್ ಠಾಣೆ ರಾಮನಗರ. .
13. ಶ್ರೀ ಎಸ್.ಟಿ. ಬೋರೇಗೌಡ, ಪೊಲೀಸ್ ಪೇದೆ, ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲೆ, ರಾಮನಗರ.
14. ಶ್ರೀ ಎಸ್. ಬಸವರಾಜು, ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ.

7. ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ:ಟ್ರಕ್ ನಂ:ಟಿ.ಎನ್. 09–3895.

ವಿಷಯ: ಮೆ:ಪ್ಲೋರೋ ಸೀಲ್ಸ್ ಡೈಕ್ಯಾಸ್ಟಿಂಗ್ ಪ್ರೈ.ಲಿ. ಬಿಡದಿ, ರಾಮನಗರ ತಾಲ್ಲೂಕು, ಈ ಕಂಪನಿಯಿಂದ ಟ್ರಕ್ ನಂ:ಟಿ.ಎನ್. 09–3895 ನಲ್ಲಿ ಚನ್ನೈಗೆ ಸಾಗಾಣಿಕೆ ಮಾಡಬೇಕಾಗಿರುವ ಯಂತ್ರೋಪಕರಣಗಳನ್ನು ಲೋಡ್ ಮಾಡಿ, ಸಾಗಾಣಿಕೆ ಮಾಡುವ ಬಗ್ಗೆ.

8. ಈ ಕೆಳಕಂಡ ಆಪಾದಿತರ ಸಮಜಾಯಿಷಿ/ಹೇಳಿಕೆಗಳು:

1. ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಜಾಗೃತಿ ವಿಭಾಗ, ಬೆಂಗಳೂರು
2. ಶ್ರೀ ಎಂ.ಎಂ. ರವಿಕುಮಾರ್ ಬಿನ್ ಮೋಟಯ್ಯ, ಮಾದಾಪುರ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು (ಖಾಸಗಿ ವ್ಯಕ್ತಿ)

ತನಿಖಾಧಿಕಾರಿಯವರಾದ ಶ್ರೀ ಎಸ್. ಬಸವರಾಜು, ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ ಮತ್ತು ಶ್ರೀ ಹೆಚ್. ಮಂಜಪ್ಪ, ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ಇವರು ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಚಲಿಸುವ ಶೋಧನಾ ಠಾಣೆ, ಬೆಂಗಳೂರು, ಇವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ರಾಮನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ:1/2007 ರಲ್ಲಿ ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2) ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಜಾಗೃತಿ ವಿಭಾಗ, ಬೆಂಗಳೂರು. ಇವರು ಫಿರ್ಯಾದಿಯಾದ ಶ್ರೀ ಕೆ.ಕೆ. ನಂಜಪ್ಪ, ವ್ಯವಸ್ಥಾಪಕ ನಿರ್ದೇಶಕರು, ಪ್ಲೋರೋ ಸೀಲ್ಸ್ ಡೈಕ್ಯಾಸ್ಟಿಂಗ್ ಪ್ರೈ.ಲಿ. ಬಿಡದಿ, ಇವರ ಕಂಪನಿಯಿಂದ ಟ್ರಕ್ ನಂ:ಟಿ.ಎನ್. 09–3895 ನಲ್ಲಿ ಚನ್ನೈಗೆ ಸಾಗಾಣಿಕೆ ಮಾಡಬೇಕಾಗಿರುವ ಯಂತ್ರೋಪಕರಣಗಳನ್ನು ಲೋಡ್ ಮಾಡಿ, ಅಗತ್ಯ ಸಾಗಾಣಿಕೆಗಾಗಿ ಸದರಿ ವಾಹನವು ಕೆಂಗೇರಿಯ ವಾಣಿಜ್ಯ ತೆರಿಗೆಯ ಚೆಕ್ ಪೋಸ್ಟ್ ಮೂಲಕ ಹಾದುಹೋಗುವ ಸಲುವಾಗಿ ಸರ್ಕಾರಿ ಕೆಲಸವನ್ನು ಮಾಡಲು ರೂ. 25,000/– ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಅಧಿಕಾರಿಯವರ ವಿರುದ್ಧ

ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿರುವುದಾಗಿರುತ್ತದೆ. ಸದರಿ ದೂರಿನಲ್ಲಿ ತನಿಖಾಧಿಕಾರಿಯವರು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ವ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ:6.12.2007 ರಂದು ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಸೂಚನೆಯ ಮೇರೆಗೆ ಅವರ ಪರವಾಗಿ ಶ್ರೀ ಎಂ.ಎಂ. ರವಿಕುಮಾರ್, ಬಿನ್ ಮೋಟಯ್ಯ, ಮಾದಾಪುರ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ರಾಮನಗರ, ಎಂಬ ಖಾಸಗಿ ವ್ಯಕ್ತಿಯು ಅಕ್ರಮ ಸಂಭಾವನೆಯಾದ ರೂ. 5,000/– ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಖಾಸಗಿ ವ್ಯಕ್ತಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ, ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ವರದಿಯಿಂದಲು ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸಾರ್ವಜನಿಕ ಅಧಿಕಾರಿ ಹಾಗೂ ಆಪಾದಿತ ಖಾಸಗಿ ವ್ಯಕ್ತಿಯ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ. ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 5,000/– ಗಳನ್ನು ಶ್ರೀ ಎಂ.ಎಂ. ರವಿಕುಮಾರ್, (ಖಾಸಗಿ ವ್ಯಕ್ತಿ)ರವರಿಂದ ಸ್ಥಳದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ, ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಹೆಚ್. ಎಸ್. ಚಿದಂಬರಮೂರ್ತಿ, ವಾ.ತೆ.ಅ., ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಭೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13 (1)(ಡಿ)ರ ಜೊತೆಗೆ ಓದಲಾದ ಕಲಂ 13(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7, 13 (1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾಧಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19 (ಸಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿಯವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಆಇ 7 ವಾತೆತ 2008, ಬೆಂಗಳೂರು, ದಿನಾಂಕ:11ನೇ ಮಾರ್ಚ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಎಸ್. ಚಿದಂಬರಮೂರ್ತಿ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ)ರ ಜೊತೆಯಲ್ಲಿ ಓದಲಾದ ಕಲಂ 13(2)ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೋಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ:11.3.200೯ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 878

ಮಹಬೂಬ್ ಖಾನ್

ಪೀಠಾಧಿಕಾರಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2)

PERSONNEL AND ADMINISTRATIVE REFORMS SECRETARIAT

Sub: Grant of Revised pension under Para 2(a) of Part III of the 1st Schedule of High Court Judges (Conditions of Service) Act 1954-Approval of Government for adoption of pensionary Benefits-regarding.

Read:
1. Letter No. PM/HCJ/ 2009-10/72, dated:6.5.2009, From Accountant General Karnataka.
2. Letter No. L11016/1/2009-JUS, dated:27.2.2009, of the Director (HC&J) Department of Justice, Ministry of Law & Justice, Government of India, New Delhi.

3. Letter No. RPS /6/2009, dated:15.4.2009, From, Registrar General High Court of Karnataka,Bangalore.

Preamble:

Accountant General, Karnataka in this Letter dated:6.5.2009 read at (1) above has informed that, Government of India in their Letter dated:27.2.2009, read at (2) above and have revised pension under Para 2(a) of the 1st Schedule of a High Court Judges (Conditions of Service) Act 1954 with effect from 1.1.2006 to Retired High Court Judges (Retired prior to 1.1.2006) Governed by Part III of the Act in terms of their O.M. No. 38/37/08-P & PW (A) dated:1.9.2008 subject to adoption of the same by the respective State Governments to grant the benefit of increased Pensions on similar lines to their Employees. The Accountant General has therefore requested to communicate the orders of the Government regarding adoption of the provisions of O.M. dated:1.9.2008 to the retired High Court Judges Governed by Part III of the Act./ The Registrar General, High Court of Karnataka, vide Letter dated:15.4.2009 read at(3) above has also requested for Communication of Government Sanction to Accountant General early. After consideration the proposal the Government is to pleased to issue the following order.

Order No. DPAR 31 SHC 2009, Bangalore, 27th June, 2009

Sanction of Government is accorded for adoption of revised pensionary benifit contemplated in O.M. No. 38/37/08-P & PW (A) dated:1.9.2008 of the Government of India to the Part III High Court Judges who are elevated from the pensionable posts under the State and who have retired from service prior to 1.1.2006 subject to the conditions specified thereunder as a special case.

This order issues with the concurrence of Finance Department vide their U.O. Note No. FD/163/Ser-2/2009, dated:17.6.2009.

By Order and in the name of Governor of Karnataka,

M.S. SHIVARAM

P.R. 1606 Under Secretary to Government,

Department of Personnel & Administrative Reforms (Services-3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಶ್ರೀ ಎಸ್. ಸಿದ್ದರಾಮಪ್ಪ, ನಿವೃತ್ತ ಮುಖ್ಯ ಇಂಜಿನಿಯರ್ ಇವರ ವಿರುದ್ಧ ಇಲಾಖಾ ವಿಚಾರಣೆ–ದಂಡನೆ ವಿಧಿಸಿದ ಆದೇಶವನ್ನು ಪರಾಮರ್ಶಿಸಿ ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 105 ಎಸ್‌ಇಎನ್ 2002, ದಿನಾಂಕ:23.7.2003.
2. ರಿಟ್ ಅರ್ಜಿ ಸಂಖ್ಯೆ 30726/2004 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 1.4.2008 ರಂದು ನೀಡಿದ ಆದೇಶ.
3. ಸನ್ಮಾನ್ಯ ಉಪ ಲೋಕಾಯುಕ್ತರ ವರದಿ ಸಂಖ್ಯೆ ಲೋಕ್/ಎಆರ್‌ಇ–3/ಇಎನ್‌ಕ್ಯೂ–11/1996–97, ದಿನಾಂಕ:20.6.2008.
4. ನೋಟೀಸ್ ಸಂಖ್ಯೆ ಸಿಆಸುಇ 157 ಎಸ್‌ಇಎನ್ 2004 ದಿನಾಂಕ:26.8.2008.
5. ಶ್ರೀ ಎಸ್ .ಸಿದ್ದರಾಮಪ್ಪ, ನಿವೃತ್ತ ಮುಖ್ಯ ಇಂಜಿನಿಯರ್ ಅವರ ಉತ್ತರ ದಿನಾಂಕ:8.9.2008.
6. ಪತ್ರದ ಸಂಖ್ಯೆ ಸಿಆಸುಇ 157 ಎಸ್‌ಇಎನ್ 2004, ದಿನಾಂಕ:9.1.2009.
7. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಅವರ ಪತ್ರ ಸಂಖ್ಯೆ ಪಿಎಸ್‌ಸಿ 179 ಸಿಎನ್‌ಎಸ್ 2008, ದಿನಾಂಕ:20.4.2008.

ಪ್ರಸ್ತಾವನೆ:

ಶ್ರೀ ಎಸ್. ಸಿದ್ದರಾಮಪ್ಪ, ನಿವೃತ್ತ ಮುಖ್ಯ ಇಂಜಿನಿಯರ್ ಅವರು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, ರಾಯಚೂರು ಇಲ್ಲಿ ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ರಾಯಚೂರು–ಗಿಣಿಗೇರ ರಸ್ತೆ ಕಾಮಗಾರಿ

ನಿರ್ಮಾಣದಲ್ಲಿ ಹೆಚ್ಚಿನ ಹಣವನ್ನು ಗುತ್ತಿಗೆದಾರರಿಗೆ ಪಾವತಿಸಿ ದುರ್ನಡತೆಯನ್ನು ಎಸಗಿದ್ದಕ್ಕಾಗಿ ಅವರ ವಿರುದ್ಧ ವಿಚಾರಣೆ ನಡೆಸಿ, ಮೇಲೆ (1)ರಲ್ಲಿ ಓದಲಾದ ದಿನಾಂಕ:23.7.2003ರ ಸರ್ಕಾರಿ ಆದೇಶದಲ್ಲಿ ಅವರ ಸಂಪೂರ್ಣ ವಿಶ್ರಾಂತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯಲಾಗಿತ್ತು. ಈ ಆದೇಶವನ್ನು ಪ್ರಶ್ನಿಸಿ ಅಧಿಕಾರಿಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:30726/2004ನ್ನು ಸಲ್ಲಿಸಲಾಗಿ ಕರ್ನಾಟಕ ಉಚ್ಚ ನ್ಯಾಯಾಲಯವು ಮೇಲೆ (2) ರಲ್ಲಿ ಓದಲಾದ ದಿನಾಂಕ:1.4.2008ರ ಆದೇಶದಲ್ಲಿ ಉಪಲೋಕಾಯುಕ್ತರಿಂದ ವಿಚಾರಣೆ ನಡೆಸಿರುವಾಗ ಲೋಕಾಯುಕ್ತರು ಶಿಫಾರಸ್ಸು ಕಳುಹಿಸಬಾರದಾಗಿತ್ತು. ಅದು ಕಾಯಿದೆಗೆ ವಿರುದ್ಧವಾಗುತ್ತದೆ. ಆದ್ದರಿಂದ ಸದರಿ ಹಂತದಿಂದ ವಿಚಾರಣೆಯನ್ನು ಮುಂದುವರೆಸುವಂತೆ ಪ್ರಕರಣವನ್ನು ಉಪಲೋಕಾಯುಕ್ತರಿಗೆ ಮರಳಿಸಿತು.

ಅದರಂತೆ ಮರು ವಿಚಾರಣೆ ಕೈಗೊಂಡ ಸನ್ಮಾನ್ಯ ಉಪಲೋಕಾಯುಕ್ತರು ಮೇಲೆ (3)ರಲ್ಲಿ ಓದಲಾದ ದಿನಾಂಕ:20.6.2008ರ ಪರಿಷ್ಕೃತ ಶಿಫಾರಸ್ಸನ್ನು ಸರ್ಕಾರಕ್ಕೆ ಕಳುಹಿಸಿ, ಹಿಂದೆ ಶಿಫಾರಸ್ಸು ಮಾಡಿದ ದಂಡನೆಗೆ ಬದಲಾಗಿ ಶ್ರೀ ಎಸ್. ಸಿದ್ದರಾಮಪ್ಪ ಅವರು ವಯೋ ನಿವೃತ್ತಿ ಹೊಂದಿರುವುದರಿಂದ ಅವರ ವಿಶ್ರಾಂತಿ ವೇತನದ ಶೇಕಡ 25ರಷ್ಟು ಮೊತ್ತವನ್ನು ಶಾಶ್ವತವಾಗಿ ಕಡಿತಗೊಳಿಸುವಂತೆ ಶಿಫಾರಸ್ಸು ಮಾಡಿದರು. ಈ ಶಿಫಾರಸ್ಸನ್ನು ಮೇಲೆ (4)ರಲ್ಲಿ ಓದಲಾದ ದಿನಾಂಕ:26.8.2008ರ ನೋಟೀಸಿನ ಮೂಲಕ ನಿವೃತ್ತ ಅಧಿಕಾರಿಗೆ ಕಳುಹಿಸಿ ಶಿಫಾರಸ್ಸಿನ ಬಗ್ಗೆ ಹೇಳುವುದು ಏನಾದರೂ ಇದ್ದರೂ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿತ್ತು.

ಶ್ರೀ ಎಸ್. ಸಿದ್ದರಾಮಪ್ಪ ಅವರು ಮೇಲೆ (5)ರಲ್ಲಿ ಓದಲಾದ ದಿನಾಂಕ:8.9.2008ರ ಉತ್ತರವನ್ನು ಸಲ್ಲಿಸಿ ಈಗಾಗಲೇ ವಿಧಿಸಿರುವ ದಂಡನೆಯಿಂದ ತಮಗೆ ಸಾಕಷ್ಟು ಉಪಟಳ ಉಂಟಾಗಿದ್ದು, ಈಗ 5 ವರ್ಷದ ನಂತರ ಸನ್ಮಾನ್ಯ ಉಪಲೋಕಾಯುಕ್ತರು ಮರು ಪ್ರಸ್ತಾವನೆಯನ್ನು ಸಲ್ಲಿಸಿರುವುದರಿಂದ ಈ ಹಿಂದೆ ಸಲ್ಲಿಸಲಾಗಿದ್ದ ವಿವರಗಳನ್ನು ಆಧರಿಸಿ ನ್ಯಾಯ ದೊರಕಿಸಿಕೊಡಲು ಕೋರಿದ್ದಾರೆ.

ಮೇಲಿನ ವಾಸ್ತವಾಂಶಗಳಿಂದಾಗಿ ಪ್ರಕರಣದಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸನ್ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸಂಪೂರ್ಣ ವಿಶ್ರಾಂತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವುದಕ್ಕೆ ಬದಲಾಗಿ ಶ್ರೀ ಎಸ್. ಸಿದ್ದರಾಮಪ್ಪ ಅವರ ವಿಶ್ರಾಂತಿ ವೇತನದ ಶೇಕಡ 25ರಷ್ಟು ಮೊತ್ತವನ್ನು ಶಾಶ್ವತವಾಗಿ ಕಡಿತಗೊಳಿಸುವುದು ಸಮಂಜಸವೆಂದು ಪರಿಗಣಿಸಿದ ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯೊಡನೆ ಪರಿಷ್ಕೃತ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 157 ಎಸ್‌ಇಎನ್ 2004, ಬೆಂಗಳೂರು, ದಿನಾಂಕ:30ನೇ ಜೂನ್ 2009

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 (1)(ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಎಸ್. ಸಿದ್ದರಾಮಪ್ಪ, ನಿವೃತ್ತ ಮುಖ್ಯ ಇಂಜಿನಿಯರ್ ಅವರಿಗೆ ದಿನಾಂಕ:23.7.2003ರ ಸರ್ಕಾರಿ ಆದೇಶದಲ್ಲಿ ವಿಧಿಸಲಾಗಿದ್ದ ಸಂಪೂರ್ಣ ವಿಶ್ರಾಂತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ಮಾರ್ಪಡಿಸಿ ಅವರ ಮಾಸಿಕ ವಿಶ್ರಾಂತಿ ವೇತನದ ಶೇಕಡ 25ರಷ್ಟು ಮೊತ್ತವನ್ನು ನಿರಂತರವಾಗಿ ಕಡಿತಗೊಳಿಸಬೇಕೆಂದು ಈ ಮೂಲಕ ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1607 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 18 ಇಮುವಿ 2008, ಬೆಂಗಳೂರು, ದಿನಾಂಕ: 14ನೇ ಜುಲೈ, 2009

ವಿಷಯ: ಶ್ರೀ ಕೆ. ಜೈಪ್ರಕಾಶ್ ಮುಖ್ಯ ಇಂಜಿನಿಯರ್ ಹಾಗೂ ಶ್ರೀ ಬಿ.ಎಲ್. ರವೀಂದ್ರಬಾಬು, ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಅವರುಗಳ ಅಮಾನತ್ತನ್ನು ರದ್ದುಪಡಿಸಿ ಮತ್ತೆ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಕೆ. ಜೈಪ್ರಕಾಶ್, ಮುಖ್ಯ ಇಂಜಿನಿಯರ್ ಹಾಗೂ ಶ್ರೀ ಬಿ.ಎಲ್. ರವೀಂದ್ರಬಾಬು, ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಅವರುಗಳನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 18 ಇಮುವಿ 2008, ದಿನಾಂಕ:9.7.2008ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿ ಇಟ್ಟಿರುವುದರಿಂದಲೂ,

ಶ್ರೀ ಕೆ. ಜೈಪ್ರಕಾಶ್, ಮುಖ್ಯ ಇಂಜಿನಿಯರ್ ಹಾಗೂ ಶ್ರೀ ಬಿ.ಎಲ್. ರವೀಂದ್ರಬಾಬು, ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಅವರುಗಳ ಅಮಾನತ್ತನ್ನು ರದ್ದುಪಡಿಸಿ ಅವರುಗಳನ್ನು ಮತ್ತೆ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರ ಭಾವಿಸಿರುವುದರಿಂದಲೂ.

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ.. ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(5)(ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಕೆ. ಜೈಪ್ರಕಾಶ್, ಮುಖ್ಯ ಇಂಜಿನಿಯರ್ ಹಾಗೂ ಶ್ರೀ ಬಿ.ಎಲ್. ರವೀಂದ್ರಬಾಬು, ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಅವರುಗಳ ವಿರುದ್ಧ ಶಿಸ್ತಿನ ಕ್ರಮವನ್ನು ಕಾಯ್ದಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅವರುಗಳ ಅಮಾನತ್ತನ್ನು ರದ್ದುಪಡಿಸಿ ಮತ್ತೆ ಸರ್ಕಾರಿ ಸೇವೆಗೆ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಜೈಪ್ರಕಾಶ್, ಮುಖ್ಯ ಇಂಜಿನಿಯರ್ ಅವರನ್ನು ಸೂಕ್ತ ಹುದ್ದೆಗೆ ನಿಯುಕ್ತಿಗೊಳಿಸಲು ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಎಲ್. ರವೀಂದ್ರಬಾಬು, ಸೂಪರಿಂಟೆಂಡಿಂಗ್ ಇಂಜಿನಿಯರ್, ಅವರನ್ನು ಸೂಕ್ತ ಹುದ್ದೆಗೆ ನಿಯುಕ್ತಿಗೊಳಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅವರು ಕ್ರಮ ಕೈಗೊಳ್ಳುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1648

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ತಿದ್ದೋಲೆ

ಸಂಖ್ಯೆ:ಸಿಆಸುಇ 495 ಸಅಸೇ 2008, ಬೆಂಗಳೂರು, ದಿನಾಂಕ:25ನೇ ಜೂನ್ 2009

ಶ್ರೀ ಎಂ.ಆರ್. ಅನಂತ್, ಮಾನ್ಯ ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರ ವಿಶೇಷಾಧಿಕಾರಿ ಇವರ ಗುತ್ತಿಗೆ ಆಧಾರದ ನೇಮಕಾತಿಯ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ನಿಗಧಿಪಡಿಸಿ ಹೊರಡಿಸಲಾದ ಆದೇಶ ಸಂಖ್ಯೆ ಸಿಆಸುಇ 495 ಸಅಸೇ 2008, ದಿನಾಂಕ:1.12.2008ರ ಅನುಬಂಧದ ಖಂಡಿಕೆ 3 ಮತ್ತು 8ನ್ನು ದಿನಾಂಕ:16.5.2009 ರಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ವೇತನ ಮತ್ತು ಭತ್ಯೆಗಳು :ಶ್ರೀ ಎಂ.ಆರ್.ಅನಂತ ಇವರು ಒಪ್ಪಂದದ ನೇಮಕಾತಿಯ ಅವಧಿಯಲ್ಲಿ ಅವರಿಗೆ ಮಾತೃ ಇಲಾಖೆಯಲ್ಲಿ ಪಡೆಯುತ್ತಿದ್ದ ವೇತನ, ತುಟ್ಟಿ ಭತ್ಯೆ ಹಾಗೂ ಬೆಂಗಳೂರಿಗೆ ಅನ್ವಯವಾಗುವ ಮನೆ ಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆ ಹಾಗೂ ಮಾನ್ಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೆ ನಿಗಧಿಪಡಿಸಿರುವ ವಿಶೇಷ ವೇತನವನ್ನು ಪಡೆಯಲು ಅರ್ಹರಿರುತ್ತಾರೆ. ಆದರೆ ಅಧಿಕಾರಿಯು ನಿಯೋಜನೆಯ ಭತ್ಯೆ ಅನ್ಯ ಸೇವಾ ಭತ್ಯೆ ಅಥವಾ ಇನ್ನಾವುದೇ ಊಟದ ಭತ್ಯೆ, ಹೆಚ್ಚಿನ ಕಾಲ ಭತ್ಯೆ, ಬೋನಸ್, ಅನುಗ್ರಹ ಪೂರ್ವ ಭತ್ಯೆ ಪಡೆಯಲು ಅರ್ಹರಲ್ಲ.

ಭವಿಷ್ಯ ನಿಧಿ ವಂತಿಗೆ: ಶ್ರೀ ಎಂ.ಆರ್. ಅನಂತ್ ಇವರಿಗೆ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಶೇ. 12 ರಷ್ಟು ಭವಿಷ್ಯ ನಿಧಿ ವಂತಿಗೆ ಮತ್ತು ಶೇ. 0.65 ರಷ್ಟು ಆಡಳಿತಾತ್ಮಕ ವೆಚ್ಚ ವಂತಿಗೆ ಹಾಗೂ ಶೇ. 0.05 ರಷ್ಟನ್ನು ತನಿಖಾ ವೆಚ್ಚವಾಗಿ ಸರ್ಕಾರದ ವತಿಯಿಂದ ಪಾವತಿಸುವುದು ಮತ್ತು ಇವರ ಮೂಲ ವೇತನದ ಶೇ. 12 ಹಾಗೂ ತುಟ್ಟಿ ಭತ್ಯೆಯ ಶೇ. 12 ರಷ್ಟನ್ನು ಭವಿಷ್ಯ ನಿಧಿ ವಂತಿಗೆಯಾಗಿ ಪ್ರತಿ ತಿಂಗಳಿನ ಸಂಬಳದಲ್ಲಿ ಕಟಾಯಿಸಿ ಕೋಲಾರ ಹಾಲು ಒಕ್ಕೂಟದ ಉದ್ಯೋಗಿಗಳ ಭವಿಷ್ಯ ನಿಧಿಗೆ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1671

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ವಿಷಯ: ಶ್ರೀ ಎಂ.ಎ. ರಾಜಶೇಖರ್, ನಿವೃತ್ತ ಕೆಎಎಸ್ (ಕಿರಿಯ ಶ್ರೇಣಿ)ಅಧಿಕಾರಿ ಮತ್ತು ಶ್ರೀ ಡಿ. ರಂಗಯ್ಯ ನಿವೃತ್ತ ಪ್ರಥಮ ದರ್ಜೆ ಸಹಾಯಕ, ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿ, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ಅಪರ ನಿಬಂಧಕರು ವಿಚಾರಣೆಗಳು-1. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ:25/28.4.09 ಪತ್ರ ಸಂಖ್ಯೆ: Compt/Uplok/BCD-343/2007.

ಪ್ರಸ್ತಾವನೆ:

ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ನಿಯಮ 12(3)ರಡಿ ಸನ್ಮಾನ್ಯ ಉಪ ಲೋಕಾಯುಕ್ತರ ದಿನಾಂಕ:25.4.09 ರ ವರದಿಯನ್ನು ಕಳುಹಿಸಿರುತ್ತಾರೆ. ಈ ವರದಿಯಲ್ಲಿ ಸನ್ಮಾನ್ಯ ಉಪ ಲೋಕಾಯುಕ್ತರು ಶ್ರೀ ಎಂ.ಎ. ರಾಜಶೇಖರ್, ನಿವೃತ್ತ ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ ಹಾಗೂ ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಬೆಂಗಳೂರು ಮತ್ತು ಶ್ರೀ ಡಿ. ರಂಗಯ್ಯ ನಿವೃತ್ತ ಪ್ರಥಮ ದರ್ಜೆ ಸಹಾಯಕ, ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿ, ಬೆಂಗಳೂರು ಇವರುಗಳ ವಿರುದ್ಧ ಭೂ ಸ್ವಾಧೀನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ಇವರುಗಳು ಲಂಚದ ಹಣಕ್ಕಾಗಿ ಒತ್ತಾಯಿಸಿರುವುದು ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರಡಿ ಶಿಸ್ತು ಕ್ರಮ ಜರುಗಿಸಲು ಮಾಡಿರುವ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸುತ್ತಾ, ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 015 ಕೆಇವಿ 09, ಬೆಂಗಳೂರು, ದಿನಾಂಕ: 3ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಶ್ರೀ ಎಂ.ಎ. ರಾಜಶೇಖರ್, ನಿವೃತ್ತ ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ ಹಾಗೂ ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಬೆಂಗಳೂರು ಮತ್ತು ಶ್ರೀ ಡಿ. ರಂಗಯ್ಯ, ನಿವೃತ್ತ ಪ್ರಥಮ ದರ್ಜೆ ಸಹಾಯಕ, ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿ, ಬೆಂಗಳೂರು ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 11 ಮತ್ತು 11-ಎ ರನ್ವಯ ವಿಚಾರಣೆ ನಡೆಸಲು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರನ್ವಯ ಮಂಜೂರಾತಿ ನೀಡಿದೆ. ಹಾಗೂ ಇದರ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957 ನಿಯಮ 14-A ರ ಪ್ರಕಾರ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಪಿ.ಆರ್. 1674 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ವಿಷಯ: ಶ್ರೀ ಪ್ರಕಾಶ್ ಕೇಸರ್‌ಕರ್, ಶಾಖಾಧಿಕಾರಿ, ಸಿಆಸುಇ (ಸೇವೆಗಳು-ಎಫ್) ಮಂಡನಾಧಿಕಾರಿ-ಇವರಿಗೆ ಗೌರವ ಧನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಶ್ರೀ ಪ್ರಕಾಶ್ ಕೇಸರ್‌ಕರ್, ಶಾಖಾಧಿಕಾರಿ ಇವರ ಮನವಿ ದಿನಾಂಕ:5.6.09

2. ದಿನಾಂಕ:14.3.2000 ರ ಆದೇಶ ಸಂಖ್ಯೆ:ಸಿಆಸುಇ 015 ಸೇಇವಿ 99.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಶ್ರೀ ಪ್ರಕಾಶ್ ಕೇಸರ್‌ಕರ್, ಶಾಖಾಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-ಎಫ್) ಇವರನ್ನು ಕೆಳಕಂಡ ಆದೇಶಗಳಲ್ಲಿ ಆದೇಶಿಸಲಾದ ಇಲಾಖಾ ವಿಚಾರಣೆಗಳಲ್ಲಿ ಶಿಸ್ತು ಪ್ರಾಧಿಕಾರದ/ಸರ್ಕಾರದ ಪರವಾಗಿ ಮಂಡನಾಧಿಕಾರಿಯಾಗಿ ನೇಮಿಸಿರುವುದರಿಂದ, ದಿನಾಂಕ:14.3.2000ರ ಆದೇಶ ಸಂಖ್ಯೆ:ಸಿಆಸುಇ 015 ಸೇಇವಿ 99ರ ಪ್ರಕಾರ ಗೌರವಧನವನ್ನು ಮಂಜೂರು ಮಾಡುವಂತೆ ಮನವಿ ಮಾಡಿರುತ್ತಾರೆ. ಇವರು ಈ ಎಲ್ಲಾ ಪ್ರಕರಣಗಳಲ್ಲಿ ಒಟ್ಟು 21 ದಿನಗಳು ಮಂಡನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.

1. ದಿನಾಂಕ:30.3.07ರ ಆದೇಶ ಸಂಖ್ಯೆ:ಸಿಆಸುಇ 296 ಎಸ್‌ಇಎನ್ 06
2. ದಿನಾಂಕ:17.5.07ರ ಆದೇಶ ಸಂಖ್ಯೆ:ಸಿಆಸುಇ 295 ಎಸ್‌ಇಎನ್ 06
3. ದಿನಾಂಕ:18.5.07ರ ಆದೇಶ ಸಂಖ್ಯೆ:ಸಿಆಸುಇ 298 ಎಸ್‌ಇಎನ್ 06
4. ದಿನಾಂಕ:5.11.07ರ ಆದೇಶ ಸಂಖ್ಯೆ:ಸಿಆಸುಇ 340 ಎಸ್‌ಇಎನ್ 06

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ, ಇಲಾಖಾ ವಿಚಾರಣೆಗಳಲ್ಲಿ ಸರ್ಕಾರಿ ನೌಕರರ ಮೇಲೆ ಮಾಡಲಾದ ಆರೋಪಗಳನ್ನು ಸಮರ್ಥಿಸುವ ಸಲುವಾಗಿ ಶಿಸ್ತು ಪ್ರಾಧಿಕಾರವು ತನ್ನ ಪರವಾಗಿ ಪ್ರಕರಣವನ್ನು ಹಾಜರುಪಡಿಸುವುದಕ್ಕೆ ಸರ್ಕಾರಿ ನೌಕರರನ್ನು ಮಂಡನಾಧಿಕಾರಿಯಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರನ್ವಯ ನೇಮಿಸಲು ಅವಕಾಶ ಇದ್ದು, ಈ ರೀತಿ ಮಂಡನಾಧಿಕಾರಿಯಾಗಿ ನೇಮಕವಾದ ಸರ್ಕಾರಿ ನೌಕರನಿಗೆ ವಿಚಾರಣೆಯ ದಿನವೊಂದಕ್ಕೆ ಅವರ ಮೂಲ ವೇತನದ ಶೇಕಡ 10ರಷ್ಟು ಅಥವಾ ಗರಿಷ್ಠ

ರೂ. 100–00 ರವರೆಗೆ ಸಂಭಾವನೆ ಮಂಜೂರು ಮಾಡಲು ಅವಕಾಶ ಇರುತ್ತದೆ. ಸರ್ಕಾರವು ಶ್ರೀ ಪ್ರಕಾಶ್ ಕೇಸರ್‌ಕರ್ ರವರ ಮನವಿಯನ್ನು ಕೂಲಂಕಶವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 020 ಕೆಇವಿ 09, ಬೆಂಗಳೂರು, ದಿನಾಂಕ: 3ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಹಿನ್ನಲೆಯಲ್ಲಿ ಸರ್ಕಾರವು ಶ್ರೀ ಪ್ರಕಾಶ್ ಕೇಸರ್‌ಕರ್, ಶಾಖಾಧಿಕಾರಿ, ಸಿಆಸುಇ (ಸೇವೆಗಳು–ಎಫ್) ಇವರಿಗೆ ದಿನವೊಂದಕ್ಕೆ ರೂ. 100–00 ಗಳಂತೆ 21 ದಿನಗಳಿಗೆ ಒಟ್ಟು ರೂ. 2100–00ಗಳ (ಎರಡು ಸಾವಿರದ ಒಂದು ನೂರು ರೂಪಾಯಿಗಳು ಮಾತ್ರ) ಗೌರವಧನವನ್ನು ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ "2052–ಸಚಿವಾಲಯ–ಸಾಮಾನ್ಯ ಸೇವೆಗಳು–090–ಸಚಿವಾಲಯ–01. ಕರ್ನಾಟಕ ಸರ್ಕಾರ ಸಚಿವಾಲಯ–051–ಸಾಮಾನ್ಯ ವೆಚ್ಚಗಳು" ರಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಪಿ.ಆರ್. 1702

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ವಿಷಯ: ಡಾ:ಕೆ.ವಿ. ರಾಜು, ಮಾನ್ಯ ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರರು ಇವರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳ ಬಗ್ಗೆ.

ಓದಲಾಗಿದೆ:
1. ಆದೇಶ ಸಂಖ್ಯೆ:ಸಿಆಸುಇ 492 ಸಅಸೇ 2008, 23.8.2008.
2. ಡಾ:ಕೆ.ವಿ ರಾಜು, ಮಾನ್ಯ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರು ಇವರ ಟಿಪ್ಪಣಿ ಸಂಖ್ಯೆ:EACM/N/62/09, ದಿನಾಂಕ:22.4.2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ 1 ರಲ್ಲಿ ಓದಲಾದ ಆದೇಶದಲ್ಲಿ ಡಾ:ಕೆ.ವಿ ರಾಜು, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಇವರ ಗುತ್ತಿಗೆ ಆಧಾರದ ನೇಮಕಾತಿಯ ಷರತ್ತು ಹಾಗೂ ನಿಬಂಧನೆಗಳನ್ನು ಹೊರಡಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ 2ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಅಧಿಕಾರಿಯವರು ಎಲ್.ಐ.ಸಿ. ಅನ್ಯೂಟಿ ಪೆನ್‌ಷನ್ ಸ್ಕೀಮ್‌ಗೆ ಸಂಬಂಧಿಸಿದಂತೆ ಶೇ 5 ರಷ್ಟನ್ನು ಕಟಾವು ಮಾಡುತ್ತಿದ್ದು, ಏಪ್ರಿಲ್–2009 ರಿಂದ ಅವರ ಮಾತೃ ಇಲಾಖೆಯಾದ ಐಸೆಕ್ ಸಂಸ್ಥೆಯವರು ಸದರಿ ಪೆನ್‌ಷನ್ ಸ್ಕೀಮ್‌ಗಾಗಿ ಶೇ. 5 ರಿಂದ 10ರಷ್ಟು ಕಟಾವು ಮಾಡಲು ತಿಳಿಸಿರುವ ಹಿನ್ನೆಲೆಯಲ್ಲಿ ತಮ್ಮ ವೇತನದಲ್ಲಿ ಸದರಿ ಸ್ಕೀಮ್‌ಗಾಗಿ ಶೇ. 5ಕ್ಕೆ ಬದಲಾಗಿ 10 ರಷ್ಟು ಕಟಾವು ಮಾಡುವಂತೆ ಕೋರಿದ್ದಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 271 ಸಅಸೇ 2009, ಬೆಂಗಳೂರು, ದಿನಾಂಕ: 3ನೇ ಜುಲೈ 2009

ಡಾ:ಕೆ.ವಿ. ರಾಜು, ಮಾನ್ಯ ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರರು ಇವರ ಎಲ್.ಐ.ಸಿ ಅನ್ಯೂಟಿ ಪೆನ್ ಷನ್ ಸ್ಕೀಮ್‌ಗಾಗಿ ವಂತಿಗೆಯನ್ನು ದಿನಾಂಕ:1.4.2009 ರಿಂದ ಅನ್ವಯವಾಗುವಂತೆ ಶೇ. 10 ರಷ್ಟು ಅಧಿಕಾರಿಯ ವೇತನದಲ್ಲಿ ಹಾಗೂ ಶೇ. 10 ರಷ್ಟು ರಾಜ್ಯ ಸರ್ಕಾರವು ವಂತಿಗೆ ರೂಪದಲ್ಲಿ ಪಾವತಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆಆಇ 663 ವೆಚ್ಚ–12/2009. ದಿನಾಂಕ:19.6.2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1706

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ತಿದ್ದೋಲೆ

ಸಂಖ್ಯೆ:ಸಿಆಸುಇ 350 ಸಅಸೇ 2009, ಬೆಂಗಳೂರು, ದಿನಾಂಕ:6ನೇ ಜುಲೈ 2009

ಅಧಿಸೂಚನೆ ಸಂಖ್ಯೆ ಸಿಆಸುಇ 350 ಸಅಸೇ 2009. ದಿನಾಂಕ:2.7.2009ರಲ್ಲಿನ ಕ್ರಮಸಂಖ್ಯೆ (8)ರಲ್ಲಿನ ಮರು ಸ್ಥಳನಿಯುಕ್ತಿಯನ್ನು ದಿನಾಂಕ:2.7.2009ರಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕ್ರ. ಸಂ	ಅಧಿಕಾರಿಯ ಹೆಸರು ಮತ್ತು ಪದನಾಮ	ವರ್ಗಾಯಿಸಿದ ಹುದ್ದೆ
8)	ಶ್ರೀಮತಿ ಜಿ.ಎಸ್. ಪ್ರಸೀಲಾ ಕುಮಾರಿ ಸಿವಿಲ್ ಜಡ್ಜ್ (ಜ್ಯೂನಿಯರ್ ಡಿವಿಜನ್) & ಜೆ.ಎಂ.ಎಫ್.ಸಿ II ಕೋರ್ಟ್, ಹಾಸನ	ಸಹಾಯಕ ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1720 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 70 ಕೆಇವಿ 2008, ಬೆಂಗಳೂರು, ದಿನಾಂಕ: 1ನೇ ಜುಲೈ, 2009

ವಿಷಯ: ಶ್ರೀ ಮೋಹನ್ ಕುಮಾರ್ ಸಾಸನೂರು, ಕೆ.ಎ.ಎಸ್ (ಹಿರಿಯ ಶ್ರೇಣಿ) ರವರ ಅಮಾನತ್ತನ್ನು ರದ್ದುಗೊಳಿಸಿ ಸೇವೆಗ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಮೋಹನ್‌ಕುಮಾರ್ ಸಾಸನೂರು ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಅಂದಿನ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಧಾರವಾಡ ಇವರನ್ನು ಹಿಂದೆ ಉಪ ವಿಭಾಗಾಧಿಕಾರಿಗಳು ಮತ್ತು ಅಧ್ಯಕ್ಷರು ಭೂ ನ್ಯಾಯ ಮಂಡಳಿ ಧಾರವಾಡ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 3892 ಎಕರೆ ಕೃಷಿ ಜಮೀನನ್ನು ಕೃಷಿಗೆ ಯೋಗ್ಯವಲ್ಲವೆಂದು ಆದೇಶ ಹೊರಡಿಸಿ ತೀವ್ರತರವಾದ ಕರ್ತವ್ಯಲೋಪ ಎಸಗಿರುವ ಆರೋಪದ ಕುರಿತು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 70 ಕೆಇವಿ 08, ದಿನಾಂಕ:28.10.2008ರಲ್ಲಿ ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ.

ಶ್ರೀ ಮೋಹನ್‌ಕುಮಾರ್ ಸಾಸನೂರು, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ, ಇವರ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ತೀರ್ಮಾನಿಸಿರುವುದರಿಂದಲೂ.

ಆದ್ದರಿಂದ ಸರ್ಕಾರವು ಶ್ರೀ ಮೋಹನ್‌ಕುಮಾರ್ ಸಾಸನೂರು, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ, ಇವರ ವಿರುದ್ಧ ಶಿಸ್ತು ಕ್ರಮ/ಇಲಾಖಾ ವಿಚಾರಣೆ ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಇವರ ಅಮಾನತ್ತನ್ನು ತೆರವುಗೊಳಿಸಿ, ಇವರನ್ನು ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿ, ಹಾವೇರಿ ಜಿಲ್ಲೆ, ಹಾವೇರಿ ಖಾಲಿ ಹುದ್ದೆಗೆ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ಸೇವೆಗೆ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಪಿ.ಆರ್. 1722 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ವಿಷಯ: ಶ್ರೀ ಕೆ.ಪಿ. ಹೊನಕೇರಿ, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಹಿಂದಿನ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು ಹಾಸನ (ಹಾಲಿ ನಿಲಂಬನೆ) ಇವರಿಗೆ ಜೀವನಾಧಾರ ಭತ್ಯೆ ಪಾವತಿ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಸಿಆಸುಇ 36 ಕೆಇವಿ 08, ದಿ:10.12.2008.

2. ಮಹಾ ನಿರ್ದೇಶಕರು ಆಡಳಿತ ತರಬೇತಿ ಸಂಸ್ಥೆ ಮೈಸೂರು ರವರ ಪತ್ರ ಸಂ:ಸಿಬ್ಬಂದಿ (2)/ವಿವ–13/09–10 ದಿ:13.5.2009.

ಪ್ರಸ್ತಾವನೆ:

ಶ್ರೀ ಕೆ.ಪಿ. ಹೊನಕೇರಿ, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ, ಇವರು ಈ ಹಿಂದೆ ಕೇಂದ್ರ ಸ್ಥಾನಿಕ ಸಹಾಯಕರು ಜಿಲ್ಲಾಧಿಕಾರಿಗಳ ಕಛೇರಿ ಹಾಸನ ರಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ತಮ್ಮ ಬಲ್ಲ ಮೂಲಗಳಿಗಿಂತ ಅಪಾರ ಪ್ರಮಾಣದ ಅಧಿಕ [illegible] ಹೊಂದಿದ್ದಾರೆಂದು ತಿಳಿದು ಬಂದ ಹಿನ್ನೆಲೆಯಲ್ಲಿ ಹಾಸನ ಲೋಕಾಯುಕ್ತ ಪೊಲೀಸರು ಇವರ ವಿರುದ್ಧ ಮೊಕದ್ದಮೆ [illegible] 2/2008 ರಲ್ಲಿ ಪ್ರಕರಣ ದಾಖಲಿಸಿಕೊಂಡು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಕಲಂ 13(1)(ಇ) ಹಾಗೂ 13 [illegible] ರಡಿ ಶ್ರೀ ಕೆ.ಪಿ. ಹೊನಕೇರಿ, ಕೆ.ಎ.ಎಸ್ ಇವರ ಮನೆ ಮತ್ತು ಕಛೇರಿಗಳ ಮೇಲೆ ದಿ:26.3.08 ರಂದು ದಾಳಿ ನಡೆಸಿ [illegible] ವಿರುದ್ಧ ಪ್ರಕರಣ ದಾಖಲಿಸಿ ಇವರು ತಮ್ಮ ಸ್ಥಾನದಲ್ಲಿಯೇ ಮುಂದುವರೆದರೆ ತಮ್ಮ ಪ್ರಭಾವವನ್ನು ಬೀರುವುದರ ಮೂಲಕ ಸಾಕ್ಷಾಧಾರಗಳನ್ನು ನಾಶಪಡಿಸಿ ತನಿಖೆಗೆ ಅಡ್ಡಿ ಅಡಚಣೆ ಉಂಟು ಮಾಡುವ ಸಾಧ್ಯತೆಗಳಿರುವುದರಿಂದ ಇವರನ್ನು

ಸೇವೆಯಿಂದ ಅಮಾನತ್ತುಗೊಳಿಸಿ ಅವರ ಸ್ಥಾನವನ್ನು ಪಲ್ಲಟಗೊಳಿಸಲು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶಿಫಾರಸ್ಸು ಮಾಡಿದ್ದರು. ಅದರಂತೆ ಮೇಲೆ ಓದಲಾದ ಕ್ರಮ ಸಂ:(1)ರ ಆದೇಶದಲ್ಲಿ ಸದರಿ ಅಧಿಕಾರಿಯನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 98ರ ನಿಯಮದನ್ವಯ ಜೀವನಾಧಾರದ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಲಾಗಿದೆ. ಸದರಿ ಅಧಿಕಾರಿಯವರು ಅಮಾನತ್ತಿನ ಸಮಯದಲ್ಲಿ ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಮಗಳೂರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಹಿನ್ನಲೆಯಲ್ಲಿ ಮೇಲೆ ಓದಲಾದ ಕ್ರಮ ಸಂ(2)ರ ಪತ್ರದಲ್ಲಿ ಮಹಾ ನಿರ್ದೇಶಕರು ಆಡಳಿತ ತರಬೇತಿ ಸಂಸ್ಥೆ, ಮೈಸೂರು ರವರು ಸರ್ಕಾರಕ್ಕೆ ಪತ್ರ ಬರೆದು ಪ್ರಾಂಶುಪಾಲರು ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಮಗಳೂರು ಹುದ್ದೆಯಲ್ಲಿ ಮತ್ತೊಬ್ಬರು ಕಾರ್ಯನಿರ್ವಹಿಸುತ್ತಿರುವುದರಿಂದ ಒಂದೇ ಹುದ್ದೆಯಲ್ಲಿ ಇಬ್ಬರು ಅಧಿಕಾರಿಗಳು ವೇತನ ಮತ್ತು ಭತ್ಯೆಗಳನ್ನು ಪಡೆಯಲು ಅವಕಾಶವಿಲ್ಲದಿರುವುದರಿಂದ ಶ್ರೀ ಕೆ.ಪಿ ಹೊಸಕೇರಿ, ಕೆ.ಎ.ಎಸ್ ಇವರ ಜೀವನಾಧಾರ ಭತ್ಯೆಯನ್ನು ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ:ಸಿಆಸುಇ 18 ಕಆವಿ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಕೆ.ಪಿ ಹೊಸಕೇರಿ, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಪ್ರಾಂಶುಪಾಲರು. ಜಿಲ್ಲಾ ತರಬೇತಿ ಸಂಸ್ಥೆ. ಚಿಕ್ಕಮಗಳೂರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957ರ ನಿಯಮ 98ರ ಪ್ರಕಾರ ಇವರ ಅಮಾನತ್ತಿನ ಆದೇಶ ದಿ:10.12.2008 ರಿಂದ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಮಹಾಲೇಖಪಾಲರಿಂದ authorization ಪಡೆದು ಸಿ.ಆ.ಸು. ಇಲಾಖೆ (ಲೆಕ್ಕಪತ್ರ–ಐಆರ್ ಎಲ್‌ಎ) ಯಿಂದ ಡ್ರಾ ಮಾಡಿ ಬಟವಾಡೆ ಮಾಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್. ನಾಗೇಂದ್ರ

ಪಿ.ಆರ್. 1723 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: 2009–10ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ಆಡಳಿತಾತ್ಮಕ ವೆಚ್ಚಕ್ಕಾಗಿ ಎರಡನೇ ಕಂತಿನ ಅನುದಾನ ಹಾಗೂ ಸದರಿ ಸಂಸ್ಥೆಯವರು ನಡೆಸಲಾಗುವ ಸಮ್ಮೇಳನ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಮಾತಂಇ 30 ಆಡವಿ 2009, ದಿನಾಂಕ:12.5.09
2. ಸರ್ಕಾರಿ ಆದೇಶ ಸಂಖ್ಯೆ:ಮಾತಂಇ 41 ಆಡವಿ 2009, ದಿನಾಂಕ:6.6.09
3. ನಿರ್ದೇಶಕರು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ರವರ ಪತ್ರ ಸಂ:ಕರಾದೂಸಂಅಕೇಂ/74/ಜಿಇಎನ್/2009, ದಿನಾಂಕ:17.6.2009
4. ನಿರ್ದೇಶಕರು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ರವರ ಪತ್ರ ಸಂ:ಕರಾದೂಸಂಅಕೇಂ/93/ಜಿಇಎನ್/2009. ದಿನಾಂಕ:17.6.2009.

ಪ್ರಸ್ತಾವನೆ:

2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451–00–090–2–08 ಕರ್ನಾಟಕ ರಾಜ್ಯ ದೂರ ಸಂವೇದಿಕ ತಂತ್ರಜ್ಞಾನ ಬಳಕೆ ಕೇಂದ್ರ–059 ಇತರೆ ಖರ್ಚು [ಯೋಜನ]" ರಡಿಯಲ್ಲಿ ರೂ. 680.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸದರಿ ರೂ. 680 ಲಕ್ಷಗಳ ಒದಗಣೆ ಮೊತ್ತದಲ್ಲಿ ಸದರಿ ಸಂಸ್ಥೆಯ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 150.00 ಲಕ್ಷಗಳನ್ನು ಹಾಗೂ ಸಮ್ಮೇಳನ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ರೂ. 15.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:6.6.2009ರ ಸರ್ಕಾರಿ ಆದೇಶದಲ್ಲಿ ಕೇಂದ್ರದ ಆಡಳಿತಾತ್ಮಕ ವೆಚ್ಚಕ್ಕಾಗಿ ಒದಗಿಸಲಾಗಿರುವ ರೂ. 150.00 ಲಕ್ಷಗಳಲ್ಲಿ ಸದರಿ ಕೇಂದ್ರಕ್ಕೆ ರೂ. 37.50 ಲಕ್ಷಗಳನ್ನು ಮೊದಲನೆ ಕಂತಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ:17.6.2009ರ ಪತ್ರದಲ್ಲಿ ಆಡಳಿತ ನಿರ್ವಹಣೆ, ವೆಚ್ಚಕ್ಕಾಗಿ, ರೂ. 37.50 ಲಕ್ಷಗಳನ್ನು ತ್ರೈಮಾಸಿಕ ಕಂತಾಗಿ ಹಾಗೂ ಮೇಲೆ (4)ರಲ್ಲಿ ಓದಲಾದ ದಿನಾಂಕ:17.6.2009ರ ಪತ್ರದಲ್ಲಿ ಕೇಂದ್ರದ ವತಿಯಿಂದ

ನಡೆಸಲು ಉದ್ದೇಶಿಸಲಾಗಿರುವ ಸಮ್ಮೇಳನ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ಉಪಯೋಗಿಸಲು ರೂ., 15.00 ಲಕ್ಷಗಳನ್ನು ಅನುದಾನವಾಗಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ಬಿಡುಗಡೆ ಮಾಡಲು ನಿರ್ದೇಶಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ 2009-10ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಆಡಳಿತಾತ್ಮಕ ವೆಚ್ಚಕ್ಕಾಗಿ ಒದಗಿಸಲಾಗಿರುವ ರೂ. 150.00 ಲಕ್ಷಗಳಲ್ಲಿ ಸದರಿ ಕೇಂದ್ರಕ್ಕೆ ರೂ. 37.50 ಲಕ್ಷಗಳನ್ನು ಎರಡನೆ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ಹಾಗೂ ಕೇಂದ್ರದ ವತಿಯಿಂದ ನಡೆಸಲು ಉದ್ದೇಶಿಸಲಾಗಿರುವ ಸಮ್ಮೇಳನ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ಉಪಯೋಗಿಸಲು ರೂ. 15.00 ಲಕ್ಷಗಳನ್ನು ಅಂದರೆ ಒಟ್ಟು 52.50 ಲಕ್ಷಗಳು ಬಿಡುಗಡೆಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಐಟಿಡಿ 41ಎಡಿಎಂ 2009, ಬೆಂಗಳೂರು, ದಿನಾಂಕ:14ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2009-10ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 37.50 ಲಕ್ಷಗಳ (ಮುವ್ವತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಹಾಗೂ ಕೇಂದ್ರದ ವತಿಯಿಂದ ನಡೆಸಲು ಉದ್ದೇಶಿಸಲಾಗಿರುವ ಸಮ್ಮೇಳನ ಸಂಕಿರಣ ಮತ್ತು ಕಾರ್ಯಾಗಾರಗಳಿಗೆ ಉಪಯೋಗಿಸಲು ರೂ. 15.00 ಲಕ್ಷಗಳನ್ನು (ಹದಿನೈದು ಲಕ್ಷ ರೂಪಾಯಿಗಳು ಮಾತ್ರ] ಅಂದರೆ ಒಟ್ಟು 52.50 ಲಕ್ಷಗಳನ್ನು (ಐವತ್ತೆರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ] ಎರಡನೆಯ ತ್ರೈಮಾಸಿಕ ಕಂತಿನ ಅನುದಾನವಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "3451-00-090-2-08 ಕರ್ನಾಟಕ ರಾಜ್ಯ ದೂರ ಸಂವೇದಿಕ ತಂತ್ರಜ್ಞಾನ ಬಳಕೆ ಕೇಂದ್ರ-059 ಇತರೆ ಖರ್ಚು [ಯೋಜನೆ]" ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಇವರು ಅನುದಾನದ ಬಳಕೆಯ ಬಗ್ಗೆ ಉಪಯೋಗಿತಾ ದೃಢೀಕರಣ ಪತ್ರವನ್ನು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.5.08ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ವಿ. ಕೃಷ್ಣಮೂರ್ತಿ

ಪಿ.ಆರ್. 1726 ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ

ಸುತ್ತೋಲೆ ಸಂಖ್ಯೆ:ಕಸಂವಾಪ್ರ 37 ಕೆಒಎಲ್ 09, ಬೆಂಗಳೂರು, ದಿನಾಂಕ: 24ನೇ ಜೂನ್ 2009

ವಿಷಯ: ಸರ್ಕಾರದ ಸಚಿವಾಲಯದ ಮತ್ತು ಎಲ್ಲಾ ಇಲಾಖೆಗಳ ಪತ್ರಗಳಲ್ಲಿ (ಲೆಟರ್ ಹೆಡ್) ಹಾಗೂ ಲಕೋಟೆಗಳ ಮೇಲೆ "**ಕನ್ನಡ ಅನುಷ್ಠಾನ ವರ್ಷ-2009**" ಎಂದು ಮುದ್ರಿಸುವ ಬಗ್ಗೆ.

2009 ರ ವರ್ಷವನ್ನು "**ಕನ್ನಡ ಅನುಷ್ಠಾನ ವರ್ಷ 2009**" ಎಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ. ಈ ಅವಧಿಯಲ್ಲಿ ನಿರಂತರವಾಗಿ ಕನ್ನಡವನ್ನು ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಸರ್ಕಾರದ ಸಚಿವಾಲಯದ ಮತ್ತು ಎಲ್ಲಾ ಇಲಾಖೆಗಳ ಪತ್ರಗಳಲ್ಲಿ (ಲೆಟರ್ ಹೆಡ್) ಹಾಗೂ ಲಕೋಟೆಗಳ ಮೇಲೆ "**ಕನ್ನಡ ಅನುಷ್ಠಾನ ವರ್ಷ 2009**" ಎಂದು ಮುದ್ರಿಸಲು ಸೂಚಿಸಿದೆ.

ಸುಧಾಕರ್ ರಾವ್

ಪಿ.ಆರ್. 1727 ಮುಖ್ಯ ಕಾರ್ಯದರ್ಶಿ,

ಕರ್ನಾಟಕ ಸರ್ಕಾರದ ಸಚಿವಾಲಯ.

ಕಂದಾಯ ಸಚಿವಾಲಯ

ವಿಷಯ: ಶ್ರೀ ಅರುಣಪ್ರಭಾ, ತಹಶೀಲ್ದಾರ್ ಚನ್ನಪಟ್ಟಣ ತಾಲ್ಲೂಕು ಇವರ ವರ್ಗಾವಣೆ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 32 ಎಟಿಎಸ್ 2009 ದಿನಾಂಕ 4.7.2009 ಹಾಗೂ ಪರಿಷ್ಕರಿಸಿದ ಅಧಿಸೂಚನೆ ದಿನಾಂಕ:6.7.2009.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:2759/2009ರ ದಿನಾಂಕ:7.7.2009ರ ಆದೇಶ.

ಪ್ರಸ್ತಾವನೆ:

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 32 ಎಟಿಎಸ್ 2009 ದಿನಾಂಕ: 4.7.2009ರಲ್ಲಿ 82 ಜನ ತಹಶೀಲ್ದಾರರನ್ನು ವರ್ಗಾಯಿಸಿದ್ದು ನಂತರ ಸದರಿ ಅಧಿಸೂಚನೆಯನ್ನು ಪರಿಷ್ಕರಿಸಿ ದಿನಾಂಕ:6.7.2009ರಂದು 81 ಜನ ತಹಶೀಲ್ದಾರರುಗಳ ವರ್ಗಾವಣೆ ಆದೇಶವನ್ನು ಹೊರಡಿಸಲಾಗಿದೆ. ಇದರಲ್ಲಿ ಶ್ರೀ ಅರುಣಪ್ರಭಾ, ತಹಶೀಲ್ದಾರ್ ಚನ್ನಪಟ್ಟಣ ತಾಲ್ಲೂಕು ಇವರನ್ನು ಕಚೇರಿ ಸಹಾಯಕರು, ಜಿಲ್ಲಾಧಿಕಾರಿ ಕಚೇರಿ, ಚಿತ್ರಮರ್ಗ ಶ್ರೀ ಎಸ್.ಆರ್. ಕೃಷ್ಣಯ್ಯ ಇವರ ಸ್ಥಳಕ್ಕೆ ಹಾಗೂ ಶ್ರೀ ಎಸ್.ಆರ್. ಕೃಷ್ಣಯ್ಯ ಇವರನ್ನು ತಹಶೀಲ್ದಾರ್ ಚನ್ನಪಟ್ಟಣ ತಾಲ್ಲೂಕು ಶ್ರೀ ಅರುಣಪ್ರಭಾ ಇವರ ಸ್ಥಳಕ್ಕೆ ವರ್ಗಾಯಿಸಲಾಗಿದೆ. ಈ ಆದೇಶವನ್ನು ಶ್ರೀ ಅರುಣಪ್ರಭಾ ಇವರು ಕೆ.ಎ.ಟಿಯಲ್ಲಿ ಅರ್ಜಿ ಸಂಖ್ಯೆ:2759/2009ರಲ್ಲಿ ಪ್ರಶ್ನಿಸಿದ್ದು ದಿನಾಂಕ:7.7.2009ರಂದು ನ್ಯಾಯ ಮಂಡಳಿಯು ಆದೇಶ ಹೊರಡಿಸಿರುತ್ತಾರೆ. ನ್ಯಾಯ ಮಂಡಳಿಯ ಆದೇಶದಲ್ಲಿ ಅರ್ಜಿದಾರರಾದ ಶ್ರೀ ಅರುಣಪ್ರಭಾ ಇವರು ಅವರ ವರ್ಗಾವಣೆ ಆದೇಶವನ್ನು ಮರು ಪರಿಶೀಲಿಸಿ ರದ್ದುಗೊಳಿಸುವಂತೆ ದಿನಾಂಕ:5.7.2009ರಂದು ವೃಂದ ನಿರ್ವಹಣಾ ಪ್ರಾಧಿಕಾರಕ್ಕೆ ಅರ್ಜಿಯನ್ನು ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿದ್ದು ಆ ಬಗ್ಗೆ ವೃಂದ ನಿರ್ವಹಣಾ ಪ್ರಾಧಿಕಾರವು ಯಾವುದೇ ತೀರ್ಮಾನ ಕೈಗೊಂಡಿಲ್ಲವೆಂದು ಉಲ್ಲೇಖಿಸಲಾಗಿದೆ. ದಿನಾಂಕ:9.7.2009ರವರೆಗೆ ಸದರಿ ನೌಕರರು ಅವರ ವರ್ಗಾವಣೆ ಆದೇಶವನ್ನು ರದ್ದುಗೊಳಿಸುವಂತೆ ಸಲ್ಲಿಸಲಾಗಿದೆಯೆಂದು ಹೇಳಿರುವ ಅರ್ಜಿಯು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಈಗಾಗಲೇ ವೃಂದ ನಿರ್ವಹಣಾ ಪ್ರಾಧಿಕಾರವು ದಿನಾಂಕ:20.6.2009 ರಂದು ಸಭೆ ನಡೆಸಿ ಶ್ರೀ ಅರುಣಾ ಪ್ರಭಾ ಹಾಗೂ ಇತರರ ವರ್ಗಾವಣೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಲು ಶಿಫಾರಸ್ಸು ಮಾಡಿದೆ. ಸದರಿ ಅಧಿಕಾರಿಯ ವರ್ಗಾವಣೆಯನ್ನು ಹಾಗೂ ವೃಂದ ನಿರ್ವಹಣಾ ಪ್ರಾಧಿಕಾರದ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯನ್ನು ಪಡೆದು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಮಾಡಿರುವುದರಿಂದ ಸದರಿಯವರ ಕೋರಿಕೆಯನ್ನು ಪರಿಗಣಿಸಲು ಅವಕಾಶವಿಲ್ಲವಾದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಕಂಇ 381 ಎಎಸ್‌ಡಿ 2009, ಬೆಂಗಳೂರು, ದಿನಾಂಕ: 13ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಶ್ರೀ ಅರುಣಪ್ರಭಾ, ತಹಶೀಲ್ದಾರ್ ಚನ್ನಪಟ್ಟಣ ತಾಲ್ಲೂಕು (ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಚೇರಿ, ಚಿತ್ರದುರ್ಗ ಜಿಲ್ಲೆ ಇಲ್ಲಿಗೆ ವರ್ಗಾವಣೆ ಆದೇಶದಲ್ಲಿರುವ) ಇವರ ವರ್ಗಾವಣೆಯನ್ನು ದಿನಾಂಕ:20.6.2009ರಂದು ನಡೆದ ವೃಂದ ನಿರ್ವಹಣಾ ಪ್ರಾಧಿಕಾರದ ಸಭೆಯ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ವರ್ಗಾವಣೆ ಆದೇಶ ಹೊರಡಿಸಿರುವುದರಿಂದ ಶ್ರೀ ಅರುಣಪ್ರಭಾ ಇವರನ್ನು ಕಾರ್ಯನಿರ್ವಹಿಸುತ್ತಿದ್ದ ಹುದ್ದೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹುದ್ದೆಯಲ್ಲಿ ಮುಂದುವರೆಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಇವರ ಕೋರಿಕೆಯನ್ನು ತಿರಸ್ಕರಿಸಿದೆ. ಸದರಿ ಅಧಿಕಾರಿಯು ವರ್ಗಾಯಿಸಿ ನೇಮಿಸಿದ ಸ್ಥಳದಲ್ಲಿ ಈ ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ

ಪಿ.ಆರ್. 1728

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3)

ಅಧಿಸೂಚನೆ

ಸಂಖ್ಯೆ:ಕಂಇ 25 ಮುನೋಮು 2008, ಬೆಂಗಳೂರು, ದಿನಾಂಕ: 6ನೇ ಜುಲೈ, 2009

ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ (1957ರ ಕರ್ನಾಟಕ ಕಾಯ್ದೆ–34) ಅನುಚ್ಛೇದ 37ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಯಾ ಬ್ಯಾಂಕ್, ಬೆಂಗಳೂರು ಇವರು ವಿತರಿಸಲಿರುವ ರೂ. 200 ಕೋಟಿ ಮೊತ್ತದ (Promissory Notes) ಬಾಂಡ್‌ಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಮುದ್ರಾಂಕ ಶುಲ್ಕ ಅನುಸೂಚಿಯ ಅನುಚ್ಛೇದ 16 ರಂತೆ ರೂ. 1,00,00,000/– (ಒಂದು ಕೋಟಿ ರೂಪಾಯಿಗಳು ಮಾತ್ರ)ಗಳ ಸಂಚಿತ ಮುದ್ರಾಂಕ ಶುಲ್ಕವನ್ನು ದಿನಾಂಕ:25.6.2008ರಂದು ಸಂದಾಯಿಸಿರುತ್ತಾರೆಂದು ಕರ್ನಾಟಕ ಸರ್ಕಾರವು ಪ್ರಕಟಿಸುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 25 ಮುನೋಮು 2008, ದಿನಾಂಕ:6.7.2009ರ ಪ್ರಕಾರ ಸಂಚಿತ ಮುದ್ರಾಂಕ ಶುಲ್ಕವನ್ನು ಮೊದಲ ಬಾರಿಗೆ ಸಂದಾಯಿಸಲಾಗಿದೆ ಎಂಬ ಪದಗಳನ್ನು ಷೇರು ಪತ್ರಗಳ ಮೇಲೆ ಮುದ್ರಿಸಲು ಸರ್ಕಾರವು ಅನುಮತಿ ನೀಡಿದೆ.

ಕರ್ನಾಟಕ ಮುದ್ರಾಂಕ ನಿಯಮಾವಳಿಯಲ್ಲಿನ ನಿಯಮ 11–ಎ (4)ರ ಪ್ರಕಾರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು ಷೇರುಗಳ ಖರೀದಿಗೆ ಸಂಬಂಧಿಸಿದಂತೆ ನಿರ್ವಹಿಸಲಾದ ರಿಜಿಸ್ಟರ್ ಪುಸ್ತಕ, ದಾಖಲೆಗಳನ್ನು ಪರಿಶೀಲಿಸಲು ಮತ್ತು ತಪಾಸಣೆ ನಡೆಸಲು ಸದರಿ ಸಂಸ್ಥೆಯು ಅವಕಾಶ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. 1729

ಅಧಿಸೂಚನೆ

ಸಂಖ್ಯೆ: ಕಂಇ 43 ಎಲ್ಆರ್ಎಂ 2009, ಬೆಂಗಳೂರು, ದಿನಾಂಕ: 7ನೇ ಜುಲೈ 2009

ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು, ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಳಗಿನಜೂಗಾನಹಳ್ಳಿ ಗ್ರಾಮದ ಸ.ನಂ. 82 ರಲ್ಲಿ 4.00 ಎಕರೆ ಕೃಷಿ ಜಮೀನನ್ನು ಗೋಶಾಲೆ, ನ್ಯಾಚುರೋಪತಿ ತರಬೇತಿ ಕೇಂದ್ರ ಶೈಕ್ಷಣಿಕ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಪಡೆಯಲು ನಮೂನೆ 15–ಎ ಮತ್ತು ನಮೂನೆ 15–ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಪತ್ರ ಸಂಖ್ಯೆ:ಎಲ್ಆರ್ಎಫ್.ಎಸ್ಆರ್ /21/07–08 ದಿನಾಂಕ:31.3.09ರಲ್ಲಿ ಪ್ರಸ್ತಾಪಿತ ಮೇಲ್ಕಂಡ 4.00 ಎಕರೆ ಜಮೀನನ್ನು ಪಡೆಯಲು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109 ರಡಿ ಅನುಮೋದನೆ/ವಿನಾಯಿತಿ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರ, ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿರ್ಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು, ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಳಗಿನಜೂಗಾನಹಳ್ಳಿ ಗ್ರಾಮದ ಸ.ನಂ. 82 ರಲ್ಲಿ 4.00 ಎಕರೆ ಕೃಷಿ ಜಮೀನನ್ನು ಗೋಶಾಲೆ, ನ್ಯಾಚುರೋಪತಿ ತರಬೇತಿ ಕೇಂದ್ರ ಶೈಕ್ಷಣಿಕ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1 ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.

2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.

4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್. 1730 ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

ಅಧಿಸೂಚನೆ

ಸಂಖ್ಯೆ: ಕಂಇ 37 ಎಲ್‌ಆರ್‌ಎಂ 2009, ಬೆಂಗಳೂರು, ದಿನಾಂಕ: 30ನೇ ಜೂನ್, 2009

ಶ್ರೀ ಶೈಲಾ ಫಾರಂ ಪ್ರೈವೇಟ್ ಲಿಮಿಟೆಡ್, ಭೀಮಸಮುದ್ರ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ ಗ್ರಾಮದ ಸ.ನಂ. 54/2 ಮತ್ತು ಇತರೆಗಳಲ್ಲಿ ಒಟ್ಟು–10–03 1/2 ಎಕರೆ ಜಮೀನನ್ನು ತೋಟಗಾರಿಕೆ ಅಭಿವೃದ್ಧಿ ಉದ್ದೇಶಕ್ಕಾಗಿ ನಮೂನೆ 15–ಎ ಮತ್ತು ನಮೂನೆ 15–ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ, ಇವರ ಪತ್ರ ಸಂಖ್ಯೆ:ಎಲ್‌ಆರ್‌ಎಂ:ಸಿಆರ್:40:2008–09 ದಿನಾಂಕ:12.3.2009 ರಲ್ಲಿ ಪ್ರಸ್ತಾಪಿತ ಮೇಲ್ಕಂಡ 10–03 1/2ಎಕರೆ ಜಮೀನನ್ನು ಖರೀದಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109 ರಡಿ ಅನುಮೋದನೆ/ವಿನಾಯಿತಿ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ, ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿರ್ಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಶ್ರೀ ಶೈಲಾ ಫಾರಂ ಪ್ರೈವೇಟ್ ಲಿಮಿಟೆಡ್, ಚಿತ್ರದುರ್ಗ ಜಿಲ್ಲೆ, ಇವರಿಗೆ ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ ಗ್ರಾಮದ ಸ.ನಂ. 54/2 ಮತ್ತು ಇತರೆಗಳಲ್ಲಿ ಒಟ್ಟು–10–03 1/2 ಎಕರೆ ಜಮೀನನ್ನು ತೋಟಗಾರಿಕೆ ಅಭಿವೃದ್ಧಿ ಉದ್ದೇಶಕ್ಕಾಗಿ ಖರೀದಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1 ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ

ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.

4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ. 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.

6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.

7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.

8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್. 1731

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

ವಿಷಯ: ಶ್ರೀ ಡಿ.ಪಿ. ಪ್ರಾಣೇಶ್ ಕುಮಾರ್, ಹಿಂದಿನ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ:

1. ಚಿಕ್ಕಬಳ್ಳಾಪುರ ಜಿಲ್ಲೆ, ಜಿಲ್ಲಾಧಿಕಾರಿಗಳ ಪತ್ರ ಸಂ:ಸಿಬ್ಬಂದಿ (1):ಸಿಆರ್/94-08-09, ದಿನಾಂಕ:25.7.2008.
2. ಸರ್ಕಾರದ ಆದೇಶ ಸಂ:ಕಂಇ 38 ಎಡಿಇ 2008, ದಿನಾಂಕ:2.8.2008.
3. ಶ್ರೀ ಪ್ರಾಣೇಶ್‌ಕುಮಾರ್, ತಹಶೀಲ್ದಾರ್ (ಅಮಾನತ್ತಿನಲ್ಲಿರುವ) ಅವರ ದಿನಾಂಕ:2.3.2009ರ ಮನವಿ.
4. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪತ್ರ ಸಂ:ಇಎಸ್‌ಟಿ:1:ಸಿಆರ್:94/08-09, ದಿನಾಂಕ:18.4.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರ ದಿನಾಂಕ:25.7.2008ರಲ್ಲಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪ್ರಸ್ತಾವನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ಜಂಟಿಬೋಯನಹಳ್ಳಿ ಗ್ರಾಮದ ಸರ್ವೆ ನಂ:19 ಪ್ಯಾಯಲಚಿನ್ನಪ್ಪಹಳ್ಳಿ ಗ್ರಾಮದ ಸರ್ವೆ ನಂ:6 ಮತ್ತು ಬಂದಾರ್ಲಹಳ್ಳಿ ಗ್ರಾಮದ ಸರ್ವೆ ನಂ:32 ರ ಜಮೀನುಗಳ ಗಣಕೀಕೃತ ಪಹಣಿಯ ಕಲಂ 9ರಲ್ಲಿ ಖಾತೆದಾರರ ಹೆಸರನ್ನು ಅಕ್ರಮವಾಗಿ ನಮೂದು ಮಾಡಿರುವ ಬಗ್ಗೆ ಸಾರ್ವಜನಿಕರಿಂದ ಮೌಖಿಕವಾಗಿ ದೂರುಗಳು ಬಂದ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳ ಕೇಂದ್ರಸ್ಥಾನಿಕ ಸಹಾಯಕರು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಗುಡಿಬಂಡೆ ತಾಲ್ಲೂಕು ಕಛೇರಿಗೆ ಖುದ್ದು ಭೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿದಾಗ, ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕುರವರು ಎಸಗಿರುವ ಕರ್ತವ್ಯ ಲೋಪಗಳು, ಅಧಿಕಾರ ದುರುಪಯೋಗ ಕಂಡುಬಂದಿದ್ದು, ಸದರಿ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೇಂದ್ರಸ್ಥಾನಿಕ ಸಹಾಯಕರು, ಚಿಕ್ಕಬಳ್ಳಾಪುರ ಇವರು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಇವರಿಗೆ ವರದಿ ಮಾಡಿರುತ್ತಾರೆ. ತಪಾಸಣೆ ಸಮಯದಲ್ಲಿ ಎಸಗಿರುವ ಲೋಪಗಳು ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶ್ರೀ ಡಿ.ಪಿ. ಪ್ರಾಣೇಶ್‌ಕುಮಾರ್, ಹಿಂದಿನ ತಹಶೀಲ್ದಾರ್, ಗುಡಿಬಂಡೆ ಇವರನ್ನು 1957ರ ಕರ್ನಾಟಕ

ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ ನಿಯಮಗಳನ್ವಯ ಸೇವೆಯಿಂದ ಅಮಾನತ್ತಿನಲ್ಲಿಟ್ಟು, ಇಲಾಖಾ ವಿಚಾರಣೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಸರ್ಕಾರವು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಡಿ.ಪಿ. ಪ್ರಾಣೇಶ್ ಕುಮಾರ್, ಹಿಂದಿನ ತಹಶೀಲ್ದಾರ್, ಗುಡಿಬಂಡೆ ಇವರು ತಮ್ಮ ಸ್ಥಾನದ ಪ್ರಭಾವ ಬೀರಿ ಅಧಿಕಾರ ದುರುಪಯೋಗ ಹಾಗೂ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 10 (1)(ಡಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ.ಫಿ. ಪ್ರಾಣೇಶ್‌ಕುಮಾರ್, ತಹಶೀಲ್ದಾರ್, ಗುಡಿಬಂಡೆ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರಿಸಿ, ಈ ಕೂಡಲೇ ಜಾರಿಗೆ ಬರುವಂತೆ, ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ:2.8.2008ರ ಆದೇಶದಲ್ಲಿ ಇಲಾಖಾ ವಿಚಾರಣೆ ಬಾಕಿಯಿಟ್ಟು, ಸೇವೆಯಿಂದ ಅಮಾನತ್ತಿನಲ್ಲಿಡಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (3)ರಲ್ಲಿ ಶ್ರೀ ಡಿ.ಪಿ. ಪ್ರಾಣೇಶ್ ಕುಮಾರ್, ತಹಶೀಲ್ದಾರ್ ಇವರು ಮನವಿ ಸಲ್ಲಿಸಿ, ಕಳೆದ 6 ತಿಂಗಳಿನಿಂದ ಅಮಾನತ್ತಿನಲ್ಲಿದ್ದು, ಈವರೆವಿಗೂ ಸ್ಥಳ ನೇಮಕ ಮಾಡಿರುವುದಿಲ್ಲವೆಂದು ಹಾಗೂ ಅಮಾನತ್ತಿನ ವಿಚಾರದ ಬಗ್ಗೆ ಯಾವುದೇ ಅಧಿಕಾರ ದುರುಪಯೋಗ ಮಾಡಿರುವುದಿಲ್ಲವೆಂದು ಅಧಿಕಾರದ ವ್ಯಾಪ್ತಿಯಲ್ಲಿ ನೊಂದ ರೈತರ ಹೆಸರುಗಳನ್ನು ಈಗಾಗಲೇ ಮಂಜೂರು ಆಗಿರುವ ಸಾಗುವಳಿ ಚೀಟಿಯನ್ನು ಬಹಳ ಹಿಂದೆಯೇ ನೀಡಲಾಗಿದ್ದು, ಖಾತೆ ವಗೈರೆಯನ್ನು ಸಹ ಗುಡಿಬಂಡೆ ತಹಶೀಲ್ದಾರ್ ಆಗಿ ಬರುವುದಕ್ಕೆ ಮುಂಚೆಯೇ ಆಗಿದ್ದು, ಕಂಪ್ಯೂಟರ್ ಪಹಣಿಯಲ್ಲಿ ಕೈತಪ್ಪಿ ಹೋಗಿದ್ದ ರೈತರ ಹೆಸರುಗಳನ್ನು ಮಾತ್ರ ಕಂಪ್ಯೂಟರ್ ಪಹಣಿಯಲ್ಲಿ ಅಳವಡಿಸಲು ಆದೇಶಿಸಿದ್ದು, ಇದು ತಮ್ಮ ಕಾರ್ಯ ವ್ಯಾಪ್ತಿಯಲ್ಲಿರುವುದರಿಂದ ಆದೇಶಿಸಲಾಗಿದೆಯೆಂದು, ಯಾವುದೇ ಅಧಿಕಾರ ದುರುಪಯೋಗ ಮಾಡಿಲ್ಲವೆಂದು, ಅಮಾನತ್ತಿನ ಆದೇಶವನ್ನು ರದ್ದುಮಾಡಿ, ಮರು ನೇಮಕ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ:18.4.2009ರಲ್ಲಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಅವರು ಶ್ರೀ ಡಿ.ಪಿ. ಪ್ರಾಣೇಶ್ ಕುಮಾರ್, ತಹಶೀಲ್ದಾರ್ ಅವರು ಅಮಾನತ್ತಿನ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ ಮೇಲ್ಮನವಿ ಸಂ:3720/2008ರನ್ನು ಹಿಂದಕ್ಕೆ ಪಡೆದಿರುವುದರಿಂದ, ಮೇಲ್ಮನವಿಯು ವಜಾಗೊಂಡಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಅಮಾನತ್ತು ಆದೇಶವನ್ನು ತೆರವುಗೊಳಿಸಿ, ಪುನಃ ಸದರಿ ಅಧಿಕಾರಿಯವರನ್ನು ಸೇವೆಗೆ ಪುನಃಸ್ಥಿತಿಗೊಳಿಸಬೇಕೆಂದು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ತಹಶೀಲ್ದಾರರಾದ ಶ್ರೀ ಡಿ.ಫಿ. ಪ್ರಾಣೇಶ್‌ಕುಮಾರ್ ಅವರು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ಜಿಲ್ಲಾಧಿಕಾರಿಗಳ ವರದಿಯನ್ನು ಪರಿಶೀಲಿಸಿ, ಸರ್ಕಾರವು ಶ್ರೀ ಡಿ.ಪಿ. ಪ್ರಾಣೇಶ್‌ಕುಮಾರ್, ತಹಶೀಲ್ದಾರ್ ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ನೇಮಿಸಲು ನಿರ್ಧರಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ:ಆರ್‌ಡಿ 38 ಎಡಿಇ 2008, ಬೆಂಗಳೂರು, ದಿನಾಂಕ: 6ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಪಿ. ಪ್ರಾಣೇಶ್‌ಕುಮಾರ್, ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು (ಪ್ರಸ್ತುತ ಅಮಾನತ್ತು) ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10(5)(c)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಅವರ ವಿರುದ್ದದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಇವರ ಅಮಾನತ್ತನ್ನು ತೆರವುಗೊಳಿಸಿ, ಈ ಕೂಡಲೇ ಜಾರಿಗೆ ಬರುವಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ ಖಾಲಿ ಇರುವ ಗುಲ್ಬರ್ಗಾ (ಉತ್ತರ) ವಿಶೇಷ ತಹಶೀಲ್ದಾರ್ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1732

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ಸಹಾಯಾನುದಾನ ಬಿಡುಗಡೆ ಕುರಿತು.

ಓದಲಾಗಿದೆ: 1. ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತುರವರ ಪತ್ರ ದಿನಾಂಕ:10.6.2009.

2. ಮಾನ್ಯ ಮುಖ್ಯ ಮಂತ್ರಿಗಳ ಸಲಹೆಗಾರರ ಟಿಪ್ಪಣಿ ಸಂಖ್ಯೆ ಎಸಿಎಂ:372:2009 ದಿನಾಂಕ:17.6.2009

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ, ಕರ್ನಾಟಕ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ಯೋಜನೆಯಡಿ ರೂ. 1.00 ಕೋಟಿಗಳನ್ನು 2009-10ನೇ ಸಾಲಿನಲ್ಲಿ ಆಯವ್ಯಯ ಅವಕಾಶ ಕಲ್ಪಿಸಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ತಿಳಿಸಿದ್ದು, ಅದರಂತೆ, ರೂ. 50.00 ಲಕ್ಷಗಳನ್ನು ವಕೀಲರ ನಿಧನದ ಬೇಡಿಕೆ ಮನವಿಗಳ ವಿಲೇವಾರಿಗೆ ಬಳಸಿಕೊಳ್ಳಲು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಉಲ್ಲೇಖಿತ (2)ರ ಪತ್ರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಸಲಹೆಗಾರರು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ವಕೀಲರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ವಕೀಲರ ಕಲ್ಯಾಣ ನಿಧಿಯ ನಿರ್ವಾಹಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕಲ್ಯಾಣ ನಿಧಿಗೆ ಒದಗಿಸಿರುವ ರೂ. 1.00 ಕೋಟಿ ಅನುದಾನದಲ್ಲಿ ರೂ. 50.00 ಲಕ್ಷಗಳನ್ನು ತಕ್ಷಣ ಬಿಡುಗಡೆ ಮಾಡಿ ಆದೇಶ ಹೊರಡಿಸುವಂತೆ ಕೋರಿದ್ದಾರೆ.

ಈ ಬಗ್ಗೆ ಆಂತರಿಕ ಆರ್ಥಿಕ ಸಲಹೆಗಾರರನ್ನು ಸಂಪರ್ಕಿಸಲಾಗಿ ಲೇಖಾನುದಾನ ಜಾರಿಯಲ್ಲಿದ್ದು, ಸದರಿ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ:16.5.2008ರ ಕಂಡಿಕೆ (1)ರನ್ವಯ ಪ್ರಥಮ ತ್ರೈಮಾಸಿಕ ಕಂತಾಗಿ ರೂ. 12.50 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಲು ಇಲಾಖಾ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯಲ್ಲಿ ಅವಕಾಶವಿರುವುದಾಗಿ ಸಹಮತಿಸಿ ಹೆಚ್ಚಿನ ಹಣದ ಅವಶ್ಯಕತೆಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವಂತೆ ತಿಳಿಸಿದೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಲಾ 45 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ: 9ನೇ ಜುಲೈ 2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ರಾಜ್ಯ ವಕೀಲರ ಕ್ಷೇಮಾಭಿವೃದ್ಧಿ ನಿಧಿಗೆ ಲೆಕ್ಕ ಶೀರ್ಷಿಕೆ 2014-00-800-1-03-059 (ಯೋಜನೆ) ಯಡಿ ರೂ. 12.50 ಲಕ್ಷಗಳನ್ನು (ರೂಪಾಯಿ ಹನ್ನೆರಡು ಲಕ್ಷದ ಐವತ್ತು ಸಾವಿರಗಳು ಮಾತ್ರ) ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಹಣವನ್ನು ವಕೀಲರ ಸಂಘಗಳಿಗೆ ಸಹಾಯಾನುದಾನ ನಿಯಮಾವಳಿಯಲ್ಲಿ ಸ್ಪಷ್ಟಪಡಿಸಿರುವಂತೆ ವಕೀಲರ ಪರಿಷತ್ತು, ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ರವರಿಗೆ ಬಿಲ್ಲನ್ನು ಸಲ್ಲಿಸಿ ಹಣ ಪಾವತಿಸಿ ಕೊಳ್ಳಬಹುದಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ವನಇ 299 ಅಂಆಸ 2009 ದಿನಾಂಕ:9.7.2009ರ ಸಹಮತಿ ಹಾಗೂ ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ:16.5.2008ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಶಕುಂತಲ ಹೆಚ್.ಆರ್.
ಪಿ.ಆರ್. 1733 ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಬಿ. ಶಶಿಧರ್, ನಿವೃತ್ತ ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೆ.ಆರ್. ಪೇಟೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247(ಎ)(1)ರ ಸೌಲಭ್ಯಕ್ಕೆ ಪರಿಗಣಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ-II ಸಂ:ಲಾ 161 ಪಿಪಿಇ 86, ದಿನಾಂಕ:24.7.1989.
2. ಸರ್ಕಾರದ ಪತ್ರದ ಸಂ.ಲಾ 198 ಪಿಪಿಇ 91, ದಿನಾಂಕ:5.11.1991.
3. ಸದರಿ ಅಧಿಕಾರಿಯವರ ಮನವಿ ದಿನಾಂಕ:15.4.2009
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ:ಡಿಪಿಎನ್/ಲೆಕ್ಕ-1/39/2009-10, ದಿನಾಂಕ:22.4.2008.

ಪ್ರಸ್ತಾವನೆ:

ಶ್ರೀ ಬಿ. ಶಶಿಧರ್, ನಿವೃತ್ತ ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೆ.ಆರ್.ಪೇಟೆ ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ:24.7.1989ರ ಸರ್ಕಾರದ ಅಧಿಸೂಚನೆಯ ಕ್ರ.ಸಂ. 15ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ:3.8.1989 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:5.11.1991ರ ಸರ್ಕಾರದ ಪತ್ರದನ್ವಯ ಸದರಿ ನಿವೃತ್ತ ಅಧಿಕಾರಿಯ ಜನ್ಮ ದಿನಾಂಕವನ್ನು 17.3.1949 ಎಂದು ಒಪ್ಪಲಾಗಿದೆ.

ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ, ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:3.8.1989ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿದ್ದು, ಇವರ ಜನ್ಮ ದಿನಾಂಕವನ್ನು 17.3.1949 ಎಂದು ಸರ್ಕಾರವು ಒಪ್ಪಿರುವುದರಿಂದ, ಸದರಿ ನಿವೃತ್ತ ಅಧಿಕಾರಿಯು 40 ವರ್ಷ 04 ತಿಂಗಳು 16 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ ಆಗಿರುತ್ತದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1) ರನ್ವಯ ನಾಲ್ಕು ವರ್ಷಗಳ ಹೆಚ್ಚುವರಿ ಸೇವೆಯನ್ನು ಸದರಿಯವರ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ದಿನಾಂಕ:22.4.2009ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು, ಶ್ರೀ ಬಿ. ಶಶಿಧರ್, ನಿವೃತ್ತ ಸಹಾಯಕ ಸರ್ಕಾರಿ ಅಭಿಯೋಜಕರು, ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೆ.ಆರ್. ಪೇಟೆ ಇವರು ದಿನಾಂಕ:3.8.1989 ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಹಾಜರಾಗಿರುತ್ತಾರೆ. ಇವರ ಜನ್ಮ ದಿನಾಂಕ:17.3.1949 ಆಗಿರುತ್ತದೆ. ಸದರಿ ಅಧಿಕಾರಿಯು 40 ವರ್ಷ 4 ತಿಂಗಳು 16 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಸೇವೆಯನ್ನು ಹೆಚ್ಚುವರಿಯಾಗಿ ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಸರ್ಕಾರವು ಆದೇಶವನ್ನು ಹೊರಡಿಸಬಹುದೆಂದು ಶಿಫಾರಸ್ಸನ್ನು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 232 ಪಿಪಿಇ 2009, ಬೆಂಗಳೂರು, ದಿನಾಂಕ: 16ನೇ ಜುಲೈ 2009

ಶ್ರೀ ಬಿ. ಶಶಿಧರ್, ನಿವೃತ್ತ ಸಹಾಯಕ ಸರ್ಕಾರಿ ಅಭಿಯೋಜಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1) ರನ್ವಯ ಗರಿಷ್ಠ ಮಿತಿಯಾದ ನಾಲ್ಕು ವರ್ಷಗಳ ಅಧಿಕ ಸೇವೆಯನ್ನು ಶ್ರೀಯುತರ ನಿವೃತ್ತಿ ವೇತನಕ್ಕೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆಇ 520 ವೆಚ್ಚ–11/2009, ದಿನಾಂಕ:17.6.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1734

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ: ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ನಅಇ 582 ಅಪ್ರಾ 2008, ದಿನಾಂಕ:8.9.2008.

2. ಸರ್ಕಾರದ ಆದೇಶ ಸಂಖ್ಯೆ ನಅಇ 55 ಬೆಮಪ್ರಾ 2009, ದಿನಾಂಕ:3.2.2009.

ಪ್ರಸ್ತಾವನೆ:

2008–09ರ ಆಯವ್ಯಯ ಭಾಷಣದಲ್ಲಿ ನಗರಾಭಿವೃದ್ಧಿ ಇಲಾಖೆಯಡಿ ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲು ಘೋಷಿಸಲಾಗಿದ್ದು, ದಿನಾಂಕ:8.9.2008ರಂದು ಪ್ರಾಧಿಕಾರವನ್ನು ರಚಿಸಿ ಆದೇಶವನ್ನು ನಗರಾಭಿವೃದ್ಧಿ ಇಲಾಖೆಯು ಹೊರಡಿಸಿದೆ. ಕರಾವಳಿ ಪ್ರದೇಶದ ಮೂರು ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪಾತ್ರ ಹಾಗೂ ಪ್ರಕಾರ್ಯಗಳನ್ನು ನಿರ್ಧರಿಸುವುದು ಅವಶ್ಯವೆಂದು ಭಾವಿಸಿ, ಈ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆಯು ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತಶಾಖೆಗೆ ಹುದ್ದೆಗಳನ್ನು ಸೃಜಿಸಲು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿ ಆದೇಶವನ್ನು ದಿನಾಂಕ:3.2.2009ರಂದು ಹೊರಡಿಸಿದೆ (ಉಲ್ಲೇಖ2) ದಿನಾಂಕ:3.2.2009ರ ಸದರಿ ಆದೇಶದಲ್ಲಿ ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಶಾಖೆಗೆ ಮತ್ತು ಸದರಿ ಪ್ರಾಧಿಕಾರದ ಕಛೇರಿಗೆ ಹುದ್ದೆಗಳನ್ನು ಸೃಜಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಯೋಜನಾ ಇಲಾಖೆಯ ಆಡಳಿತ ವ್ಯಾಪ್ತಿಗೊಳಪಡಿಸಲು ನಿರ್ಧರಿಸಿ ಪ್ರಸ್ತಾವನೆಯನ್ನು ಸಚಿವ

ಸಂಪುಟದ ಮುಂದೆ ಮಂಡಿಸಲು ನಿರ್ಧರಿಸಲಾಯಿತು., ಪ್ರಾಧಿಕಾರದ ಪಾತ್ರ ಹಾಗೂ ಪ್ರಕಾರ್ಯಗಳ ಬಗ್ಗೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಯೋಇ 97 ಯೋವಿವಿ 2008, ಬೆಂಗಳೂರು, ದಿನಾಂಕ: 6ನೇ ಜುಲೈ 2009

ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಯೋಜನೆ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಡಿಸಿ ಈ ಕೆಳಕಂಡಂತೆ ಪ್ರಾಧಿಕಾರದ ಪಾತ್ರ ಹಾಗೂ ಪ್ರಕಾರ್ಯಗಳನ್ನು ನಿಗಧಿಪಡಿಸಿದೆ.

a. ಸಾರ್ವಜನಿಕ–ಖಾಸಗಿ ಪಾಲುದಾರಿಕೆಯೊಂದಿಗೆ ಈ ಕೆಳಕಂಡಂತೆ ಮೂಲಭೂತ ಸೌಲಭ್ಯಗಳ ಯೋಜನೆಗಳನ್ನು ರೂಪಿಸಲು ಸಲಹೆ ಸೂಚನೆಗಳನ್ನು ನೀಡುವುದು

i ಮೇಲುಸೇತುವೆ ರಸ್ತೆ, ಪ್ರವಾಸೋದ್ಯಮ, ಬಂದರು, ಕೈಗಾರಿಕೆ ಮತ್ತು ತಂತ್ರಜ್ಞಾನ ಪಾರ್ಕ್‌ಗಳನ್ನು ಸಾರ್ವಜನಿಕ–ಖಾಸಗಿ ಪಾಲುದಾರಿಕೆಯೊಂದಿಗೆ ಕಾರ್ಯಸಾಧ್ಯವಾದ (Feasible) ಯೋಜನೆಗಳನ್ನು ಗುರುತಿಸುವುದು.

ii ಸಂಬಂಧಿತ ಆಡಳಿತ ಇಲಾಖೆಗಳ ಸಮಾಲೋಚನೆಯೊಂದಿಗೆ ಕೈಗೊಳ್ಳಬಹುದಾದ ಯೋಜನೆಗಳ ವರದಿಗಳನ್ನು ತಯಾರಿಸುವುದು.

iii ಯೋಜನೆಗಳ ಸಂಪೂರ್ಣ ವರದಿಗಳನ್ನು (Detailed Project Reports) ತಯಾರಿಸಲು ಅನುವು ಮಾಡುವುದು.

b. ತಾಂತ್ರಿಕ–ಆರ್ಥಿಕ ಚಟುವಟಿಕೆಗಳಲ್ಲಿನ ಅಭಿವೃದ್ಧಿ ಸಾಮರ್ಥ್ಯವನ್ನು ಗುರುತಿಸುವುದು ಮತ್ತು ಇಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು.

c. ಕರಾವಳಿ ವಲಯಗಳನ್ನು ಸಂರಕ್ಷಿಸಲು ಮತ್ತು ಅಭಿವೃದ್ಧಿಗೊಳಿಸಲು ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳನ್ನು ರೂಪಿಸುವುದು.

d. ವಿವಿಧ ಕರಾವಳಿ ವಲಯಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಯೋಜನೆಗಳನ್ನು ಗುರುತಿಸಿ ಇಂತಹ ಕಾಮಗಾರಿಗಳನ್ನು ರಾಜ್ಯ ಯೋಜನೆಯಡಿ ಅಳವಡಿಸಲು ಶಿಫಾರಸ್ಸು ಮಾಡುವುದು.

e. ಕರಾವಳಿ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಸಮಯಧಾರಿತ ಉಸ್ತುವಾರಿ ನಡೆಸಲು ಕ್ರಮ ಕೈಗೊಳ್ಳುವುದು.

(2) 2009–10ನೇ ಸಾಲಿನ ಆಯವ್ಯಯದಲ್ಲಿ ರೂ. 2.00ಕೋಟಿಗಳನ್ನು ಒದಗಿಸಲಾಗುವುದು ಹಾಗೂ ಪ್ರಾಧಿಕಾರವು ಕೈಗೊಳ್ಳುವ ಚಟುವಟಿಕೆಗಳ ಆಧಾರದ ಮೇಲೆ ಅನುದಾನವನ್ನು ಹೆಚ್ಚಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1735

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ (1 & 2),

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಕಸಂವಾಪ್ರ 8 ಕೆಓಎಲ್ 2009, ಬೆಂಗಳೂರು, ದಿನಾಂಕ: 10ನೇ ಜುಲೈ 2009

ಕರ್ನಾಟಕ ಸರ್ಕಾರವು ದಿನಾಂಕ:1.1.2009ರಿಂದ ಜಾರಿಗೆ ಬರುವಂತೆ, 2009ನೇ ವರ್ಷವನ್ನು **"ಕನ್ನಡ ಅನುಷ್ಠಾನ ವರ್ಷ 2009"** ಎಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1736

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಮೂಲ ಅಭಿವೃದ್ಧಿ ಸೌಲಭ್ಯ ಯೋಜನೆಗಳಿಗಾಗಿ ಐಡೆಕ್ ಸಂಸ್ಥೆಗೆ ಒದಗಿಸಿರುವ ಪ್ರಾಜೆಕ್ಟ್ ಅಭಿವೃದ್ಧಿ ನಿಧಿಗೆ (PDF) ಹಣ ಒದಗಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಆರ್ಥಿಕ ಅಧಿಕಾರಿ ಹಾಗೂ ಕಂಪನಿ ಕಾರ್ಯದರ್ಶಿ, ಐಡೆಕ್, ಇವರ ಪತ್ರ ಸಂ iDeCK/09-01/513, ದಿನಾಂಕ:2.7.09

ಪ್ರಸ್ತಾವನೆ:

ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಹಾಗೂ ಪಿಪಿಪಿ ಆಧಾರದ ಮೇಲೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಐಡೆಕ್‌ನ್ನು ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾಗಿ ನೇಮಿಸಿದೆ. ಇದರಂತೆ ಯೋಜನಾ ಅಭಿವೃದ್ಧಿಗೆ ಬಂಡವಾಳ ಹಾಗೂ ಯೋಜನಾ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರವು ಐಡೆಕ್‌ಗೆ ಹಣ ಒದಗಿಸಲು ಬದ್ಧವಾಗಿದೆ. ಐಡೆಕ್‌ನ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ರಾಜ್ಯ ಸರ್ಕಾರದ ಪಾಲು ಶೇಕಡಾ 49ರಷ್ಟಿದೆ. ಕರ್ನಾಟಕ ರಾಜ್ಯದ ಮೂಲ ಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಯೋಜನಾ ಅಬಿವೃದ್ಧಿ ನಿಧಿ (ಪಿ.ಡಿ.ಎಫ್)ಗಾಗಿ ಲೆ.ಶೀ. 5465-01-190-1-01-211ರಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ. 200.00 ಲಕ್ಷಗಳನ್ನು ಒದಗಿಸಲಾಗಿದೆ.

ಮೇಲೆ ಓದಲ್ಪಾದ ದಿನಾಂಕ:2.7.09ರ ಪತ್ರದಲ್ಲಿ CFO ಮತ್ತು ಕಂಪನಿ ಕಾರ್ಯದರ್ಶಿ ಐಡೆಕ್ ಇವರು ಐಡೆಕ್ ನ ಪಿಡಿಎಫ್ ಯಡಿಯಲ್ಲಿ ಒದಗಿಸಿರುವ ರೂ., 200.00 ಲಕ್ಷಗಳನ್ನು ಎಂಪಿಕ್ ಅನುಷ್ಠಾನದ ಕ್ಯಾಲೆಂಡರ್ 2009-10ರಡಿಯಲ್ಲಿ ಪ್ರಸ್ತಾಪಿಸಿರುವ 5 ಯೋಜನೆಗಳಾದ ಸಾರಿಗೆ, SWM, Water ಮತ್ತು Waste Water treatment Tourism ಗಳನ್ನು ಅನುಷ್ಠಾನಗೊಳಿಸಲು ನಿಗಧಿಪಡಿಸಿರುವ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲು ಕೋರಿದ್ದಾರೆ, ಐಡೆಕ್‌ನ ಈಗಿನ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಈ ಸಾಲಿನಲ್ಲಿ ಒದಗಣೆ ಮಾಡಿರುವ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲು ಪ್ರಸ್ತಾಪಿಸಲಾಗಿದೆ.

3. ಮೇಲಿನ ಅಂಶಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 57 ಮೂಇವಿ 2009, ಬೆಂಗಳೂರು, ದಿನಾಂಕ: 8ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎಂಪಿಕ್ ಕ್ಯಾಲೆಂಡರ್ 2009-10ರಲ್ಲಿ ಗುರುತಿಸಲಾದ 5 ಯೋಜನೆಗಳು ಅಂದರೆ ಸಾರಿಗೆ, SWM, Water and Waste Water treatment and Tourism ಗಳ ಕುರಿತಂತೆ ನಿಗಧಿಪಡಿಸಲಾದ ಕಾರ್ಯಕ್ರಮಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರೂ. 200.00 ಲಕ್ಷಗಳನ್ನು ಐಡೆಕ್‌ನ PDF ಹಾಗೂ PIF ಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "5465-01-190-1-01-211" ಐಡೆಕ್ ಬಂಡವಾಳ ಇದರಡಿ 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಣೆ ಮಾಡಿರುವ ರೂ. 200.00 ಲಕ್ಷಗಳಿಂದ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಚೀಫ್ ಫೈನಾನ್ಸಿಯಲ್ ಆಫೀಸರ್ ಮತ್ತು ಕಂಪನಿ ಕಾರ್ಯದರ್ಶಿ, ಐಡೆಕ್ ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು, ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ದಿನಾಂಕ:16.5.2008ರ ಆದೇಶ ಸಂ. FD 01 TFP 2008 ರಡಿಯಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ವೇಣುಗೋಪಾಲ್

ಪಿ.ಆರ್. 1739

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ರಚಿಸುವ ಬಗ್ಗೆ.

ಓದಲಾಗಿದೆ: ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ:ಪಿಎಸ್.ಸಿಎಂ/1985/2009, ದಿನಾಂಕ:11.6.2009.

ಪ್ರಸ್ತಾವನೆ:

ಶ್ರೀ ಎ.ಜಿ. ಕೊಡ್ಗಿ ರವರ ನೇತೃತ್ವದಲ್ಲಿ ರಚಿಸಿದ್ದ 3ನೇ ಹಣಕಾಸು ಆಯೋಗವು ಪಂಚಾಯತ್‌ರಾಜ್ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಆರ್ಥಿಕ ವ್ಯವಸ್ಥೆ ಮತ್ತು ಆಡಳಿತದ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಸದರಿ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಪೂರಕವಾಗುವಂತೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಪಂಚಾಯತ್ ರಾಜ್ ಮತ್ತಿತರ ಸಂಸ್ಥೆಗಳನ್ನು ಬಲಪಡಿಸಿ, ಅವುಗಳು ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುತ್ತದೆ. ಕಾರಣ ಈ ದಿಸೆಯಲ್ಲಿ 3ನೇ ಹಣಕಾಸು ಆಯೋಗ ನೀಡಿರುವ ವರದಿಯನ್ನು ಅನುಷ್ಠಾನಕ್ಕೆ ತರುವುದು ಅಷ್ಟೇ ಅವಶ್ಯಕವಾಗಿರುತ್ತದೆ.

3ನೇ ಹಣಕಾಸು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರುಗಳು ಸದರಿ ಆಯೋಗದ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿರುತ್ತಾರೆ. 3ನೇ ಹಣಕಾಸು ಆಯೋಗದ ವರದಿಯನ್ನು ಸಮರ್ಪಕವಾಗಿ ಜಾರಿಗೆ ತರಬೇಕಾಗಿದೆ. ಈ

ವರದಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಶಿಫಾರಸ್ಸು ನೀಡಲು ಒಂದು ಕಾರ್ಯಪಡೆಯನ್ನು ರಚಿಸುವುದು ಸೂಕ್ತವೆಂದು ಕಂಡುಬರುತ್ತದೆ.

ಮಾನ್ಯ ಮುಖ್ಯಮಂತ್ರಿಯವರು ಮೇಲೆ ಓದಲಾದ ದಿನಾಂಕ:11.6.2009ರ ಟಿಪ್ಪಣಿಯಲ್ಲಿ 3ನೇ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ಈ ಕೆಳಗಿನಂತೆ ರಚಿಸಲು ಆದೇಶಿಸಿರುತ್ತಾರೆ.

1. ಶ್ರೀ ಎ.ಜಿ. ಕೊಡ್ಗಿ	ಅಧ್ಯಕ್ಷರು
2. ಡಾ: ಮಹೇಂದ್ರ ಎಸ್. ಕಂಠಿ	ಸದಸ್ಯರು
3. ಟಿ. ತಿಮ್ಮೇಗೌಡ	ಸದಸ್ಯರು
4. ಸರ್ಕಾರದ ಕಾರ್ಯದರ್ಶಿ(ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯ ಕಾರ್ಯದರ್ಶಿ

ಮೇಲೆ ವಿವರಿಸಿರುವಂತೆ ಕಾರ್ಯಪಡೆಯನ್ನು ರಚಿಸಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 72 ಶಿಸನೇ 2009, ಬೆಂಗಳೂರು, ದಿನಾಂಕ: 3ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ 3ನೇ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಕೆಳಕಂಡಂತೆ ಕಾರ್ಯಪಡೆಯನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

1. ಶ್ರೀ ಎ.ಜಿ. ಕೊಡ್ಗಿ	ಅಧ್ಯಕ್ಷರು
2. ಡಾ: ಮಹೇಂದ್ರ ಎಸ್. ಕಂಠಿ	ಸದಸ್ಯರು
3. ಟಿ. ತಿಮ್ಮೇಗೌಡ	ಸದಸ್ಯರು
4. ಸರ್ಕಾರದ ಕಾರ್ಯದರ್ಶಿ(ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ತಿಪ್ಪೇಸ್ವಾಮಿ

ಪಿ.ಆರ್. 1740

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ)

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 13 ಇಇಬಿ 2009, ಬೆಂಗಳೂರು, ದಿನಾಂಕ: 6ನೇ ಆಗಸ್ಟ್ 2009.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 13 ಇಇಬಿ 2009 ದಿನಾಂಕ: 23.3.2009 ರ ಆದೇಶ ಭಾಗದ ಕಂಡಿಕೆ 1 ರಲ್ಲಿ **"ತಕ್ಷಣದಿಂದ ಜಾರಿಗೆ ಬರುವಂತೆ"** ಎಂಬುದರ ಬದಲಾಗಿ **"ನವೆಂಬರ್ 2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ"** ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1520

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಾಸಲ್‌ರಾಕ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/06/ಕಾಸಲ್‌ರಾಕ್/2007/2235 ದಿನಾಂಕ:01/03.10.2007.

2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಕಾರ್ಪೊರೇಟ್ ಹೈಡ್ರೊ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಕಾಸಲ್‌ರಾಕ್ ಬಳಿ ದೂಧ್‌ಸಾಗರ್ ತೊರೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಾಸಲ್‌ರಾಕ್ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ, ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರದ ಆದೇಶ ಸಂಖ್ಯೆ: ಇಎನ್ 382 ಎನ್‌ಸಿಇ 2007, ಬೆಂಗಳೂರು, ದಿನಾಂಕ: 1ನೇ ಜೂನ್ 2009

ಮೆ:: ಕಾರ್ಪೊರೇಟ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಕಾಸಲ್‌ರಾಕ್ ಬಳಿ ದೂಧ್‌ಸಾಗರ್ ತೊರೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಾಸಲ್‌ರಾಕ್ ಕಿರು ಜಲ ವಿದ್ಯುತ್ ಯೋಜನೆಯನ್ನು **(Latitude:** 15°23'49" N Weir, 15°22'57" N PH, **Longitude**: 74°19'06" E Weir, 74°18'32" E PH) ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8\. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ದಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1521 **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ರಿನೆವೆಬಲ್ ಎನರ್ಜಿ ಸಿಸ್ಟಮ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 6.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 39 ಎನ್‌ಸಿಇ 97 (1) ದಿನಾಂಕ: 20.10.1997.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/Vol IV/2008/2028 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 455 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ರಿನೆವೆಬಲ್ ಎನರ್ಜಿ ಸಿಸ್ಟಮ್ಸ್ ಲಿಮಿಟೆಡ್ ಕಂಪನಿಗೆ ಬೆಳಗಾಂ ಜಿಲ್ಲೆಯ ಚಿಕ್ಕೋಡಿಯಲ್ಲಿ 6.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓಧಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 11 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 11 ವರ್ಷ ಕಳೆದರೂ ಇದುವರೆಗೂ ಅನುಷ್ಠಾನದ ನಿಟ್ಟಿನಲ್ಲಿ ಮೆ:: ರಿನೆವೆಬಲ್ ಏನರ್ಜಿ ಸಿಸ್ಟಮ್ಸ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸನ್ನು ಅಭಿವೃದ್ಧಿದಾರರು ದಿನಾಂಕ : 30.12.2008 ರಂದು ಸ್ವೀಕರಿಸಿರುವುದಕ್ಕೆ ಸ್ವೀಕೃತಿಯು ಇಂಧನ ಇಲಾಖೆಗೆ ಬಂದಿರುತ್ತದೆ. ಸದರಿ ಕಾರಣ ಕೇಳುವ ನೋಟೀಸಿಗೆ ಅಭಿವೃದ್ಧಿದಾರರಿಂದ ಯಾವುದೇ ಉತ್ತರ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಇದರಿಂದ ಅಭಿವೃದ್ಧಿದಾರರಿಗೆ ಸದರಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 455 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 39 ಎನ್‌ಸಿಇ 97 (1) ದಿನಾಂಕ:20.10.1997 ರಲ್ಲಿ ಮೆ:: ರಿನೆವೆಬಲ್ ಎನರ್ಜಿ ಸಿಸ್ಟಮ್ಸ್ ಲಿಮಿಟೆಡ್ ಕಂಪನಿಗೆ ಬೆಳಗಾಂ ಜಿಲ್ಲೆಯ ಚಿಕ್ಕೋಡಿಯಲ್ಲಿ 6.5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1522 **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಗದಗ ವಿಂಡ್ ಫಾರ್ಮ್ ಸೊಸೈಟಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ ಆದೇಶ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/08/ಜಿಡಬ್ಲ್ಯುಎಫ್ಎಸ್/2008/504 ದಿನಾಂಕ: 27/28.03.2008.

2. ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಗದಗ ವಿಂಡ್ ಫಾರ್ಮ್ ಸೊಸೈಟಿಗೆ ಗದಗ್ ಜಿಲ್ಲೆಯಲ್ಲಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಇಡಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲ್ಲಿಸಿ ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

ಸರ್ಕಾರಿ ಆದೇಶ ಸಂಖ್ಯೆ: ಇಎನ್ 414 ಎನ್‌ಸಿಇ 2008, ಬೆಂಗಳೂರು, ದಿನಾಂಕ: 12ನೇ ಜೂನ್ 2009

ಮೆ:: ಗದಗ ವಿಂಡ್ ಫಾರ್ಮ್ ಸೊಸೈಟಿಗೆ ಗದಗ್ ಜಿಲ್ಲೆಯಲ್ಲಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗೆ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ : –

Proposed capacity in MW	Near by villages of the proposed area and district.	Geographical area description of the project
(3)	(4)	(5)
10 MW (44 x 225KW)	Magadi, Gojnur, Haldapur, Basapura, Khanapur, Hari, Holapura, Sitalahari **Gadag District.**	The proposed area of the project covers in 2 topo sheets (48M/11 and 48M/12) and situated between Sirhatti and Mulagund. It is a plain terrain & consists of boulders and water bodies. Further, it has presence of power lines, telephone lines and district highways runs between Mulgund and Magadi. And the area appears to have completely agriculture activity and there are no significant peaks. However, the general elevation of the area varies from 660 to 680 meter and is held in the following Geographical co-ordinates: **Latitude:** 15°11'20"- 15°15'58" N **Longitude:** 75°30'00"- 75°32'6" E **Ridge peaks:** 631, 647, 661, 660, 701m Amsl.

1 ಯೋಜನಾಭಿವೃದ್ಧಿದಾರರು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮೆಗಾ ವ್ಯಾಟ್ ಒಂದಕ್ಕೆ ರೂ. 25,000 ದಂತೆ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2 ಈ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳ ಒಳಗೆ ಯೋಜನಾಭಿವೃದ್ಧಿದಾರರು ರೂ.400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.

3 ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು

ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ಸಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

4 ಗಾಳಿ ಚಕ್ರದ ಹಬ್ ಹೈಟನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ
> 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
> 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
> 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
> 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5 ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ದಿ ನಿಯಮಿತಕ್ಕೆ ಸಲ್ಲಿಸಬೇಕು.

6 ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ & ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.

7 ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ/ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ನೀತಿ ನಿಯಮಗಳಿಗನುಗುಣವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್/ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

8 ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

9 ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವಂತೆ ವಿನಂತಿಸಲಾಗಿದೆ.

10 ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11 ಎಲ್ಲಾ ಅಭಿವೃದ್ಧಿದಾರರು ಖುದ್ದಾಗಿ ಯೋಜನೆಗಳನ್ನು ಯಂತ್ರೋಪಕರಣಗಳೊಂದಿಗೆ ಅನುಷ್ಠಾನಗೊಳಿಸಬೇಕು.

12 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1523

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಎಸ್.ಜಿ. ಓದುನವರ್ ಅಂಡ್ ಬ್ರದರ್ಸ್ ಕಂಪನಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ ಆದೇಶ.

ಓದಲಾಗಿದೆ:

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್.ಜಿ.ಒ&ಬಿ/2008/501 ದಿನಾಂಕ:25/28.03.2008.
2. ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಎಸ್.ಬಿ. ಓದುನವರ್ ಅಂಡ್ ಬ್ರದರ್ಸ್ ಕಂಪನಿಗೆ ಗದಗ್ ಜಿಲ್ಲೆಯಲ್ಲಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಇಡಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

ಸರ್ಕಾರಿ ಆದೇಶ ಸಂಖ್ಯೆ: ಇಎನ್ 204 ಎನ್‌ಸಿಇ 2008, ಬೆಂಗಳೂರು, ದಿನಾಂಕ: 12ನೇ ಜೂನ್ 2009

ಮೆ:: ಎಸ್.ಬಿ. ಓದುನವರ್ ಅಂಡ್ ಬ್ರದರ್ಸ್ ಕಂಪನಿಗೆ ಗದಗ್ ಜಿಲ್ಲೆಯಲ್ಲಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗೆ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ:–

Sl. No.	Proposed capacity in MW	Near by villages of the proposed area and district.	Geographical area description of the project
(1)	(2)	(3)	(4)
1.	5 MW (20 x 250kw)	Yelvatti, Magdi, Yattinahalli, Hire Gunjal, Chikka Gunjal, **Gadag District.**	The proposed area is a complete plain and mostly have agriculture activity. Further, it is located on the north of Gajanur and has gentle elevation from 640 to 650 meter and is held in the following Geographical co-ordinates: **Latitude:** 15°11'58"- 15°15'0" N **Longitude:** 75°27'20"- 75°30'0" E **Ridge peaks:** 650, 656, 645m Amsl.
2.	5 MW (20 x 250kw)	**Naregal and kotumachigi Gadag District.**	A plain area is proposed for the project, which is situated between Naregal and Kotumachigi. The average elevation of the proposed area is 640m Amsl. Further, it has presence of power lines and state highways and there are not significant peaks in it. And is held in the following Geographical co-ordinates: **Latitude:** 15°30'40"- 15°34'12" N **Longitude:** 75°46'15"- 75°51'31" E **Ridge peaks:** 646, 651, 645m Amsl.
Total	**10 MW**		

1 ಯೋಜನಾಭಿವೃದ್ಧಿದಾರರು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮೆಗಾ ವ್ಯಾಟ್ ಒಂದಕ್ಕೆ ರೂ. 25,000 ದಂತೆ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2 ಈ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳ ಒಳಗೆ ಯೋಜನಾಭಿವೃದ್ಧಿದಾರರು ರೂ.400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.

3 ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ

ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

4 ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
> 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
> 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
> 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
> 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5 ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6 ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ & ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.

7 ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ/ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ನೀತಿ ನಿಯಮಗಳಿಗನುಗುಣವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್/ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

8 ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

9 ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವಂತೆ ವಿನಂತಿಸಲಾಗಿದೆ.

10 ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ದಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇಳುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11 ಎಲ್ಲಾ ಅಭಿವೃದ್ದಿದಾರರು ಖುದ್ದಾಗಿ ಯೋಜನೆಗಳನ್ನು ಯಂತ್ರೋಪಕರಣಗಳೊಂದಿಗೆ ಅನುಷ್ಠಾನಗೊಳಿಸಬೇಕು.

12 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1524

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಆಜಿ ಇಂಜನಿಯರ್ಸ್ ಕಂಪನಿಯ 12.00 ಮೆಗಾ ವ್ಯಾಟ್ ಸಾಮರ್ಥ್ಯದ ದಾಬೇವಾಡಿ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಧಿಯನ್ನು ವಿಸ್ತರಿಸಿ, ಕಂಪನಿಯ ಹೆಸರನ್ನು ಮೆ:: ದಾಬೇವಾಡಿ ಹೈಡಲ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಂಇ 238 ಎನ್‌ಸಿಇ 2002 ದಿನಾಂಕ: 10.4.2003.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 93 ಎನ್‌ಸಿಇ 2005 ದಿನಾಂಕ: 18.4.2006.

3) ಸರ್ಕಾರಿ ಆದೇಶ ಸಂಖ್ಯೆ: ಇಎನ್ 28 ಎನ್‌ಸಿಇ 2008 ದಿನಾಂಕ: 3.3.2008.

4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ದಾಬೇವಾಡಿ/2009/1100 ದಿನಾಂಕ: 27.2.2009/2.3.2009.

ಪ್ರಸ್ತಾವನೆ :–

1. ಮೆ:: ಅಜಿ ಇಂಜಿನಿಯರ್ಸ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ದಾಬೇವಾಡಿ ಪಂಡ್ರಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದಾಬೆವಾಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

2. ಸದರಿ ಕಂಪನಿಗೆ ಹಂಚಿಕೆ ಮಾಡಲಾದ ಯೋಜನೆಯ ಸಾಮರ್ಥ್ಯವನ್ನು ಸದರಿ ಆದೇಶದಲ್ಲಿ ಸೂಚಿಸಿರುವ ನಿಬಂಧನೆಗಳಿಗೊಳಪಟ್ಟು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ 12.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿದೆ.

3. ಮೇಲೆ ತಿಳಿಸಿದ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲವಕಾಶವನ್ನು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

4. ಮೆ:: ಆಜಿ ಇಂಜಿನಿಯರ್ಸ್ ಕಂಪನಿಯವರು ಈ ಕೆಳಕಂಡ ಕೋರಿಕೆಗಳನ್ನು ಸಲ್ಲಿಸಿರುತ್ತಾರೆಂದು ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡುತ್ತಾ, ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದರಿಂದ ಅಭಿವೃದ್ಧಿದಾರರ ಈ ಕೆಳಗೆ ನಮೂದಿಸಿದ ಕೋರಿಕೆಯನ್ನು ಪರಿಗಣಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ :–

ಅ) ಕಂಪನಿಯ ಹೆಸರನ್ನು ಮೆ:: ಆಜಿ ಇಂಜಿನಿಯರ್ಸ್‌ನಿಂದ ಮೆ:: ದಾಬೇವಾಡಿ ಹೈಡಲ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು.

ಆ) ಯೋಜನೆಯ ಮುಕ್ತಾಯಕ್ಕಾಗಿ ಕಾಲಾವಕಾಶವನ್ನು ಮುಂದಿನ ಎರಡು ವರ್ಷಗಳಿಗೆ ವಿಸ್ತರಿಸಲು.

5. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 70 ಎನ್‌ಸಿಇ 2009, ಬೆಂಗಳೂರು, ದಿನಾಂಕ: 12ನೇ ಜೂನ್ 2009

ಮೇಲೆ ವಿವರಿಸಲಾದ ಸಂದರ್ಭದಲ್ಲಿ ಮೆ:: ಅಜಿ ಇಂಜಿನಿಯರ್ಸ್ ಕಂಪನಿಯ ಹೆಸರನ್ನು ಮೆ:: ದಾಬೇವಾಡಿ ಹೈಡಲ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ, ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ದಾಬೆವಾಡಿ ಪಂಡ್ರಿ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 12.00 ಮೆಗಾ ವ್ಯಾಟ್ ಸಾಮರ್ಥ್ಯದ ದಾಬೆವಾಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಟ್ಟಕಡೆಯದಾಗಿ ದಿನಾಂಕ: 31.3.2010 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಇನ್ನು ಮುಂದೆ ಯಾವುದೇ ಕಾರಣಕ್ಕೂ ಕಾಲಾವಕಾಶ ವಿಸ್ತರಿಸಲಾಗುವುದಿಲ್ಲವೆಂಬ ನಿಬಂಧನೆಗೊಳಪಡಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1525

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ನಗರವನ್ನು 'ಸೌರ ನಗರ'ವನ್ನಾಗಿ ಮಾಡಲು ಅಧಿಕಾರಿಗಳ ನಾಮನಿರ್ದೇಶನ ಕುರಿತು.

ಓದಲಾಗಿದೆ: ದಿನಾಂಕ:03–01–2009ರಂದು ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಇಂಧನ ಸಂರಕ್ಷಣೆ ಬಗ್ಗೆ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:

ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಸೌರ ನಗರದ ಕಾರ್ಯಕ್ರಮದ ಅಡಿಯಲ್ಲಿ ಹುಬ್ಬಳ್ಳಿ–ಧಾರವಾಡ, ಮೈಸೂರು ಮತ್ತು 10 ಲಕ್ಷ ಜನಸಂಖ್ಯೆಗಿಂತ ಕಡಿಮೆ ಇರುವ ಇತರ ಮೂರು ನಗರಗಳನ್ನು 'ಸೌರ ನಗರ'ಗಳನ್ನಾಗಿ ಮಾಡಲು ಯೋಜನೆಯನ್ನು ಹಮ್ಮಿಕೊಂಡಿದ್ದು, ಪ್ರಸ್ತುತ ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ನಗರಗಳನ್ನು ಸೌರ ನಗರವನ್ನಾಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ವಿದ್ಯುತ್ ಸರಬರಾಜು ಕಂಪನಿಗಳ ಬೆಂಬಲದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ, ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಸಹಾಯಧನ ಪಡೆಯಲು ಅನುಕೂಲವಾಗುವಂತೆ ಯೋಜನೆಯ ವಿವರವಾದ ವರದಿ ಹಾಗೂ 'ಸೌರ ನಗರ' ಮುಂಚೂಣಿ ಯೋಜನೆಗಳನ್ನು (Pilot Projects) ತ್ವರಿತಗತಿಯಲ್ಲಿ ಅನುಷ್ಠಾನ ಮಾಡಲು ಮೇಲುಸ್ತುವಾರಿಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರುಗಳನ್ನು ಅನುಕ್ರಮವಾಗಿ, ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ಮಹಾನಗರ ಪಾಲಿಕೆಗಳ 'ಸೌರ ನಗರ' ಮುಂಚೂಣಿ ಯೋಜನೆಗಳಿಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲು ಮೇಲೆ ಓದಲಾದ ಸಭೆಯ ನಡವಳಿಯಲ್ಲಿ ತಿಳಿಸಲಾಗಿದೆ.

ಅದರಂತೆ ಈ ಕೆಳಗಿನ ಆದೇಶ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 374 ಎನ್‌ಸಿಇ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ಮಹಾನಗರ ಪಾಲಿಕೆಗಳ 'ಸೌರ ನಗರ' ಮುಂಚೂಣಿ ಯೋಜನೆಗಳ ಮೇಲುಸ್ತುವಾರಿಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರನ್ನು ಹುಬ್ಬಳ್ಳಿ ನಗರಕ್ಕೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರನ್ನು ಮೈಸೂರು ನಗರಕ್ಕೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ನೋಡಲ್ ಅಧಿಕಾರಿಗಳು ಸದರಿ ಯೋಜನೆಗಳ ಪ್ರಗತಿಯ ಕುರಿತು ಕಾಲಕಾಲಕ್ಕೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1526

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಜಿ.ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ 205.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ ಆದೇಶ.

ಓದಲಾಗಿದೆ:

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಜಿಇಎಂ–ಎಲ್‌ಪಿಎಲ್/2007/2697 ದಿನಾಂಕ:26.11.2007/ 14.12.2007.
2. ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಜಿ.ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್‌ಗೆ ಬಿಜಾಪುರ, ಗುಲ್ಬರ್ಗಾ, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 205.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ಜಿ.ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್‌ಗೆ 205.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 447 ಎನ್‌ಸಿಇ 2007, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ಜಿ.ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್‌ಗೆ ಬಿಜಾಪುರ, ಗುಲ್ಬರ್ಗಾ, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 205.00ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗೆ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ :–

Sl. No.	Proposed capacity in MW	Near by villages of the proposed area and district.	Geographical area description of the project
1.	20.40	Savalsung, Sattalgere and Inchagere, **Bijapur District.**	The proposed location is situated on the lefthand side of Bijapur Solapur highway and situated around Savalsung, Sattalgere and Inchagere. The area consists of non-contiguous independent low-rise hillocks and has externals features as stony wastes. And it has several peaks & area is held in the following geographical co-ordinates: **Latitude**: 17°5' - 17°11'2" N **Longitude**: 75°38'37"- 75°45' E **Ridge peaks:** 543, 630, 636, 634, 641,637,635 644 and 531 m Amsl.
2.	55 .00	Sankanur, Dandagunda, Hirehallur & Balagera **Gulbarga District.**	The proposed area is a large plateau mostly oriented in the East West direction and situated in Yadagiri R.F. The area is spread around Sankanur, Dandagunda, Herehallur & Balagera. It appears that it is a mixture of dense scrub, open mix jungle and open scrub. The area has few peaks and is covered in the following geographical co-ordinates: **Latitude**: 16°55' - 16°59'20" N **Longitude**: 77°3'2"- 77°10'55" E **Ridge peaks:** 582, 59,567,579,566,575 & 577 m Amsl
3	21.00	Itnal & Majuchandrge **Belgaum District.**	The proposed location is high-rise plain and mostly oriented in Northwest- Southeast direction and spread across Itnal, Majuchandrge. The area may be cultivated and portion of it is covered as stony waste and it has few peaks. The area is covered in the following geographical co-ordinates: **Latitude**: 16°1' 30"- 16°4'2" N **Longitude**: 75°3'57"- 75°7'4" E **Ridge peaks:** 680, 690,696,683,694 & 687 m Amsl
4	45.00	**Batkurke & Solapura Belgaum District**.	The identified area is a large plateau and widely spread in the Northwest – Southeast direction and located on the south & southwest of Batkurke & Solapura villages. The area has numbers of villages and it consists of stony waste patches in it. The part of area comes under RF. However, the total area appears to be non-cultivable. Further, the area has numbers of peaks is covered in the following geographical co-ordinates: **Latitude**: 16°0'52' - 16°7'30" N **Longitude**: 75°15'- 75°33'33" E **Ridge peaks:** 664, 676, 666, 680, 686, 654, 651 & 653 m Amsl

Sl. No.	Proposed capacity in MW	Near by villages of the proposed area and district.	Geographical area description of the project
5	38.6	**Bableshwar & Mulvad Bijapur District.**	The proposed location is a ground level plain with higher general elevation and has spread in Northwest-southeast direction and is located between Bableshwar & Mulvad towns. The area appears to be open scrub and has gravel waste. The area has few peaks and is covered in the following geographical co-ordinates: **Latitude**: 16°34'7"- 16°40' N **Longitude**: 75°35' - 75° 45' E **Ridge peaks:** 628, 638, 631, 629, 632, 595, 609, 616 & 627 m amsl
6	10.00	Basavana Bagewadi **Bijapur District**	The proposed location is a ground level plain located on the North of Basavana Bagewadi. The area appears to be cultivated and has a single peak. The area is covered in the following geographical co-ordinates: **Latitude**: 16°35'- 16°37'23" N **Longitude**: 75°53' - 75° 59' E **Ridge peaks:** 653 m amsl.
7	15.00	Pelurahatti, Muchchukunte **Chitradurga District.**	The identified area is high-rise plain, oriented in northwest-southeast direction situated on south & west of Pelurahatti, Muchchukunte. Further it has 2 peaks and the area is covered in the following geographical co-ordinates: **Latitude**: 14°17'20"- 14°19'11" N **Longitude**: 76°29'53" - 76°32' 14"E **Ridge peaks:** 681 & 673 m amsl.
Total	**205MW**		

1 ಯೋಜನಾಭಿವೃದ್ಧಿದಾರರು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮೆಗಾ ವ್ಯಾಟ್ ಒಂದಕ್ಕೆ ರೂ. 25,000 ದಂತೆ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2 ಈ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳ ಒಳಗೆ ಯೋಜನಾಭಿವೃದ್ಧಿದಾರರು ರೂ.400ರ ಛಾಪಾ ಕಾಗದದಲ್ಲಿ ಸರ್ಕಾರಿದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.

3 ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ

ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

4 ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
> 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
> 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
> 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
> 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5 ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6 ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ & ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.

7 ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ/ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ನೀತಿ ನಿಯಮಗಳಿಗನುಗುಣವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್/ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

8 ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

9 ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವಂತೆ ವಿನಂತಿಸಲಾಗಿದೆ.

10 ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11 ಎಲ್ಲಾ ಅಭಿವೃದ್ಧಿದಾರರು ಖುದ್ದಾಗಿ ಯೋಜನೆಗಳನ್ನು ಯಂತ್ರೋಪಕರಣಗಳೊಂದಿಗೆ ಅನುಷ್ಠಾನಗೊಳಿಸಬೇಕು.

12 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1527

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಶ್ರೀದೇವಿ ಟ್ರೆಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 8.00 ಮೆಗಾ ವ್ಯಾಟ್ ಸಾಮರ್ಥ್ಯದ ವಿ.ವಿ.ಎನ್.ಎಲ್. ಸ್ಟೇಷನ್ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 237 ಎನ್‌ಸಿಇ 2002 ದಿನಾಂಕ: 12.3.2003.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಹೆಚ್‌ಪಿ/08/2029 ದಿನಾಂಕ: 2/3.12.2008.

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 522 ಎನ್‌ಸಿಇ 2008 ದಿನಾಂಕ: 27.12.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ :: ಶ್ರೀದೇವಿ ಟ್ರೆಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 8.00 ಮೆಗಾ ವ್ಯಾಟ್ ಸಾಮರ್ಥ್ಯದ ವಿ.ವಿ.ಎನ್.ಎಲ್. ಸ್ಟೇಷನ್ ಕಿರು ಜಲ ವಿದ್ಯುತ್ ಯೋಜನೆಯನ್ನು ಮಂಡ್ಯ ಜಿಲ್ಲೆಯ ಶಿಂಷಾಪುರ ಗ್ರಾಮದ ಬಳಿ ಒಡಂಬಡಿಕೆ ಮಾಡಿಕೊಂಡ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿ ಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 6 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷ ಕಳೆದರೂ ಇದುವರೆಗೂ ಅನುಷ್ಠಾನನಿಟ್ಟಿನಲ್ಲಿ ಮೆ:: ಶ್ರೀದೇವಿ ಟ್ರೆಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such address in this number. Hence returned to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 6 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ:: ಶ್ರೀದೇವಿ ಟ್ರೆಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 522 ಎನ್‌ಸಿಇ 2008, ಬೆಂಗಳೂರು, ದಿನಾಂಕ: 8ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 237 ಎನ್‌ಸಿಇ 2002 ದಿನಾಂಕ:12.3.2003 ರಲ್ಲಿ ಮೆ :: ಶ್ರೀದೇವಿ ಟ್ರೆಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 8.00 ಮೆಗಾ ವ್ಯಾಟ್ ಸಾಮರ್ಥ್ಯದ ವಿ.ವಿ.ಎನ್.ಎಲ್. ಸ್ಟೇಷನ್ ಕಿರು ಜಲ ವಿದ್ಯುತ್ ಯೋಜನೆಯನ್ನು ಮಂಡ್ಯ ಜಿಲ್ಲೆಯ ಶಿಂಷಾಪುರ ಗ್ರಾಮದ ಬಳಿ ಮಾಡಿರುವ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1528   **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಸಾಯಿ ಲೀಲಾ ಪವರ್ ಪ್ರೈವೇಟ್ ಲಿಮಿಟೆಡ್‌ಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡಿಯಡ್ಕ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಗುಂಡಿಯಡ್ಕ/2007/2204 ದಿನಾಂಕ: 6.8.2007/ 1.10.2007.
2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಸಾಯಿ ಲೀಲಾ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಸುಳ್ಯದಿಂದ 6.5 ಕಿ.ಮೀ. ಪಶ್ಚಿಮಕ್ಕೆ ಪಾಯಸ್ವಿನಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡಿಯಡ್ಕ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಇಡಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ಸಾಯಿ ಲೀಲಾ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡಿಯಡ್ಕ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

ಸರ್ಕಾರದ ಆದೇಶ ಸಂಖ್ಯೆ: ಇಎನ್ 376 ಎನ್‌ಸಿಇ 2007, ಬೆಂಗಳೂರು, ದಿನಾಂಕ: 30ನೇ ಜೂನ್ 2009

ಮೆ:: ಸಾಯಿ ಲೀಲಾ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಸುಳ್ಯದಿಂದ 6.5 ಕಿ.ಮೀ. ಪಶ್ಚಿಮಕ್ಕೆ ಪಾಯಸ್ವಿನಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡಿಯಡ್ಕ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1529

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ

ವಿಷಯ: ಮೆ:: ಜಮ್ ಲ್ಯಾಬೊರೆಟರಿಸ್ (ಪಿ) ಲಿಮಿಟೆಡ್ ಇವರಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ ಆದೇಶ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಜೆಇಎಂ–ಎಲ್‌ಪಿಎಲ್/2007/1652 ದಿನಾಂಕ: 26/31.7.2007.

2. ದಿನಾಂಕ: 13.01.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ಲೆಕ್ಕಪರಿಶೋಧನೆ) ದೂ.ಸಂ.: 26604493 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕಪರಿಶೋಧನೆ–1), ದೂ.ಸಂ.: 26610372 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ಲೆಕ್ಕಪರಿಶೋಧನೆ–1), ದೂ.ಸಂ.: 26610372 (ಲೆಕ್ಕಪರಿಶೋಧನೆ–1 ವಿಷಯಕ್ಕೆ ಸಂಬಂಧಿಸಿದಂತೆ).
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು (ಲೆಕ್ಕಪರಿಶೋಧನೆ–2) ದೂ.ಸಂ.: 26608579 (ಲೆಕ್ಕಪರಿಶೋಧನೆ–2 ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಹಿರಿಯ ಲೆಕ್ಕ ಪರಿಶೋಧಕರು (ಲೆಕ್ಕಪರಿಶೋಧನೆ–2), ದೂ.ಸಂ.: 26608579 (ಲೆಕ್ಕಪರಿಶೋಧನೆ–2ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ಲೆಕ್ಕಪರಿಶೋಧನೆ–2), ದೂ.ಸಂ.: 26608579 (ಲೆಕ್ಕಪರಿಶೋಧನೆ–2 ವಿಷಯಕ್ಕೆ ಸಂಬಂಧಿಸಿದಂತೆ).
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು (ತನಿಖೆ ಮತ್ತುಪರಿಶೀಲನಾ ಘಟಕ) ದೂ.ಸಂ.: 26604502 (ತನಿಖಾ ಮತ್ತುಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ)	1. ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಸಹಾಯಕ ನಿರ್ದೇಶಕರು –1 (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ) 2. ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಸಹಾಯಕ ನಿರ್ದೇಶಕರು –2 (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕದ ವಿಷಯಕ್ಕೆ ಸಂಬಂಧಿಸಿದಂತೆ)	ಸಹಕಾರ ಸಂಘಗಳ ಲೆಕ್ಕಪರಿ ಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ), ದೂ.ಸಂ.: 26507307 (ತನಿಖೆ ಮತ್ತು ಪರಿಶೀಲನಾ ಘಟಕ ವಿಷಯಕ್ಕೆ ಸಂಬಂಧಿಸಿದಂತೆ).

4(1)(ಬಿ) (xvii)

ನಿಗದಿಪಡಿಸಿದ ಇತರೆ ಮಾಹಿತಿಗಳು:

ನಿರ್ದೇಶನಾಲಯದಲ್ಲಿ ಸಾರ್ವಜನಿಕ ಕುಂದುಕೊರತೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ), ಇವರನ್ನು ಜನಸ್ಪಂದನಾ ಕೋಶದ ಸಾರ್ವಜನಿಕ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರಂತೆ ಕಂಡಿಕೆ (4)(1)(ಬಿ) (xvi) ರಲ್ಲಿ ತಿಳಿಸಿದ ಅಧಿಕಾರಿಗಳನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ, ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಅಪೀಲು ವಿಚಾರಣಾ ಪ್ರಾಧಿಕಾರಿಯನ್ನಾಗಿ ಗೊತ್ತುಪಡಿಸಲಾಗಿದೆ. ನಿರ್ದೇಶನಾಲಯದಲ್ಲಿ ಮಹಿಳಾ ಉದ್ಯೋಗಿಗಳ ಕುಂದುಕೊರತೆ ನಿವಾರಣಾ ಸಮಿತಿ ರಚಿಸಲಾಗಿದ್ದು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು (ಆಡಳಿತ ಮತ್ತು ಸಿಬ್ಬಂದಿ). ಇವರನ್ನು ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲಾಗಿದೆ. ನಿರ್ದೇಶನಾಲಯದಲ್ಲಿ ಪ್ರತಿ ತಿಂಗಳ ಮೊದಲನೇ ಹಾಗೂ ಮೂರನೇ ಶನಿವಾರವನ್ನು ಸಾರ್ವಜನಿಕ ಕುಂದುಕೊರತೆ ನಿವಾರಣಾ ದಿನವನ್ನಾಗಿ ನಿಗದಿಪಡಿಸಲಾಗಿದ್ದು, ಸಂಬಂಧಿಸ ಜಂಟಿ ನಿರ್ದೇಶಕರು ಸಾರ್ವಜನಿಕ ಕುಂದು ಕೊರತೆಗಳನ್ನು ಆಲಿಸುತ್ತಾರೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು
(ಆಡಳಿತ ಮತ್ತು ಸಿಬ್ಬಂದಿ)

ಪಿ.ಆರ್.474

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ,
ಬೆಂಗಳೂರು ಹಾಗೂ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ.

ಡಿಟಿಸಿಆರ್/49/2006-07, ದಿನಾಂಕ:13ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂ:03/2006-07. ದಿನಾಂಕ:28-06-2007.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು.	ತಲೆ ಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:28.06.2007 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ನಾಗಮಂಗಲ ತಾಲ್ಲೂಕು ನಾಗಮಂಗಲ-ಬೆಳ್ಳೂರು ರಸ್ತೆ, ಅಂಚೆಚಿಟ್ಟನಹಳ್ಳಿ ಗ್ರಾಮದಿಂದ ಸುಮಾರು ಅರ್ಧ ಕಿ.ಮೀ ದೂರದಲ್ಲಿರುವ ಸೇತುವೆಗೆ ಹೊಂದಿಕೊಂಡಂತೆ ಇರುವ ತಿಬ್ಬದ ಕೆಳಗೆ ಅಕ್ರಮವಾಗಿ 570.000 ಲೀ ಮದ್ಯಸಾರವನ್ನು ಟಾಟಾ ಸುಮೋ ನೊಂದಣಿ ಸಂಖ್ಯೆ:ಕೆಎ-05/ಎನ್-8932 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 34, 38(ಎ), ಮತ್ತು43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯಸಾರವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 03/2006-07 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯಸಾರದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ಹಾಗೂ ವಾಹನದ "ಬಿ" ವಹಿಯ ಪ್ರಕಾರ ಜಪ್ತುಪಡಿಸಿರುವ ವಾಹನದ ಇಂಜಿನ್ ಸಂಖ್ಯೆಗೂ ಹಾಗೂ ಚಾಸಿಸ್ ಸಂಖ್ಯೆಗೂ ವ್ಯತ್ಯಾಸವಿರುವುದರಿಂದ, ವಾಹನ ಹಾಗೂ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:04.09.2007 ಮತ್ತು 21.04.2008 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ಮದ್ಯಸಾರವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:02.01.2008 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ದಕ್ಷಿಣ) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂ: ಕೆಎ-05/ಎನ್-8932ಗೆ ಸಂಬಂಧಿಸಿದಂತೆ ಎಸ್.ಮಣಿವಸಕನ್, 2ನೇ ಕ್ರಾಸ್, ಚಂದ್ರೋದಯ ಕಲ್ಯಾಣ ಮಂಟಪದ ಎದುರು, ಭವಾನಿ ನಗರ, ಬನ್ನೇರುಘಟ್ಟ ರಸ್ತೆ, ಡಿ.ಆರ್.ಕಾಲೇಜು, ಬೆಂಗಳೂರು ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:27.09.2008 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮತ್ತು ಅಬಕಾರಿ ನಿರೀಕ್ಷಕರು, ನಾಗಮಂಗಲ ವಲಯ ಇವರ ಮೂಲಕ ನೀಡಲಾಗಿತ್ತು.

ಕಾರಣ ಕೇಳುವ ನೋಟೀಸ್ ನೊಂದಣಿ ಅಂಚೆ ಮೂಲಕ ಹಾಗೂ ಅಬಕಾರಿ ನಿರೀಕ್ಷಕರ ಮೂಲಕ ವಾಹನದ ಮಾಲೀಕರಿಗೆ ಜಾರಿಯಾಗಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಾಟಾ ಸುಮೋ ನೊಂದಣಿ ಸಂಖ್ಯೆ: ಕೆಎ-05/ಎನ್-8932 ವಾಹನದಲ್ಲಿ ದಿನಾಂಕ:28.06.2007 ರಂದು ಅಕ್ರಮವಾಗಿ ಮದ್ಯಸಾರ ಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಹಾಗೂ ಇಂತಹ ಘೋರ ಕೃತ್ಯಕ್ಕಾಗಿಯೇ ಬಳಸಲು ವಾಹನದ ಚಾರ್ಸಿ ನಂಬರ್ ಮತ್ತು ಇಂಜಿನ್ ನಂಬರ್‌ಗಳನ್ನು ಬದಲಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/49/2006-07, ದಿನಾಂಕ:13ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ:

03/.006–07, ದಿನಾಂಕ:28.06.2007 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಟಾಟಾ ಸುಮೋ ನೊಂದಣಿ ಸಂಖ್ಯೆ: ಕೆಎ-05/ಎನ್-8932 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:13.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸ ಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್.339 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/241/2007–08, ದಿನಾಂಕ:13ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು,ಮದ್ದೂರು ವಲಯ, ಮದ್ದೂರು ಇವರ ಪ್ರ.ಮಾ.ವ ಸಂ:40/2007–08, ದಿನಾಂಕ:16.06.2008

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು,	ಚನ್ನೇಗೌಡ ಬಿನ್ ರಾಮೇಗೌಡ,
ಮದ್ದೂರು ವಲಯ, ಮದ್ದೂರು	22 ವರ್ಷ, ಹನಕೆರೆ ಗ್ರಾಮ, ಮಂಡ್ಯ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:16.06.2008 ರಂದು ಸಂಜೆ:05-30 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸೋಮನಹಳ್ಳಿ ಗ್ರಾಮದ ಬಳಿ ಇರುವ ಮಲೈ ಮಹದೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಕಾಲೋನಿಗೆ ಹೋಗುವ ತಿರುವು ರಸ್ತೆಯಲ್ಲಿ ಅಕ್ರಮವಾಗಿ 17.280 ಲೀ ನಕಲಿ ಮದ್ಯವನ್ನು ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ:ಸಿಎನ್ಎನ್-6535 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13(ಎಫ್), 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32,34,38(ಎ),43 ಮತ್ತು 43 (ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 40/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಭಾರತದ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿಲ್ಲದಿರುವುದರಿಂದ ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:02.02.2009 ರ ಪತ್ರದ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:17.02.2009 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಮಂಡ್ಯ ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಸಿಎನ್ಎನ್-6535 ಗೆ ಸಂಬಂಧಿಸಿದಂತೆ ಶ್ರೀ ಸಿ.ರಾಜೇಗೌಡ ಬಿನ್ ದಡಿಯಪ್ಪ ಅಲಿಯಾಸ್ ಬೋರಯ್ಯ, ಹನಕೆರೆ ಗ್ರಾಮ ಮತ್ತು ಅಂಚೆ, ಮಂಡ್ಯ ತಾಲ್ಲೂಕು. ಮಂಡ್ಯ ಜಿಲ್ಲೆ ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:17.02.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮತ್ತು ಅಬಕಾರಿ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಮುಖಾಂತರ ಜಾರಿಮಾಡಲಾಗಿದೆ. ಇದುವರೆವಿಗೂ ಲಿಖಿತವಾಗಿ ಅಥವಾ ಖುದ್ದಾಗಿ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ: ಸಿಎನ್ಎನ್-6535 ವಾಹನದಲ್ಲಿ ದಿನಾಂಕ:16.06.2008 ರಂದು ಅಕ್ರಮವಾಗಿ ಮದ್ಯಸಾರ ಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/241/2007-08, ದಿನಾಂಕ:13ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಪ್ರ.ಮಾ.ವ ಸಂಖ್ಯೆ:40/2007-08, ದಿನಾಂಕ:16.06.2008 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ: ಸಿಎನ್ಎನ್-6535 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:13.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್.340 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/108/2008-09, ದಿನಾಂಕ:13ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು,ಮದ್ದೂರು ವಲಯ. ಮದ್ದೂರು ಇವರ ಪ್ರ.ಮಾ.ವ ಸಂ:08/2008-09, ದಿನಾಂಕ:21.10.2008.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು	ತಲೆಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:21.10.2008 ರಂದು ರಾತ್ರಿ 08-30 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಅರೆಕಲ್‌ದೊಡ್ಡಿ ಗ್ರಾಮದ ಬಳಿ, ಕಾಳಘಟ್ಟಕ್ಕೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ 10.800 ಲೀ ಮದ್ಯವನ್ನು ಬಜಾಜ್‌ಚೇತಕ್ ಸ್ಕೂಟರ್ ಸಂಖ್ಯೆ:ಕೆಎ-11/ಹೆಚ್-9669 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 38(ಎ) ಮತ್ತು 43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 08/2008-09 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:30.01.2009 ಮತ್ತು 06.02.2009 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:17.02.2009 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಮಂಡ್ಯ ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-11/ಹೆಚ್-9669 ಗೆ ಸಂಬಂಧಿಸಿದಂತೆ ಶ್ರೀ ಚಂದ್ರಪ್ಪ ಬಿನ್ ಚನ್ನಪ್ಪ, ಮಾರಗೋಡನಹಳ್ಳಿ, ಮಂಡ್ಯ ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:17.02.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮತ್ತು ಅಬಕಾರಿ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಮುಖಾಂತರ ಜಾರಿಮಾಡಲಾಗಿದೆ. ಇದುವರೆವಿಗೂ ಲಿಖಿತವಾಗಿ ಅಥವಾ ಖುದ್ದಾಗಿ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಹೆಚ್-9669 ವಾಹನದಲ್ಲಿ ದಿನಾಂಕ:21.10.2008 ರಂದು ಅಕ್ರಮವಾಗಿ ಮದ್ಯಸಾರ ಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ,

ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/108/2008-09, ದಿನಾಂಕ:13ನೇ ಮಾರ್ಚ್, 2009

ಡಾ: ವೈ.ಮಂಜುನಾಥ್. ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಪ್ರ.ಮಾ.ವ ಸಂಖ್ಯೆ:08/2008-09, ದಿನಾಂಕ:21.10.2008 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-11/ಹೆಚ್-9669 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:13.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್.341 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ

ಡಿಟಿಸಿಆರ್/81/2007-08, ದಿನಾಂಕ:20ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ನಂ-2, ಜಾರಿ ಮತ್ತು ತನಿಖೆ, ಮಳವಳ್ಳಿ ತಾಲ್ಲೂಕು ಇವರ ಪ್ರ.ಮಾ.ವ ಸಂ: 06/2007-08, ದಿನಾಂಕ:15.11.2007.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು ನಂ-2, ಮಳವಳ್ಳಿ ವಲಯ, ಮಳವಳ್ಳಿ.	ಡಿ.ಎಸ್.ಮಹೇಶ್ ಬಿನ್ ನಾಗರಾಜು, 30 ವರ್ಷ, ಒಕ್ಕಲಿಗರ ಜನಾಂಗ, ಪೆಟ್ಟಿ ಅಂಗಡಿ ವ್ಯಾಪಾರಿ, ದುಗ್ಗನಹಳ್ಳಿ, ಕಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:15.11.2007 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಮಳವಳ್ಳಿ ತಾಲ್ಲೂಕು, ಮಳವಳ್ಳಿ - ಹಿಟ್ಟನಹಳ್ಳಿ ಕೊಪ್ಪಲು ರಸ್ತೆಯ ಬಸವನಗುಡಿ ಬಸ್‌ನಿಲ್ದಾಣದ ಹತ್ತಿರ ಅಕ್ರಮವಾಗಿ 18.360 ಲೀ. ನಕಲಿ ಮದ್ಯವನ್ನು ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ: ಸಿಎಟಿ-8351 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13 (ಎಫ್) ಮತ್ತು 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 43 ಮತ್ತು 43 (ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ನಕಲಿ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 06/2007-08 ರಂತೆ ಮೊಕದ್ದಮೆಯನ್ನು ದಾಖಿಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಭಾರತದ ಮಾನಕ ಬ್ಯೂರೋಗೆ ಅನುಗುಣವಾಗಿರುವುದಿಲ್ಲ ಮತ್ತು ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:10.12.2007 ಮತ್ತು 19.03.2009 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ನಕಲಿ ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:02.01.2008 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಬೆಂಗಳೂರು (ಸೆಂಟ್ರಲ್) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಸಿಎಟಿ-8351 ಗೆ ಸಂಬಂಧಿಸಿದಂತೆ ಶ್ರೀ ಕೆ.ಜಿಳಿಗಯ್ಯ ಬಿನ್ ಕೆಂಪಯ್ಯ, ಅಂಚೆ ಪೆಟ್ಟಿಗೆ ಸಂಖ್ಯೆ:7750, ಮಾಮೂಲ್‌ಪೇಟೆ, ಬೆಂಗಳೂರು-560053 ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:27.02.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮತ್ತು ಅಬಕಾರಿ ನಿರೀಕ್ಷಕರು, ಮಳವಳ್ಳಿ ವಲಯ, ಮಳವಳ್ಳಿ ಇವರ ಮುಖಾಂತರ ಜಾರಿ ಮಾಡಿಸಿದ್ದು, ನೊಂದಣಿ ಅಂಚೆ ಹಿಂತಿರುಗಿ ಬಂದಿರುತ್ತದೆ. ತನಿಖಾಧಿಕಾರಿಗಳು ವಾಹನದ ಮಾಲೀಕರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವುದಿಲ್ಲವೆಂದು ತಿಳಿಸಿ ನೋಟೀಸ್‌ನ್ನು ಹಿಂತಿರುಗಿಸಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ: ಸಿಎಟಿ-8351 ವಾಹನದಲ್ಲಿ ದಿನಾಂಕ:15.11.2007 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/81/2007-08, ದಿನಾಂಕ:20ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು,ನಂ-2, ಜಾರಿ ಮತ್ತು ತನಿಖೆ, ಮಳವಳ್ಳಿ ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ:06/2007-08, ದಿನಾಂಕ:15.11.2007 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಸೂಪರ್ ಸ್ಕೂಟರ್ ಸಂಖ್ಯೆ: ಸಿಎಟಿ-8351 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:20.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.342

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ ಡಿಟಿಸಿಆರ್/37/2007-08, ದಿನಾಂಕ:13ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂ: 03/2007-08, ದಿನಾಂಕ:20.08.2007.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು.	ತಲೆ ಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು

ದಿನಾಂಕ:20.08.2007 ರಂದು ರಾತ್ರಿ 10-45 ಗಂಟೆ ಸಮಯದಲ್ಲಿ ನಾಗಮಂಗಲ-ಮಂಡ್ಯ ಮುಖ್ಯರಸ್ತೆಯ ದೇವಲಾಪುರ ಹ್ಯಾಂಡ್ ಪೋಸ್ಟ್ ಹತ್ತಿರ ಅಕ್ರಮವಾಗಿ 5,054.400 ಲೀ ನಕಲಿ ಮದ್ಯ ವನ್ನು ಅಶೋಕ್ ಲೈಲ್ಯಾಂಡ್ ಲಾರಿ ನೊಂದಣಿ ಸಂಖ್ಯೆ: ಟಿಎನ್-09/ಎಕೆ-2849 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32,34, 38(ಎ), ಮತ್ತು43 ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ನಕಲಿ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ:03/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ಹಾಗೂ ವಾಹನದ "ಬಿ" ವಹಿಯ ಪ್ರಕಾರ ಮೇಲ್ಕಂಡ ನೊಂದಣಿ ಸಂಖ್ಯೆಯು ಬಜಾಜ್ ಸಿಟಿ-100 ವಾಹನದ್ದಾಗಿದ್ದು ಲಾರಿಯ ಇಂಜಿನ್ ಸಂಖ್ಯೆ ಮತ್ತು ಚಾಸಿಸ್ ಸಂಖ್ಯೆ ಪರಿಶೀಲಿಸಲಾಗಿ ಇಂಜಿನ್ ಸಂಖ್ಯೆ:DEF329F1133642 ಮತ್ತು ಚಾಸಿಸ್ ಸಂಖ್ಯೆ: ALCO 1611 ALEL265075 AL310/129ALEL 761751671 ಎಂದು ನಮೂದಾಗಿದ್ದು, ವಾಹನವನ್ನು ಜಪ್ತು ಪಡಿಸಿದ ಸಮಯದಲ್ಲಿ ದೊರೆತ ದಾಖಲಾತಿಯಲ್ಲಿ ಚಾಸಿಸ್ ಸಂಖ್ಯೆ: LBE462346 ಮತ್ತು ಇಂಜಿನ್ ಸಂಖ್ಯೆ: LBE 341235 ಎಂದು ನಮೂದಾಗಿದ್ದು ವಾಹನದ ನೊಂದಣಿಯು ನಕಲಿ ಮತ್ತು ವಾಹನದ ಮಾಲೀಕತ್ವದ ಬಗ್ಗೆ ಖಚಿತವಾಗಿ ಕಂಡುಹಿಡಿಯಲು ಸಾಧ್ಯವಾಗದ ಕಾರಣ ವಾಹನ ಹಾಗೂ ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:04.09.2007 ಮತ್ತು 17.05.2008ರ ಪತ್ರಗಳ ಮೂಲಕ ಕೋರಿರುತ್ತಾರೆ.

ಆದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ನಕಲಿ ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:22.10.2007 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಸ್ಟಾಟಿಸ್ಟಿಕ್ಸ್, ಚೆನ್ನೈ-05 ಇವರಿಗೆ ಪತ್ರ ಬರೆಯಲಾಗಿ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಸತ್ಯಾಂಶವಿರುವುದು ಕಂಡು ಬಂದಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಅಶೋಕ್ ಲೈಲ್ಯಾಂಡ್ ಲಾರಿ ನಕಲಿ ನೊಂದಣಿ ಸಂಖ್ಯೆ: ಟಿಎನ್-09/ಎಕೆ-2849 ವಾಹನದಲ್ಲಿ ದಿನಾಂಕ:20.08.2007 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಹಾಗೂ ಇಂತಹ ಘೋರ ಕೃತ್ಯಕ್ಕಾಗಿಯೇ ಬಳಸಲು ವಾಹನದ ನೊಂದಣಿ ಸಂಖ್ಯೆಯನ್ನು ಬದಲಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಠಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/37/2007-08, ದಿನಾಂಕ:13ನೇ ಮಾರ್ಚ್, 2009

ಡಾಃ ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ: 03/2007-08, ದಿನಾಂಕ:20.08.2007 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಅಶೋಕ್ ಲೈಲ್ಯಾಂಡ್ ಲಾರಿ ನಕಲಿ ನೊಂದಣಿ ಸಂ: ಟಿಎನ್-09/ಎಕೆ-2849 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:13.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸ ಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್.343 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/200/2007-08, ದಿನಾಂಕ:3ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂ: 15/2007-08, ದಿನಾಂಕ:03.05.2008.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು	ನಿಂಗರಾಜು ಬಿನ್ ಚನ್ನೇಗೌಡ, ವಯಸ್ಸು 30, ಒಕ್ಕಲಿಗ ಜನಾಂಗ, ಕೆಲಗೆರೆ ಗ್ರಾಮ, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು

ಪ್ರಕರಣದ ಮುಖ್ಯಾಂಶಗಳು

ದಿನಾಂಕ:03.05.2008 ರಂದು ಮಧ್ಯರಾತ್ರಿ 1-30 ಗಂಟೆ ಸಮಯದಲ್ಲಿ ನಾಗಮಂಗಲ ತಾಲ್ಲೂಕು ಹುಲಿಕೆರೆ ಗ್ರಾಮದ ಆದಿಚುಂಚನಗಿರಿ ಪ್ರೌಢಶಾಲೆ ಗೇಟ್ ಬಳಿ ಅಕ್ರಮವಾಗಿ 17.280 ಲೀ ನಕಲಿ ಮದ್ಯವನ್ನು ಬಜಾಜ್ ಪ್ಲಾಟಿನ (ನೊಂದಣಿ ಸಂಖ್ಯೆ ಇರುವುದಿಲ್ಲ) ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32,34, 38(ಎ), ಮತ್ತು43 ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ನಕಲಿ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ:15/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಭಾರತ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿಲ್ಲದಿರುವುದರಿಂದ ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ

ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:19.05.2008 ಮತ್ತು 24.10.2008 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ನಕಲಿ ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:10.06.2008ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಅರ್ಪಿತ ಆಟೋ ಮೊಬೈಲ್ಸ್ ಕಂಪನಿ, ಹಾಸನ ಇವರು ದಿನಾಂಕ:07.12.2006 ರಂದು ನೀಡಿರುವ ಸೇಲ್ ಸರ್ಟಿಫಿಕೆಟ್ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹಾಸನ ಇವರು ನೀಡಿರುವ ತಾತ್ಕಾಲಿಕ ನೊಂದಣಿ ಪತ್ರದ (ತಾತ್ಕಾಲಿಕ ನೊಂದಣಿ ಸಂಖ್ಯೆ:ಕೆಎ-13/ಟಿಆರ್-2473) ಪರಿಶೀಲನೆಯಿಂದ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಪ್ಲಾಟಿನ ವಾಹನದ ಮಾಲೀಕರು ಪ್ರಕರಣದ ಆರೋಪಿಯಾದ ಕೆ.ಸಿ.ನಿಂಗರಾಜು ಬಿನ್ ಚನ್ನೇಗೌಡ, ಮಲ್ಲಾಳಹಳ್ಳಿ ಪೋಸ್ಟ್, ಕೆಲೆಗೆರೆ ಗ್ರಾಮ, ಕಸಬಾ ಹೋಬಳಿ, ನಾಗಮಂಗಲ ತಾಲ್ಲೂಕು ಇವರೆಂದು ತಿಳಿದಿದು, ಸದರಿಯವರಿಗೆ ದಿನಾಂಕ:01.12.2008 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮೂಲಕ ಹಾಗೂ ಮತ್ತು ಅಬಕಾರಿ ನಿರೀಕ್ಷಕರು, ನಾಗಮಂಗಲ ವಲಯ ಇವರ ಮೂಲಕ ಜಾರಿ ಮಾಡಲಾಗಿದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಪ್ಲಾಟಿನ ತಾತ್ಕಾಲಿಕ ನೊಂದಣಿ ಸಂಖ್ಯೆ: ಕೆಎ-13/ಟಿಆರ್-2473 ವಾಹನದಲ್ಲಿ ದಿನಾಂಕ:03.05.2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಹಾಗೂ ಇಂತಹ ಘೋರ ಕೃತ್ಯಕ್ಕಾಗಿಯೇ ಬಳಸುವ ಉದ್ದೇಶದಿಂದ ವಾಹನ ಖರೀದಿಸಿದ ದಿನಾಂಕ:07.12.2006 ರಿಂದ ಮೊಕದ್ದಮೆ ದಾಖಲಾದ ದಿನಾಂಕ:03.05.2008 ರವರೆಗೆ ಅಂದರೆ ಸುಮಾರು 1 ವರ್ಷ 6 ತಿಂಗಳು ವಾಹನದ ನೊಂದಣಿಯನ್ನು ಮಾಡಿಸದೇ ಬಳಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/200/2007-08, ದಿನಾಂಕ:3ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ನಾಗಮಂಗಲ ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ: 15/2007-08, ದಿನಾಂಕ:03.05.2008ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಪ್ಲಾಟಿನ ತಾತ್ಕಾಲಿಕ ನೊಂದಣಿ ಸಂ:ಕೆಎ-13/ಟಿಆರ್-2473 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:03.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.344

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ

ಡಿಟಿಸಿಆರ್/106/2007-08, ದಿನಾಂಕ:26ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ ಸಂ: 16/2007-08, ದಿನಾಂಕ:30.01.2008.

ಪಿರ್ಯಾದುದಾರರು	ಆರೋಪಿ
ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು	1) ಕೆ.ಪಿ.ಸತೀಶ್ ಬಿನ್ ಪಾಪಣ್ಣ, 23 ವರ್ಷ, ಒಕ್ಕಲಿಗ ಜನಾಂಗ, ಕೋಣಸಾಲೆ ಗಾಮ, ಮದ್ದೂರು ತಾಲ್ಲೂಕು 2)ನಂದೀಶ್ ಬಿನ್ ಬಸವರಾಜು, 25 ವರ್ಷ, ಒಕ್ಕಲಿಗ ಜನಾಂಗ, ಸೊಳ್ಳೇಪುರ ಗಾಮ, ಮದ್ದೂರು ತಾಲ್ಲೂಕು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:30.01.2008 ರಂದು ಬೆಳಗ್ಗಿನ ಜಾವ 3-00 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಕೋಣಸಾಲೆ ಗ್ರಾಮದ ವಿಶ್ವೇಶ್ವರಯ್ಯ ಸರ್ಕಲ್ ದಕ್ಷಿಣ ರಸ್ತೆಯಲ್ಲಿರುವ ಮೊದಲನೇ ಆರೋಪಿಗೆ ಸೇರಿದ ಹಳೆ ಗುಡಿಸಲಿನಲ್ಲಿ ಅಕ್ರಮವಾಗಿ 34.560 ಲೀ ನಕಲಿ ಮದ್ಯ, ಸುಮಾರು 10.000 ಲೀ ಮದ್ಯಸಾರ, ಹಾಗೂ ನಕಲಿ ಮದ್ಯ ತಯಾರಿಸಲು ಬಳಸುವ ಇತರೆ ಅಬಕಾರಿ ವಸ್ತುಗಳನ್ನು ಬಜಾಜ್ ಚೇತಕ್ ಸ್ಕೂಟರ್ ನೊಂದಣಿ ಸಂಖ್ಯೆ: ಕೆಎ-02/ಕ್ಯೂ-6283 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಫಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13 ಮತ್ತು 14ರ ರೀತ್ಯಾ ಅಪರಾಧ ವಾಗಿದ್ದು, ಇದೇ ಕಾಯ್ದೆಯ ಕಲಂ 32, 38(ಎ), 43 ಮತ್ತು 43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ, ನಕಲಿ ಮದ್ಯ, ಮದ್ಯಸಾರ ಹಾಗೂ ನಕಲಿ ಮದ್ಯ ತಯಾರಿಸಲು ಬಳಸುವ ಇತರೆ ವಸ್ತುಗಳನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ:16/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಭಾರತದ ಮಾನಕ ಬ್ಯೂರೋಗೆ ಅನುಗುಣವಾಗಿರುವುದಿಲ್ಲ ಮತ್ತು ನಕಲಿ ಮದ್ಯವಾಗಿರುತ್ತವೆ, ಹಾಗೂ ಮದ್ಯಸಾರದಲ್ಲಿ ಈಥೈಲ್ ಆಲ್ಕೋಹಾಲ್ ಕಂಡುಬಂದಿದ್ದು ಅದು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ವಾಹನ, ನಕಲಿ ಮದ್ಯ, ಮದ್ಯಸಾರ ಹಾಗೂ ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:19.02.2008, 21.04.2008 ಮತ್ತು 22.08.2008 ರ ಪತ್ರಗಳ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು, ನಕಲಿ ಮದ್ಯ, ಮದ್ಯಸಾರ ಮತ್ತು ಇತರೆ ವಸ್ತುಗಳನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:01.03.2008 ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಬೆಂಗಳೂರು (ಪಶ್ಚಿಮ) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ನೊಂದಣಿ ಸಂಖ್ಯೆ: ಕೆಎ-02/ಕ್ಯೂ-6283 ಗೆ ಸಂಬಂಧಿಸಿದಂತೆ ಶ್ರೀ ಎಂ.ಪಿ.ವೆಂಕಟೇಶ್ ಬಿನ್ ಈರಯ್ಯ, ನಂ.294, 4ನೇ ಮೈನ್, 1ನೇ ಹಂತ, ಮಂಜುನಾಥನಗರ, ಬೆಂಗಳೂರು-10 ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:22.07.2008, 08.09.2008 ಹಾಗೂ 16.03.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆ ಮತ್ತು ಅಬಕಾರಿ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಮುಖಾಂತರ ಜಾರಿ ಮಾಡಿಸಲಾಗಿದ್ದು, ನೊಂದಣಿ ಅಂಚೆ ಹಿಂತಿರುಗಿ ಬಂದಿರುತ್ತದೆ. ತನಿಖಾಧಿಕಾರಿಗಳು ವಾಹನದ ಮಾಲೀಕರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವುದಿಲ್ಲವೆಂದು ತಿಳಿಸಿ ನೋಟೀಸ್‌ನ್ನು ಹಿಂತಿರುಗಿಸಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ನೊಂದಣಿ ಸಂಖ್ಯೆ: ಕೆಎ-02/ಕ್ಯೂ-6283 ವಾಹನದಲ್ಲಿ ದಿನಾಂಕ:30.01.2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹಾಗೂ ನಕಲಿ ಮದ್ಯ ತಯಾರಿಸಲು ಬಳಸುವ ವಸ್ತುಗಳನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/106/2007-08, ದಿನಾಂಕ:26ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ:16/2007-08, ದಿನಾಂಕ:30.01.2008 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ನೊಂದಣಿ ಸಂಖ್ಯೆ:ಕೆಎ-02/ಕ್ಯೂ-6283 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:26.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.317

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ ಡಿಟಿಸಿಆರ್/227/2007-08, ದಿನಾಂಕ:26ನೇ ಮಾರ್ಚ್, 2009

ಆರಕ್ಷಕ ಉಪ ನಿರೀಕ್ಷಕರು, ಟೌನ್ ಪೋಲೀಸ್ ಠಾಣೆ, ಕೆ.ಆರ್.ಪೇಟೆ ಇವರ ಮೊಕದ್ದಮೆ ಸಂಖ್ಯೆ: 82/2008, ದಿನಾಂಕ:27.04.2008.

ಪಿರ್ಯಾದುದಾರರು	**ಆರೋಪಿಗಳು**
ಆರಕ್ಷಕ ಉಪ ನಿರೀಕ್ಷಕರು, ಟೌನ್ ಪೋಲೀಸ್ ಠಾಣೆ, ಕೆ.ಆರ್.ಪೇಟೆ.	1) ಮಧು ಬಿನ್ ಹನುಮಂತಪ್ಪ, ಅಗಹಾರ, ಕೆ.ಆರ್.ಪೇಟೆ ಟೌನ್ 2) ಗಣೇಶ್ (ಉ) ಪದೀಪ್ ಬಿನ್ ದೇವರಾಜು, ಅಗಹಾರ, ಕೆ.ಆರ್.ಪೇಟೆ ಟೌನ್. 3) ಉಮೇಶ ಬಿನ್ ರಾಮಣ್ಣ, ಅಗಹಾರ, ಕೆ.ಆರ್.ಪೇಟೆ ಟೌನ್ 4) ರಾಜ ಬಿನ್ ರಾಮಯ್ಯ, ಅಗಹಾರ, ಕೆ.ಆರ್.ಪೇಟೆ ಟೌನ್ 5) ಅರುಣ್ (ಉ) ಮಂಜು ಬಿನ್ ಹನುಮಂತಪ್ಪ, ಅಗ್ರಹಾರ, ಕೆ.ಆರ್.ಪೇಟೆ ಟೌನ್ 6) ರಮೇಶ ಬಿನ್ ನಂಜುಂಡಶೆಟ್ಟಿ, ಅಕ್ಕಿಹೆಬ್ಬಾಳು ಗಾಮ, ಕೆ.ಆರ್.ಪೇಟೆ ತಾಲ್ಲೂಕು 7) ಕುಮಾರ ಬಿನ್ ದೇವರಾಜೇಗೌಡ, ಅಗಹಾರ, ಕೆ.ಅರ್.ಪೇಟೆ ಟೌನ್.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:26.04.2008 ರಂದು ರಾತ್ರಿ 12-00 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ಟೌನ್‌ನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಿಂಭಾಗದ ಹೊಸಹೊಳಲು ಗ್ರಾಮದ ರಾಮಣ್ಣ ಬಿನ್ ಉಗ್ರಯ್ಯ ಇವರಿಗೆ ಸೇರಿದ ತೋಟದ ಮನೆ ಸರ್ವೆ ನಂ.117 ರಲ್ಲಿ ಅಕ್ರಮವಾಗಿ 876.720 ಲೀ ನಕಲಿ ಮದ್ಯ, ಕೆರಾಮಲ್, ಕಾರ್ಕ್ಸ್‌ಗಳು, ಖಾಲಿ ಬಾಟಲುಗಳು, ಅಡಿಸಿವ್ ಲೇಬಲ್‌ಗಳು, ಬಾಟಲಿಗೆ ಅಂಟಿಸುವ ಲೇಬಲ್‌ಗಳು ಹಾಗೂ ಇತರೆ ನಕಲಿ ಮದ್ಯ ತಯಾರಿಸುವ ವಸ್ತುಗಳನ್ನು ಶ್ರೀ ರಕ್ಷಾ ಅಂಬುಲೆನ್ಸ್ ಹೆಸರಿನ ಟೆಂಪೋ ಟ್ರಾವಲರ್ ನೊಂದಣಿ ಸಂಖ್ಯೆ:ಕೆಎ-01/ಎ-6028 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 34 ರ ರೀತ್ಯಾ ಶಿಕ್ಷಾರ್ಹ ವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂ: 82/2008 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಈ ಪ್ರಕರಣದಲ್ಲಿ ಜಪ್ತು ಪಡಿಸಿದ ಶ್ರೀ ರಕ್ಷಾ ಅಂಬುಲೆನ್ಸ್ ಹೆಸರಿನ ಟೆಂಪೋ ಟ್ರಾವಲರ್ ನೊಂದಣಿ ಸಂಖ್ಯೆ: ಕೆಎ-01/ಎ-6028 ವಾಹನದ ತಾತ್ಕಾಲಿಕ ಬಿಡುಗಡೆ ಕೋರಿ ಶ್ರೀ ಪೀಟರ್ ಜೋಸೆಫ್ ಬಿನ್ ರಾಜ, 30 ವರ್ಷ, ಮನೆ ನಂ.161, ಚನ್ನಸಂದ್ರ ಲೇ ಔಟ್, ಆರ್.ಆರ್. ನಗರ, ಬೆಂಗಳೂರು-60 ಇವರ ಜಿ.ಪಿ.ಎ ಹೋಲ್ಡರ್ ಎನ್ನಲಾದ ಶ್ರೀ ವೆಂಕಟೇಶ ಬಿನ್ ಅಂಜನಪ್ಪ, ಜೆಟ್ಟಿಪಾಳ್ಯ, ಚನ್ನೇನಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-30 ಇವರು ಮೇಲ್ಕಂಡ ವಾಹನದ ಆರ್.ಸಿ ಪುಸ್ತಕದ ನಕಲು ಪ್ರತಿ ಹಾಗೂ ಇತರೆ ದಾಖಲಾತಿಗಳೊಡನೆ ದಿನಾಂಕ:03.06.2008 ರಂದು ಅವರ ವಕೀಲರ ಮೂಲಕ ಅರ್ಜಿ ಸಲ್ಲಿಸಿದ್ದರು.

ಸದರಿ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಈ ಪ್ರಾಧಿಕಾರದ ಆದೇಶ ಸಂಖ್ಯೆ:ಡಿಟಿಸಿಆರ್ ಸಂಖ್ಯೆ:227/2007-08, ದಿನಾಂಕ:10.06.2008 ರಲ್ಲಿ ಪ್ರಕರಣದಲ್ಲಿ ಜಪ್ತು ಪಡಿಸಿರುವ ವಾಹನವನ್ನು ಅರ್ಜಿದಾರರ ಮಧ್ಯಂತರ ವಶಕ್ಕೆ ನೀಡಿದ್ದಲ್ಲಿ ಜನರ ಜೀವ ರಕ್ಷಣೆಗೆ ಉಪಯೋಗಿಸುವ ಬದಲು ಪುನಃ ಇಂತಹುದೇ ಅಪರಾಧಕ್ಕೆ ಬಳಸುವ, ವರ್ಗಾವಣೆ ಮಾಡುವ ಹಾಗೂ ಅದರ ಬಣ್ಣ, ರಚನೆ, ವಗೈರೆ ಬದಲಾಯಿಸುವ ಸಾಧ್ಯತೆ ಇರುವುದರಿಂದ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿತ್ತು. ಹಾಗೂ ಸದರಿ ಆದೇಶವನ್ನು ಶ್ರೀ ಪೀಟರ್ ಜೋಸೆಫ್ ಬಿನ್ ರಾಜ, ಮನೆ ನಂ.161, ಚನ್ನಸಂದ್ರ ಲೇ ಔಟ್, ಆರ್.ಆರ್.ನಗರ, ಬೆಂಗಳೂರು-60 ಇವರಿಗೆ ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ನೊಂದಣಿ ಅಂಚೆಯು ವಾಹನದ ಮಾಲೀಕರು ಮೇಲ್ಕಂಡ ವಿಳಾಸದಲ್ಲಿ ಲಭ್ಯವಿಲ್ಲದೇ ಇರುವುದರಿಂದ ಹಿಂತಿರುಗಿ ಬಂದಿರುತ್ತದೆ.

ತದನಂತರದಲ್ಲಿ ವಾಹನದ ಮಾಲೀಕರ ಜಿ.ಪಿ.ಎ ಹೋಲ್ಡರ್ ಎನ್ನಲಾದ ಶ್ರೀ ವೆಂಕಟೇಶ್ ಬಿನ್ ಅಂಜನಪ್ಪ ಇವರು ಈ ಪ್ರಾಧಿಕಾರದ ದಿನಾಂಕ:10.06.2008ರ ಆದೇಶದ ವಿರುದ್ಧ ಮಾನ್ಯ ಫಾಸ್ಟ್ ಟ್ರ್ಯಾಕ್ ಕೋರ್ಟ್-ನಂ.4, ಮಂಡ್ಯ ಇಲ್ಲಿ ಕ್ರಿಮಿನಲ್ ಅಪೀಲ್ ಸಂಖ್ಯೆ: 59/2008ನ್ನು ದಾಖಲಿಸಿದ್ದು, ಮಾನ್ಯ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯದ ದಿನಾಂಕ:04.07.2008ರ

ಆದೇಶದಲ್ಲಿ ಪ್ರಕರಣದಲ್ಲಿ ಜಪ್ತಾದ ವಾಹನವು ಅಂಬುಲೆನ್ಸ್ ಸೇವೆಯಲ್ಲಿ ನೊಂದಾ ಯಿಸದೇ ಇರುವ ಬಗ್ಗೆ ಪೂರಕ ದಾಖಲಾತಿಗಳನ್ನು ಹಾಜರು ಪಡಿಸದೇ ಇರುವ ಹಿನ್ನಲೆ ಯಲ್ಲಿ ಹಾಗೂ ಅಂಬುಲೆನ್ಸ್ ವಾಹನವನ್ನು ಜನರ ಜೀವರಕ್ಷಣೆಗೆ ಉಪಯೋಗಿಸುವ ಬದಲು ಅಕ್ರಮ ನಕಲಿ ಮದ್ಯವನ್ನು ಸಾಗಾಣಿಕೆ ಮಾಡಲು ಉಪಯೋಗಿಸುತ್ತಿದ್ದುದನ್ನು ಪ್ರಸ್ತಾಪಿಸಿ, ವಾಹನವನ್ನು ತಾತ್ಕಾಲಿಕ ಬಿಡುಗಡೆ ಮಾಡಿದ್ದಲ್ಲಿ ಮತ್ತೆ ಇಂತಹುದೇ ಅಕ್ರಮ ಚಟುವಟಿಕೆಗಳಿಗೆ ಬಳಸುವ ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ ಈ ಪ್ರಾಧಿಕಾರದ ದಿನಾಂಕ:10.06.2008 ರ ಆದೇಶವನ್ನು ದೃಢಪಡಿಸಿರುತ್ತಾರೆ. ಹಾಗೂ ಅರ್ಜಿದಾರರ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಪ್ರಕರಣದಲ್ಲಿ ಜಪ್ತು ಪಡಿಸಿರುವ ವಾಹನ, ನಕಲಿ ಮದ್ಯ ಹಾಗೂ ನಕಲಿ ಮದ್ಯ ತಯಾರಿಸಲು ಬಳಸುವ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:23.03.2009 ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜ್ಞಾನಭಾರತಿ, ಮೈಸೂರು ರಸ್ತೆ, ಬೆಂಗಳೂರು-5600059 ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-01/ಎ-6028ಗೆ ಸಂಬಂಧಿಸಿದಂತೆ ಶ್ರೀ ಪೀಟರ್ ಜೋಸೆಫ್ ಜಿನ್ ರಾಜ, ಮನೆ ನಂ.161, ಚನ್ನಸಂದ್ರ ಲೇ ಔಟ್, ಆರ್.ಆರ್.ನಗರ, ಬೆಂಗಳೂರು -60 ಇವರು ವಾಹನದ ಮಾಲೀಕರೆಂದು ತಿಳಿದಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಶ್ರೀ ರಕ್ಷಾ ಅಂಬುಲೆನ್ಸ್ ಹೆಸರಿನ ಟೆಂಪೋ ಟ್ರಾವಲರ್ ನೊಂದಣಿ ಸಂಖ್ಯೆ:ಕೆಎ-01/ಎ-6028 ವಾಹನದಲ್ಲಿ ದಿನಾಂಕ:26.04.2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹಾಗೂ ನಕಲಿ ಮದ್ಯ ತಯಾರಿಸಲು ಬಳಸುವ ವಸ್ತುಗಳಾದ ಕೆರಾಮಲ್, ಖಾಲಿ ಬಾಟಲುಗಳು, ಕಾರ್ಕ್‌ಗಳು, ಅಡಿಸಿವ್ ಲೇಬಲ್‌ಗಳು, ಬಾಟಲಿಗೆ ಅಂಟಿಸುವ ಲೇಬಲ್‌ಗಳು ಹಾಗೂ ಇತರೆ ವಸ್ತುಗಳನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗ ಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ, ನಕಲಿ ಮದ್ಯ, ಮತ್ತು ನಕಲಿ ಮದ್ಯ ತಯಾರಿಸಲು ಬಳಸುವ ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/227/2007-08, ದಿನಾಂಕ:26ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ಉಪ ನಿರೀಕ್ಷಕರು, ಟೌನ್ ಪೋಲೀಸ್ ಠಾಣೆ, ಕೆ.ಆರ್.ಪೇಟೆ ಇವರ ಪ್ರ.ಮಾ.ವ ಸಂಖ್ಯೆ:82/2008, ದಿನಾಂಕ:27.04.2008ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಶ್ರೀ ರಕ್ಷಾ ಅಂಬುಲೆನ್ಸ್ ಹೆಸರಿನ ಟೆಂಪೋ ಟ್ರಾವಲರ್ ನೊಂದಣಿ ಸಂಖ್ಯೆ: ಕೆಎ-01/ಎ-6028 ವಾಹನ, 876.720 ಲೀ ನಕಲಿ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಖಾಲಿ ಬಾಟಲುಗಳನ್ನು ಹಾಗೂ ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:26.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್.318 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ ಡಿಟಿಸಿಆರ್/176/2007-08, ದಿನಾಂಕ:30ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು-ನಂ.2,ಕೆ.ಆರ್.ಪೇಟೆ ವಲಯ, ಕೆ.ಆರ್. ಪೇಟೆ ಇವರ ಪ್ರ.ಮಾ.ವ ಸಂಖ್ಯೆ: 03/2007-08, ದಿನಾಂಕ:25.04.2008.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು- ನಂ.2 ಕೆ.ಆರ್.ಪೇಟೆ ವಲಯ, ಕೆ.ಆರ್.ಪೇಟೆ.	ತಲೆ ಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:25.04.2008 ರಂದು ರಾತ್ರಿ 08-00 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನ ಅಶೋಕನಗರ-ಬೂಕನಕೆರೆಗೆ ಹೋಗುವ ಮಧ್ಯಭಾಗದಲ್ಲಿರುವ ಸರ್ಕಲ್‌ನಲ್ಲಿ ಅಕ್ರಮವಾಗಿ 5.400 ಲೀ ಮದ್ಯವನ್ನು ಬಜಾಜ್ ಚೇತಕ್

ಸ್ಕೂಟರ್ ನೊಂದಣಿ ಸಂಖ್ಯೆ: ಕೆಎ-11/ಇ-9463 ವಾಹನ ದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಫಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 34, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂ:03/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:23.03.2009ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಡ್ಯ ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-11/ಇ-9463 ಗೆ ಸಂಬಂಧಿಸಿದಂತೆ ಶ್ರೀ ಸಿ.ಎಲ್.ಗುರುರಾಜ್ ಬಿನ್ ಲಿಂಗೇಗೌಡ, ಚಿಂದಗಿರಿಕೊಪ್ಪಲು, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:16-03-2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ಹಾಗೂ ಅಬಕಾರಿ ನಿರೀಕ್ಷಕರು, ಕೆ.ಆರ್.ಪೇಟೆ ವಲಯ ಇವರ ಮುಖಾಂತರ ಜಾರಿ ಮಾಡಿಸಲಾಗಿದೆ. ಇದುವರೆವಿಗೂ ಲಿಖಿತವಾಗಿ ಅಥವಾ ಖುದ್ದಾಗಿ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ನೊಂದಣಿ ಸಂಖ್ಯೆ: ಕೆಎ-11/ಇ-9463 ವಾಹನದಲ್ಲಿ ದಿನಾಂಕ:25.04.2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ ಮತ್ತು ಮದ್ಯವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯ ಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/176/2007-08, ದಿನಾಂಕ:30ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು-ನಂ.2, ಕೆ.ಆರ್.ಪೇಟೆ ವಲಯ, ಕೆ.ಆರ್.ಪೇಟೆ ಇವರ ಪ್ರ.ಮಾ.ವ ಸಂಖ್ಯೆ:03/2007-08, ದಿನಾಂಕ:25.04.2008ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ನೊಂದಣಿ ಸಂಖ್ಯೆ: ಕೆಎ-11/ಇ-9463 ವಾಹನ, 5.400 ಲೀ. ಮದ್ಯವನ್ನು (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಹಾಗೂ ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:30.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸ ಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.319

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/78/2008-09, ದಿನಾಂಕ:25ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು,ಕೆ.ಆರ್.ಪೇಟೆ ವಲಯ, ಕೆ.ಆರ್.ಪೇಟೆ ಇವರ ಪ್ರ.ಮಾ.ವ ಸಂಖ್ಯೆ:07/2007-08, ದಿನಾಂಕ:28.04.2008.

ಫಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಕೆ.ಆರ್.ಪೇಟೆ ವಲಯ, ಕೆ.ಆರ್.ಪೇಟೆ.	ತಲೆ ಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28.04.2008 ರಂದು ರಾತ್ರಿ 7-30 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನ ಗಾಣದಹಳ್ಳಿ-ಮಾದಪುರ ರಸ್ತೆಯಲ್ಲಿ ಅಕ್ರಮವಾಗಿ 5.580 ಲೀ ಮದ್ಯವನ್ನು ಹೀರೋ ಹೋಂಡಾ ನೊಂದಣಿ ಸಂಖ್ಯೆ:ಕೆಎ-06/ಹೆಚ್-3546 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದು ದನ್ನು ಪತ್ತೆ ಮಾಡಿದ ಫಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 34, 38(ಎ) ಮತ್ತು43 ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂ: 07/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:23.03.2009 ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತುಮಕೂರು ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-06/ಹೆಚ್-3546ಗೆ ಸಂಬಂಧಿಸಿದಂತೆ ಶ್ರೀ ಪರಶನಾಥ ಕೋ ಆಪರೇಟಿವ್ ಸೊಸೈಟಿ, ತುಮಕೂರು ಜಿಲ್ಲೆ, ತುಮಕೂರು ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:18.02.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ಕಾರಣ ಕೇಳುವ ನೋಟೀಸ್ ಮೇಲ್ಕಂಡ ವಿಳಾಸದಲ್ಲಿ ಸ್ವೀಕೃತಿಯಾಗಿದ್ದು, ಇದುವರೆವಿಗೂ ಲಿಖಿತವಾಗಿ ಅಥವಾ ಖುದ್ದಾಗಿ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಹೀರೋ ಹೋಂಡಾ ಸಂಖ್ಯೆ: ಕೆಎ-06/ಹೆಚ್-3546 ವಾಹನದಲ್ಲಿ ದಿನಾಂಕ:28.04.2008 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನ ವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆ ಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಠಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ ಮತ್ತು ಮದ್ಯವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯ ಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/78/2008-09, ದಿನಾಂಕ:25ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಕೆ.ಆರ್.ಪೇಟೆ ವಲಯ, ಕೆ.ಆರ್.ಪೇಟೆ ಇವರ ಪ್ರ.ಮಾ.ವ ಸಂಖ್ಯೆ:07/2007-08, ದಿನಾಂಕ:28.04.2008 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಹೀರೋ ಹೋಂಡಾ ನೊಂದಣಿ ಸಂಖ್ಯೆ: ಕೆಎ-06/ಹೆಚ್-3546 ವಾಹನ ಮತ್ತು 5.580 ಲೀ. ಮದ್ಯವನ್ನು (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:25.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್.320 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ

ಡಿಟಿಸಿಆರ್/176/2008-09, ದಿನಾಂಕ:30ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು ಇವರ ಪ್ರ.ಮಾ.ವ ಸಂಖ್ಯೆ:17/2008-09, ದಿನಾಂಕ:16.01.2009.

ಪಿರ್ಯಾದುದಾರರು	ಆರೋಪಿ
ಅಬಕಾರಿ ಉಪ ನಿರೀಕ್ಷಕರು, ಮದ್ದೂರು ವಲಯ, ಮದ್ದೂರು.	ಸಿ.ಎಸ್.ಕುಮಾರ್ ಬಿನ್ ಲಿಂಗೇಗೌಡ (ಉ) ಕಳಾರೀಗೌಡ, 19 ವರ್ಷ, ಒಕ್ಕಲಿಗರ ಜನಾಂಗ, ತೊರೆಚಾಕನಹಳ್ಳಿ ಗ್ರಾಮ, ಸಿ.ಎ.ಕೆರೆ ಹೋಬಳಿ, ಮದ್ದೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:16.01.2009 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕಿನ ಸಿ.ಎ.ಕೆರೆ ಹೋಬಳಿ ತೊರೆಚಾಕನಹಳ್ಳಿ ಗ್ರಾಮದಿಂದ ಕೆ.ಬೆಳ್ಳೂರು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ 17.280 ಲೀ ನಕಲಿ ಮದ್ಯವನ್ನು ಟಿ.ವಿ.ಎಸ್ ಚಾಂಪ್ ಮೊಪೆಡ್ ನೊಂದಣಿ ಸಂಖ್ಯೆ: ಕೆಎ-05/ವಿ-2876 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13(ಎಫ್) ಮತ್ತು 14 ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 38(ಎ) ಮತ್ತು 43 ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಮತ್ತು ನಕಲಿ ಮದ್ಯವನ್ನು ಪಂಚನಾಮೆ ಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ:17/2008-09 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಸೀಸೆಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು ಅವುಗಳು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ನಿಗದಿಪಡಿಸಿರುವ ಮಾದರಿ ಗುಣಲಕ್ಷಣಗಳಿಗೆ ಅನುಗುಣವಾಗಿಲ್ಲದಿರುವುದರಿಂದ ಅವು ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ವಾಹನ ಮತ್ತು ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:13.03.2009 ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಬೆಂಗಳೂರು (ದಕ್ಷಿಣ) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ನೊಂದಣಿ ಸಂಖ್ಯೆ: ಕೆಎ-05/ವಿ-2876 ಗೆ ಸಂಬಂಧಿಸಿದಂತೆ ಅಧಿಕೃತ ಸಹಿಗಾರರು, ಮೆಃ ದೇವಗಿರಿ ಸೀಲಿಂಗ್ ಮತ್ತು ಕೋಟಿಂಗ್ಸ್, ನಂ.2969, ಕೆ.ಆರ್.ರೋಡ್, ಬಿ.ಎಸ್.ಕೆ 2 ನೇ ಹಂತ, ಬೆಂಗಳೂರು-560070 ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:20.03.2009 ರಂದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿದೆ. ನೊಂದಣಿ ಅಂಚೆ ಹಿಂತಿರುಗಿ ಬಂದಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿ.ವಿ.ಎಸ್ ಚಾಂಪ್ ಮೊಪೆಡ್ ನೊಂದಣಿ ಸಂಖ್ಯೆ: ಕೆಎ-05/ವಿ-2876 ವಾಹನದಲ್ಲಿ ದಿನಾಂಕ:16.01.2009 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ.ಅಲ್ಲದೇ ಜಪ್ತುಪಡಿಸಿರುವ ವಾಹನ ಮತ್ತು ನಕಲಿ ಮದ್ಯವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ ಮತ್ತು ನಕಲಿ ಮದ್ಯವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/176/2008-09, ದಿನಾಂಕ:30ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪನಿರೀಕ್ಷಕರು, ಮದ್ದೂರುವಲಯ, ಮದ್ದೂರು ಇವರ ಪ್ರ.ಮಾ.ವ ಸಂಖ್ಯೆ:17/2008-09, ದಿನಾಂಕ:16.01.2009 ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಟಿ.ವಿ.ಎಸ್ ಚಾಂಪ್ ಮೊಪೆಡ್ ನೊಂದಣಿ ಸಂಖ್ಯೆ:ಕೆಎ-05/ವಿ-2876 ವಾಹನ ಮತ್ತು 17.280 ಲೀ ನಕಲಿ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಹಾಗೂ ಇತರೆ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:30.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.321

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/204/2008-09, ದಿನಾಂಕ:30ನೇ ಮಾರ್ಚ್, 2009

ಅಬಕಾರಿ ಉಪ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ ಇವರ ಪ್ರ.ಮಾ.ವ ಸಂ:08/2008-09, ದಿನಾಂಕ:04.02.2009.

ಪಿರ್ಯಾದುದಾರರು	**ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ	ತಲೆಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:04.02.2009 ರಂದು ಬೆಳಗ್ಗೆ 10-30 ಗಂಟೆ ಸಮಯದಲ್ಲಿ ಮಂಡ್ಯ ತಾಲ್ಲೂಕು ಹಳುವಾಡಿ ಗ್ರಾಮದ ಶ್ರೀನಿವಾಸ ಕಲ್ಯಾಣಮಂಟಪದ ಎದುರುಗಡೆ ರಸ್ತೆಯ (ಮೊದಲನೇ ಕ್ರಾಸ್) ಬಲಭಾಗಕ್ಕಾದಂತೆ ಇರುವ ಹಂದಿಗೂಡು ಇರುವ ಪಕ್ಕದ ಖಾಲಿ ಜಾಗದಲ್ಲಿ ಅಕ್ರಮವಾಗಿ 216.000 ಲೀ ನಕಲಿ ಮದ್ಯವನ್ನು ಮಾರುತಿ 800 ಕಾರ್ ನೊಂದಣಿ ಸಂಖ್ಯೆ: ಕೆಎ-10/ಎನ್-3625 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 13(ಎ) ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32(1), 38(ಎ), 43 ಮತ್ತು 43(ಎ) ರೀತ್ಯಾ ಶಿಕ್ಷಾರ್ಹ ವಾದ್ದರಿಂದ ವಾಹನ ಮತ್ತು ನಕಲಿ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ ಸಂಖ್ಯೆ: 08/2008-09 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಪತ್ತೆಯಾಗಿದ್ದು ಅವುಗಳು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ನಿಗದಿಪಡಿಸಿರುವ ಮಾದರಿ ಗುಣಲಕ್ಷಣಗಳಿಗೆ ಅನುಗುಣವಾಗಿಲ್ಲದಿರುವುದರಿಂದ ಅವು ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರು ಮೇಲ್ಕಂಡ ಸಂಖ್ಯೆಯುಳ್ಳ ವಾಹನವನ್ನು ಇನ್ನೂ ನೊಂದಣಿ ಮಾಡಿರುವುದಿಲ್ಲ ಎಂದು ತಿಳಿಸಿರುವುದರಿಂದ ವಾಹನದ ಮಾಲೀಕರು ಯಾರೆಂದು ತಿಳಿಯದ ಕಾರಣ ಹಾಗೂ ಇದುವರೆವಿಗೂ ಯಾರು ಕಚೇರಿಗೆ ಬಂದು ಹಕ್ಕು ಚಲಾಯಿಸದ ಕಾರಣ ವಾಹನ ಮತ್ತು ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:18-03-2009 ರ ಪತ್ರದ ಮೂಲಕ ಕೋರಿರುತ್ತಾರೆ.

ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರಿಗೆ ಪತ್ರ ಬರೆಯಲಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ದಿನಾಂಕ:13.02.2009ರ ಪತ್ರದ ಮೂಲಕ ವಾಹನ ಸಂಖ್ಯೆ: ಕೆಎ-10/ಎನ್-3625 ಸಂಖ್ಯೆಯನ್ನು ಈವರೆವಿಗೂ ನೊಂದಣಿ ಮಾಡಿರುವುದಿಲ್ಲ ಎಂಬ ವಿಷಯವನ್ನು ತಿಳಿಸಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಮಾರುತಿ 800 ಕಾರ್ ನಕಲಿ ನೊಂದಣಿ ಸಂಖ್ಯೆ: ಕೆಎ-10/ಎನ್-3625 ವಾಹನದಲ್ಲಿ ದಿನಾಂಕ:04.02.2009 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಹಾಗೂ ಅಕ್ರಮ ನಕಲಿ ಮದ್ಯ ಚಟುವಟಿಕೆ ನಡೆಸುವ ಸಲುವಾಗಿ ವಾಹನಕ್ಕೆ ನಕಲಿ ಸಂಖ್ಯೆಯನ್ನು ಬಳಸಿ ಉಪಯೋಗಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೇ ಜಪ್ತು ಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನ ಮತ್ತು ನಕಲಿ ಮದ್ಯವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/204/2008-09, ದಿನಾಂಕ:30ನೇ ಮಾರ್ಚ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ ಇವರ ಪ್ರ.ಮಾ.ವ ಸಂಖ್ಯೆ:08/2008-09, ದಿನಾಂಕ:04.02.2009ರ ಪ್ರಕರಣದಲ್ಲಿ ಜಪ್ತು ಪಡಿಸಿರುವ ಮಾರುತಿ 800 ಕಾರ್ ನಕಲಿ ನೊಂದಣಿ ಸಂಖ್ಯೆ: ಕೆಎ-10/ಎನ್-3625 ವಾಹನ ಮತ್ತು 216.000 ಲೀ ನಕಲಿ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತುಪಡಿಸಿ) ಹಾಗೂ ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:30.03.2009 ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್.345 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/207/2007-08, ದಿನಾಂಕ:1ನೇ ಏಪ್ರಿಲ್, 2009

ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಪೋಲೀಸ್ ಠಾಣೆ, ಮಂಡ್ಯ ಇವರ ಕ್ರೈಂ ಸಂಖ್ಯೆ:08/2008, ದಿನಾಂಕ:06.01.2008.

ಪಿರ್ಯಾದುದಾರರು	**ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಪೋಲೀಸ್ ಠಾಣೆ, ಮಂಡ್ಯ ತಾಲ್ಲೂಕು	ಚಂದ್ರ (ಉ) ಚಂದ್ರಶೇಖರ್ ಬಿನ್ ಸಿದ್ದಪ್ಪ, 42 ವರ್ಷ, ಒಕ್ಕಲಿಗ ಜನಾಂಗ, ಹಳೇಬೂದನೂರು ಗ್ರಾಮ, ಮಂಡ್ಯ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:06.01.2008 ರಂದು ಸಾಯಂಕಾಲ 7-30 ಗಂಟೆ ಸಮಯದಲ್ಲಿ ಮಂಡ್ಯ ತಾಲ್ಲೂಕು ಬೇಲೂರು ಗ್ರಾಮದ ಚನ್ನಕೇಶವ ವೃತ್ತದಲ್ಲಿ ಅಕ್ರಮವಾಗಿ 3 ಪ್ಲಾಸ್ಟಿಕ್ ಚೀಲದಲ್ಲಿ 60.000 ಲೀ ಸಾರಾಯಿಯನ್ನು (100 ಮಿಲಿಯ 600 ಸಾರಾಯಿ ಸ್ಯಾಚೆಟ್‌ಗಳು) ಟಿ.ವಿ.ಎಸ್ ಮೊಪೆಡ್ ನೊಂದಣಿ ಸಂ: ಕೆಎ-10/ಹೆಚ್-6235 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 14,15,32,34 ರ ರೀತ್ಯಾ ಅಪರಾಧವಾದ್ದರಿಂದ ಈ ಬಗ್ಗೆ ಕ್ರೈಂ ಸಂಖ್ಯೆ: 08/2008 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರದ ಪೂರ್ವಾನುಮತಿ ಪಡೆದು ಅಬಕಾರಿ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತು ಪಡಿಸಿದ ಸಾರಾಯಿ ಸ್ಯಾಚೆಟ್‌ಗಳ ರಾಸಾಯನಿಕ ಪರೀಕ್ಷೆಯ ವರದಿಯ ಪ್ರಕಾರ ಸ್ಯಾಚೆಟ್‌ಗಳಲ್ಲಿ ಎಥನಾಲ್ ಅಂಶ ಇರುವುದು ಕಂಡು ಬಂದಿರುವುದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ ವಾಹನ ಮತ್ತು ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:13.06.2008, 13.03.2009 ಮತ್ತು 30.03.2009ರ ಪತ್ರಗಳ ಮೂಲಕ ಕೋರಿರುತ್ತಾರೆ.

11. ಫಸಲು ವೀಕ್ಷಿಸಲು ಇಷ್ಟವುಳ್ಳವರು ಕಛೇರಿಯ ವೇಳೆಯಲ್ಲಿ ಸಂಬಂಧಿಸಿದ ಕ್ಷೇತ್ರದ ಅಧಿಕಾರಿಗಳನ್ನು ಕಂಡು ಮಾಹಿತಿ ಪಡೆಯಬಹುದು.
12. ಟೆಂಡರ್‌ದಾರರು ಇಲಾಖೆಯ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರಬೇಕು, ಒಂದು ವೇಳೆ ಯಾವುದೇ ನಿಯಮ ಉಲ್ಲಂಘಿಸಿದರೆ ಠೇವಣಿ ಹಣ ಮತ್ತು ಶೇ. 50 ರ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು.
13. ಫಸಲಿಗೆ ಯೋಗ್ಯ ಬೆಲೆ ಬಾರದಿದ್ದಲ್ಲಿ ಕಟಾವಿಗೆ ಅನುಮತಿ ನೀಡುವುದು/ತಿರಸ್ಕರಿಸುವುದು ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಸೇರಿರುತ್ತದೆ.
14. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚೆವುಳ್ಳವರು ಇಲಾಖಾ ಕಚೇರಿಗಳಿಗೆ ಭೇಟಿ ಮಾಡಿ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು.
15. ಹೆಚ್ಚಿನ ಮಾಹಿತಿಗಾಗಿ ಕಛೇರಿ ಅಧಿಕಾರಿಗಳನ್ನು ಭೇಟಿಯಾಗುವುದು.

ಪಿ.ಆರ್. 667 ತೋಟಗಾರಿಕೆ ಉಪ ನಿರ್ದೇಶಕರು, ಗಾಂಧಿ ಪಾರ್ಕ್, ಶಿವಮೊಗ್ಗ.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಅಲ್ಪಾವಧಿ ಐಟಂವಾರು ಟೆಂಡರು ಅಧಿಸೂಚನೆ ಸಂ. 04:2009-10:ದಿ:26-05-2009ಕ್ಕೆ
ತಿದ್ದುಪಡಿ ಮತ್ತು ಅವಧಿ ವಿಸ್ತರಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕು ಶಿರಾ–ನಂಜನಗೂಡು ರಸ್ತೆ ಸರಪಳಿ (ರಾಜ್ಯ ಹೆದ್ದಾರಿ – 84) ಸರಪಳಿ 213.15 ರಿಂದ 241.17 ರವರೆಗೆ ಅಭಿವೃದ್ಧಿ ಕಾಮಗಾರಿಯ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಡೌನ್ ಲೋಡ್ ಮಾಡಿಕೊಂಡು (viz https://eproc.karnataka.gov.in) ಟೆಂಡರ್ ಸಲ್ಲಿಸಲು ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕ್ರಮ. ಸಂಖ್ಯೆ	ಹಿಂದೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಡೌನ್ ಲೋಡ್ ಮಾಡಿಕೊಂಡು ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ	ಈಗ ತಿದ್ದುಪಡಿ ಮಾಡಿ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಡೌನ್ ಲೋಡ್ ಮಾಡಿಕೊಂಡು ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ದಿನಾಂಕ
1	10–06–09 ರಿಂದ 15–06–09 ಸಂಜೆ 4.00 ಘಂಟೆವರೆಗೆ	24–08–09 ರಿಂದ 04–09–2009 ಸಂಜೆ 4.00 ಘಂಟೆವರೆಗೆ

ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕಾರ್ಯಪಾಲಕ ಇಂಜಿನಿಯರ್, ಲೋ. ಬಂ. ಮತ್ತು ಒ. ಜ. ಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು.

PUBLIC WORKS, PORTS & INLAND WATER TRANSPORT DEPARTMENT

Extention of Time for Short-term Tender.

No. EE/ PWD, Mysore Division, Mysore IFT No. 04/ 2009-10 Dt. 22nd August 2009

1. The Executive Engineer Public works, Ports & Inland Water Transport Department Mysore Division invites tenders from eligible tenderers in **TWO COVER SYSTEM** for the road works detailed in the table through e-procurement portal of the Government of Karnataka **(viz http://eproc.karnataka.gov.in)** The tenderers are advised to note the minimum qualification criteria specified in clause-3 of the Instructions to Tenderers to qualify for award of the contract.
2. Tender documents may be downloaded from the e-procurement portal of the Government of Karnataka from **24-08-09 to 04-09-09**
3. Tenders must be accompanied by earnest money deposit specified for the work in the table below. Earnest money deposit will have to be in any one of the forms as per the instructions in the e-procurement portal and shall have to be valid for **45 days** beyond the validity of the tender.
4. Tenders must be submitted online through e-procurement portal on or before **16.00 hours** on **04-09-09** and the opening of the tenders will be as per the e-procurement portal guidelines.
5. Other details and conditions can be seen in the tender documents.

TABLE

Sl. No.	Name of the Work	Form No.	Approximate value of work (Rs. in lakhs)	Earnest money deposit (Rs. in lakhs)	Cost of document (Rs.)	Period of completion including rainy season	Contractor eligibelity
1	IMPROVEMENTS TO SIRA-NANJANGUD ROAD SH-84 FROM KM 213.15 TO 241.17 IN T.NARASIPURA TALUK MYSORE DISTRICT.	K/W-4	171.28	2.57	5000.00	4 Months (Including rainy season)	Class-1

Executive Engineer

P.R. 700 P.W.P. & I.W.T. Department, Mysore Division, Mysore.

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 83

ಸಂಕ್ಷಿಪ್ತ ಹರಾಜು ಪ್ರಕಟಣೆ ಸಂಖ್ಯೆ:ಎ4/ಬರಾಉ/ವಾಹನ(ಹ)–1/09–10, ದಿನಾಂಕ: 6ನೇ ಆಗಸ್ಟ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ನಿರುಪಯುಕ್ತಗೊಳಿಸಿರುವ ಈ ಕೆಳಗೆ ನಮೂದಿಸಿರುವ ಸರ್ಕಾರಿ ವಾಹನವನ್ನು ದಿನಾಂಕ: 04.09.2009 ರಂದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಛೇರಿ ಆವರಣದಲ್ಲಿ ವಾಹನಗಳ ಯಥಾಸ್ಥಿತಿಯಲ್ಲಿ ಬೆಳಿಗ್ಗೆ 11.00 ಗಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುವುದು.

ಕ್ರಮ ಸಂಖ್ಯೆ	ವಾಹನದ ವಿವರ
1.	ಕೆಎ–01–ಜಿ–929 ಮಾರುತಿ ಜಿಪ್ಸಿ (ಪೆಟ್ರೋಲ್)

ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸಲು ಇಚ್ಛೆವುಳ್ಳವರು ಪ್ರತಿ ವಾಹನಕ್ಕೆ ರೂ. 5000/– ಗಳ ಮುಂಗಡ ಹಣವನ್ನು ಡಿಪಾಜಿಟ್ ಮಾಡತಕ್ಕದ್ದು.
2. ಅತಿ ಹೆಚ್ಚಿನ ಬಿಡ್ಡುದಾರರು ಹರಾಜಿನಲ್ಲಿ ಪಡೆದ ಪೂರ್ತಿ ಹಣವನ್ನು ತೆರಿಗೆಗಳೊಂದಿಗೆ ಹರಾಜು ಮುಗಿದ ತಕ್ಷಣ ಪಾವತಿಸತಕ್ಕದ್ದು.
3. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಪಿ.ಆರ್. 702 ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು.

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೩, ೨೦೦೯ (ಭಾದ್ರಪದ ೧೨, ಶಕ ವರ್ಷ ೧೯೩೧)	ಸಂಚಿಕೆ ೩೬

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಲ್.ಎ.ಕ್ಯೂ.ಎಸ್.ಆರ್. 25/09-10, ದಿನಾಂಕ: 7ನೇ ಜುಲೈ 2009

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್ಎಕ್ಯೂ: ಎಸ್ಆರ್/29/2007-08, ದಿನಾಂಕ: 16.10.2007 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯು ದಿನಾಂಕ: 22.11.2007ರ ಕರ್ನಾಟಕ ರಾಜ್ಯ ಪತ್ರದ ಪುಟ ಸಂ. 1038 ರಿಂದ 1042 ರವರೆಗೆ ಭಾಗ-6ರಲ್ಲಿ ಹುಲಿಪುರ, ಕಂಚಗಾಲಪುರ, ಮಧುರೆಕಾವಲ್ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂ ಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮಗಳ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರುಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂ ಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಹಾಗೂ ನಾಲೆ ಹೋಗದಿರುವುದರಿಂದಾಗಿ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದು, ವಿಸ್ತೀರ್ಣವನ್ನು ಹಾಗೂ ಭೂ ಸ್ವಾಧೀನಕ್ಕೆ ಪಡದ ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು — **ಹೋಬಳಿ: ಯಡಿಯೂರು**

ತಾಲ್ಲೂಕು: ಕುಣಿಗಲ್ — **ಗ್ರಾಮ: ಹುಲಿಪುರ, ಕಂಚಗಾಲಪುರ, ಮಧುರೆಕಾವಲ್**

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ	ಷರಾ
1) ಹುಲಿಪುರ					
1	5	ಮುದ್ದೇಗೌಡ ಬಿನ್ ಚನ್ನಯ್ಯ	55/22	0-02	ಕಡಿಮೆಯಾಗಿದೆ

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ	ಷರಾ
2	17	ಚಾಮುಂಡಮ್ಮ ಕೋಂ ಲಿಂಗಯ್ಯ, ಗಂಗೇಗೌಡ ಬಿನ್ ಚನ್ನೇಗೌಡ, ನರಸಿಂಹಯ್ಯ ಬಿನ್ ನರಸಿಂಹಯ್ಯ, ಗಂಗಯ್ಯ ಬಿನ್ ಗಂಗೇಗೌಡ, ಲಿಂಗಯ್ಯ ಬಿನ್ ಬೋರೇಗೌಡ, ಸಿದ್ದಯ್ಯ ಬಿನ್ ಬೋರಯ್ಯ, ವೆಂಕಟರಮಣಯ್ಯ ಬಿನ್ ಸಣ್ಣಯ್ಯ, ಮೂಡ್ಲಯ್ಯ ಬಿನ್ ಸಣ್ಣಯ್ಯ, ಮೂಡ್ಲಗಿರಿ ಉ. ಬುಡ್ಡಯ್ಯ ಬಿನ್ ಸಣ್ಣಯ್ಯ, ಗಂಗರಾಮಯ್ಯ ಬಿನ್ ಸಣ್ಣಯ್ಯ, ಗಿರಿಗೌಡ ಬಿನ್ ಸಣ್ಣಯ್ಯ, ಸಣ್ಣಯ್ಯ ಬಿನ್ ಹೊರಹಟ್ಟಿಗಿರಿಗೌಡ	65	0–02	ಕಡಿಮೆಯಾಗಿದೆ
3	24	ಶಿವಲಿಂಗಯ್ಯ ಬಿನ್ ಲೇಟ್ ಗಂಗಯ್ಯ	68	0–02 1/2	ಕಡಿಮೆಯಾಗಿದೆ
4	27	ಸಣ್ಣಯ್ಯನ ಲಿಂಗಯ್ಯ ಬಿನ್ ಲಿಂಗಯ್ಯ, ದಾಸಶೆಟ್ಟಿ ಬಿನ್ ವೆಂಕಟರಮಣಶೆಟ್ಟಿ, ತಿಮ್ಮಶೆಟ್ಟಿ ಬಿನ್ ವೆಂಕಟರಮಣಶೆಟ್ಟಿ, ಗೋವಿಂದಯ್ಯ ಬಿನ್ ವೆಂಕಟರಮಣಶೆಟ್ಟಿ	72/1	0–04 1/2	ಕಡಿಮೆಯಾಗಿದೆ
5	28	ಬೋರಮ್ಮ ಕೋಂ ಲಿಂಗಯ್ಯ, ದೇವೀರಮ್ಮ	71	0–08	ನಾಲೆ ಹೋಗುವುದಿಲ್ಲ
6	29	ಭೈರಯ್ಯ ಬಿನ್ ಚಿಕ್ಕಭೈರಯ್ಯ	88	0–07 1/2	ಕಡಿಮೆಯಾಗಿದೆ
		ಒಟ್ಟು		**0–26 1/2**	
		2) ಕಂಚಗಾಲಪುರ			
7	35	ಪುಟ್ಟಮಾದಮ್ಮ ಕೋಂ ಬೋರಮೇಸ್ತ್ರಿ	41/2	0–04 1/2	ಕಡಿಮೆಯಾಗಿದೆ
8	37	ಹುಚ್ಚಯ್ಯ ಬಿನ್ ಲಿಂಗಯ್ಯ, ಬಿ. ನಂಜುಂಡಯ್ಯ ಉ. ಮರಿಯಪ್ಪ ಬಿನ್ ನಂಜಪ್ಪ	44/4	0–02 1/2	ಕಡಿಮೆಯಾಗಿದೆ
9	44	ಚಿಕ್ಕಹುಚ್ಚಯ್ಯ ಬಿನ್ ಗೌಡಯ್ಯ	66/1	0–12	ನಾಲೆ ಹೋಗುವುದಿಲ್ಲ
10	45	ಮರಿಹುಚಯ್ಯ ಬಿನ್ ಲಿಂಗಯ್ಯ, ತಿಮ್ಮಮ್ಮ ಕೋಂ ಮೂಡ್ಲಗಿರಯ್ಯ, ರಂಗಯ್ಯ ಬಿನ್ ರಂಗಯ್ಯ, ಚನ್ನಯ್ಯ ಬಿನ್ ರಂಗಯ್ಯ, ವೆಂಕಟಯ್ಯ ಬಿನ್ ರಂಗಯ್ಯ, ಕೃಷ್ಣಪ್ಪ ಬಿನ್ ರಂಗಯ್ಯ, ವೆಂಕಟೇಶ ಬಿನ್ ರಂಗಯ್ಯ	67/1	0–07	ನಾಲೆ ಹೋಗುವುದಿಲ್ಲ
		ಒಟ್ಟು		**0–26**	
		3) ಮಧುರೆ ಕಾವಲ್			
11	46	ತ್ರಿವೇಣಿ ಕೋಂ ನಂಜಯ್ಯ	113	0–06	ನಾಲೆ ಹೋಗುವುದಿಲ್ಲ

ಪಿ.ಆರ್. 324

ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1–20 ಎಕರೆ/ಗುಂಟೆ ಆಕಾರಕಂಡ ಬಂಜರು ಎಂಬುದಾಗಿ ವರ್ಗೀಕೃತವಾದ ಜಮೀನನ್ನು ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಕುಲ ಕಸಬು ನಡೆಸಲು ದೋಬಿಘಾಟ್ ನಿರ್ಮಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1. ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಮನವಿ ದಿನಾಂಕ:18.06.2007.

2. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ: ಎಲ್ಎನ್ಡಿ:ಸಿಆರ್:92/07–08 ದಿನಾಂಕ:04.06.2007 ಮತ್ತು 17.09.2007.
3. ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ:1397 :ಎಲ್‌ಜಿಬಿ 2007, ದಿನಾಂಕ:23.01.2008.
4. ಈ ಪ್ರಾಧಿಕಾರದ ಸಮಸಂಖ್ಯೆ ತಿಳುವಳಿಕೆ ಪತ್ರ ದಿನಾಂಕ:15.02.2008.

5. ಜಂಟಿ ಆಯುಕ್ತರು (ಆಸ್ತಿಗಳು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ:ಎಲ್‌ಎಸಿ/ಪಿಆರ್:23/07-08 ದಿನಾಂಕ:25.03.2009.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿಯ ಮಡಿವಾಳ ಜನಾಂಗದವರು ತಮ್ಮ ಕುಲ ಕಸಬನ್ನು ಮಾಡಲು ನೀರಿನ ಜೊತೆ ಸೌಲಭ್ಯಗಳ ತೊಂದರೆ ಇದ್ದು, ದೋಬಿಘಾಟ್ ನಿರ್ಮಾಣಕ್ಕಾಗಿ ಬಸವನಪುರ ಗ್ರಾಮದ ಆಜುಬಾಜಿನಲ್ಲಿ ಸರ್ಕಾರಿ ಜಮೀನನ್ನು ಮಂಜೂರು ಮಾಡುವಂತೆ ಉಲ್ಲೇಖ (1)ರ ಮನವಿಯಲ್ಲಿ ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಕೋರಿರುತ್ತಾರೆ.

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿ ಆಕಾರ ಕಂಡ ಬಂಜರು ಜಮೀನು 28-38 ಎಕರೆ/ಗುಂಟೆ ಜಮೀನಿದ್ದು, ಈ ಪೈಕಿ 4-09 ಎಕರೆ/ಗುಂಟೆ ಖರಾಬ್ ಜಮೀನಾಗಿದ್ದು, 1-20 ಎಕರೆ/ಗುಂಟೆಯಷ್ಟು ಜಮೀನು ಖುಲ್ಲಾ ಇರುವುದಾಗಿ, ಸ.ನಂ.14ರ ಪಕ್ಕದಲ್ಲಿದ್ದು, ದೋಭಿಘಾಟ್ ನಿರ್ಮಿಸಲು ನೀರಿನ ಸೌಲಭ್ಯ ಇದ್ದು, ಈ ಪ್ರದೇಶ ಯೋಗ್ಯವಾಗಿರುವುದಾಗಿ, ಪ್ರಸ್ತಾಪಿತ ಸಂಘಕ್ಕೆ ಮಂಜೂರು ಮಾಡಲು ಗ್ರಾಮಸ್ಥರು ಒಪ್ಪಿರುತ್ತಾರೆಂದು, ತಹಶೀಲ್ದಾರ್‌ರವರು ಉಲ್ಲೆಖ (2)ರ ದಿನಾಂಕ: 04.02.2007ರ ಪತ್ರದೊಂದಿಗೆ ಕಡತ ತಯಾರಿಸಿ ವರದಿ ಮಾಡಿರುತ್ತಾರೆ. ತಹಶೀಲ್ದಾರ್‌ರವರ ದಿನಾಂಕ: 17.09.2007ರ ಪತ್ರದಲ್ಲಿನ ವರದಿಯಂತೆ ಈ ಪ್ರದೇಶವು ಕ್ವಾರಿಯಾಗಿದ್ದು, 10 ಅಡಿಗಳಲ್ಲಿ ನೀರು ತುಂಬಿಕೊಂಡಿದ್ದು, ಕ್ವಾರಿ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ.

ದಿನಾಂಕ:20.11.2007ರ ಈ ಪ್ರಾಧಿಕಾರದ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1-20 ಎಕರೆ/ಗುಂಟೆ ಖರಾಬ್ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದೋಭಿಘಾಟ್ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 20(1)(ಸಿ) ರನ್ವಯ ಪ್ರಸ್ತಾಪಿತ ಜಮೀನಿಗೆ ಮಾರುಕಟ್ಟೆ ಬೆಲೆಯ ಅರ್ಧದಷ್ಟು ಬೆಲೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಾವತಿಸಿಕೊಂಡು ಮೂರು ವರ್ಷದೊಳಗಾಗಿ ಅದನ್ನು ಸಂಪೂರ್ಣವಾಗಿ ಉಪಯೋಗಿಸತಕ್ಕದ್ದು, ಉಪಯೋಗಿಸದೇ ಇದ್ದಲ್ಲಿ ಸದರಿ ಜಮೀನು ಬೇಷರತ್ತಾಗಿ ಸರ್ಕಾರದ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ ಎಂಬ ಷರತ್ತಿಗೊಳಪಡಿಸಿ, ಮಂಜೂರು ಮಾಡಲು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಪ್ರಾಧಿಕಾರದ ಉಲ್ಲೇಖ (4) ದಿನಾಂಕ:15.02.2008 ರ ತಿಳುವಳಿಕೆ ಪತ್ರದಲ್ಲಿ ಸೆಲ ಕಿಮ್ಮತ್ತು ಮತ್ತು ಪೋಡಿ ಶುಲ್ಕ ಸೇರಿ ರೂ.26,25,055-00ಗಳನ್ನು ಸರ್ಕಾರಕ್ಕೆ ಸಂದಾಯ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಲಾಗಿತ್ತು. ಅದರಂತೆ ಚಲನ್ ಸಂಖ್ಯೆ:104 ದಿನಾಂಕ:21.03.2009 ರಂದು ಸರ್ಕಾರಕ್ಕೆ ಹಣ ಸಂದಾಯ ಮಾಡಿ ಮೂಲ ಚಲನ್‌ನನ್ನು ಹಾಜರುಪಡಿಸಿರುತ್ತಾರೆ. ಅಂತೆಯೇ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಎಲ್‌ಎನ್‌ಡಿ(ಪೂ)ಸಿಆರ್: 47/07-08, 21/07-08, ದಿನಾಂಕ: 13ನೇ ಮೇ 2009

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1-20 ಎಕರೆ/ಗುಂಟೆ ಆಕಾರಕಂಡ ಬಂಜರು ಎಂಬುದಾಗಿ ವರ್ಗೀಕೃತವಾದ ಜಮೀನನ್ನು ಶ್ರೀ ಮಾಚಿ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ(ರಿ)ರವರಿಗೆ ಕುಲ ಕಸಬು ನಡೆಸಲು ದೋಭಿಘಾಟ್ ನಿರ್ಮಾಣಕ್ಕಾಗಿ ಉಲ್ಲೇಖ(5)ರ ಸರ್ಕಾರದ ಪತ್ರದಲ್ಲಿನ ಅನುಮೋದನೆಯಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 20(1)(ಸಿ) ರನ್ವಯ ನಿಗದಿತ ಮೊತ್ತವನ್ನು ಬಿ.ಬಿ.ಎಂ.ಪಿ. ಯಿಂದ ಸರ್ಕಾರಕ್ಕೆ ಪಾವತಿಸಿಕೊಂಡಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕೆಳಕಂಡ ಷರತ್ತಿಗೊಳಪಡಿಸಿ ಮಂಜೂರು ಮಾಡಲಾಗಿದೆ.

ಪ್ರಸ್ತಾಪಿತ ಜಮೀನನ್ನು ಸ್ವಾಧೀನಪಡೆದುಕೊಂಡ ನಂತರ 3 ವರ್ಷದೊಳಗಾಗಿ ನಿಗದಿತ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು. ಉಪಯೋಗಿಸದೇ ಇದ್ದಲ್ಲಿ ಸದರಿ ಜಮಿನು ಬೇಷರತ್ತಾಗಿ ಸರ್ಕಾರದ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ.

ಹೆಚ್. ರಾಮಾಂಜನೇಯ

ಪಿ.ಆರ್. 334 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಹಗದೂರು ಗ್ರಾಮದ ಸ.ನಂ.127 ರಲ್ಲಿ 2-25 ಎಕರೆ/ಗುಂಟೆ ಮತ್ತು ಸ.ನಂ. 132 ರಲ್ಲಿ 2-10 ಎಕರೆ/ಗುಂಟೆ ಒಟ್ಟು 4-35 ಎಕರೆ/ಗುಂಟೆ ಇಮ್ಮಡಿಹಳ್ಳಿ ಸರ್ಕಾರಿ ಪ್ರೌಢಶಾಲೆ ಹೆಸರಿನಲ್ಲಿರುವ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ: 1. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ:ಸಿಆರ್:93/09-10, ದಿನಾಂಕ:12.6.2009.

2. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ:70:ಎಲ್‌ಜಿಪಿ/2008, ದಿನಾಂಕ:8.8.2008.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹಗದೂರು ಗ್ರಾಮದ ಸ.ನಂ. 127 ರಲ್ಲಿ 2-25 ಎಕರೆ/ಗುಂಟೆ ಜಮೀನು ಇಮ್ಮಡಿಹಳ್ಳಿ ಪ್ರೌಢಶಾಲೆಯ ಹೆಸರಿನಲ್ಲಿದ್ದು, ನಂ.ಎಂ.ಆರ್.9/96-97 ರಂತೆ ಖಾತೆಯಾಗಿರುತ್ತದೆ. ಸ.ನಂ. 132 ರಲ್ಲಿ 2-10 ಎಕರೆ/ಗುಂಟೆ ಇಮ್ಮಡಿಹಳ್ಳಿ - ಹಗದೂರು ಪ್ರೌಢಶಾಲೆ ಮತ್ತು ಆಟದ ಮೈದಾನದ ಹೆಸರಿನಲ್ಲಿದ್ದು, ನಂ.ಎಂ.ಆರ್.2/99-2000 ರಂತೆ ಖಾತೆಯಾಗಿರುತ್ತದೆ. ಅಲ್ಲದೇ ಸರ್ವೆ ನಂ. 133 ರಲ್ಲಿ 0-04 ಗುಂಟೆ ಖರಾಬ್ ಜಾತಾ 4-01 ಎಕರೆ/ಗುಂಟೆ ಇಮ್ಮಡಿಹಳ್ಳಿ - ಹಗದೂರು ಪ್ರೌಢಶಾಲೆ ಕಟ್ಟಡ ಮತ್ತು ಆಟದ ಮೈದಾನದ ಹೆಸರಿನಲ್ಲಿರುತ್ತದೆ. ನಂ.ಎಂ.ಆರ್.18/03-04 ರಂತೆ ಖಾತೆಯಾಗಿರುತ್ತದೆ. ಮಾನ್ಯ ಉನ್ನತ ಶಿಕ್ಷಣ ಸಚಿವರ ದಿನಾಂಕ: 28.05.2009ರ ಟಿಪ್ಪಣಿಯಲ್ಲಿ ಇಮ್ಮಡಿಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಸರಿನಲ್ಲಿರುವ ಸುಮಾರು 10-00 ಎಕರೆ ಜಮೀನಿನ ಪೈಕಿ 5-00 ಎಕರೆ ಜಮೀನನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸದಾಗಿ ಪ್ರಾರಂಭಿಸಲಾಗಿರುವ ಸರ್ಕಾರಿ ಪಾಲಿಟೆಕ್ನಿಕ್‌ಗೆ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಸದರಿ ಟಿಪ್ಪಣಿಯನ್ನು ಪರಿಗಣಿಸಿ, ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2-10 ಎಕರೆ/ಗುಂಟೆ ಮತ್ತು ಸರ್ವೆ ನಂ. 127 ರಲ್ಲಿ 2-25 ಎಕರೆ/ಗುಂಟೆ ಒಟ್ಟು 4-35 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್‌ಗೆ ಮಂಜೂರು ಮಾಡಲು ಉಲ್ಲೇಖ (1)ರ ಪತ್ರದಲ್ಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರು ಕಡತ ತಯಾರಿಸಿ ವರದಿ ಮಾಡಿರುತ್ತಾರೆ. ಆದ್ದರಿಂದ ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2-10 ಎಕರೆ/ಗುಂಟೆ ಮತ್ತು ಸರ್ವೆ ನಂ.127 ರಲ್ಲಿ 2-25 ಎಕರೆ/ಗುಂಟೆ ಒಟ್ಟು 4-35 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್‌ಗೆ ಕಾಯ್ದಿರಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂ. ಎಲ್‌ಎನ್‌ಡಿ(ಪೂ)ಸಿಆರ್:32/09-10, ದಿನಾಂಕ: 22ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ರವರು ವರದಿಯಲ್ಲಿನ ಅಂಶಗಳನ್ನು ಪರಿಗಣಿಸಿ, ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಂತೆ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2-10 ಎಕರೆ/ಗುಂಟೆ ಮತ್ತು ಸರ್ವೆ ನಂ.127 ರಲ್ಲಿ 2-25 ಎಕರೆ/ಗುಂಟೆ ಒಟ್ಟು 4-35 ಎಕರೆ/ಗುಂಟೆ ಇಮ್ಮಡಿಹಳ್ಳಿ ಪ್ರೌಢಶಾಲೆ ಮತ್ತು ಆಟದ ಮೈದಾನದ ಹೆಸರಿನಲ್ಲಿರುವ ಜಮೀನನ್ನು ಇಮ್ಮಡಿಹಳ್ಳಿ- ಹಗದೂರು ಮತ್ತು ಸುತ್ತುಮುತ್ತಲಿನ ಗ್ರಾಮಗಳ ಅನುಕೂಲಕ್ಕಾಗಿ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಕಾಯ್ದಿರಿಸಿ ಆದೇಶಿಸಿದೆ.

ಹೆಚ್. ರಾಮಾಂಜನೇಯ

ಪಿ.ಆರ್. 335 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ ಪತ್ರ

ನಂ: ಎಲ್.ಆರ್.ಎಫ್ (109)(ಪೂ)ಸಿ.ಆರ್:1/09-10, ದಿನಾಂಕ: 17ನೇ ಜುಲೈ 2009

ವಿಷಯ: ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-34 ರವರು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2-21 ಎಕರೆ:ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಖರೀದಿಸಲು ಅನುಮತಿ ಕೋರಿರುವ ಬಗ್ಗೆ.

ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-34 ರವರು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2-21 ಎಕರೆ:ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಖರೀದಿಸಲು ಮಾಡಿರುವ ಬೇಡಿಕೆ ಹಾಗೂ ನಮೂನೆ-15 ಎ ಮತ್ತು ನಮೂನೆ-15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ತಹಶೀಲ್ದಾರ್,

ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್.ಆರ್.ಎಫ್/ಸಿ.ಆರ್/9/09–10, ದಿನಾಂಕ: 1.7.2009 ರಲ್ಲಿ ಪ್ರಸ್ತಾವಿತ ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (1)(II) ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯು ನೋಂದಣಿ ಸಂಖ್ಯೆ 715/05–06, ದಿನಾಂಕ: 7.11.2005 ರಲ್ಲಿ ನೊಂದಾಯಿಸಲ್ಪಟ್ಟಿದೆ. ಖಾತೆದಾರರಿಂದ ಜಮೀನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾವಿತ ಜಮೀನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 4 ಯುನಿಟ್ ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆ ಕರ್ನಾಟಕ ತಿದ್ದುಪಡಿ ಕಾಯ್ದೆ 1995 ರ ಪ್ರಕಾರ ಕಲಂ 109 (1) (11) ಮತ್ತು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಕಾಯಿದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–34 ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 (1) (11) ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ನಂ: ವ್ಯಶಾಇ 47 ಶಾಸನ 2001 ಬೆಂಗಳೂರು ದಿನಾಂಕ: 23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಿದ್ದು, ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿದೆ. ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯಿದೆ 1995 ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 55 ಪೆಯಿಡ್ ಅಪ್ ಷೇರು ಬಂಡವಾಳ ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ಸಿ.ಡಿ.ಪಿ ಪ್ರಕಾರ ಕೃಷಿ ವಲಯದಲ್ಲಿ ಬರುತ್ತಿದ್ದು, ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯದೆ ಹಾಗೂ ಅನ್ಯಕ್ರಾಂತ ಪಡಿಸದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
4. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯಿದೆ 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಷರತ್ತಿಗೆ ಒಳಪಡಿಸಿದೆ.
5. ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಸಿ.ಡಿ.ಪಿ, ಒ.ಡಿ.ಪಿ ಮತ್ತು ಹಸಿರು ವಲಯ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
6. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣ ಮುಕ್ತವಾಗಿಸಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.
7. ಈ ಅನುಮತಿ ಭೂ ಸುಧಾರಣೆ ಕಾಯಿದೆ 1961 ರ ಕಲಂ 109 ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
8. ಶ್ರೀರಾಮ ಎಜುಕೇಷನ್ ಟ್ರಸ್ಟ್ (ರಿ) ರವರು 3 ತಿಂಗಳ ಒಳಗಾಗಿ ಸಂಬಂಧಪಟ್ಟ ಇಲಾಖೆಯಿಂದ ಶೈಕ್ಷಣಿಕ/ಶಾಲೆಗಳನ್ನು ನಡೆಸುವ ಬಗ್ಗೆ ಅನುಮತಿ ಪತ್ರ ಪಡೆದು ಈ ಕಛೇರಿಗೆ ಹಾಜರುಪಡಿಸದೇ ಇದ್ದರೆ ಈ ಅನುಮತಿ ಪತ್ರ ಯಾವುದೇ ಸೂಚನೆ ನೀಡದೆ ತನ್ನಿಂದ ತಾನೆ ರದ್ದಾಗುತ್ತದೆ ಎಂಬ ಷರತ್ತಿಗೊಳಪಟ್ಟಿರುತ್ತದೆ.
9. ಪ್ರಸ್ತುತ ಸಂಸ್ಥೆ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಟ್ಟು ಸೀಟುಗಳಲ್ಲಿ ಶೇಕಡ 10 ರಷ್ಟನ್ನು ನೀಡತಕ್ಕದ್ದು.

ವಿಶೇಷ ಜಿಲ್ಲಾಧಿಕಾರಿಗಳು (ಕಂ),
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 336

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಭೂಸ್ವಾಧೀನ ಕಾಯ್ದೆ 1894 ರ ಕಲಂ 16(2) ರ ಮೇರೆಗೆ ಪ್ರಕಟಣೆ

ಕ್ರಮಾಂಕ: ಎಲ್.ಎ.ಕ್ಯೂ ಎಸ್.ಆರ್. 1/05-06, ದಿನಾಂಕ: 9ನೇ ಜುಲೈ 2009

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮ ಸಂಖ್ಯೆ17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ (1894 ರ ಸಾಲಿನ ಕೇಂದ್ರ ಅಧಿನಿಯಮ 1 ರ) ಪ್ರಕರಣ 16(2) ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಸಾಗರ ತಾಲ್ಲೂಕು ಗಿಳಲಗುಂಡಿ-ಕೊಲ್ಲಿಬಚ್ಚಲು ಹಳ್ಳಕ್ಕೆ ಹೊಸಕೆರೆ ನಿರ್ಮಾಣಕ್ಕೆ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕರಣ 16(1) ರಂತೆ ವಶಪಡಿಸಿಕೊಳ್ಳಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ **ಹೋಬಳಿ:** ಕುಂಸಿ

ತಾಲ್ಲೂಕು: ಶಿವಮೊಗ್ಗ **ಗ್ರಾಮ:** ಕುಣೆಹೊಸೂರು

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
38	ಖುಷ್ಕಿ	0-10	11.12.2006
41	ತರಿ	3-23	
42	ಖುಷ್ಕಿ	5-02	
43ಪಿ	ತರಿ	5-27	
44	ತರಿ	1-20	
45ಪಿ	ತರಿ	1-00	
46	ಖುಷ್ಕಿ	0-28	
ಒಟ್ಟು		**17-30**	

ಪಿ.ಆರ್. 337 ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಭೂಸ್ವಾಧೀನ ಕಾಯ್ದೆ 1894 ರ ಕಲಂ 16(2) ರ ಮೇರೆಗೆ ಪ್ರಕಟಣೆ

ಕ್ರಮಾಂಕ: ಎಲ್.ಎ.ಕ್ಯೂ ಎಸ್.ಆರ್. 1/06-07, ದಿನಾಂಕ: 9ನೇ ಜುಲೈ 2009

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮ ಸಂಖ್ಯೆ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ (1894 ರ ಸಾಲಿನ ಕೇಂದ್ರ ಅಧಿನಿಯಮ 1 ರ) ಪ್ರಕರಣ 16(2) ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಪಶುವೈದ್ಯಕೀಯ ಮಹಾ ವಿದ್ಯಾಲಯಕ್ಕಾಗಿ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕರಣ 16(1) ರಂತೆ ವಶಪಡಿಸಿಕೊಳ್ಳಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ **ಹೋಬಳಿ:** ಕಸಬಾ

ತಾಲ್ಲೂಕು: ಶಿವಮೊಗ್ಗ **ಗ್ರಾಮ:** ಸೋಮಿನಕೊಪ್ಪ

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
23/1	ಸ.ನಿ.ತ	3-28	19.12.2008
23/2	ಸ.ನಿ.ತ	1-14	
23/2ಪಿ1	ಸ.ನಿ.ತ	0-12	
23/ಪಿ2	ಸ.ನಿ.ತ	1-02	
23/2	ಸ.ನಿ.ತ	1-02	
23/3ಪಿ2	ಸ.ನಿ.ತ	1-02	
23/3ಪಿ	ಸ.ನಿ.ತ	1-00	
23/ಪ3ಪಿ1	ಸ.ನಿ.ರ	1-07	
	ಒಟ್ಟು	10-27	
18/1	ಸ.ನಿ.ತ	0-31	
22/ಪಿ1	ಸ.ನಿ.ತ	0-35	

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
22/2	ಸ.ನಿ.ತ	0-01	
22/3	ಸ.ನಿ.ತ	0-07	
22/4	ಸ.ನಿ.ತ	0-10	
22/5ಪಿ	ಸ.ನಿ.ತ	0-17.12	
22/5ಪಿ	ಸ.ನಿ.ತ	0-01-02	
22/5ಪಿ	ಸ.ನಿ.ತ	0-01-02	
22/6ಪಿ	ಸ.ನಿ.ತ	0-20	
22/7	ಸ.ನಿ.ತ	0-04	
22/8ಪಿ	ಸ.ನಿ.ತ	0-33	
22/8	ಸ.ನಿ.ತ	0-30	
ಜುಮ್ಲಾ		4-31	
36/63	ಖುಷ್ಕಿ	4-00	
36/11	ಖುಷ್ಕಿ	2-00	
36/57	ಖುಷ್ಕಿ	2-00	
36/ಪಿ6	ಖುಷ್ಕಿ	2-00	
36/6	ಖುಷ್ಕಿ	2-00	
36/16	ಖುಷ್ಕಿ	2-00	
36/ಪಿ14	ಖುಷ್ಕಿ	2-00	
36/48	ಖುಷ್ಕಿ	2-00	
36/4	ಖುಷ್ಕಿ	2-00	
36/35ಪಿ	ಖುಷ್ಕಿ	2-00	
36/ಪಿ12	ಖುಷ್ಕಿ	2-00	
ಜುಮ್ಲಾ		24-00	

ಪಿ.ಆರ್. 338 ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ತಹಶೀಲ್ದಾರ್‌ರವರ ಕಾರ್ಯಾಲಯ ಶಿಕಾರಿಪುರ

ನಮೂನೆ-27

38ನೇ ನಿಯಮ 68(1)ರ ಪ್ರಕರಣದ ಮೇರೆಗೆ ಘೋಷಣೆ

ನಂ: ಎಲ್‌ಎನ್‌ಡಿ : ಸಿಆರ್ : 85:08-09, ಶಿಕಾರಿಪುರ, ದಿನಾಂಕ: 21ನೇ ಜುಲೈ 2009

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರ್ಕಾರಿ ಹೊಂಡದ ಭಾಗವು ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲ ಎಂದು ರಾಜಸ್ವ ಸರ್ಕಾರಕ್ಕೆ ಕಂಡು ಬಂದಿರುವುದರಿಂದ ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸರ್ಕಾರಿ ಹೊಂಡ ಭಾಗವು ಸಾರ್ವಜನಿಕ ಉಪಯೋಗಕ್ಕೆ ಅಗತ್ಯ ಇಲ್ಲವೆಂದು ಮತ್ತು ಹೊಂಡ ಭಾಗದಲ್ಲಿ ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸಿರುತ್ತದೆ.

ಸದರಿ ಹೊಂಡದ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳವರು ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವ ಇರುವ ಇತರೆ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಸಾರ್ವಜನಿಕರು ಅಥವಾ ಯಾವುದೇ ವ್ಯಕ್ತಿಯು ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಬಂಧಿಸಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಮತ್ತು ಹಕ್ಕಿನ ಬಗ್ಗೆ ಸ್ಪಷ್ಟ ಪರಿಹಾರಕ್ಕಾಗಿ ಕ್ಲೇಮ್ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ಗೆ ಬರಹದಲ್ಲಿ ತಿಳಿಸತಕ್ಕದ್ದು, ಮತ್ತು ಸದರಿ

ಆಕ್ಷೇಪಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣದಲ್ಲಿ ಉಪ-ಸಂಬಂಧಿಸಿರುವಂತೆ ಡೆಪ್ಯೂಟಿ ಕಮೀಷನರ್ ಪರಿಶೀಲಿಸತಕ್ಕದ್ದು.

ಅನುಸೂಚಿ

ಸರ್ಕಾರಿ ಹೊಂಡದ ಭಾಗ ಬರುವ ಗ್ರಾಮಗಳು	ಹಳಿಯೂರು
ತಾಲ್ಲೂಕು	ಶಿಕಾರಿಪುರ
ಜಿಲ್ಲೆ	ಶಿವಮೊಗ್ಗ
ಹೊಂಡದ ಭಾಗ ಅಥವಾ ಭಾಗಗಳು	ಸರ್ಕಾರಿ ಹಾರನಹೊಂಡ
ಭಂಜನ್ ರಸ್ತೆ, ಭಾಗಗಳ ಸರಿಸುಮಾರು ವಿಸ್ತೀರ್ಣ	ಹಳಿಯಾರು ಸ.ನಂ:
ಚಕ್ಕುಬಂದಿ:ಸ.ನಂ: 210ಕ್ಕೆ	1) ಪೂರ್ವಕ್ಕೆ: ರಸ್ತೆ 210ರಲ್ಲಿ 7-07 ಎಕರೆ 2) ಪಶ್ಚಿಮಕ್ಕೆ: ಸನಂ: ಕಂಬಳಿ ಹೊಂಡ 240 3) ಉತ್ತರಕ್ಕೆ: ಸ.ನಂ:244 ಹಳಿಯೂರು ಸನಂ:215 6-03 ಗುಂಟೆ 4) ದಕ್ಷಿಣಕ್ಕೆ: ಇದೇ ಸನಂ:ಉಳಿದ ಭಾಗ, ಹಾರನಹೊಂಡ
3) ಉತ್ತರಕ್ಕೆ : ಸನಂ:214	ಸನಂ:215ಕ್ಕೆ 1) ಪೂರ್ವಕ್ಕೆ ಇದೇ ಸನಂ: 2) ಪಶ್ಚಿಮಕ್ಕೆ ಸನಂ:236
4) ದಕ್ಷಿಣಕ್ಕೆ ಇದೇ ಸನಂ: ಉಳಿದ ಭಾಗ.	

ಪಿ.ಆರ್. 339

ತಹಸೀಲ್ದಾರ್, ಶಿಕಾರಿಪುರ ತಾಲ್ಲೂಕು.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ-27

ನಂ. ಎಲ್.ಎನ್.ಡಿ/ಪಿ.ಆರ್/503/08-09, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಅಡಿಗಾರ ಕಲ್ಲಹಳ್ಳಿ ಗ್ರಾಮದ ಸ.ನಂ. 71 ವಿಸ್ತೀರ್ಣ 2-10 ಎ/ಗುಂ ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.71 ಜಮೀನಿನಲ್ಲಿ 2-10 ಎ/ಗುಂ. ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನದ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ತೋಪು ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ತೋಪು ಜಮೀನಿನ 2-10 ಎ/ಗುಂ ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಅಡಿಗಾರ ಕಲ್ಲಹಳ್ಳಿ
ಸ.ನಂ.- 71	ವಿಸ್ತೀರ್ಣ : 2-10	ವರ್ಗೀಕರಣ : ಸರ್ಕಾರಿ ತೋಪು
ಪೂರ್ವಕ್ಕೆ: ಸ.ನಂ.- 83,70		ಪಶ್ಚಿಮಕ್ಕೆ: ಸ.ನಂ.-74,72,65
ಉತ್ತರಕ್ಕೆ: ಸ.ನಂ.- 76		ದಕ್ಷಿಣಕ್ಕೆ: ಸ.ನಂ.-65

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 340

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/60/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಚಂಬೇನಹಳ್ಳಿ ಗ್ರಾಮದ ಸ.ನಂ. 71 ವಿಸ್ತೀರ್ಣ 0–39 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.71 ಜಮೀನಿನಲ್ಲಿ 0–39 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–39 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು   ತಾಲ್ಲೂಕು : ಆನೇಕಲ್   ಗ್ರಾಮ : ಚಂಬೇನಹಳ್ಳಿ

ಸ.ನಂ.– 71   ವಿಸ್ತೀರ್ಣ : 0–39   ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– 69   ಪಶ್ಚಿಮಕ್ಕೆ: ಸ.ನಂ.–72

ಉತ್ತರಕ್ಕೆ: ಸ.ನಂ.– 70   ದಕ್ಷಿಣಕ್ಕೆ – ಓಣಿ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 347

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/61/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಯಮರೆ ಗ್ರಾಮದ ಸ.ನಂ. 44 ವಿಸ್ತೀರ್ಣ 0–10 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.44 ಜಮೀನಿನಲ್ಲಿ 0–10 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ

ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–10 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು   ತಾಲ್ಲೂಕು : ಆನೇಕಲ್   ಗ್ರಾಮ : ಯಮರೆ

ಸ.ನಂ.– 44   ವಿಸ್ತೀರ್ಣ : 0–10   ವರ್ಗೀಕರಣ : ಸರ್ಕಾರಿ ತೋಪು

ಪೂರ್ವಕ್ಕೆ: ಸ.ನಂ.– 45   ಪಶ್ಚಿಮಕ್ಕೆ:– ರಸ್ತೆ

ಉತ್ತರಕ್ಕೆ: ಸ.ನಂ.– 43   ದಕ್ಷಿಣಕ್ಕೆ: ಸ.ನಂ.–45

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 348

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/62/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಕಾಡಅಗ್ರಹಾರ ಗ್ರಾಮದ ಸ.ನಂ. 10 ವಿಸ್ತೀರ್ಣ 0–25 ಎ/ಗುಂ ಜಮೀನನ್ನು ಆಶ್ರಯ ಯೋಜನೆಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.10 ಜಮೀನಿನಲ್ಲಿ 0–25 ಎ/ಗುಂ. ಜಮೀನನ್ನು ಆಶ್ರಯ ಯೋಜನೆ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಆಶ್ರಯ ಯೋಜನೆ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–25 ಎ/ಗುಂ ಜಮೀನನ್ನು ಆಶ್ರಯ ಯೋಜನೆಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು   ತಾಲ್ಲೂಕು : ಆನೇಕಲ್   ಗ್ರಾಮ : ಕಾಡಅಗ್ರಹಾರ

ಸ.ನಂ.– 10   ವಿಸ್ತೀರ್ಣ : 0–25   ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– 11 ಮತ್ತು ಓಣಿ   ಪಶ್ಚಿಮಕ್ಕೆ:– ಸೋಂಪುರ ಗ್ರಾಮದ ಗಡಿ ಮತ್ತು ಓಣಿ

ಉತ್ತರಕ್ಕೆ: ಸೋಂಪುರ ಗ್ರಾಮದ ಗಡಿ ಮತ್ತು ಓಣಿ   ದಕ್ಷಿಣಕ್ಕೆ: ಸ.ನಂ.–11 ಮತ್ತು ಓಣಿ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 349

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/63/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಸೋಂಪುರ ಗ್ರಾಮದ ಸ.ನಂ. 68 ವಿಸ್ತೀರ್ಣ 0–24 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ

ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಖಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.68 ಜಮೀನಿನಲ್ಲಿ 0–24 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–24 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಸೋಲಂಪುರ

ಸ.ನಂ.– 68 ವಿಸ್ತೀರ್ಣ : 0–24 ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– 64,65 ಪಶ್ಚಿಮಕ್ಕೆ: ಸ.ನಂ.–69,70

ಉತ್ತರಕ್ಕೆ:– ಓಣಿ ದಕ್ಷಿಣಕ್ಕೆ: ಸ.ನಂ.–67

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 350

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/64/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಆದರಂತೆ ಮಹಲ್ ಚೌಡದೇನಹಳ್ಳಿ ಗ್ರಾಮದ ಸ.ನಂ.76 ವಿಸ್ತೀರ್ಣ 0–33 ಎ/ಗುಂ ಜಮೀನನ್ನು ಸರ್ಕಾರಿ ಪಾಠ ಶಾಲೆಯ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.76 ಜಮೀನಿನಲ್ಲಿ 0–33 ಎ/ಗುಂ. ಜಮೀನನ್ನು ಸರ್ಕಾರಿ ಪಾಠ ಶಾಲೆಗೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸರ್ಕಾರಿ ಪಾಠ ಶಾಲೆಗೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–33 ಎ/ಗುಂ ಜಮೀನನ್ನು ಸರ್ಕಾರಿ ಪಾಠ ಶಾಲೆಗಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಮಹಲ್ ಚೌಡದೇನಹಳ್ಳಿ
ಸ.ನಂ.– 76 ವಿಸ್ತೀರ್ಣ : 0–33 ವರ್ಗೀಕರಣ : ಸರ್ಕಾರಿ ಗುಂಡು ತೋಪು
ಪೂರ್ವಕ್ಕೆ:– ಸರ್ಕಾರಿ ಕೆರೆ ಸ.ನಂ. 75 ಪಶ್ಚಿಮಕ್ಕೆ: ಸ.ನಂ.–77
ಉತ್ತರಕ್ಕೆ:– ಸರ್ಕಾರಿ ಕೆರೆ ಮತ್ತು ರಸ್ತೆ ದಕ್ಷಿಣಕ್ಕೆ: ಸರ್ಕಾರಿ ಕೆರೆ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 352

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/65/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಖರಾಬು ಜಮೀನಾಗಿರುತ್ತದೆ. ಅದರಂತೆ ಭುಜಂಗದಾಸನಕೆರೆ ಗ್ರಾಮದ ಸ.ನಂ. 2 ವಿಸ್ತೀರ್ಣ 0–08 ಎ/ಗುಂ ಜಮೀನನ್ನು ಸಾರ್ವಜನಿಕ ಹರಾಜಿಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.2 ಜಮೀನಿನಲ್ಲಿ 0–08 ಎ/ಗುಂ. ಜಮೀನನ್ನು ಸಾರ್ವಜನಿಕ ಹರಾಜಿನ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಹರಾಜಿನ ಉದ್ದೇಶಕ್ಕೆ ವಿಲೇವಾರಿ ಮಾಡುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಖರಾಬು ಜಮೀನಿನ 0–08 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ಹರಾಜಿಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಭುಜಂಗದಾಸನಕೆರೆ
ಸ.ನಂ.– 2 ವಿಸ್ತೀರ್ಣ : 0–08 ವರ್ಗೀಕರಣ : ಸರ್ಕಾರಿ ಖರಾಬು ಜಮೀನು
ಪೂರ್ವಕ್ಕೆ: ಸ.ನಂ.– 3,4 ಪಶ್ಚಿಮಕ್ಕೆ: ಸ.ನಂ.–4
ಉತ್ತರಕ್ಕೆ:– ಸ.ನಂ.– 4 ದಕ್ಷಿಣಕ್ಕೆ: ಸ.ನಂ.–1

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 353

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/66/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಕಾಡಅಗ್ರಹಾರ ಗ್ರಾಮದ ಸ.ನಂ. 1 ವಿಸ್ತೀರ್ಣ 1–16 ಎ/ಗುಂ ಜಮೀನನ್ನು ಶಾಲಾ ಕಟ್ಟಡ, ಹಾಲಿನ ಡೈರಿ ಮತ್ತು ರಸ್ತೆಗೆ ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.1 ಜಮೀನಿನಲ್ಲಿ 1–16 ಎ/ಗುಂ. ಜಮೀನನ್ನು ಶಾಲಾ ಕಟ್ಟಡ ಹಾಲಿನ ಡೈರಿ ಮತ್ತು ರಸ್ತೆಗೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ

ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಶಾಲಾ ಕಟ್ಟಡ, ಹಾಲಿನ ಡೈರಿ ಮತ್ತು ರಸ್ತೆಗೆ ಉದ್ದೇಶಿಸಿದ್ದು ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆಕ್ಷೇಪಣೆಯನ್ನು ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 1-16 ಎ/ಗುಂ ಜಮೀನನ್ನು ಶಾಲಾ ಕಟ್ಟಡ ಹಾಲಿನ ಡೈರಿ ಮತ್ತು ರಸ್ತೆಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಕಾಡಅಗ್ರಹಾರ
ಸ.ನಂ.– 1	ವಿಸ್ತೀರ್ಣ : 1–16	ವರ್ಗೀಕರಣ : ಸರ್ಕಾರಿ ಗುಂಡು ತೋಪು
ಪೂರ್ವಕ್ಕೆ: ಸ.ನಂ.–		ಪಶ್ಚಿಮಕ್ಕೆ: ಸ.ನಂ.–
ಉತ್ತರಕ್ಕೆ: ಸ.ನಂ.–		ದಕ್ಷಿಣಕ್ಕೆ: ಸ.ನಂ.–

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 354

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/67/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಯಮರೆ ಗ್ರಾಮದ ಸ.ನಂ.4 ವಿಸ್ತೀರ್ಣ 1–28 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.4 ಜಮೀನಿನಲ್ಲಿ 1–28 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 1–28 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಯಮರೆ
ಸ.ನಂ.– 4	ವಿಸ್ತೀರ್ಣ : 1–28	ವರ್ಗೀಕರಣ : ಸರ್ಕಾರಿ ಗುಂಡು ತೋಪು
ಪೂರ್ವಕ್ಕೆ: ರಸ್ತೆ		ಪಶ್ಚಿಮಕ್ಕೆ: ಹಳ್ಳ
ಉತ್ತರಕ್ಕೆ: ಸ.ನಂ.– 5		ದಕ್ಷಿಣಕ್ಕೆ: ಸ.ನಂ.–2

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 355

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:158:ಎಲ್‌ಜಿಎ:2005, ಬೆಂಗಳೂರು, ದಿನಾಂಕ: 7ನೇ ಆಗಸ್ಟ್ 2009

ನಮೂನೆ-29

68ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗಿನ ಘೋಷಣೆ - ನಿಯಮ 96

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ತಹಶೀಲ್ದಾರ್ ಬೆಳ್ತಂಗಡಿರವರು ಹೊರಡಿಸಿದ 28.1.2002ರ ದಿನಾಂಕದ ಪಿಆರ್ 185 ಪ್ರ 10ರ ಕ್ರಮ ಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲೆಗಳನ್ನು ಮತ್ತು ಜಿಲ್ಲೆಯ ಡೆಪ್ಯೂಟಿ ಕಮೀಷನರ್ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಅಂಥ ಭಾಗದಲ್ಲಿನ ಅಥವಾ ಅದರ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಭಾಗವು ಇರುವ ಗ್ರಾಮ	ಪಾರೆಂಕಿ
ತಾಲ್ಲೂಕು	ಬೆಳ್ತಂಗಡಿ
ಜಿಲ್ಲೆ	ದಕ್ಷಿಣ ಕನ್ನಡ
ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಭಾಗದ ವರ್ಣನೆ	ರಸ್ತೆ ಪೊರಂಬೋಕು, ಸರ್ಕಾರ
ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಸರಿಸುಮಾರು ವಿಸ್ತೀರ್ಣ	ಸ.ನಂ.120-4ರಲ್ಲಿ 0.02 ಎಕರೆ
ಮೇರೆಗಳು	ಪೂರ್ವಕ್ಕೆ: 120-4ಪಿ1 ಪಶ್ಚಿಮಕ್ಕೆ: 120-4ಪಿ1 ಉತ್ತರಕ್ಕೆ: 120-3 ದಕ್ಷಿಣಕ್ಕೆ: 120-4ಪಿ1
ಸಾರ್ವಜನಿಕ ರಸ್ತೆ: ಬೀದಿ: ಗಲ್ಲಿ: ದಾರಿ ಅಥವಾ ಅದರ ಭಾಗ	ಮಂಗಳೂರು-ಚಾರ್ಮಾಡಿ ರಾಜ್ಯ ಹೆದ್ದಾರಿಯ ರಸ್ತೆ ಮಾರ್ಜಿನ್

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 372

ಇ. ಈಶ್ವರ ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ.ಮಂ).

ನಗರಸಭೆ ಕಾರ್ಯಾಲಯ - ತಿಪಟೂರು

ಅಧಿಸೂಚನೆ

ನ.ಸ.ತಿ:ಸಿಬ್ಬಂದಿ/ಪಿ.ಆರ್/ 07-08, ದಿನಾಂಕ: 25ನೇ ಜೂನ್ 2009

ಕೇಂದ್ರ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 5(1) ರನ್ವಯ ತಿಪಟೂರು ನಗರಸಭಾ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಾಧಿಕಾರಗಳನ್ನು ಪುನರ್ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಕ್ರ ಸಂ.	ಅಧಿಕಾರಿಗಳ ಹೆಸರು & ಹುದ್ದೆ	ನಾಮನಿರ್ದೇಶನ ಹುದ್ದೆ	ಸಂಬಂಧಪಟ್ಟ ಶಾಖೆ
1.	ಶ್ರೀ ಕೆ.ಎಸ್. ವೆಂಕಟರಾಮ್, ಸಹಾಯಕ ಕಾರ್ಯಪಾಲಕ ಅಭಿಯಂತರರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಇಂಜನಿಯರಿಂಗ್/ಪರಿಸರ ಅಭಿಯಂತರರ ಶಾಖೆಯ/ ಎಸ್.ಜೆ.ಎಸ್.ಆರ್.ವೈ ಮತ್ತು ಕಟ್ಟಡ ಪರವಾನಿಗೆಗೆ ಒಳಪಡುವ ಮಾಹಿತಿಗಳನ್ನು ಒದಗಿಸುವುದು.
2.	ಶ್ರೀಮತಿ ಕೆ.ಹೆಚ್. ಪುಟ್ಟಲಕ್ಷ್ಮಮ್ಮ, ವ್ಯವಸ್ಥಾಪಕರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಆಡಳಿತ ಶಾಖೆಯ ಮಾಹಿತಿಗಳನ್ನು ಒದಗಿಸಲು ನಿಯೋಜಿಸಲಾಗಿದೆ.
3.	ಶ್ರೀ ಎಸ್.ಡಿ. ಬಸವೇಗೌಡ, ಲೆಕ್ಕಾಧೀಕ್ಷಕರು,	ಸಾರ್ವಜನಿಕ ಮಾಹಿತಿ ಅಧಿಕಾರಿ	ಲೆಕ್ಕಪತ್ರಕ್ಕೆ (ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಲು ನಿಯೋಜಿಸಲಾಗಿದೆ).

ಪೌರಾಯುಕ್ತರು,

ಪಿ.ಡಿ. 19

ನಗರಸಭೆ, ತಿಪಟೂರು

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯ್ದೆ ಕಲಂ 6(1) ರ ಅನ್ವಯ ಘೋಷಣೆ

ಅಧಿಸೂಚನೆ ಸಂಖ್ಯೆ: ಕಂಇ 87 ಭೂ ಸ್ವಾ ಬೆ 2008, ದಿನಾಂಕ: 11ನೇ ಆಗಸ್ಟ್ 2009

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಚಿಕ್ಕಲ್ಲಸಂದ್ರ ಗ್ರಾಮದ ಆಸ್ತಿ ಸಂಖ್ಯೆ:278, 213, 260 ರ ಸ್ವತ್ತುಗಳನ್ನು ಭೂ ಸ್ವಾಧೀನಪಡಿಸಿಕೊಂಡು ರಸ್ತೆ ನಿರ್ಮಿಸುವ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯವರ ಪರವಾಗಿ ಬೇಕಾಗಬಹುದೆಂದು ವಿಶೇಷ ಜಿಲ್ಲಾಧಿಕಾರಿಗಳವರ ಕ್ರಮಾಂಕ:ಎಲ್ಎಕ್ಯೂ:ಎಸ್ಆರ್:5:08–09, ದಿನಾಂಕ:03.12.2008ರ ಮೇರೆಗೆ ಕರ್ನಾಟಕ ರಾಜ್ಯ ಪತ್ರದ ದಿನಾಂಕ:08.01.2009, ಭಾಗ 6 ಪುಟ ಸಂಖ್ಯೆ:15, 16 ರಲ್ಲಿ ಪ್ರಕಟವಾಗಿರುವ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 5ಎ(2)ರ ಪ್ರಕರಣದ ಮತ್ತು 6(1) ಪ್ರಕರಣದ ಮೇರೆಗೆ ವಿಶೇಷ ಜಿಲ್ಲಾಧಿಕಾರಿಯವರು ಮೇಲೆ ಹೇಳಿದ ಉದ್ದೇಶಕ್ಕಾಗಿ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಭೂ ಸಂಗ್ರಹಣಾ ಅಧಿನಿಯಮದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಬಹುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗ್ರಹಣಾ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, 3ನೇ ಮಹಡಿ, ಪೋಡಿಯಂ ಬ್ಲಾಕ್, ಬೆಂಗಳೂರು–1 ಇವರನ್ನು ಸದರಿ ಜಮೀನುಗಳ ಬಗ್ಗೆ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಈ ಮೂಲಕ ನಿಯಮಿಸಲಾಗಿದೆ ಮತ್ತು ಸದರಿ ಜಮೀನಿನ ಅಧಿಕೃತ ಸಂಗ್ರಹಣಾ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನಿನ ನಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, ಪೋಡಿಯಂ ಬ್ಲಾಕ್, 3ನೇ ಮಹಡಿ, ಬೆಂಗಳೂರು–1 ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಬೆಂಗಳೂರು **ತಾಲ್ಲೂಕು:** ದಕ್ಷಿಣ **ಹೋಬಳಿ:** ಉತ್ತರಹಳ್ಳಿ **ಗ್ರಾಮ:** ಚಿಕ್ಕಲ್ಲಸಂದ್ರ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ: ಆಸ್ತಿ ಸಂಖ್ಯೆ	ತರಹೆ	ಚಕ್ಕುಬಂದಿ				ಭೂ ಸ್ವಾಧೀನಕ್ಕೆ ಬೇಕಾದ	
					ಪೂರ್ವ ಸ.ನಂ:	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ: ಚ.ಅಡಿ	ಆಕಾರ
1.	ನೀಲಮ್ಮ ಕೋಂ ಕೃಷ್ಣಮ್‌ನಾಯ್ಡು	–	278 213 260	–	ಉತ್ತರಹಳ್ಳಿ ರಸ್ತೆ	ತಾಯಪ್ಪನ ಜಮೀನು	ಮುನಿಯಪ್ಪನ ಜಮೀನು	ಇತರರ ಜಮೀನು	2745	10–00

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ–2)

ಪಿ.ಆರ್. 376

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯ್ದೆ ಕಲಂ 6(1) ರ ಅನ್ವಯ ಘೋಷಣೆ

ಅಧಿಸೂಚನೆ ಸಂಖ್ಯೆ: ಕಂಇ 16 ಭೂಸ್ವಾಬೆ 2009, ದಿನಾಂಕ: 29ನೇ ಜುಲೈ 2009

ಈ ಮುಂದಿನ ಅನುಸೂಚಿಯಲ್ಲಿರುವ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕೆ, ಅಂದರೆ ಜಮೀನನ್ನು ಬೆಂಗಳೂರು ಜಿಲ್ಲೆ, ಬೆಂಗಳೂರು ಉತರ್ತ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮ ಸರ್ವೆ ನಂ:6:5 ರಲ್ಲಿ ಒಟ್ಟು 0–16 ಗುಂಟೆ ಜಮೀನನ್ನು ಹೂವು, ಹಣ್ಣು ಮತ್ತು ತರಕಾರಿ ಉಪ ಮಾರುಕಟ್ಟೆ ಪ್ರಾಂಗಣವನ್ನು ನಿರ್ಮಿಸಲು ಎ.ಪಿ.ಎಂ.ಸಿ., ಬೆಂಗಳೂರು, ಇವರ ಪರ ಅಗತ್ಯವಾಗಿ ಬೇಕಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು, ರವರ ಪತ್ರದ ಕ್ರಮಾಂಕ:ಎಲ್‌ಎಕ್ಯೂ:ಎಸ್‌ಆರ್:03:2008–09, ಎಲ್‌ಎಕ್ಯೂ:ಸಿಆರ್:86:2007–08, ದಿನಾಂಕ: 14.10.2008ರ ಮೇರೆಗೆ ಕರ್ನಾಟಕ ರಾಜ್ಯ ಪತ್ರದ ದಿನಾಂಕ:14.10.2008ರಂದು ಪ್ರಕಟಿಸಲಾಗಿರುವ ಕಾಯ್ದೆ ಕಲಂ 4(1)ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 5ಎ(2)ರ ಪ್ರಕರಣದ ಮತ್ತು 6(ಅ) ಪ್ರಕರಣದ ಮೇರೆಗೆ ವಿಶೇಷ ಜಿಲ್ಲಾಧಿಕಾರಿಯವರು ಮೇಲೆ ಹೇಳಿದ ಉದ್ದೇಶಕ್ಕಾಗಿ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಸದರಿ ಭೂ ಸಂಗ್ರಹಣಾ ಅಧಿನಿಯಮ 6ನೇ ಪ್ರಕರಣದ ಮೇರೆಗೆ ಸದರಿ ಜಮೀನು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಬಹುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗ್ರಹಣಾ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, 3ನೇ ಮಹಡಿ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು–1, ಇವರನ್ನು ಸದರಿ ಜಮೀನುಗಳ ಬಗ್ಗೆ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಈ ಮೂಲಕ ನಿಯಮಿಸಲಾಗಿದೆ ಮತ್ತು ಸದರಿ ಜಮೀನಿನ ಅಧಿಕೃತ ಸಂಗ್ರಹಣಾ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನಿನ ಸಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, ಪೋಡಿಯಂ ಬ್ಲಾಕ್, 3ನೇ ಮಹಡಿ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–1 ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಬೆಂಗಳೂರು ತಾಲ್ಲೂಕು: ಬೆಂಗಳೂರು ಉತ್ತರ (ಅಪರ) ಹೋಬಳಿ: ಯಲಹಂಕ ಗ್ರಾಮ: ಬ್ಯಾಟರಾಯನಪುರ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ: ಆಸ್ತಿ ಸಂಖ್ಯೆ	ತರಹೆ	ಚಕ್ಕುಬಂದಿ				ಭೂ ಸ್ವಾಧೀನಕ್ಕೆ ಬೇಕಾದ	
					ಪೂರ್ವ ಸ.ನಂ:	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ ಎ – ಗು	ಆಕಾರ ರೂ. ಪೈ
1.	ವಿ. ಸೆಲ್ವಂ ಬಿನ್ ವೆಂಕಟೇಶಯಾದವ್	ವಿ. ಕೃಷ್ಣಪ್ಪ	6:5	ಖುಷ್ಕಿ	14 ಎಪಿಎಂಸಿಗೆ ಭೂಸ್ವಾಧೀನ ವಾಗಿರುತ್ತದೆ	6:4 ಎಪಿಎಂಸಿಗೆ ಭೂ ಸ್ವಾಧೀನ ವಾಗಿರುತ್ತದೆ	6:4 ರ ಎಪಿಎಂಸಿಗೆ ಭೂಸ್ವಾಧೀನ ವಾಗಿರುತ್ತದೆ ಮತ್ತು ರಸ್ತೆಗೆ ದಾರಿ	5 ಖಾಸಗಿ ಜಮೀನು	0–16	0–64

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ–2)

ಪಿ.ಆರ್. 379